ಕರ್ನಾಟಕ

ಲೋಚನ

ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಸಂಪುಟ : ೨೮ ಸಂಚಿಕೆ : ೦೧ ಜನವರಿ–ಜೂನ್ ೨೦೧೪

ಸಂಪಾದಕರು

ಪ್ರೊ॥ ಜಿ. ಅಬ್ದುಲ್ ಬಷೀರ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ (ರಿ)
೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು – ೫೬೦ ೦೧೯.
ದೂರವಾಣಿ : ೨೬೬೧೫೮೭೭, ೨೬೬೭೬೭೭೩

ಇ–ಮೇಲ್ : bmsritrust@gmail.com

KARNATAKA LOCHANA - (Half yearly Research Journal)
Editor : Prof. **G. Abdul Basheer**. Published by **B.M.Sri. Smaraka Prathistana, M.V.Si. P.G. Research Center, B.M.Sri. Kalabhavan(R),** 3rd Main Road, Narasimharaja Colony, Bangalore - 560 019. Ph.No. 080-26615877, 26676773 Pages: vi+104

Year : January-June 2014 (Vol. 28 , No. 1),

Yearly Subscription : **Rs. 100**/- (for Libraries)

For Individual : **Rs. 50**/-

ವಾರ್ಷಿಕ ಚಂದಾ : **ರೂ.** ೧೦೦/– (ಗ್ರಂಥಾಲಯಗಳಿಗೆ)

ವ್ಯಕ್ತಿಗಳಿಗೆ : **ರೂ.** ೫೦/–

ಕರ್ನಾಟಕ ಲೋಚನದ ಆಜೀವ ಚಂದಾ : ರೂ. ೫೦೦/–

ಪ್ರತಿಷ್ಠಾನದ ಆಜೀವ ಸದಸ್ಯತ್ವ : **ರೂ.** ೧೦೦೦/–

ಮುದ್ರಣ
ಚಂದನ ಪ್ರಿಂಟರ್ಸ್
೩೧೨, ೭ನೇ ಮೇನ್
ನಾಗೇಂದ್ರ ಬ್ಲಾಕ್
ಬನಶಂಕರಿ ೧ನೇ ಹಂತ
ಬೆಂಗಳೂರು–೫೬೦ ೦೫೦

ಮುಂಮಾತು

ಇಪ್ಪತ್ತೈದು ವರ್ಷಗಳಿಂದ ಪ್ರಕಟವಾಗುತ್ತಿರುವ 'ಕರ್ನಾಟಕ ಲೋಚನ' ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಸ್ಥಾಪಕ ಪ್ರೊ. ಎಂ.ವಿ, ಸೀತಾರಾಮಯ್ಯ ಅವರ ಕನಸಿನ ಕೂಸು. ಪ್ರತಿಷ್ಠಾನವು ಸಂಶೋಧನ ಕೇಂದ್ರವಾಗಬೇಕೆಂದು ಕನಸು ಕಂಡಿದ್ದ ಅವರು, ಆ ಕನಸು ನಿಧಾನವಾಗಿ ನನಸಾಗುತ್ತಿದ್ದುದನ್ನು ಗಮನಿಸಿ, ನಾಡಿನ ವಿವಿಧೆಡೆಯಲ್ಲಿ ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಸಂಶೋಧನ ಲೇಖನಗಳಿಗೆ ವೇದಿಕೆಯಾಗಬೇಕೆಂಬ ಉದ್ದೇಶದಿಂದ ಈ ಅರ್ಧವಾರ್ಷಿಕ ಪತ್ರಿಕೆಯನ್ನು ಪ್ರಾರಂಭಿಸಿದರು. ಅವರ ಆಶಯಕ್ಕೆ ಅನುಗುಣವಾಗಿ ಉನ್ನತ ಗುಣಮಟ್ಟದ ಸಂಶೋಧನ ಲೇಖನಗಳನ್ನು ಹೊತ್ತು ಪತ್ರಿಕೆಯು ಪ್ರಕಟವಾಗುತ್ತಿದೆ. ಕನ್ನಡ ನಾಡಿನ ಅನೇಕ ವಿಶ್ವವಿದ್ಯಾನಿಲಯಗಳಂತಹ ಉನ್ನದ ಅಧ್ಯಯನ ಕೇಂದ್ರಗಳು ನಡೆಸಿಕೊಂಡು ಬರುತ್ತಿದ್ದ ಸಂಶೋಧನೆಗೆ ಮೀಸಲಾದ ನಿಯತಕಾಲಿಕೆಗಳಲ್ಲಿ ಅನೇಕವು ಈಗಾಗಲೇ ನಿಂತುಹೋಗಿವೆ. ಹಾಗಾಗದೆ ಇದನ್ನು ಆದಷ್ಟೂ ನಿಗದಿತ ವೇಳೆಗೆ ಹೊರತರುವ ಉದ್ದೇಶ ಪ್ರತಿಷ್ಠಾನದ್ದು. ಆದರೆ ದಿನೇ ದಿನೇ ಗುಣಮಟ್ಟದ ಲೇಖನಗಳ ಕೊರತೆ ಎದ್ದು ಕಾಣುತ್ತಿದೆ; ಹೀಗಾಗಿ ಮೈದುಂಬಿಕೊಂಡು ಪತ್ರಿಕೆ ಬರಲು ಅಡ್ಡಿಯೇ ಎನ್ನಬಹುದು. ಪತ್ರಿಕೆಯ ಮುದ್ರಣವ್ಯವಸ್ಥೆಗೆ ವಿಳಂಬವೇನಾಗದು, ಆದರೆ ಕೆಲವು ವೇಳೆ ಸಾಕಷ್ಟು ಲೇಖನಗಳು ಕೈಸೇರದೆ ಪತ್ರಿಕೆ ತಡವಾಗಿ ಹೊರಬರುವುದು ಅನಿವಾರ್ಯವಾಗಿಬಿಡುತ್ತದೆ. ಅನೇಕ ಸಂದರ್ಭಗಳಲ್ಲಿ ಲೇಖಕರನ್ನು ಕೇಳಿಕೊಂಡು ಲೇಖನಗಳನ್ನು ಬರೆಯಿಸುವ ಶ್ರಮವನ್ನೂ ಪತ್ರಿಕೆಯ ಸಂಪಾದಕರು ವಹಿಸಿಕೊಳ್ಳಬೇಕಾಗುತ್ತದೆ. ಇದನ್ನು ಯಶಸ್ವಿಯಾಗಿ ಮಾಡಿಕೊಂಡು ಬರುತ್ತಿರುವ **'ಕರ್ನಾಟಕ ಲೋಚನ'**ದ ಸಂಪಾದಕರಾದ ಪ್ರೊ. ಜಿ. ಅಬ್ದುಲ್ ಬಷೀರ್ ಅವರು ವಹಿಸುವ ಶ್ರದ್ಧೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಪ್ರತಿಷ್ಠಾನದ ಕಾರ್ಯದರ್ಶಿಗಳಲ್ಲೊಬ್ಬರಾದ ಅವರು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ವಿದ್ವಾಂಸರ ದುಂಬಾಲುಬಿದ್ದು ಆದಷ್ಟೂ ಕಾಲಕ್ಕೆ ಸರಿಯಾಗಿ ಪತ್ರಿಕೆ ಹೊರಬರುವಂತೆ ಅವರು ನೋಡಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಅವರ ಬಗ್ಗೆ ಪ್ರತಿಷ್ಠಾನಕ್ಕೆ ವಿಶೇಷ ಮೆಚ್ಚಿಕೆ. ಆಸಕ್ತರು ಈ ಸಂಚಿಕೆಯನ್ನು ಪ್ರೀತಿಯಿಂದ ಬರಮಾಡಿಕೊಳ್ಳುವರೆಂಬುದು ನನ್ನ ನಂಬಿಕೆ.

–ಡಾ॥ ಪಿ. ವಿ. ನಾರಾಯಣ
ಅಧ್ಯಕ್ಷರು
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಸಂಪಾದಕೀಯ

'ಕರ್ನಾಟಕ ಲೋಚನ'–ಸಂಪುಟ ೨೮, ಸಂಚಿಕೆ ೦೧, ಜನವರಿ–ಜೂನ್ ೨೦೧೪ ಸಹೃದಯರ ಕೈಗೆ ತಡವಾಗಿ ತಲುಪಲು ಲೇಖನಗಳ ಕೊರತೆಯೇ ಮುಖ್ಯ ಕಾರಣವಾಗಿದೆ. ಲೇಖಕ ಮಿತ್ರರು ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಶೋಧನ ಲೇಖನಗಳನ್ನು ಕಳುಹಿಸಿಕೊಡುವ ಕೃಪೆ ಮಾಡಬೇಕೆಂದು ಕೋರುತ್ತೇನೆ. ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ವೈವಿಧ್ಯಮಯವೂ ವೈಶಿಷ್ಟ್ಯಪೂರ್ಣವೂ ಆಗಿವೆ; ಮೌಲಿಕ ವಿಚಾರ ಗಳನ್ನೊಳಗೊಂಡಿವೆ. ಭಾಷೆ, ಸಂಸ್ಕೃತಿ, ಸಂಶೋಧನೆ, ವಿಮರ್ಶೆ, ತೌಲನಿಕ ವಿಚಾರಗಳನ್ನೊಳಗೊಂಡ ಲೇಖನಗಳಲ್ಲಿ ನವೀನ ಆಲೋಚನೆಗಳಿವೆ; ಚರ್ಚೆಗೆ ಕಾರಣವಾಗಬಹುದಾದ ಅನೇಕ ವಿಚಾರಗಳಿವೆ. ಉದಾ : ಯಲ್ಲಾಪುರ ಕೃಷ್ಣಶರ್ಮಾ ಅವರ 'ಧ್ವನಿಕಂದದ ಅರ್ಥ' ಡಾ॥ ವಿಜಯಾ ಸುಬ್ಬರಾಜ್ ಅವರ ವಿಮರ್ಶೆಯ ಅರ್ಥ ಮತ್ತು ಅದರ ಪ್ರಸ್ತುತತೆ ಮತ್ತು ಡಾ॥ ಸಿ. ಪಿ. ಕೃಷ್ಣಕುಮಾರ್ ಅವರ 'ಶರಣ ಸಂಸ್ಕೃತಿ' ಎಂಬ ಲೇಖನಗಳು.

'ಕರ್ನಾಟಕ ಲೋಚನ'ದ ಪ್ರಕಟಣೆಗೆ ಸಹಕರಿಸುತ್ತಿರುವ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಪ್ರೊ॥ ಎಂ. ಎಚ್. ಕೃಷ್ಣಯ್ಯನವರಿಗೂ ಅಧ್ಯಕ್ಷರಾದ ಡಾ॥ ಪಿ. ವಿ. ನಾರಾಯಣ ಅವರಿಗೂ ಮತ್ತೋರ್ವ ಗೌ॥ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ರವೀಂದ್ರನಾಥ್ ಅವರಿಗೂ ಕೋಶಾಧಿಕಾರಿಗಳಾದ ಶ್ರೀ ಎಂ. ಎಸ್. ರಾಮಪ್ರಸಾದ್ ಅವರಿಗೂ ಕಛೇರಿ ಸಿಬ್ಬಂದಿ ವರ್ಗದವರಿಗೂ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

–ಪ್ರೊ॥ ಜಿ. ಅಬ್ದುಲ್ ಬಷೀರ್
ಸಂಪಾದಕರು

ಪರಿವಿಡಿ

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೧. ಧ್ವನಿಕಂದದ ಅರ್ಥ

–ಯಲ್ಲಾಪುರ ಕೃಷ್ಣಶರ್ಮಾ*

ಹಳಗನ್ನಡದಲ್ಲಿ ದೊರೆತ ಹೆಮ್ಮೆಯ ಕೃತಿ ಕವಿರಾಜಮಾರ್ಗವು ಕನ್ನಡ ಪದವೀಧರರೆಲ್ಲರಿಗೂ ಗೊತ್ತು. ಇದು ಕಾವ್ಯಮೀಮಾಂಸಾಶಾಸ್ತ್ರಗ್ರಂಥ. ಭಾರತೀಯ ಕಾವ್ಯಮೀಮಾಂಸೆಯು ಮೂಲತಃ ಸಂಸ್ಕೃತದಲ್ಲಿ ಹುಟ್ಟಿ ಬೆಳೆದುದು. ಶ್ರೀವಿಜಯನೇ ಮೊದಲಾದ ಸಂಸ್ಕೃತ ಕನ್ನಡ ಉಭಯ ಭಾಷಾವಿದ್ವಾಂಸರು ಕೆಲವರು ಸಂಸ್ಕೃತವನ್ನಾಧರಿಸಿ ಕವಿರಾಜಮಾರ್ಗವೇ ಮೊದಲಾದ ಒಳ್ಳೊಳ್ಳೆಯ ಕಾವ್ಯಮೀಮಾಂಸಾ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿ ನಾಡು ನುಡಿ ನಾಡವರಿಗೆ ತುಂಬ ಉಪಕಾರ ಮಾಡಿದ್ದಾರೆ. ಕವಿರಾಜಮಾರ್ಗವು ಕನ್ನಡದ ನಂದಾದೀಪ.

ಕ್ರಿಸ್ತಶಕ ೧೮೯೮ ರಿಂದಾರಂಭಿಸಿ ಇದುವರೆಗೆ ಕವಿರಾಜಮಾರ್ಗದ ಆರೇಳು ಆವೃತ್ತಿಗಳು ಹೊರಬಿದ್ದಿವೆಯೆಂದು ಕೇಳಿದ್ದೇನೆ. ಅವುಗಳ ಪೈಕಿ ಶ್ರೀಮಾನ್ ಎಂ. ವಿ. ಸೀತಾರಾಮಯ್ಯ ಅವರು ಸಂಪಾದಿಸಿದ ಕೃತಿಯು ೧೯೬೮ ರಿಂದ ಇಲ್ಲಿಯವರೆಗೆ ನಾಲ್ಕೈದು ಬಾರಿ ಅಚ್ಚಾಯಿತಂತೆ.

ರಾಷ್ಟ್ರಕೂಟದೊರೆ ಅಮೋಘವರ್ಷ ನೃಪತುಂಗನ ಆಶ್ರಯದಲ್ಲಿ ಶ್ರೀವಿಜಯನೆಂಬ ಕವಿಪಂಡಿತನು ಕ್ರಿಸ್ತಶಕ ಸುಮಾರು ೮೫೦–೮೭೭ರ ಅವಧಿಯಲ್ಲಿ ಈ ಕವಿರಾಜಮಾರ್ಗ ಕೃತಿಯನ್ನು ರಚಿಸಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಸಂಸ್ಕೃತದ ದಂಡಿ–ಭಾಮಹರ (ಕ್ರಿಸ್ತಶಕ ೬, ೭ನೇ ಶತಮಾನದವರು) ಕಾವ್ಯಾದರ್ಶ ಕಾವ್ಯಾಲಂಕಾರ ಗ್ರಂಥಗಳ ನೆರವಿನಿಂದ ಕವಿರಾಜಮಾರ್ಗವು ರಚಿತವಾಗಿದೆಯೆಂದು ಶ್ರೀ ವಿಜಯನು ಹೇಳಿಕೊಂಡಿದ್ದಾನೆ. ಇದು ಹೂಬಹೂ ತರ್ಜುಮೆಯಲ್ಲ. ಸಂಸ್ಕೃತದ ಹಿನ್ನೆಲೆಯುಳ್ಳ

* ನಂ. ೧೦, ೮ನೇ ಮುಖ್ಯರಸ್ತೆ, ೩ನೇ ಫೇಸ್, ಗಿರಿನಗರ, ಬೆಂಗಳೂರು–೫೬೦ ೦೮೫.
ದೂರವಾಣಿ ಸಂಖ್ಯೆ : ೨೬೪೨೧೯೭

ಸ್ವತಂತ್ರ ಕೃತಿಯೆಂದು ವಿಮರ್ಶಕರು ಹೇಳುತ್ತಾರೆ. ಇದರಲ್ಲಿ ಶ್ರೀವಿಜಯನು ಬಹಳಷ್ಟು ಕಡೆಗಳಲ್ಲಿ ಸ್ವೋಪಜ್ಞತೆಯನ್ನು ಮೆರೆದಿದ್ದಾನೆಂಬುದನ್ನು ವಿದ್ವಾಂಸರು ಕಂಡುಕೊಂಡಿದ್ದಾರೆ. ಹಳಗನ್ನಡದಲ್ಲಿ ದೊರೆತ ಉತ್ತಮೋತ್ತಮ ಕೃತಿಗಳಲ್ಲಿ ಕವಿರಾಜಮಾರ್ಗವೂ ಒಂದು.

ಶ್ರೀವಿಜಯನು ಕನ್ನಡ ನಾಡು ನುಡಿ ನಾಡವರನ್ನು ತುಂಬ ಅಭಿಮಾನದಿಂದ ಕೊಂಡಾಡುತ್ತಾನೆ. ಅವನ ಈ ಅಭಿಮಾನವು ನಮಗೆ ಅನುಕರಣೀಯವೇ ಸರಿ. ಕವಿರಾಜಮಾರ್ಗದಲ್ಲಿ ಐತಿಹಾಸಿಕ ಮಹತ್ವದ ಅದೆಷ್ಟೋ ವಿಷಯಗಳು ಉಲ್ಲೇಖಗೊಂಡುದನ್ನು ನಾಡಿನ ಅನೇಕಾನೇಕ ಜನ ವಿದ್ವಾಂಸರು ಗುರುತಿಸಿದ್ದಾರೆ. ಇವುಗಳ ಪೈಕಿ ಭಾರತೀಯ ಕಾವ್ಯಮೀಮಾಂಸೆಯಲ್ಲಿ ವಿಶೇಷಮಹತ್ವದ ಕಾವ್ಯತತ್ವವಿಶೇಷವೆನಿಸಿದ ಧ್ವನಿಯ ಉಲ್ಲೇಖವೂ ಒಂದು.

ಕಾವ್ಯತತ್ವವಿಶೇಷವೆನಿಸಿದ ಈ ಧ್ವನಿಯ ಆವಿಷ್ಕಾರವು ಎಂದು ಎಲ್ಲಿ ಯಾರಿಂದ ಆಯಿತು ಎಂಬುದು ಕರಾರುವಾಕ್ಕಾಗಿ ತಿಳಿದುಬಂದಿಲ್ಲ. ಕಾಶ್ಮೀರದ ಆನಂದವರ್ಧನಾಚಾರ್ಯನ ಧ್ವನ್ಯಾಲೋಕವೇ ಧ್ವನಿಪ್ರಸ್ಥಾನದ ಮೊದಲಗ್ರಂಥವೆಂದು ಗೃಹೀತವಾಗಿದೆ. ಈ ಕೃತಿಯು ಕ್ರಿಸ್ತಶಕ ೮೫೦–೯೦೦ರ ಅವಧಿಯಲ್ಲಿ ರಚಿತವಾಗಿದೆಯೆಂದು ಊಹಿಸುತ್ತಾರೆ. ಅಂದರೆ ಕವಿರಾಜಮಾರ್ಗ ಹಾಗೂ ಧ್ವನ್ಯಾಲೋಕಗಳೆರಡೂ ಒಂದೇ ಕಾಲಘಟ್ಟದಲ್ಲಿ ರಚಿತವಾಗಿವೆಯೆಂದು ಹೇಳಬಹುದು. ಆದರೆ ಕಾಶ್ಮೀರ ಕರ್ನಾಟಕಗಳ ಪರಸ್ಪರ ದೂರವನ್ನು ನೆನೆದಾಗ ಶ್ರೀವಿಜಯನು ಧ್ವನ್ಯಾಲೋಕಗ್ರಂಥವನ್ನು ನೋಡಲು ಅವಕಾಶವಿಲ್ಲವೆಂದೇ ಬಗೆಯ ಬೇಕು, ಹಾಗಿದ್ದರೂ, ಕಾವ್ಯತತ್ವ ವಿಶೇಷವೆಂದು ಹತ್ತನೇ ಶತಮಾನದಿಂದಾರಂಭಿಸಿ ಪ್ರಸಿದ್ಧಿಗೆ ಬಂದ ಧ್ವನಿಯನ್ನು ಕುರಿತು ಒಂಬತ್ತನೇ ಶತಮಾನದ ಉತ್ತರಾರ್ಧದಲ್ಲೇ ಶ್ರೀ ವಿಜಯನು ತನ್ನ ಪ್ರತಿಕ್ರಿಯೆಯನ್ನು ಅಕ್ಷರೀಕರಿಸಿದ್ದು ಹೇಗೆ? ಎಂಬುದಿಲ್ಲಿ ಕುತೂಹಲದ ಸಂಗತಿ.

ವೈಯಾಕರಣರು ಸ್ಫೋಟಪ್ರಕ್ರಿಯೆಯ ಸಂದರ್ಭದಲ್ಲಿ ಧ್ವನಿಯ ವ್ಯವಹಾರ ಮಾಡುತ್ತಾ ಬಂದಿದ್ದಾರೆ. ವೈಯಾಕರಣರ ಆ ಜಾಡನ್ನು ಹಿಡಿದು ಇನ್ನೂ ಮುಂದು ಮುಂದಕ್ಕೆ ಸಾಗಿ ಕಾವ್ಯತತ್ವ ಧ್ವನಿಯನ್ನು ಕಂಡು ಹಿಡಿಯಲಾಯಿತು ಎಂಬುದು ಆನಂದವರ್ಧನನ ಆಶಯ. ಧ್ವನ್ಯಾಲೋಕ ಗ್ರಂಥರಚನೆಗಿಂತ ಹಿಂದಿನಿಂದಲೂ ಕೂಡ ಗುರುಶಿಷ್ಯಪರಂಪರೆಯ ರೂಪದಲ್ಲಿ ಕಾವ್ಯತತ್ವ ಧ್ವನಿಯ ಅಧ್ಯಯನವು ಜರುಗುತ್ತಾ ಬಂದಿದೆಯೆಂದು ಆನಂದವರ್ಧನನು ತನ್ನ ಗ್ರಂಥದ ಆರಂಭದಲ್ಲಿ – “ಧ್ವನಿಃ ಸಮಾಮ್ನಾತಪೂರ್ವಃ"– ಎಂಬುದಾಗಿ ಹೇಳಿದ್ದಾನೆ. ಹಿಂದಿನಿಂದ ಎಂಬ ಮಾತಿಗೆ ಆನಂದವರ್ಧನನಿಗಿಂತ ಎಷ್ಟು ಹಿಂದಿನಿಂದ ಎಂಬುದು ಮಾತ್ರ ತಿಳಿದುಬಂದಿಲ್ಲ. ಧ್ವನಿಕಾರಿಕಾ ಎಂಬ ಚಿಕ್ಕ ಕೃತಿಯೊಂದು ಕಾವ್ಯಮೀಮಾಂಸಕ ವಿದ್ವಾಂಸರ ಸಮುದಾಯದಲ್ಲಿ

ಖಾಸಗಿ ಬಳಕೆಯ ರೂಪದಲ್ಲಿ ಪ್ರಚಾರದಲ್ಲಿತ್ತು ಎಂದು ವಿದ್ವಾಂಸರು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಈ ಮಾತನ್ನು ಒಪ್ಪುವುದಿಲ್ಲ. ಧ್ವನ್ಯಾಲೋಕ ರಚನೆಗಿಂತ ಹಿಂದೆ ಧ್ವನಿಯ ವ್ಯವಹಾರವು ವಿದ್ವದ್‌ವಲಯದಲ್ಲಿ ಬಳಕೆಗೆ ಬಂದಿತ್ತು ಎಂಬುದಕ್ಕೆ ಒಂದೇ ಒಂದು ನಂಬಲರ್ಹವಾದ ಪ್ರಮಾಣ ಸಿಕ್ಕಿಲ್ಲ ಎಂಬುದಿಲ್ಲಿ ಕೆಲವರ ವಾದ.

ಶ್ರೀವಿಜಯನು ಆನಂದವರ್ಧನನ ಧ್ವನ್ಯಾಲೋಕ ಗ್ರಂಥವನ್ನು ನೋಡಲಿಲ್ಲ ಎಂಬುದನ್ನು ಒಪ್ಪಲೇಬೇಕು. ಜೊತೆಯಲ್ಲಿ ಅವನು ಧ್ವನಿಕಾವ್ಯಲಕ್ಷಣಕಾರಿಕೆ "ಯತ್ರಾರ್ಥಃ ಶಬ್ದೋ ವಾ......." ಎಂಬುದನ್ನು ಕಂಡೋ ಕೇಳಿಯೋ ತಿಳಿದಿದ್ದ ಎಂಬುದನ್ನು ಒಪ್ಪಬೇಕಾಗಿದೆ. ಇದನ್ನು ಧ್ವನಿಕಂದವೇ ಹೇಳುತ್ತದೆ. ಶ್ರೀವಿಜಯನು ಧ್ವನಿಕಾವ್ಯಲಕ್ಷಣಕಾರಿಕೆಯನ್ನು ಕಂಡು ಕೇಳಿ ತಿಳಿಯದಿದ್ದಲ್ಲಿ ಅವನು ಧ್ವನಿಕಂದವನ್ನು ರಚಿಸುವುದು ಅಸಂಭವ. ಧ್ವನಿಕಾವ್ಯಾಲಕ್ಷಣಕಾರಿಕೆಯಲ್ಲಿರುವ **ಧ್ವನಿ ಶಬ್ದ ಅರ್ಥ** ಎಂಬೀ ಮೂರು ಶಬ್ದಗಳ ಸಂನಿವೇಶವು ಧ್ವನಿಕಂದದಲ್ಲೂ ಕಂಡುಬರುವುದರಿಂದ ಶ್ರೀವಿಜಯನು ಧ್ವನಿಕಾವ್ಯಲಕ್ಷಣಕಾರಿಕೆಯನ್ನು ಬಲ್ಲವನಾಗಿದ್ದನೆಂಬುದಕ್ಕೆ ಧ್ವನಿಕಂದವೇ ಪ್ರಮಾಣ. "ಜ್ಞಾನಸ್ಯ ಪ್ರಾಮಾಣ್ಯಂ ಸ್ವತಃ" ಶ್ರೀ ವಿಜಯನು ಧ್ವನಿಕಾವ್ಯ ಲಕ್ಷಣಕಾರಿಕೆಯನ್ನು ಕಂಡು ಕೇಳಿ ತಿಳಿದಿರಲಿಲ್ಲ ಎಂಬುದಕ್ಕೆ ಬೇರೆ ಪ್ರಮಾಣ ಬೇಕು. "ಅಪ್ರಾಮಾಣ್ಯಂ ಪರತಃ".

ಹೀಗೆ ಧ್ವನ್ಯಾಲೋಕಗ್ರಂಥರಚನೆಯ ಸಮಕಾಲದಲ್ಲೇ ಕಾಶ್ಮೀರಕ್ಕೆ ದೂರದ ಕರ್ನಾಟಕದಲ್ಲಿದ್ದ ಶ್ರೀವಿಜಯನು ತನ್ನ ಕೃತಿ ಕವಿರಾಜಮಾರ್ಗದಲ್ಲಿ ಕಾವ್ಯತತ್ತ್ವ ಧ್ವನಿಯ ಬಗೆಗೆ ತಾನು ಕೇಳಿ ತಿಳಿದಷ್ಟರ ಮೇರೆಗೆ ಚಿಕ್ಕದಾದರೂ ಚೊಕ್ಕದಾಗಿ ಪ್ರತಿಕ್ರಿಯಿಸಿದ ಈ ಧ್ವನಿಕಂದಕ್ಕೆ ಭಾರತೀಯ ಕಾವ್ಯಮೀಮಾಂಸೆಯ ಇತಿಹಾಸದಲ್ಲಿ ನಮೂದಾಗುವ ಅರ್ಹತೆಯಿದೆ. ಧ್ವನಿಯ ಬಗೆಗೆ ಶ್ರೀವಿಜಯನದು ಅಂತರ್ಭಾವವಾದ. ಅವನು "ಧ್ವನಿಯಿಸುಗುಂ ಶಬ್ದದಿಂದಂ" ಎಂಬೀ ಮಾತಿನಿಂದ ವ್ಯಂಜನಾವೃತ್ತಿಯನ್ನು ನಿರಾಕರಿಸುತ್ತಿದ್ದಾನೆ.

ನುಡಿ ಪುರುಳು ಇವೆರಡೂ ಒಂದನ್ನೊಂದು ಬಿಟ್ಟಿರಲಾರದ ನಂಟುಳ್ಳ ಪದಾರ್ಥಗಳು ಎಂಬುದು ಸಂಸ್ಕೃತ ಶಾಸ್ತ್ರಸಂಪ್ರದಾಯ. ಶಬ್ದ ಹಾಗೂ ಅದರ ಅರ್ಥದ ಪರಸ್ಪರ ಅಂಟುನಂಟಿನ ಅವಿನಾಭಾವಸಂಬಂಧದ ನೆನಪಾದುದಾದರೆ "ಅರ್ಥದೆ ದೂಷ್ಯಂ" ಎಂಬಲ್ಲಿ ಅರ್ಥದೆಗೆ ಧ್ವನಿಯಿಸುಗುಂ ಕ್ರಿಯೆಯಲ್ಲೇ ಅನ್ವಯ ಹೇಳುಬೇಕು ಎಂಬ ಶಾಸ್ತ್ರದ ಕಡ್ಡಾಯವು ನಮಗೆ ನೆನಪಾಗುತ್ತಿತ್ತು. ಅದು ನೆನಪಾಗಿದ್ದರೆ ಧ್ವನ್ಯಲಂಕಾರ ಮೈದೋರುತ್ತಿರಲಿಲ್ಲ.

"ಧ್ವನಿಯೆಂಬುದಳಂಕಾರಂ" ಎಂಬಲ್ಲಿ ಧ್ವನಿಯನ್ನು (ಕಾವ್ಯವಿಶೇಷವನ್ನು) ಉದ್ದೇಶಿಸಿ ಮಾರ್ಗಕಾರನು ಅಳಂಕಾರತ್ವವನ್ನು ವಿಧಿಸುತ್ತಾನೆ. "ಉದ್ದೇಶ್ಯವಚನಂ ಪೂರ್ವಂ ವಿಧೇಯಸ್ಯ ತತಃ ಪರಮ್" ಎಂಬುದರ ಪ್ರಕಾರ ಧ್ವನಿಶಬ್ದದ ಅರ್ಥ ಕಾವ್ಯವಿಶೇಷ ಎಂಬುದನ್ನು ಅವನು ಧ್ವನಿಕಾವ್ಯಲಕ್ಷಣಕಾರಿಕೆಯ ಮೂಲಕ ಗ್ರಹಿಸಿದ್ದಾನೆಂದೇ ಊಹಿಸಬೇಕಾಗಿದೆ, ಕಾವ್ಯ ಮತ್ತು ಕಾವ್ಯದ ಗುಣವೆನಿಸುವ ಅಲಂಕಾರಕ್ಕೆ ಸಾಮಾನಾಧಿಕರಣ್ಯವನ್ನು ಹೇಳುವದುಂಟು ಎಂಬುದಾಗಿ ಪ್ರತೀಹಾರೇಂದುರಾಜನು ಧ್ವನಿಯ ಬಗೆಗೆ ಅಂತರ್ಭಾವವಾದವನ್ನು ಮಂಡಿಸುವಾಗ ಹೇಳಿದ್ದಾನೆ. ಧ್ವನಿಕಾವ್ಯಲಕ್ಷಣವಾಕ್ಯದಲ್ಲಿ "ಸ ಕಾವ್ಯವಿಶೇಷಃ ಧ್ವನಿಃ" ಎಂಬುದಾಗಿ ಹೇಳಿದೆ.

ಸಂಸ್ಕೃತದಲ್ಲಿ ಧ್ವನಿಕಾವ್ಯಲಕ್ಷಣಕಾರಿಕೆ ಹೀಗಿದೆ:–

ಯತ್ರಾರ್ಥಃ ಶಬ್ದೋ ವಾ ತಮರ್ಥಮುಪಸರ್ಜನೀಕೃತಸ್ವಾರ್ಥೌ।
ವ್ಯಂಕ್ತಃ ಕಾವ್ಯವಿಶೇಷಃ ಸ ಧ್ವನಿರಿತಿ ಸೂರಿಭಿಃ ಕಥಿತಃ॥

ಧ್ವನ್ಯಾಲೋಕಃ ೧–೧೩

"ಎಲ್ಲಿ ಅರ್ಥವಾಗಲೀ, ಅಥವಾ ಶಬ್ದವಾಗಲಿ (ಅನುಕ್ರಮವಾಗಿ) ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿರಿಸಿಕೊಂಡು ಆ ವ್ಯಂಗ್ಯಾರ್ಥವನ್ನು ಸೂಚಿಸುವದೋ ಆ ಕಾವ್ಯವಿಶೇಷವನ್ನು ಪಂಡಿತರು "ಧ್ವನಿ" ಎಂದು ಕರೆದಿದ್ದಾರೆ."

ಡಾ॥ ಕೆ. ಕೃಷ್ಣಮೂರ್ತಿ: ಕನ್ನಡ ಧ್ವನ್ಯಾಲೋಕ.

ಈ ಮೇಲಿನ ಧ್ವನಿಕಾವ್ಯಲಕ್ಷಣಕಾರಿಕೆಯ ಅರ್ಥದ ಬಗೆಗೆ ಶ್ರೀವಿಜಯನ ಪ್ರತಿಕ್ರಿಯೆ ಹೀಗಿದೆ:–

ಧ್ವನಿಯೆಂಬುದಳಂಕಾರಂ
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ।
ನೆನೆವುದಿದನಿಂತು ಕಮಲದೊಳ್
ಅನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ॥

ಕರಾಮಾ ೩–೨೦೯

೧) ಧ್ವನಿಯೆಂಬುದು ಅಲಂಕಾರ; ಕಾವ್ಯವಿಶೇಷವಲ್ಲ.
೨) ಆ ಅಲಂಕಾರರೂಪದ ಅರ್ಥವು ಶಬ್ದದಿಂದ ತೋರಿಬರುತ್ತದೆ. ಅರ್ಥದಿಂದಲ್ಲ.
೩) ಅರ್ಥದಿಂದಲೂ ಅರ್ಥಾಂತರ ತೋರಿಬರುತ್ತದೆ ಎಂಬ ಮಾತು ಸರಿಯಲ್ಲ.

೪) ಧ್ವನಿಯೆಂಬುದು ಅಲಂಕಾರವೆಂಬುದನ್ನು ಲಕ್ಷ್ಯಗಳನ್ನು ನೋಡಿ ಅಲ್ಲಲ್ಲಿಗೆ ಹೊಂದುವ ಅಲಂಕಾರಗಳನ್ನು ನೆನಪಿಸಿಕೊಳ್ಳುವುದು.

೫) ಕಮಲದೊಳ್ ಅನಿಮಿಷಯುಗಂ ಒಪ್ಪಿ ತೋರ್ಪುದು ಅತಿಶಯ!

ಸಂಸ್ಕೃತದ ಧ್ವನಿಕಾವ್ಯಲಕ್ಷಣಕಾರಿಕೆಯಲ್ಲಿರುವ ಅರ್ಥ, ಶಬ್ದ, ಧ್ವನಿ ಎಂಬೀ ಮೂರು ಶಬ್ದಗಳ ಸಂನಿವೇಶವಿಶೇಷರೂಪದ ಸಾಹಚರ್ಯವು ಧ್ವನಿಕಂದದಲ್ಲಿದೆ. ಈ ಕೈಮರವು–ಸಂದಿಗ್ಧಾರ್ಥದ ಸ್ಥಳದಲ್ಲಿ ಅರ್ಥನಿರ್ಣಾಯಕವಾದ ಪ್ರಮಾಣವೆನಿಸುತ್ತದೆ ಎಂಬುದನ್ನು ಭಾರತೀಯ ಕಾವ್ಯಮೀಮಾಂಸೆಯು ಹೇಳುತ್ತದೆ. (ನೋಡಿ: ತೀನಂಶ್ರೀ ಅವರ ಭಾರತೀಯ ಕಾವ್ಯಮೀಮಾಂಸೆ ೧೯೫೩ ಪುಟ ೨೬೦) “ಯತ್ರಾರ್ಥಃ ಶಬ್ದೋವಾ....." ಧ್ವನಿಯೆಂಬುದಳಂಕಾರಂ" ಎಂಬೀ ಎರಡೂ ಸಂದರ್ಭಗಳೂ ಏಕವಿಷಯಕವಾಗಿರುವುದರಿಂದ ಇವೆರಡಕ್ಕೂ ಗಟ್ಟಿಯಾದ ನಂಟಿದೆ. ಧ್ವನಿಕಾವ್ಯಲಕ್ಷಣಕಾರಿಕೆಯಲ್ಲಿರುವ “ಅರ್ಥಃ ತಮರ್ಥಂ ವ್ಯನಕ್ತಿ" ಎಂಬೀ ವಿಧಿರೂಪದ ಅರ್ಥಕ್ಕೆ ನೇರವಾಗಿ “ಧ್ವನಿಯಿಸುಗುಂ ಶಬ್ದದಿಂದಂ" ಎಂಬುದಾಗಿ ನಿಷೇಧರೂಪದ ಅರ್ಥವು ಧ್ವನಿಕಂದದಲ್ಲಿದೆ. ಇದು ಪರಿಸಂಖ್ಯಾವಿಧಿ. ಪರಿಸಂಖ್ಯೆಯ ಸ್ಥಳದಲ್ಲಿ ನಿಷೇಧವೇ ವಾಕ್ಯಾರ್ಥ. ಧ್ವನಿಯಿಸುಗುಂ ಶಬ್ದದಿಂದಂ ಎಂಬೀ ವಾಕ್ಯಕ್ಕೆ ಅರ್ಥದಿಂದ ಅರ್ಥಾಂತರ ಧ್ವನಿಯಿಸುವದಿಲ್ಲ ಎಂಬುದೇ ವಿವಕ್ಷಿತವಾದ ಅರ್ಥ. ಅರ್ಥದೆ ದೂಷ್ಯಂ ಎಂಬುದಿಲ್ಲಿ ಅಭ್ಯುಚ್ಚಯ, ಅಂದರೆ ನಿಷೇಧದ ಸಮರ್ಥನೆ. ಅರ್ಥದೆ ದೂಷ್ಯಂ ಎಂಬೀ ಮಾತು ನಿಷೇಧವನ್ನು ಸಮರ್ಥಿಸುವುದರ ಜೊತೆಯಲ್ಲಿ ವ್ಯಂಜನಾವೃತ್ತಿಯನ್ನು ನಿರಾಕರಿಸುತ್ತದೆ. ಅರ್ಥದಿಂದಲೂ ಅರ್ಥಾಂತರ ಧ್ವನಿಯಿಸುತ್ತದೆ ಎಂಬೀ ಮಾತು ಸರಿಯಲ್ಲ ಎಂಬುದು ಮಾರ್ಗಕಾರನ ಮಜಕೂರು. “ಅರ್ಥದೆಯುಂ ಧ್ವನಿಯಿಸುಗುಂ ಎನೆ ದೂಷ್ಯಂ" ಎಂದು.

ಪರಿಸಂಖ್ಯೆಯೆಂದರೆ – “ಉಭಯಸ್ಯ ಯುಗಪತ್ ಪ್ರಾಪ್ತೌ ಇತರವ್ಯಾವರ್ತಕೋ ವಿಧಿಃ ಪರಿಸಂಖ್ಯಾವಿಧಿಃ" ಎಂಬುದು ಪರಿಸಂಖ್ಯೆಯ ಪರಿಚಯ. ಶಬ್ದದಿಂದ ಅರ್ಥಪ್ರತೀತಿ ಎಂಬುದು ಲೋಕವ್ಯವಹಾರ ಹಾಗೂ ಶಾಸ್ತ್ರದಿಂದ ತಿಳಿದೇ ಇದೆ. ಅದನ್ನು ಇದೀಗ ಧ್ವನಿಯಿಸುಗುಂ ಶಬ್ದದಿಂದಂ ಎಂಬುದಾಗಿ ತಿಳಿಸಬೇಕಾದ್ದಿಲ್ಲ. ಹಾಗಾದರೆ ಧ್ವನಿಯಿಸುಗುಂ ಶಬ್ದದಿಂದಂ ಎಂದು ಹೇಳಿದ್ದೇಕೆ? ಎಂದರೆ ಇದೀಗ ಧ್ವನಿಕಾವ್ಯಲಕ್ಷಣಕಾರಿಕೆಯ ಪ್ರಕಾರ ಕಾವ್ಯಾರ್ಥಪ್ರತೀತಿಗೆ ಶಬ್ದಧ್ವನನ ಅರ್ಥಧ್ವನನ ಎಂಬ ಎರಡು ಸಾಧನಗಳು ಏಕದಂ ಪ್ರಾಪ್ತವಾದವು. ವ್ಯಂಜನಾವ್ಯಾಪಾರದ ಮೂಲಕ ಕಾವ್ಯದಲ್ಲಿ ಅರ್ಥವೂ ಅರ್ಥಾಂತರದ್ಯೋತಕ ಎಂದು ಧ್ವನಿವಾದಿಗಳು ಹೇಳುತ್ತಾರೆ. ಕಾವ್ಯಾರ್ಥದ್ಯೋತನಕ್ರಿಯೆಯಲ್ಲಿ ಶಬ್ದ ಅರ್ಥ ಎಂಬ ಉಭಯಧ್ವನನಗಳು

ಧ್ವನಿಕಾವ್ಯಲಕ್ಷಣದ ಮೇರೆಗೆ ಪ್ರಾಪ್ತವಾದಾಗ ಒಂದನ್ನು ನಿಷೇಧಿಸುವುದಕ್ಕಾಗಿ ಧ್ವನಿಯಿಸುಗುಂ ಶಬ್ದದಿಂದಂ ಎಂಬುದಾಗಿ ಮಾರ್ಗಕಾರನು ಒಕ್ಕಣಿಸಿದ್ದಾನೆ. ಶಬ್ದವು ಅರ್ಥವನ್ನು ಧ್ವನಿಯಿಸುತ್ತದೆ ಎಂಬುದು ಸರಿ. ಅರ್ಥವೂ ಅರ್ಥಾಂತರವನ್ನು ಧ್ವನಿಯಿಸುತ್ತದೆ ಎಂಬುದು ದೂಷ್ಯ. ದೂಷ್ಯವೆಂದರೆ ಸರಿಯಲ್ಲವೆಂದರ್ಥ.

ಶಬ್ದ ಮತ್ತು ಅರ್ಥ ಇವೆರಡೂ ಪಾರ್ವತೀಪರಮೇಶ್ವರರ ಹಾಗೆ ಜೋಡಿಯಾಗಿಯೇ ಇರುವ ತತ್ವಗಳು. ಪ್ರಕೃತ ಧ್ವನಿಕಂದದಲ್ಲಿ ಶಬ್ದಕ್ಕೆ ಧ್ವನಿಯಿಸುಗುಂ ಕ್ರಿಯೆಯಲ್ಲಿ ಅನ್ವಯ ಹೇಳಿದಂತೆಯೇ ಜೊತೆಯಲ್ಲೇ ಇರುವ ಅರ್ಥಕ್ಕೂ ಧ್ವನಿಯಿಸುಗುಂ ಕ್ರಿಯೆಯಲ್ಲೇ ಅನ್ವಯ ಹೇಳುವುದು ನ್ಯಾಯ್ಯಃ ಪಂಥಾಃ. ಅದು ಬಿಟ್ಟು (ಅಂದರೆ ಇರದೆ ಎಂದರ್ಥ) ಅರ್ಥದೆಯ ಅರ್ಥವನ್ನು ಸುತರಾಂ ಕೈಬಿಟ್ಟು ದೂಷ್ಯ, ದೋಷದಲ್ಲಿ ಅನ್ವಯವ ಹೇಳುವುದು ಶಾಸ್ತ್ರ ಸಂಪ್ರದಾಯವೆನಿಸುವುದಿಲ್ಲ. ಅರ್ಥದೆ ದೂಷ್ಯಂ ಎಂಬಲ್ಲಿ ಆಕಾಂಕ್ಷಾ ಯೋಗ್ಯತಾ ಸಂನಿಧಿಯೆಂಬೀ ಅನ್ವಯಸಾಮಗ್ರಿಯು ಜಾಗ್ರತವಾಗಿಯೇ ಇದೆ. ಇದು ಅನ್ವಯದಲ್ಲಿ ಜ್ಞಾತಾ ಸತೀ ಕಾರಣವಾಗುತ್ತದೆಯೆಂದು ಹೇಳುತ್ತಾರೆ. ಸಂದರ್ಭಕ್ಕೆ ಸರಿಯಾಗಿ ಈ ಅನ್ವಯ ಸಾಮಗ್ರಿಯ ನೆನಪಾಗದಿದ್ದರೆ ಶಾಬ್ದಬೋಧವು ಯದ್ವಾತದ್ವಾ ಅಥವಾ ಎಡಬಿಡಂಗಿ ಆಗುತ್ತದೆಂದು ಹೇಳುತ್ತಾರೆ. ಉದಾಹರಣೆಗೆ:– ಧ್ವನ್ಯಲಂಕಾರ. ಇಲ್ಲಿ ಅನ್ವಯಸಾಮಗ್ರಿಯ ಮೇರೆಗೆ ಅರ್ಥದೆಗೂ ಧ್ವನಿಯಿಸುಕ್ರಿಯೆಯಲ್ಲಿ ಅನ್ವಯ ಮಾಡಿ ವಾಕ್ಯಾರ್ಥವನ್ನೂ ಕಂಡು ಕೊಂಡಿದ್ದರೆ ಧ್ವನ್ಯಲಂಕಾರ ತಲೆದೋರುತ್ತಿರಲಿಲ್ಲ.

ನೆನೆ=ಸ್ಮರಣೇ ಎಂಬುದು ಕೇಶಿರಾಜನ ಧಾತುಪಾಠ. ಸಾದೃಶ್ಯಾನುಭವಾದ್

ವಸ್ತ್ವಂತರಸ್ಮೃತಿಃ, ಸಂಸ್ಕಾರಜನ್ಯಂ ಜ್ಞಾನಂ ಸ್ಮೃತಿಃ, ಅನುಭೂತವಿಷಯಕಂ ಜ್ಞಾನಂ ಸ್ಮೃತಿಃ ಎಂದು ಮುಂತಾಗಿ ಸ್ಮರಣೆಯ ಸ್ವರೂಪವನ್ನು ತೋರಿಸಿದ್ದಾರೆ. ಅಂದರೆ ಧ್ವನಿಕಂದದಲ್ಲಿರುವ ನೆನೆವುದಿದನಿಂತು ಎಂಬ ಮಾತು ಅಪೂರ್ವವಾದ ಧ್ವನಿಯೆಂಬ ಅಲಂಕಾರವೊಂದರ ವಿಧಾಯಕವಲ್ಲ; ಬದಲಾಗಿ ಈ ಹಿಂದೆ ನಿರೂಪಿತವಾದ ಅತಿಶಯೋಕ್ತಿಯೇ ಮುಂತಾದ ಅಲಂಕಾರಗಳ ಪೈಕಿ ಪ್ರಕೃತ ಲಕ್ಷ್ಯದಲ್ಲಿ ಯಾವ ಅಲಂಕಾರವಿದೆಯೆಂಬುದನ್ನು ನೆನಪಿಸಿಕೊಳ್ಳಬೇಕು ಎಂಬುದಾಗಿ ನೆನೆವುದಿದನಿಂತುದರ ಅರ್ಥ.

ಕವಿರಾಜಮಾರ್ಗದ ಮೂರನೆಯ ಪರಿಚ್ಛೇದದ ಆರಂಭದಲ್ಲಿ ಶ್ರೀವಿಜಯನು ಅರ್ಥಾಲಂಕಾರನಿರೂಪಣೆಗೆ ಮುನ್ನ ಪ್ರತಿಜ್ಞಾವಾಕ್ಯದಲ್ಲಿ ಜಾತಿಯಿಂದಾರಂಭಿಸಿ ಆಶೀರಲಂಕಾರದವರೆಗೆ ಮುವ್ವತ್ತನಾಲ್ಕು ಅಲಂಕಾರಗಳನ್ನು ಹೆಸರಿಸಿ ಎಣಿಸಿ ಸಂಕಲ್ಪಿಸಿ ನಿರೂಪಣೆಗೆ ತೊಡಗುತ್ತಾನೆ. (ಜ್ಞಾತ್ವಾ ಪ್ರಾರಭ್ಯ ಕುರ್ವೀತ ಎಂಬಂತೆ, ಹೋಮದಲ್ಲಿ

ಅನ್ವಾಧಾನವಿದ್ದಂತೆ. “ಪ್ರಾರಭ್ಯ"ಎಂದರೆ ಸಮ್ಯಕ್ ಸಂಕಲ್ಪ್ಯ ಎಂದರ್ಥವಂತೆ. ವೈದಿಕಕರ್ಮ ಗಳಲ್ಲಿ ಸಂಕಲ್ಪಕ್ಕೆ ಮಹತ್ವ, ಪ್ರಾಮುಖ್ಯವಿದೆ.) ಶುಭಾಶಂಸನರೂಪದ ಆಶೀರಲಂಕಾರ ನಿರೂಪಣೆಯೊಂದಿಗೆ ತೊಡಗಿದ ಮುಖ್ಯ ಕೆಲಸಮುಗಿದಂತಾಯಿತು. ಆಗ ಪ್ರಕೃತಕ್ಕೆ ಮುಖ್ಯವಲ್ಲದೇ ಇದ್ದರೂ ನೆನಪಾದುದನ್ನು ಹೇಳಲೇಬೇಕಾದ ಒತ್ತಡದಿಂದ ಪ್ರಾಸಂಗಿಕವಾಗಿ ಭಾವಿಕ ಹಾಗೂ ಧ್ವನಿಯ ಬಗೆಗೆ ಸಂಕ್ಷೇಪವಾಗಿ ತನ್ನ ಇಂಗಿತವನ್ನು ಹೊರಗೆಡಹುವ ಹವಣಿಕೆಯಿಂದಾಗಿ ಎರಡು ಮಾತು ಹೇಳಿದ್ದಾನೆ ಅಷ್ಟೇ ಹೊರತು ಭಾವಿಕ ಧ್ವನಿಗಳು ಕವಿರಾಜಮಾರ್ಗದ ಅರ್ಥಾಲಂಕಾರಗಳ ಪಟ್ಟಿಯಲ್ಲಿ ಮುವ್ವತ್ತೈದು ಮುವ್ವತ್ತಾರು ಎಂಬ ಎಣಿಕೆಗೆ ಒಳಪಡುವುದಿಲ್ಲ. ಭಾವಿಕವು ಮುಂದಿನ ದಿನಗಳಲ್ಲಿ ಅರ್ಥಾಲಂಕಾರವೆಂದು ಗೃಹೀತವಾದುದು ಬೇರೆ ವಿಚಾರ. ಧ್ವನ್ಯಲಂಕಾರವನ್ನು ಮಾರ್ಗಕಾರನಾಗಲಿ ಮುಂದಿನವರಾಗಲಿ ಹೇಳಲಿಲ್ಲ. ಇತ್ತೀಚೆಗಷ್ಟೇ ಇದು ಕಾಣಿಸಿಕೊಂಡಿದೆ.

ಧ್ವನಿಯ ಬಗೆಗೆ ಅಲಂಕಾರಾಂತರ್ಭಾವವಾದವು ಧ್ವನಿವಿರೋಧವೇ ಅಲ್ಲ ಎಂದು ಹೇಳುವದುಂಟು. ಧ್ವನಿವಿರೋಧ ಎಂಬ ಮಾತಿಗೆ ವ್ಯಂಜನಾವೃತ್ತಿಯ ಬಗೆಗೆ ಅಸಹನೆ ಎಂದಿಷ್ಟೇ ಅರ್ಥ. ಮಾರ್ಗಕಾರನದೂ ಕೂಡಾ ವ್ಯಂಜನಾವೃತ್ತಿಯನ್ನು ಕುರಿತೇ ಅಸಹನೆ ಎಂಬುದನ್ನು “ಅರ್ಥದೆ ದೂಷ್ಯಂ" ಎಂಬುದರ ಪ್ರಕಾರ ಊಹಿಸಬಹುದು. ಧ್ವನಿಯ ಕುರಿತು ಅಲಂಕಾರಾಂತರ್ಭಾವವನ್ನು ಹಾಗೂ ವ್ಯಂಜನಾವೃತ್ತಿಯ ಬಗೆಗೆ ಅಸಹನೆಯನ್ನು ಅಕ್ಷರೀಕರಿಸಿದವರಲ್ಲಿ ಕಾಲದ ದೃಷ್ಟಿಯಿಂದ ಶ್ರೀವಿಜಯನೇ ಮೊದಲಿಗನೇನೋ! ಪ್ರತೀಹಾರೇಂದುರಾಜನು ಹತ್ತನೆ ಶತಮಾನದ ಮೊದಲಭಾಗದಲ್ಲಿದ್ದನೆಂದು ಹೇಳುತ್ತಾರೆ. ರತ್ನಶ್ರೀಜ್ಞಾನನೆಂಬ ಬೌದ್ಧಪಂಡಿತನೂ ಅಷ್ಟೇ. ರತ್ನಶ್ರೀಜ್ಞಾನನು ಧ್ವನಿಯೆಂಬುದು ಸಮಾಸೋಕ್ತಿರೂಪದ್ದೆಂದು ಹೇಳುತ್ತಾನೆ.

ತಾರ್ಕಿಕ ಜಯಂತ ಭಟ್ಟನು ಶ್ರೀವಿಜಯನಿಗಿಂತ ಮುಂದಿನವನು. ಅವನೂ ಕೂಡ ವ್ಯಂಜನಾವೃತ್ತಿಯ ಬಗೆಗೆ ಅಸಹನೆಯನ್ನು ತಾಳಿದವನು. ಜಯಂತಭಟ್ಟನು ಸಂಕ್ಷೇಪವಾಗಿ ವ್ಯಂಜನಾವೃತ್ತಿಯನ್ನು ನಿರಾಕರಿಸಿ ಧ್ವನಿವಾದಿಗಳ ಬಗೆಗೆ ಔದಾಸೀನ್ಯವನ್ನು ವ್ಯಕ್ತಪಡಿಸಿ “ವಿದ್ವಾಂಸೋಽಪಿ ವಿಮುಹ್ಯಂತಿ ವಾಕ್ಯಾರ್ಥಗಹನೇಽತ್ರಧ್ವನಿ" ವಾಕ್ಯಾರ್ಥವಿಚಾರದ ಗೊಂಡಾರಣ್ಯದಲ್ಲಿ ಬಲ್ಲಿದರೂ ಕೂಡ ದಾರಿತಪ್ಪಿ ಎತ್ತೆತ್ತಲೋ ಹೋಗಿಬಿಡುತ್ತಾರೆ ಎನ್ನುತ್ತಾನೆ. ಮುಕುಲಭಟ್ಟನೂ ಕೂಡ ಶ್ರೀವಿಜಯನಿಗಿಂತ ಮುಂದಿನವನು. ವ್ಯಂಜನಾವೃತ್ತಿಯ ನಿರಾಕರಣೆಯ ಸಂದರ್ಭದಲ್ಲಿ ಮುಕುಲ ಭಟ್ಟನು ಶ್ರೀವಿಜಯನ ಕನ್ನಡ ನುಡಿಯನ್ನು ಸಂಸ್ಕೃತದಲ್ಲಿ ಅನುವಾದಿಸಿದಂತೆ ಭಾಸವಾಗುತ್ತದೆ. “ಶಬ್ದಸ್ಯೈವಾಸೌ ವ್ಯಾಪಾರೋ ನ್ಯಾಯ್ಯೋ ನಾರ್ಥಸ್ಯ" ಅರಿವನ್ನು ಮೂಡಿಸುವುದು ನುಡಿಯ

ಕೆಲಸ; ಪುರುಳಿನದಲ್ಲ.ಧ್ವನಿಕಂದದ "ಧ್ವನಿಯಿಸುಗುಂ ಶಬ್ದದಿಂದ "ಅರ್ಥದೆ ದೂಷ್ಯಂ" ಎಂಬುದರ ಸಂದರ್ಭದಲ್ಲಿ "ಅರ್ಥಂ ಬುದ್ವಾ ಶಬ್ದ ರಚನಾ"ಎಂಬುದನ್ನೂ "ನಿಷೇಧಸ್ಯ ಪ್ರಾಪ್ತಿಪೂರ್ವಕತ್ವನಿಯಮಾತ್"ಎಂಬುದನ್ನೂ ಕೂಡ ಮನಸ್ಸಿಗೆ ತಂದುಕೊಳ್ಳಬೇಕಾದುದು ಸೂಕ್ತ. ಹೊಂದಿಕೆಯಾಗುವಂತಹ ಅರ್ಥವನ್ನು ತಿಳಿಸುವ ವಾಕ್ಯವೊಂದನ್ನು ಸ್ವಬುದ್ಧಿಯಿಂದ ರಚಿಸುವ ಮೊದಲು ವಕ್ತೃವು ಆ ವಾಕ್ಯದ ಅರ್ಥವನ್ನು ತಿಳಿದಿರಬೇಕು. ಹಾಗೆಯೇ ಅರ್ಥವೊಂದನ್ನು ನಿಷೇಧಿಸುವ, ನಿರಾಕರಿಸುವ ಮೊದಲು ಆ ಅರ್ಥವು ಅಲ್ಲಿ ಪ್ರಾಪ್ತವಾಗಿರಬೇಕು. ಈ ಎರಡೂ ವಿಷಯಗಳು ಶ್ರೀವಿಜಯನಿಗೆ ಧ್ವನಿ ಕಾವ್ಯಲಕ್ಷಣಕಾರಿಕೆಯಿಂದ ತಿಳಿದುಬಂದಿವೆ. ಆ ಕಾರಿಕೆಯಲ್ಲಿ "ಶಬ್ದಃ ತಮರ್ಥಂ ವ್ಯನಕ್ತಿ, ಅರ್ಥಃ ತಮರ್ಥಂ ವ್ಯನಕ್ತಿ" ಎಂಬುದಾಗಿ ಶಬ್ದಾರ್ಥಗಳೆರಡೂ ಧ್ವನನಕ್ರಿಯೆಯಲ್ಲಿ ಕರ್ತೃಗಳಾಗುತ್ತವೆಯೆಂದು ತಿಳಿಸಿದೆ. ಶಬ್ದವು ಅರ್ಥಪ್ರತ್ಯಾಯಕ ಎಂಬುದು ಶಾಸ್ತ್ರ ಹಾಗೂ ಲೋಕವ್ಯವಹಾರದಿಂದ ತಿಳಿದೇ ಇದೆ. ಅರ್ಥವೂ ಅರ್ಥಾಂತರ ಪ್ರತ್ಯಾಯಕ ಎಂಬುದು ಇದೀಗ ಧ್ವನಿಕಾವ್ಯಲಕ್ಷಣಾಕಾರಿಕೆಯಿಂದಲೇ ತಿಳಿದುಬಂತು. ಶಬ್ದವು ಅರಿವನ್ನು ಮೂಡಿಸುತ್ತದೆ ಎಂಬುದಕ್ಕೆ–

ನ ಸೋಸ್ತಿ ಪ್ರತ್ಯಯೋ ಲೋಕೇ ಯಃ ಶಬ್ದಾನುಗಮಾದ್ ಋತೇ।
ಅನುವಿದ್ಧಮಿವ ಜ್ಞಾನಂ ಸರ್ವಂ ಶಬ್ದೇನ ಭಾಸತೇ॥

ಭರ್ತೃಹರಿ ವಾಕ್ಯಾಪದೀಯ ಬ್ರಹ್ಮಾಕಾಂಡ.

"ಶಬ್ದಸಂಸ್ಪರ್ಶವಿಲ್ಲದ ಯಾವುದೇ ಒಂದು ಜ್ಞಾನವೂ ಲೋಕದಲ್ಲಿಲ್ಲ. ಸಮಸ್ತ ಜ್ಞಾನವೂ ಶಬ್ದದೊಂದಿಗೆ ಕೂಡಿಹೋಗಿದೆಯೋ ಎಂಬಂತೆಯೇ ತೋರುತ್ತದೆ"

– ಕನ್ನಡ ಅನುವಾದ: ವಿದ್ವಾನ್ ಎನ್ ರಂಗನಾಥ ಶರ್ಮಾ
ವಾಕ್ಯಪದೀಯ ಬ್ರಹ್ಮಕಾಂಡ ಪುಟ ೬೦
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಕಟಣೆ

ಎಂಬೀ ಬಗೆಯ ಲೋಕಶಾಸ್ತ್ರ ಪ್ರಮಾಣಗಳು ಕಂಡಬರುತ್ತವೆ. ವ್ಯಂಜನಾವೃತ್ತಿಯ ಮೂಲಕ ಅರ್ಥವೂ ಅರ್ಥಾಂತರವನ್ನು ತಿಳಿಸುತ್ತದೆಂಬ ವಿಚಾರ ಶಾಸ್ತ್ರಗಳಿಂದ ಅಂಗೀಕೃತವಾದದ್ದು ತಿಳಿದುಬಂದಿಲ್ಲಾದ್ದರಿಂದ ಶ್ರೀವಿಜಯನು ವ್ಯಂಜಾನಾವೃತ್ತಿಯನ್ನು ನಿರಾಕರಿಸುವುದಕ್ಕಾಗಿ "ಅರ್ಥದೆಯುಂ ಧ್ವನಿಯಿಸುಗುಮೆನೆ ದೂಷ್ಯಂ" ಎಂಬುದಾಗಿ ಹೇಳಿದ.

"ಧ್ವನಿಸಿಸುಗುಂ ಶಬ್ದದಿಂದಂ" ಎಂಬಲ್ಲಿ ಧ್ವನಿಯಿಸುಗುಂ ಪದದಲ್ಲಿ ವ್ಯಂಜನಾವ್ಯಾಪಾರ ಎಂಬ ವಿಶಿಷ್ಟಾರ್ಥವನ್ನೇ ಗ್ರಹಿಸಬೇಕು ಎಂದು ಹೇಳಿದಾಗ

ಅರ್ಥದೆ ಎಂಬಲ್ಲಿ ವ್ಯಂಜನಾವ್ಯಾಪಾರವನ್ನು ಗ್ರಹಿಸುವುದರಲ್ಲಿ ಬಾಧಕವೇನಿದೆ? ಇಷ್ಟಾಗಿ ಮಾರ್ಗಕಾರನಿಗೆ ಧ್ವನಿಯೆಂದರೇನೆಂಬುದೇ ಗೊತ್ತಿಲ್ಲ ಎಂದು ತೀರ್ಮಾನಿಸಿದ ನಂತರ ಧ್ವನಿಯಿಸುಗುಂ ಶಬ್ದದಿಂದಂ" ಎಂಬಲ್ಲಿ ವ್ಯಂಜನಾವ್ಯಾಪಾರ ಎಂಬ ಅರ್ಥವನ್ನು ಹೇಳುವುದು ಸೂಕ್ತವೆನಿಸುವುದಿಲ್ಲ. ಮಾರ್ಗಕಾರನ ಪ್ರಕಾರ ಧ್ವನಿಸಿಯಿಸುಗುಂ ಪದಕ್ಕೆ ತೋರು, ಸೂಚಿತವಾಗು, ಹೊಳೆ ಮುಂತಾಗಿ ಸಾಮಾನ್ಯವಾದ ಅರ್ಥವನ್ನು ಒಪ್ಪುವುದೇ ಸೂಕ್ತ. ವ್ಯನಕ್ತಿ ದ್ಯೋತತೇ ಪ್ರತೀಯತೇ ಮುಂತಾದ ಪ್ರಯೋಗಗಳು ಧ್ವನಿಪ್ರಸ್ಥಾನಕ್ಕಿಂತ ಹಿಂದಿನಿಂದಲೂ ಬಳಕೆಯಲ್ಲಿವೆ. ಅಲ್ಲೆಲ್ಲಾ ವ್ಯಂಜನಾವ್ಯಾಪಾರವೆಂಬ ವಿಶಿಷ್ಟಾರ್ಥ ಗ್ರಹಣದ ಪ್ರಸಕ್ತಿಯಿಲ್ಲ. ಅಲ್ಲೂ ಕೂಡ ಇಂದು ನಾವು ಧ್ವನಿಯೆಂಬ ವ್ಯಂಜನಾವ್ಯಾಪಾರವನ್ನು ಆರೋಪಿಸಬಹುದೇ ಹೊರತು ಆಯಾಯ ಗ್ರಂಥಕಾರರ ದೃಷ್ಟಿಯಿಂದ ಅಲ್ಲಿ ವ್ಯಂಜನಾವ್ಯಾಪಾರವನ್ನು ಆರೋಪಿಸಬೇಕಾದ್ದಿಲ್ಲ. ಮಾರ್ಗಕಾರನ ಪ್ರಯೋಗದಲ್ಲೂ ಅಂತೆಯೇ ಧ್ವನಿಯಿಸುಗುಂ ಪದಕ್ಕೆ ತೋರು ಹೊಳೆ ಸೂಚಿತವಾಗು ಎಂಬುದಾಗಿ ಅರ್ಥವಿವರಣೆ ತೋರಿಸಬಹುದು.

ಶಾಬ್ದಬೋಧಚಿಂತನೆಗಳು ಕ್ರಿಸ್ತಶಕ ಎಂಟನೇ ಶತಮಾನಕ್ಕೆ ಹಿಂದೆ ಬೆಳೆದಿರಲಿಲ್ಲ ಎಂಬ ಮಾತು ಪ್ರೌಢಿವಾದ ಮಾತ್ರವೆನಿಸುತ್ತದೆ. ಶಾಬ್ದಬೋಧಪ್ರಕ್ರಿಯೆಯು ಎಂಟನೇ ಶತಮಾನಕ್ಕಿಂತ ಹಿಂದಿನಿಂದಲೂ ಹರಿದು ಬಂದಿದೆ. ಎಂಟನೇ ಶತಮಾನದ ಅನಂತರ ತರ್ಕ ವ್ಯಾಕರಣ ಪೂರ್ವಮೀಮಾಂಸಾದಿ ಶಾಸ್ತ್ರಗಳ ವಿದ್ವಾಂಸರು ಈ ಶಾಬ್ದಬೋಧ ಪ್ರಕ್ರಿಯೆಗೆ ವಿಶೇಷವಾಗಿ ಚಾಲನೆ ನೀಡಿ ಅನೇಕಾನೇಕ ಪ್ರೌಢವಿದ್ವತ್ಪೂರ್ಣವಾದ ಗ್ರಂಥಗಳನ್ನು ರಚಿಸಿ ವಿಸ್ತೃತವಾಗಿ ಬೆಳೆಸಿದ್ದಾರೆ. ಕವಿರಾಜಮಾರ್ಗದಲ್ಲಿ ಶಾಬ್ದಬೋಧ ಪ್ರಕ್ರಿಯೆಗೆ ಸಹಜ ಪ್ರಸಕ್ತಿಯಿಲ್ಲ ಎಂಬ ಮಾತನ್ನು ಎಲ್ಲರೂ ಒಪ್ಪಲೇಬೇಕು. ಯಾಕೆಂದರೆ ಕವಿರಾಜಮಾರ್ಗವು ಶಾಬ್ದಬೋಧ ಪ್ರಕ್ರಿಯೆಯ ನಿರೂಪಣೆಗೆ ಹೊರಟ ಗ್ರಂಥವಲ್ಲ. ಈ ಗ್ರಂಥದ ವಿಷಯ ಕಾವ್ಯಮೀಮಾಂಸೆ. ಆದರೆ "ಅರ್ಥದೆ ದೂಷ್ಯಂ" ಎಂಬೀ ಸ್ಥಳದಲ್ಲಿ ಅನ್ವಯಸಾಮಗ್ರಿಯು ಜಾಗ್ರತವಾಗಿಯೇ ಇದ್ದರೂ "ಅಲ್ಲೇನೂ ಇಲ್ಲ" ಎಂದು ಕೈ ಕೊಡವಿ ಮರೆಮಾಚಿ ಮುಂದೆ ಸಾಗುವುದರ ಗುಟ್ಟೇನೆಂದು ನನಗರ್ಥವಾಗಲಿಲ್ಲ. "ಅರ್ಥದೆ ದೂಷ್ಯಂ" ಎಂಬ ಮಾತಿಗೆ "ಕಮಲದೊಳನಿಮಿಷಯುಗಂ" ಎಂಬಲ್ಲಿ ವಾಚ್ಯಾರ್ಥವು ಬಾಧಿತವಾಗಿರುವುದೇ ದೂಷ್ಯ ಎಂಬುದಾಗಿ ನಾಡಿನ ಮಾನ್ಯ ವಿದ್ವಾಂಸರು ಹಲವರು ಹೇಳುತ್ತಾ ಬಂದಿದ್ದಾರೆ. ವಾಚ್ಯರ್ಥಬಾಧೆಯಿದ್ದಲ್ಲಿ ಲಕ್ಷಣೆಯಿಂದ ಸಂಗತವಾದ, ವಿವಕ್ಷಿತವಾದ ಅರ್ಥವನ್ನು ಕಂಡುಕೊಳ್ಳಬೇಕೆಂಬುದನ್ನು ಕಾವ್ಯಮೀಮಾಂಸೆಯೇ ತೋರಿಸಿಕೊಟ್ಟಿದೆಯೇ ಹೊರತು "ಕಮಲದೊಳನಿಮಿಷಯುಗಂ" ಎಂಬಂತಹ ಕಾವ್ಯವು ದೂಷ್ಯ ಎಂದು ಹೇಳಿದ್ದು ಎಲ್ಲಾದರೂ ಕಂಡುಬರುತ್ತದಯೇ? ಮಾರ್ಗಕಾರನು ಹಾಗೆ ಹೇಳಿದನೆಂಬುದು ಸರಿಯಲ್ಲ.

ಅರ್ಥದೆ ಎಂಬುದಕ್ಕೆ ಎಲ್ಲಿ ಅನ್ವಯ? ಎಂಬೀ ಬಗೆಯ ಆಕಾಂಕ್ಷೆಯಿದೆ. ಅರ್ಥಃ ತಮರ್ಥಂ ವ್ಯನಕ್ತಿ ಎಂಬುದರ ಪ್ರಕಾರ ಅರ್ಥಪದಕ್ಕೆ ಧ್ವನನಕ್ರಿಯೆಯಲ್ಲಿ ಅನ್ವಯಿಸುವ ಯೋಗ್ಯತೆಯೂ ಇದೆ. 'ಧ್ವನಿಯಿಸುಗುಂ ಎಂಬ ಕ್ರಿಯಾಪದ ಹಾಗೂ ಅರ್ಥದೆ ಎಂಬ ಕರಣಕಾರಕಪದ ಇವು ಅವ್ಯವಹಿತವಾಗಿ ಪೂರ್ವೋತ್ತರ ವಾಕ್ಯಗಳಲ್ಲಿರುವುದರಿಂದ ಸಂನಿಧಿಯೂ ಇದೆ. ಆದ್ದರಿಂದ ಅರ್ಥದೆಯ ಮುಂದೆ "ಧ್ವನಿಯಿಸುಗುಂ" ಪದವನ್ನು ಅನುಷಂಗ ಮಾಡಿಕೊಳ್ಳುವುದು ಶಾಸ್ತ್ರಸಂಮತವೇ ಆಗಿದೆ. "ಎನೆ" ಎಂಬುದೊಂದನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಈ ಬಗೆಯ ಅಧ್ಯಾಹಾರಕ್ಕೆ ನಮ್ಮ ಪ್ರಾಚೀನವಾಙ್ಮಯದ ಸಮರ್ಥನೆ, ಬೆಂಬಲ ಇದ್ದೇ ಇದೆ.

ಅಧ್ಯಾಹಾರವೆಂದರೆ ಪ್ರಕೃತೋಪಯೋಗಿಶಬ್ದ ಕಲ್ಪನೆ. ವಿವಕ್ಷಿತ ವಾಕ್ಯಾರ್ಥನಿರ್ವಾಹಕ್ಕಾಗಿ, ವಾಕ್ಯದಲ್ಲಿ ಕೇಳಿಬರದಿರುವ ಅಪೇಕ್ಷಿತ ಶಬ್ದವೊಂದರ ಜೋಡಣೆ. ಪ್ರಕೃತ ಅರ್ಥದೆ ದೂಷ್ಯಂ ಎಂಬಲ್ಲಿ ಅನ್ವಯಸಾಮಗ್ರಿಯ ಮೇರೆಗೆ "ಅರ್ಥದೆ ಧ್ವನಿಯಿಸುಗುಂ ದೂಷ್ಯಂ" ಎಂಬ ರೂಪ ಸಿದ್ಧಿಸಿದೆ. ಇಲ್ಲಿ ಸಂಗತವಾದ ವಾಕ್ಯಾರ್ಥ ಸಿದ್ಧಿಗಾಗಿ "ಎನೆ" ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು "ಅರ್ಥದೆಯುಂ ಧ್ವನಿಯಿಸುಗುಮೆನೆ ದೂಷ್ಯಂ" ಎಂಬುದಾಗಿ ವಾಕ್ಯವು ಸಿದ್ಧವಾಯಿತು. ಹಿಂದೆ "ಧ್ವನಿಯಿಸುಗುಂ ಶಬ್ದದಿಂದಂ" ಎಂದಿದ್ದುದರಿಂದ ಅರ್ಥದೆಯ ಮುಂದೆ ಸಮುಚ್ಚಯವಾಚಕ "ಉಂ" ಎಂಬುದು ಗಮ್ಯವೇ ಆಗಿದೆ. ಅಧ್ಯಾಹಾರಕ್ಕೆ ಒಂದೆರಡು ಉದಾಹರಣೆಗಳು ಹೀಗಿವೆ:–

೧) ವನವಾಸಾಯ ರಾಮಸ್ಯ ಪಂಚರಾತ್ರೋದ್ಯ ಗಣ್ಯತೇ।

–ವಾಲ್ಮೀಕಿ ರಾಮಾಯಣ, ಅಯೋಧ್ಯಾಕಾಂಡ ೬೨–೧೭

ಇದು ಕೌಸಲ್ಯೆಯ ನುಡಿ. ರಾಮನು ಕಾಡಿಗೆ ಹೋಗಿ ಇಂದಿಗೆ ಐದುರಾತ್ರಿಗಳಾದವು. ಇಲ್ಲಿ ಗತಸ್ಯ ಎಂಬ ಪದ ಬೇಕಿತ್ತು. ಮೂಲದಲ್ಲಿ ಆ ಪದ ಇಲ್ಲ. ಅದನ್ನು ಸೇರಿಸಿಕೊಂಡು ವಾಕ್ಯಪೂರ್ತಿ ಮಾಡಿಕೊಳ್ಳಬೇಕು. ವನವಾಸಾಯ ಗತಸ್ಯ ರಾಮಸ್ಯ ಎಂಬುದಾಗಿ ಇಲ್ಲಿ ಗತಸ್ಯ ಪದಕ್ಕೆ ಅಧ್ಯಾಹಾರ.

೨) ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್।

–ಭಗವದ್ಗೀತಾ ೨–೪೦.

ಸ್ವಲ್ಪಮಪಿ ಅಸ್ಯ ಯೋಗಧರ್ಮಸ್ಯ ಅನುಷ್ಠಿತಂ ತ್ರಾಯತೇ
ರಕ್ಷತಿ ಮಹತಃ ಸಂಸಾರಭಯಾತ್। ಜನ್ಮಮರಣಾದಿಲಕ್ಷಣಾತ್।

ಶ್ರೀಶಾಂಕರಭಾಷ್ಯಮ್।

ಕರ್ಮಯೋಗದ ಅನುಷ್ಠಾನವು ಸ್ವಲ್ಪವೇ ಆದರೂ ಅದು ಚಿತ್ತಶುದ್ಧಿಯ ಮೂಲಕ ಜ್ಞಾನಯೋಗದತ್ತ ಒಲವು ಮೂಡಿಸುವುದರಿಂದ ಸಂಸಾರದ ಭಯವನ್ನೂ ದೂರಮಾಡುತ್ತದೆ.

ಇಲ್ಲಿ ಅನುಷ್ಠಿತಂ, ಅನುಷ್ಠಾನಂ ಎಂಬ ಪದಕ್ಕೆ ಅಧ್ಯಾಹಾರ.

೩) ಪಾದೂಃ ಪಾದಕ್ಷತಿ ವಿಹತಯೇ ಘರ್ಮತಸ್ತಾಲವೃಂತಃ
ಶೀತೋಚ್ಛಿತ್ತ್ಯೈ ವಸನಮಥ ತಚ್ಛತ್ರಮಪ್ಯಾತಪಾಯ।
ದಾತವ್ಯಾನಾಮಿತಿ ಪರಿಣತಿಃ ಪಾಂಸುಸಂಸಾಧನಾರ್ಥಂ
ಸಂನದ್ಧಂ ತ್ವಾಂ ಕಿಮಿತಿ ವಿದಧೇ ದೇಯಮಧ್ಯೇ ನ ಕಶ್ಚಿತ್॥

ಸಂಮಾರ್ಜನೀಶತಕಮ್ ೪೮.
– ಆಸೂರಿ ಅನಂತಾಚಾರ್ಯಸ್ವಾಮಿಗಳು.

ಇಲ್ಲಿ ಘರ್ಮತಃ ಎಂಬುದರ ಮುಂದೆ ರಕ್ಷಣಾಯ ಎಂಬ ಪದಕ್ಕೆ ಅಧ್ಯಾಹಾರ.
೪) ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂಧರ್ಮಮುಮಂ।

ಕರಾಮಾ ೩–೧೭೯

ಇಲ್ಲಿ ಪರವಿಚಾರಮಂ ಎಂಬಲ್ಲಿರುವ "ಪರ" ಶಬ್ದವನ್ನು "ಧರ್ಮಮುಮಂ" ಎಂಬುದರ ಆರಂಭದಲ್ಲಿ ಅನುಷಂಗ ಮಾಡಿಕೊಂಡು ಶಾಬ್ದಬೋಧ ನಿರ್ವಾಹವನ್ನು ಹೇಳಬೇಕು. ಹೀಗೆ ಅಲ್ಲಲ್ಲಿಗೆ ಬೇಕಾದ ಪದಗಳನ್ನು ಅಧ್ಯಾಹಾರ ಅನುಷಂಗ ಅನ್ವಯಸಾಮಗ್ರಿಯ ಬಳಕೆಯ ಮೇರೆಗೆ ಶಾಬ್ದಬೋಧನಿರ್ವಾಹಕ್ಕೆ ಅನುಮತಿಯಿದೆಯೆಂಬುದನ್ನು ಗಮನಿಸಬಹುದು.

ಇಲ್ಲಿ ನೋಡಿ:–
೧. ಧ್ವನಿಯಿಸುಗುಂ ಶಬ್ದದಿಂದಂ। ಅರ್ಥದೆ ದೂಷ್ಯಂ। – ಶ್ರೀವಿಜಯ
೨. ಶಬ್ದಸ್ಯೈವಾಸೌ ವ್ಯಾಪಾರೋ ನ್ಯಾಯ್ಯಃ। ನಾರ್ಥಸ್ಯ। – ಮುಕುಲಭಟ್ಟ,
೩. ಅರಿವನ್ನು ಮೂಡಿಸುವುದು ನುಡಿಯ ಕೆಲಸ। ಪುರುಳಿನದಲ್ಲ
ಈ ಮೂರು ವಾಕ್ಯಗಳೂ ಕೂಡ ಒಂದೇ ಬಗೆಯ ಜೋಡಣೆಯಲ್ಲಿವೆ.

ಇಲ್ಲಿ "ಅರ್ಥದೆ ದೂಷ್ಯಂ", "ನಾರ್ಥಸ್ಯ", "ಪುರುಳಿನದಲ್ಲ" ಎಂಬೀ ಮೂರು ವಾಕ್ಯಗಳೂ ಅಪೂರ್ಣವಾಗಿವೆ ಸಾಕಾಂಕ್ಷವಾಗಿವೆ. ಧ್ವನಿಯೆಂಬುದಳಂಕಾರಂ ಎಂಬ ವಾಕ್ಯ ಇಲ್ಲಿ ಇಲ್ಲದಿದ್ದಾಗ "ಧ್ವನಿಯಿಸುಗುಂ ಶಬ್ದದಿಂದಂ" "ಅರ್ಥದೆ ದೂಷ್ಯಂ" ಎಂದಿಷ್ಟೇ ಇದ್ದಾಗ ಈ ವಾಕ್ಯದ ಅನ್ವಯ, ಶಾಬ್ದಬೋಧ ಹೇಗೆಂಬುದನ್ನು ಪರಿಶೀಲಿಸಬೇಕು. "ನಾರ್ಥಸ್ಯ" "ಪುರುಳಿನದಲ್ಲ" ಎಂಬಲ್ಲಾದರೋ ಹಿಂದಿನ

ವಾಕ್ಯದಲ್ಲಿರುವ "ಅಸೌ ವ್ಯಾಪಾರೋ ನ್ಯಾಯ್ಯಃ" ಎಂಬುದರ ಪ್ರಕಾರ "ಅರ್ಥಸ್ಯಾಪ್ಯಸೌ ವ್ಯಾಪಾರಃ ಇತಿ ತು ನ ನ್ಯಾಯ್ಯಃ" ಎಂಬುದಾಗಿಯೂ, "ಅರಿವನ್ನು ಮೂಡಿಸುವುದು ಪುರುಳಿನ ಕೆಲಸವಲ್ಲ" ಎಂಬೀ ಬಗೆಯಲ್ಲಿ ಮನಸ್ಸಿನಲ್ಲಿ ವಾಕ್ಯದ ಆಕಾರ ಮೂಡಿದ ನಂತರವೇ ಶಾಬ್ದಬೋಧ ನಿರ್ವಾಹ ಎಂದು ಹೇಳುತ್ತಾರೆ. "ಅರ್ಥದೆ ದೂಷ್ಯಂ" ಎಂಬಲ್ಲಿ ಮಾತ್ರ ಅದೇಕೆ ಈ ಬಗೆಯ ಅನ್ವಯ, ಶಾಬ್ದಬೋಧನಿರ್ವಾಹ ಸಾಧ್ಯವಿಲ್ಲ?

ಧ್ವನಿಪ್ರಸ್ಥಾನದ ಮಂತವ್ಯದ ಪ್ರಕಾರವೂ ಕೂಡ ಅರ್ಥಧ್ವನನದ ಸ್ಥಳದಲ್ಲಿ ಆಯಾ ಅರ್ಥಬೋಧಕಶಬ್ದ, ವಾಕ್ಯಗಳನ್ನು ಮನಸ್ಸಿನಲ್ಲಿಕಲ್ಪಿಸಿಕೊಂಡ ನಂತರವೇ ಶಾಬ್ದಬೋಧನಿರ್ವಾಹ ಎಂದು ಹೇಳುತ್ತಾರೆ. "ದಿವಾ ನ ಭುಂಕ್ತೇ" ಎಂಬಂತಹ ಸ್ಥಳದಲ್ಲಿ "ರಾತ್ರೌ ಭುಂಕ್ತೇ" ಎಂಬಂತಹ ವಾಕ್ಯಕಲ್ಪನೆಯ ನಂತರವೇ ಶಾಬ್ದಬೋಧ, ಅರಿವು ಮೂಡುತ್ತದೆಂದು ಹೇಳುತ್ತಾರೆ. ಇವೆಲ್ಲವೂ ವ್ಯಾಖ್ಯಾನಗಮ್ಯವಾದ ಮಾತಾಯಿತು. ಧ್ವನಿಕಾವ್ಯಲಕ್ಷಣಕಾರಿಕೆಯ ಸ್ಥಳದಲ್ಲಿ ಆಪಾತತಃ, ಯಥಾಶ್ರುತವಾಗಿ ಆ ಬಗೆಯ ಅರ್ಥವೇನೂ ನಮಗೆ ಹೊಳೆಯುವುದಿಲ್ಲ. "ಅರ್ಥಃ ಉಪಸರ್ಜನೀಕೃತಸ್ವಃ ತಮರ್ಥಂ ವ್ಯನಕ್ತಿ" ಎಂಬೀ ಬಗೆಯವಾಕ್ಯವನ್ನು ಮಾತ್ರ ನಾವು ಅಲ್ಲಿ ಗ್ರಹಿಸುತ್ತೇವೆ.

ದುಷ-ವೈಚಿತ್ಯೇ, ವೈಕೃತ್ಯೇ, ಎಂದೂ ಮುಹ-ವೈಚಿತ್ಯೇ ಎಂದೂ ಕೂಡ ಸಂಸ್ಕೃತ ಧಾತುಪಾಠ ಕಂಡುಬರುತ್ತದೆ. ವೈಚಿತ್ಯವೆಂದರೆ ಭ್ರಾಂತಿ, ಕಳವಳ ಎಂಬಂತಹ ಅರ್ಥಗಳನ್ನು ಹೇಳಿದ್ದು ಕಂಡುಬರುತ್ತದೆ. "ವ್ರಜತಿ ವಿರಹೇ ವೈಚಿತ್ಯಂ" ವೈಚಿತ್ಯವೆಂದರೆ "ಅವಿವೇಕ ಇತಿ ಪರ್ಯವಸಿತ್ತೋsರ್ಥಃ" ಎಂಬುದಾಗಿ ವೈಚಿತ್ಯಶಬ್ದದ ತಾತ್ಪರ್ಯಾರ್ಥ ಹೇಳಿದ್ದು ಕಂಡುಬರುತ್ತದೆ. ಇತ್ಥಂ ಚ ಅರ್ಥದೆ ದೂಷ್ಯಂ ಎಂಬಲ್ಲಿ ಅರ್ಥದೆಯುಂ ಧ್ವನಿಯಿಸುಗುಮೆನೆ ದೂಷ್ಯಂ – ಅರ್ಥದಿಂದಲೂ ಅರ್ಥಾಂತರ ಧ್ವನಿಸುತ್ತದೆ ಎಂಬ ಮಾತು ಸರಿಯಲ್ಲ ಎಂದು ಹೇಳಬಹುದು.

ಧ್ವನಿಯೆನಿಸಿದಳಂಕಾರ-
ಧ್ವನಿಯೆಸೆವಿನಮೆಸೆವುದಲ್ಲಿ ಮಧುರವಿಪಂಚೀ-
ಧ್ವನಿಯೊಡನೇಕರಾಗ
ಧ್ವನಿಯೆನೆ ಸೊಗಯಿಪುದು ಕಿನ್ನರಧ್ವನಿ ನಗದೊಳ್॥

– ಪಂಪನ ಆದಿಪುರಾಣ ೧೯-೧೧೯

ಧ್ವನಿಃ ಶಬ್ದಃ ಧ್ವನಿಯೆನಿಸಿದ್ದು ಶಬ್ದ. ಆ ಅಲಂಕಾರವೆಂದರೆ ಶಬ್ದಾಲಂಕಾರವೆಂದರ್ಥ. ಚಿತ್ರಂ ವಕ್ರೋತ್ಯನುಪ್ರಾಸೌ ಯಮಕಂ ಧ್ವನ್ಯಲಂಕ್ರಿಯಾ। ಎಂಬುದಾಗಿ ವಾಗ್ಭಟನು ಶಬ್ದಾಲಂಕಾರಗಳನ್ನು ಧ್ವನ್ಯಲಂಕಾರ ಎಂದು ಕರೆದದ್ದನ್ನು ಗಮನಿಸಬಹುದು.

"ಪದಿನಾರಲ್ಲವಲ್ಲಂಕ್ರಿಯಾರಚನೆ ಮೂವತ್ತಾರು ನೇರ್ಪಟ್ಟವು" ಎಂಬ ರನ್ನನ ಮಾತಿಗೆ ಭರತನ ಕಾವ್ಯಭೂಷಣಗಳು ಎಂದರ್ಥ. ಕವಿರಾಜಮಾರ್ಗದಲ್ಲಿ ಮುವ್ವತ್ತನಾಲ್ಕು ಅರ್ಥಾಲಂಕಾರಗಳು ಮಾತ್ರ ನಿರೂಪಿತವಾಗಿವೆ.

೧. ಧ್ವನಿಯೆಂಬುದಳಂಕಾರಂ

ಧ್ವನಿಯೆಂಬುದು ಈ ಹಿಂದೆ ಹೇಳಿದ ಅತಿಶಯೋಕ್ತಿಯೇ ಮುಂತಾದ ಕೆಲವು ಅರ್ಥಾಲಂಕಾರಗಳಲ್ಲೇ ಅಡಕವಾಗುವ ಅರ್ಥವೇ ಹೊರತು ಕಾವ್ಯವಿಶೇಷವಲ್ಲ. (ಅಳಂಕಾರಗಳಿಗಿಂತ ಭಿನ್ನವಾದ ಕಾವ್ಯತತ್ವವಲ್ಲ.)

೨. ಧ್ವನಿಯಿಸುಗುಂ ಶಬ್ದದಿಂದಂ:– ಅರ್ಥದಿಂದ ಅರ್ಥಾಂತರ ಧ್ವನಿಯಿಸುವದಿಲ್ಲ. ಇದು ಪರಿಸಂಖ್ಯೆ. ಪರಿಸಂಖ್ಯೆಗೆ ನಿಷೇಧವೇ ವಿವಕ್ಷಿತವಾದ ಅರ್ಥ. ಧ್ವನಿಯಿಸುಗುಂ ಶಬ್ದದಿಂದ ಅರ್ಥದೆಯಲ್ತು ಎಂಬುದೇ ಇಲ್ಲಿ ವಾಕ್ಯದ ಸ್ವರೂಪ.

೩. ಅರ್ಥದೆ ದೂಷ್ಯಂ:– ಅರ್ಥದೆಯುಂ ಧ್ವನಿಯಿಸುಗುಮೆನೆ ದೂಷ್ಯಂ।
ಅರ್ಥದಿಂದಲೂ ಅರ್ಥಾಂತರ ಧ್ವನಿಸುತ್ತದೆ ಎಂಬ ಮಾತು ಸರಿಯಲ್ಲ.
"ಶಬ್ದಸ್ಯೈವಾಸೌ ವ್ಯಾಪಾರೋ ನ್ಯಾಯ್ಯೋ ನಾರ್ಥಸ್ಯ"
ಎಂಬ ಮುಕುಲ ಭಟ್ಟನ ಮಾತನ್ನು ಇಲ್ಲಿ ಅನ್ವಯಿಸಿಕೊಳ್ಳಬಹುದು.

೪. ನೆನೆವುದಿದನಿಂತು

ಧ್ವನಿಯೆಂಬುದು ಅಲಂಕಾರಗಳಿಗಿಂತ ಬೇರೆಯಲ್ಲವೆಂಬುದನ್ನು ಅಲ್ಲಲ್ಲಿರುವ ಲಕ್ಷ್ಯಗಳನ್ನು ನೋಡಿ ಪ್ರಕೃತ ಯಾವ ಅಲಂಕಾರವೆಂಬುದನ್ನು ನೆನಪಿಸಿಕೊಳ್ಳುವುದು.

ಕಮಲದೊಳನಿಮಿಷಯುಗಂ – ಎಂಬಲ್ಲಿ ವಾಚ್ಯಾರ್ಥವು ಬಾಧಿತವಾದ್ದರಿಂದ ಲಕ್ಷಣೆಯಿಂದ ಕಮಲ ಅನಿಮಿಷಗಳ ಸಾದೃಶ್ಯವುಳ್ಳ ಮುಖ ನೇತ್ರಗಳೆಂಬ ಅರ್ಥವನ್ನು ಗ್ರಹಿಸಿದ ನಂತರ ತಾವರೆಮೊಗದ ಮೀನಾಕ್ಷಿಯು ತುಂಬ ಚೆಲುವೆ! ಎಂಬಂತಹ ಅರ್ಥವು ಸಹೃದಯರಿಗೆ ಹೊಳೆಯುತ್ತದೆ. ಈ ಬಗೆಯ ಅರ್ಥವನ್ನೇ ಧ್ವನಿವಾದಿಗಳು ಕಾವ್ಯವಿಶೇಷವೆಂದು ಕರೆಯುತ್ತಾರಾದೀತೆಂಬುದು ಮಾರ್ಗಕಾರನ ಆಶಯ. ಈ ಅರ್ಥವು ಲಕ್ಷಣಾವೃತ್ತಿಯ ಮೂಲಕ ಇಲ್ಲಿರುವ ಶಬ್ದಗಳಿಂದಲೇ ಹೊಳೆದಂತಾಯಿತು. ಅರ್ಥದಿಂದ ಅರ್ಥಾಂತರ ಹೊಳೆಯಿತು ಎಂಬುದೇನೋ ಇಲ್ಲ. ಶಬ್ದಾನಾಮೇವ ಸಾಮರ್ಥ್ಯಂ ತತ್ರ ತತ್ರ ತಥಾವಿಧಮ್। ಆದ್ದರಿಂದ ಇದುವರೆಗೆ ಶಾಸ್ತ್ರಕಾರರು ಒಪ್ಪದೇ ಇರುವ ಆಧುನಿಕರು ಉತ್ಪ್ರೇಕ್ಷಿಸಿದ ಕಾವ್ಯದ ಮಟ್ಟಿಗೆ ಸೀಮಿತವಾದ ವ್ಯಂಜನಾವೃತ್ತಿಯಿಂದ ಆಗಬೇಕಾದ್ದೇನೂ ಇಲ್ಲ ಎಂಬುದು ಮಾರ್ಗಕಾರನೇ ಮೊದಲಾದ ಧ್ವನಿವಿರೋಧಿಗಳ ತಾತ್ಪರ್ಯ. ಧ್ವನಿವಿರೋಧಗಳ ಸಾಲಿನಲ್ಲಿ ಅಲಂಕಾರಾಂತರ್ಭಾವವಾದವು ಪೂರ್ವಪಕ್ಷದ

ರೂಪದಲ್ಲಿ ನಾಮಮಾತ್ರಕ್ಕೆ ಇದೆಯೆನ್ನಬಹುದು. ಪ್ರತೀಹಾರೇಂದುರಾಜನ ಚಿಕ್ಕ ಕೃತಿಯ ಹೊರತಾಗಿ ಅಲಂಕಾರಾಂತರ್ಭಾವವಾದದ ಬೇರೆ ಕೃತಿ ಸಿಕ್ಕಿಲ್ಲ ಎಂದು ಹೇಳುತ್ತಾರೆ. ಧ್ವನಿಯ ಕುರಿತು ಅಲಂಕಾರಾಂತರ್ಭಾವವಾದಿಗಳ ಸಾಲಿನಲ್ಲಿ ನಮ್ಮ ಕನ್ನಡಿಗ ಶ್ರೀವಿಜಯನೇ ಮೊದಲಿಗನಿರಬಹುದು.

ಮಾರ್ಗಕಾರನು "ಕಾವ್ಯಶೋಭಾಕರಾನ್ ಧರ್ಮಾನ್ ಅಳಂಕಾರಾನ್ ಪ್ರಚಕ್ಷತೇ" ಎಂಬಂತೆ ಭಾವಿಕದ ಬಗೆಗೆ "ಕೇವಲಮಲಂಕೃತಿ" ಎಂದು ಹೇಳಿದಂತೆಯೇ, ಹೊಸದಾಗಿ ಕೇಳಿಬರುತ್ತಿರುವ ಧ್ವನಿಯೆಂಬುದೂ ಕೂಡ ಅತಿಶಯೋಕ್ತಿಯೇ ಮೊದಲಾದ ಕೆಲವು ಬೇರೆ ಬೇರೆ ಅಳಂಕಾರಗಳಲ್ಲೇ ಅಡಕವಾಗುವ ಕಾವ್ಯಶೋಭಾಕರ ಧರ್ವೇ ಹೊರತು ಅಲಂಕಾರಗಳಿಗಿಂತ ಪ್ರತ್ಯೇಕವಾಗಿ ಕಾವ್ಯವಿಶೇಷವೆಂದಾಗಲಿ, ಪ್ರತ್ಯೇಕ ಕಾವ್ಯತತ್ವವೆಂದಾಗಲಿ ನಿಲ್ಲುವಂತಹ ತತ್ವ ವಿಶೇಷವೇನೂ ಅಲ್ಲವೆಂದುಕೊಂಡು "ಧ್ವನಿಯೆಂಬುದಳಂಕಾರಂ" ಎಂದು ಹೇಳಿ ಅತಿಶಯೋಕ್ತಿಯ ಲಕ್ಷ್ಯವೊಂದನ್ನು ಉದಾಹರಿಸಿದ್ದಾನೆ. ಮಾರ್ಗಕಾರನು ಧ್ವನಿಯೆಂಬುದಳಂಕಾರಂ ಎಂದು ಹೇಳಿದ್ದನ್ನು ಆಧುನಿಕರು ಧ್ವನಿಯೆಂಬುದು ಒಂದು ಅಲಂಕಾರ ಎಂದು ವ್ಯಾಖ್ಯಾನ ಮಾಡಿದ್ದರಿಂದ ಅದಕ್ಕೊಂದು ಲಕ್ಷಣ, ಲಕ್ಷ್ಯವನ್ನು ಸೃಷ್ಟಿಸಬೇಕಾಯಿತು. ಸರಿ "ಧ್ವನಿಯಿಸುಗುಂ ಶಬ್ದದಿಂದಂ ಅರ್ಥದೆ ದೂಷ್ಯಂ" ಎಂಬುದು ಧ್ವನ್ಯಲಂಕಾರದ ಲಕ್ಷಣವೆಂದು "ಇರದೆ" ಘೋಷಿಸಿದರು. ಅರ್ಥಾಲಂಕಾರವೊಂದಕ್ಕೆ ಈ ಬಗೆಯಾಗಿ ಅನನ್ವಿತವಾದೊಂದು ಲಕ್ಷಣವನ್ನು ಶ್ರೀವಿಜಯನಂತಹ ಕಾವ್ಯಮೀಮಾಂಸಕನು ಹೊಸೆಯುವದುಂಟೇ? ದೂಷ್ಯವಾಗುವದಾದರೆ ಅಂತಹ ಅಲಂಕಾರವನ್ನು ಯಾಕೆ ರಚಿಸಬೇಕು? ಕಮಲದೊಳನಿಮಿಷಯುಗಂ ಎಂಬಂತಹ ಲಕ್ಷ್ಯವನ್ನು ದೂಷ್ಯವೆಂದು ಹೇಳಿದ್ದು ಇನ್ನೆಲ್ಲಾದರೂ ಕಂಡು ಬರುತ್ತದೆಯೇ? ಆಧುನಿಕೋಪಜ್ಞವಾದ ಈ ಧ್ವನ್ಯಲಂಕಾರವೆಂಬುದು "ಅತ್ಯಂತಾಸತ್ಯಪಿಹ್ಯರ್ಥೇ ಜ್ಞಾನಂ ಶಬ್ದಃ ಕರೋತಿ ಹಿ" (ಶ್ರೀಕುಮಾರಿಲಭಟ್ಟಪಾದರು) ಎಂಬುದಕ್ಕೊಂದು ಉದಾಹರಣೆಯಾದೀತು ಅಷ್ಟೇ!

ಧ್ವನಿಕಂದದಲ್ಲಿ, ಧ್ವನಿಕಾವ್ಯಲಕ್ಷಣಕಾರಿಕೆಯಲ್ಲಿರುವ ಶಬ್ದ, ಅರ್ಥ, ಧ್ವನಿಯೆಂಬೀ ಮೂರು ಶಬ್ದಗಳ ಸಂನಿವೇಶವಿಶೇಷ, ಧ್ವನಿಯಿಸುಗುಂ ಶಬ್ದದಿಂದಂ ಎಂಬಲ್ಲಿರುವ ಪರಿಸಂಖ್ಯೆ, ಅರ್ಥದೆ ದೂಷ್ಯಂ ಎಂಬಲ್ಲಿ ಅನ್ವಯಸಾಮಗ್ರಿ, ನೆನೆವುದಿದನಿಂತು ಎಂಬಲ್ಲಿ ಜ್ಞಾತಾರ್ಥ ಜ್ಞಾಪಕತ್ವ, ಪ್ರತಿಜ್ಞಾವಾಕ್ಯದಲ್ಲಿ ಮುವ್ವತ್ತನಾಲ್ಕು ಅಲಂಕಾರನಿರೂಪಣೆಯ ಸಂಕಲ್ಪ ಇವಿಷ್ಟು ವಿಷಯಗಳನ್ನು ಮನಸ್ಸಿಗೆ ತಂದುಕೊಂಡು, ಇವುಗಳ ಹಿನ್ನೆಲೆಯಲ್ಲಿ ನಮ್ಮ ಕಾವ್ಯಮೀಮಾಂಸೆಯ ಸಂಮತಿ, ಸಾಮರಸ್ಯದೊಂದಿಗೆ ಧ್ವನ್ಯಲಂಕಾರದ ಮರುಓದು, ಪುನಃ ಪರಿಶೀಲನೆ ಜರುಗಬೇಕಾಗಿದೆ.

ಆರಂಭದಲ್ಲಿ ಮುವ್ವತ್ತನಾಲ್ಕು ಅಲಂಕಾರಗಳನ್ನು ಮಾತ್ರ ಲೆಕ್ಕ ಹಾಕಿದರೂ ಕೊಸರು, ಪಂಚಂತ್ರಿಯ ರೂಪದಲ್ಲಿ ಮತ್ತೆರಡನ್ನು ಸೇರಿಸಿ ಕೊಟ್ಟದ್ದು ಕನ್ನಡಕ್ಕೆ ಲಾಭವೇ ಆಯಿತಲ್ಲ! ಧ್ವನ್ಯಾಲಂಕಾರವೆಂಬುದು ಆಧುನಿಕ ಕನ್ನಡಕ್ಕೆ ಅಲಂಕಾರವೆಂದಿಟ್ಟುಕೋ! ಎಂಬುದಾಗಿ ಪರಿಚಿತರೊಬ್ಬರು ಸಲಹೆ ನೀಡಿದ್ದಾರೆ. ಧನ್ಯವಾದಗಳು.

*   *   *   *

ಧ್ವನ್ಯಲಂಕಾರವು ಕಿಟ್ಟಲ್ ಕೋಶದಲ್ಲಿ ದಾಖಲಾಗಿದೆ ಎಂಬುದಾಗಿ ಹಿರಿಯರೊಬ್ಬರು ಹೇಳಿದ್ದನ್ನು ನಂಬಿ ನಾನು ನನ್ನ ಬರವಣಿಗೆಯಲ್ಲಿ "ಇರದೆ" ಹಾಗೆ ಬರೆದು ಬಿಟ್ಟೆ. ನನ್ನೀ ಪ್ರಮಾದವನ್ನು ಗಮನಿಸಿದ ಮಾನ್ಯ ಶ್ರೀ ಎಸ್ ಕಾರ್ತಿಕ್ ಹಾಗೂ ಮಾನ್ಯ ಶ್ರೀ ಕೆ.ಪಿ. ಭಟ್ಟ ಅವರು ನನಗೆ ತಿಳಿಸಿ ಉಪಕರಿಸಿದ್ದಾರೆ.

ಬಾಸೆಲ್‌ಮಿಶನ್ ಪ್ರೆಸ್ ಮಂಗಳೂರು ೧೮೯೪ರ ಕಿಟ್ಟಲ್ ಕೋಶದ ಮೊದಲ ಆವೃತ್ತಿಯು ನನಗೆ ನೋಡಲು ಸಿಗಲಿಲ್ಲ. ೧೯೬೮ರ ಎರಡನೆಯ ಆವೃತ್ತಿಯಲ್ಲಿ ಈ ಧ್ವನ್ಯಲಂಕಾರ ದಾಖಲಾದದ್ದನ್ನು ನೋಡಿ ಇದು ಕಿಟ್ಟಲ್ ಅವರೇ ಬರೆದದ್ದೆಂದು ಭ್ರಮಿಸಿಬಿಟ್ಟೆ. ಈ ಎರಡನೇ ಆವೃತ್ತಿಯ ಸಂದರ್ಭದಲ್ಲಿ ಸಂಪಾದಕರಾದ ಮಾನ್ಯ ಶ್ರೀ ಎಮ್. ಮರಿಯಪ್ಪ ಭಟ್ಟರು ಹಿಂದಿನ ಆವೃತ್ತಿಯಲ್ಲಿ ಸೇರದೇ ಇರುವ ಸಾವಿರಾರು ಶಬ್ದಗಳನ್ನು ಸಂಗ್ರಹಿಸಿ ಸೇರಿಸಿದ್ದಾರಂತೆ. ಹೊಸದಾಗಿ ಸೇರ್ಪಡೆಯಾದ ಶಬ್ದಗಳಿಗೆ ಗುರುತು, ಚಿಹ್ನೆ ತೋರಿಸಲಾಗಿದೆಯಂತೆ. ಆದರೆ ಅದಾವುದನ್ನೂ ನಾನು ಪರಿಶೀಲಿಸದೇ ಧ್ವನ್ಯಲಂಕಾರದ ಬಗೆಗೆ ಬರೆಯುವಾಗ ಮಾನ್ಯ ಕಿಟ್ಟಲ್ ಅವರನ್ನೂ ಕೂಡ ತಪ್ಪಾಗಿ ಗುರುತಿಸಿಬಿಟ್ಟೆ. ಈ ತಪ್ಪಿಗಾಗಿ ನಾನು ಮಾನ್ಯ ಕಿಟ್ಟಲ್ ಅವರನ್ನು ಮನಸ್ಸಿನಲ್ಲಿ ನೆನೆದು ಕ್ಷಮೆ ಕೇಳುತ್ತೇನೆ.

ಧ್ವನಿಕಂದದಲ್ಲಿ ಮೊಟ್ಟಮೊದಲು ಧ್ವನ್ಯಲಂಕಾರವೆಂಬ ಅರ್ಥವನ್ನು ಕಂಡುಕೊಂಡು ಅದನ್ನು ದಾಖಲಿಸಿದ್ದು ಯಾರೆಂಬುದನ್ನು ನಾನು ಕಂಡುಕೊಂಡಿಲ್ಲ. ಮಾನ್ಯ ಬಿ.ಎಂ.ಶ್ರೀ ಅಭಿನಂದನಾಗ್ರಂಥ ಸಂಭಾವನೆಯು ೧೯೪೧ರಲ್ಲಿ ಬೆಂಗಳೂರು ಪ್ರೆಸ್‌ನಿಂದ ಪ್ರಕಟವಾದಂತೆ ತಿಳಿದುಬರುತ್ತದೆ. ಇದರಲ್ಲಿ ಶ್ರೀಮಾನ್ ಡಿ.ವಿ. ಶೇಷಗಿರಿ ರಾವ್ ಅವರ "ಕನ್ನಡದಲ್ಲಿ ಕಾವ್ಯಮಾರ್ಗ"ವೆಂಬ ಲೇಖನವಿದೆ. ಅದರಲ್ಲಿ ಶ್ರೀರಾವ್ ಅವರು ಕವಿರಾಜಮಾರ್ಗದಲ್ಲಿ ೩೬ ಅಲಂಕಾರಗಳನ್ನು ಹೇಳಿದೆಯೆಂದು ಹೇಳಿ "ಧ್ವನಿಯೆಂಬುದಳಂಕಾರಂ ಧ್ವನಿಯಿಸುಗುಂ ಶಬ್ದದಿಂದಂ" ಎಂಬುದಾಗಿ ಉಲ್ಲೇಖಿಸಿದ್ದಾರೆ. ಅನಂತರ ಡಾ. ಕೆ. ಕೃಷ್ಣಮೂರ್ತಿ ಅವರ ಇಂಗ್ಲಿಷ್ ಲೇಖನವೊಂದು BORI VOL ೨೮, ೧೯೪೭ರಲ್ಲಿ ಪ್ರಕಟವಾಗಿದ್ದು ಅದರಲ್ಲಿ ಈ ಧ್ವನ್ಯಲಂಕಾರದ ಉಲ್ಲೇಖ ಬಂದಿದೆಯೆಂದು ಕೇಳಿದ್ದೇನೆ. ಮುಂದೆ ಅವರೇ ಒಂದು ಕಡೆ ಹೇಳಿಕೊಂಡ ಪ್ರಕಾರ

ಈ ಧ್ವನ್ಯಲಂಕಾರವನ್ನು ೧೯೫೧ರಲ್ಲಿ ಉಲ್ಲೇಖಿಸಿದ್ದು ಮಾನ್ಯ ಶ್ರೀ ಕೆ. ಕೃಷ್ಣಮೂರ್ತಿಗಳೇ ಇರಬೇಕು ಎಂದು ಊಹಿಸಲವಕಾಶವಿದೆ. (ನೋಡಿ:– ಕವಿರಾಜಮಾರ್ಗ: ಕವಿಕಾವ್ಯಪರಂಪರೆ: ಐ ಬಿ ಹೆಚ್ ಪ್ರಕಾಶನ: ೧೯೭೩) ಮುಂದಿನ ಅರವತ್ತು ಮೂರು ವರ್ಷಗಳ ಅವಧಿಯಲ್ಲಿ (೧೯೫೧–೨೦೧೩) ಆಧುನಿಕ ಕನ್ನಡದ ದಿಗ್ಗಜ ವಿದ್ವಾಂಸರು ಈ ಧ್ವನ್ಯಲಂಕಾರವನ್ನು ಬಗೆಬಗೆಯಾಗಿ ತಮ್ಮದೇ ಆದ ರೀತಿಯಲ್ಲಿ ವಿವರಿಸುತ್ತಾ ಬಂದಿದ್ದಾರೆ. ಆಧುನಿಕ ಕನ್ನಡದ ತೇಜಃಪುಂಜರಾದ ಪ್ರಾತಃಸ್ಮರಣೀಯರಾದ ಧ್ವನ್ಯಲಂಕಾರಪ್ರವರ್ತಕರಾದ ಎಲ್ಲ ಮಾನ್ಯ ವಿದ್ವಾಂಸರಿಗೂ ಕೂಡ ನನ್ನದಿಗೋ ತಲೆಬಾಗಿ ನಮನ.

ಕಿಟ್ಟಲ್ ಕೋಶದ ಮೊದಲ ಆವೃತ್ತಿಯಲ್ಲಿ ಧ್ವನ್ಯಲಂಕಾರದ ಉಲ್ಲೇಖವಿಲ್ಲ ಎಂದು ತಿಳಿಸಿ ಉಪಕರಿಸಿದ ವಿದ್ವನ್‌ಮಿತ್ರರು ಶ್ರೀ ಎಸ್. ಕಾರ್ತಿಕ್ ಹಾಗೂ ಶ್ರೀ ಕೆ. ಪಿ. ಭಟ್ಟ ಇಬ್ಬರಿಗೂ ಕೂಡ ನನ್ನ ಕೃತಜ್ಞತೆಯ ಧನ್ಯವಾದಗಳು.

ಕವಿರಾಜಮಾರ್ಗದ ಬರಲಿರುವ ಆವೃತ್ತಿಗಳಲ್ಲಿ ಧ್ವನಿಕಂದದ ಕೆಳಗೆ ಅಡಿಟಿಪ್ಪಣಿಯ ರೂಪದಲ್ಲಿ "ಯತ್ರಾರ್ಥಃ ಶಬ್ದೋ ವಾ....... " ಎಂಬೀ ಧ್ವನಿಕಾವ್ಯಲಕ್ಷಣಕಾರಿಕೆಯನ್ನು ಮುದ್ರಿಸಿದರೆ ಓದುಗರಿಗೆ ಸೌಲಭ್ಯವಾದೀತು.

ಇರದೆ ಎಂಬ ಪ್ರಯೋಗದ ಅರ್ಥ– ಯುಕ್ತವೋ ಅಯುಕ್ತವೋ ಎಂಬುದರ ಚಿಂತೆಯಿಲ್ಲದೇ, ನಿಃಶಂಕೆಯಿಂದ, ಸರಿಯೋ ತಪ್ಪೋ ಎಂಬುದನ್ನು ಕುರಿತು ಹಿಂದು ಮುಂದು ಆಲೋಚಿಸದೇ ಎಂದು ಮುಂತಾಗಿ ಕನ್ನಡದ ಖ್ಯಾತ ವಿದ್ವಾಂಸರನೇಕರು ತಮ್ಮ ಲೇಖನಗಳಲ್ಲಿ ತೋರಿಸಿದ್ದಾರೆ. ನೋಡಿ:– ಭಾನುಮತಿಯ ನೆತ್ತ (ಗೋವಿಂದಪೈ ಸಂಶೋಧನ ಕೇಂದ್ರ ಉಡುಪಿ)

"ಸಹಸಾ ವಿದಧೀತ ನ ಕ್ರಿಯಾಂ" – ಭಾರವಿ: ■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೨. ವಿಮರ್ಶೆಯ ಅರ್ಥ ಮತ್ತು ಅದರ ಪ್ರಸ್ತುತತೆ

–ಡಾ|| ವಿಜಯಾ ಸುಬ್ಬರಾಜ್*

ಒಂದು ಕೃತಿಯನ್ನು ವಿಮರ್ಶೆಗೆಂದು ತೆಗೆದುಕೊಂಡಾಗಲೆಲ್ಲ ನನ್ನನ್ನು ಅನೇಕ ಪ್ರಶ್ನೆಗಳು ಕಾಡಿದ್ದುಂಟು. ಪ್ರತಿಯೊಂದು ಕೃತಿಗೂ ವಿಮರ್ಶೆ ಅಥವಾ ವಿಮರ್ಶೆಯ ನೆರವು ಬೇಕೇ? ವಿಮರ್ಶೆಯಲ್ಲಿ ಕೃತಿ ಕುರಿತು ಹೇಳಿರುವುದೆಲ್ಲಾ ಸಾರ್ವತ್ರಿಕ ಸತ್ಯಗಳೇ? ಅಥವಾ ಅಭಿಪ್ರಾಯಗಳೇ? ಸಹೃದಯ ಓದುಗ ನೆಲೆಯಿಂದ ಕೃತಿಯ ಆಸ್ವಾದದಲ್ಲಿ ಪಡೆಯಬಹುದಾಗಿರುವ ಆನಂದ, ಅದೇ ಕೃತಿಯ ವಿಮರ್ಶೆಗಳನ್ನು ಓದಿದಾಗ, ಮೊದಲ ಹಂತದ ಆನಂದ ಸುಖದ ಅನುಭೂತಿ ಹೆಚ್ಚುವುದೇ ಅಥವಾ ಕ್ಷೀಣಿಸುವುದೇ? ವಿಮರ್ಶೆ ನಿಜವಾಗಿಯೂ ನಿಷ್ಪಕ್ಷಪಾತವಾಗಿ, ವಸ್ತುನಿಷ್ಠವಾಗಿ ಇರಬಹುದೇ? ವಿಮರ್ಶಕನ ಮತ್ತು ಕೃತಿಕಾರನ ನಡುವಿನ ಸಂಬಂಧಗಳ ಮೂಲಕ ವಿಮರ್ಶೆ, ಕೃತಿಯಲ್ಲಿ ಬೇರಾರಿಗೂ ಕಾಣದ ಮೌಲಿಕವಾದ ಒಳನೋಟಗಳೆಂಬ ಹೆಸರಿನಲ್ಲಿ ಕಾಣಿಸುವ ಪ್ರಯತ್ನ ಮಾಡುವುದರಿಂದ, ನಿಜವಾದ ಓದುಗನಲ್ಲಿ ಗೊಂದಲಗಳು ಉಂಟಾಗುವುದಿಲ್ಲವೇ?..... ಹೀಗೆ ನೂರೆಂಟು ಪ್ರಶ್ನೆಗಳು ವೈಯಕ್ತಿಕ ನೆಲೆಯಲ್ಲಿ ನನ್ನನ್ನು ಕಾಡಿದ್ದುಂಟು.

ವಿಮರ್ಶೆಯೆನ್ನುವುದು ಕೇವಲ ಸಾಹಿತ್ಯಕೃತಿಗಳಿಗಷ್ಟೇ ಸೀಮಿತವಾಗುವುದಿಲ್ಲ. ಸಾಹಿತ್ಯ, ಸಂಗೀತ, ನಾಟಕ, ಕಲೆ ಇತ್ಯಾದಿ ಇನ್ನೂ ಅನೇಕ ಸೃಜನಶೀಲ ಅಭಿವ್ಯಕ್ತಿಗಳು, ಓದುಗ, ಕೇಳುಗ, ನೋಡುಗ ಎಂಬ ಮೂರು ವರ್ಗದ ಸಹೃದಯರನ್ನು ನಿರೀಕ್ಷಿಸುತ್ತವೆ. ಪ್ರತಿಯೊಂದು ಅಭಿವ್ಯಕ್ತಿ ಪ್ರಕಾರಕ್ಕೂ ತನ್ನದೇ ಆದ ಸಹೃದಯ ವರ್ಗವನ್ನು ಹೊಂದಿರುತ್ತದೆ. ಈ ಸಹೃದಯ ವರ್ಗದಲ್ಲಿಯೇ ಕೆಲವರು ಇವುಗಳಿಂದ ತಮ್ಮ ಮೇಲಾಗುವ ಪರಿಣಾಮಗಳಿಗೆ ಶಾಬ್ದಿಕ ಅಭಿವ್ಯಕ್ತಿಯನ್ನು ಕೊಡುವುದರ ಮೂಲಕ ವಿಮರ್ಶಕರೆನಿಸಿಕೊಳ್ಳುತ್ತಾರೆ. ಆದ್ದರಿಂದಲೇ ವಿಮರ್ಶೆಯಲ್ಲಿ,. ಸಾಹಿತ್ಯ ವಿಮರ್ಶೆ,

* ನಂ. ೧೦, ೮ನೇ ಮುಖ್ಯರಸ್ತೆ, ೩ನೇ ಫೇಸ್, ಗಿರಿನಗರ, ಬೆಂಗಳೂರು–೫೬೦ ೦೮೫.
ಮೊಬೈಲ್ : ೯೮೪೫೨೮೮೭೬.

ಕಲಾವಿಮರ್ಶೆ, ಸಂಗೀತ ವಿಮರ್ಶೆ, ನಾಟಕ ವಿಮರ್ಶೆ ಎಂದು ಪ್ರತ್ಯೇಕ ವಿಮರ್ಶಾ ರೂಪಗಳಾಗಿ ಕಾಣಿಸಿಕೊಂಡಿದೆ.

ವಿಮರ್ಶೆಯ ಪರಿಕಲ್ಪನೆ ಹಳೆಯದೇ ಆದರೂ 'ವಿಮರ್ಶೆ' ಹೆಸರು ಮಾತ್ರ ಇಪ್ಪತ್ತನೇ ಶತಮಾನದಿಂದೀಚೆಗೆ ಜಗತ್ತಿನಾದ್ಯಂತ ವ್ಯಾಪಕವಾಗಿ ಚರ್ಚಿತವಾಗುತ್ತಿದೆ. ಅದರಲ್ಲಿಯೂ ಶೈಕ್ಷಣಿಕ ವಲಯಗಳಲ್ಲಿ ಸಾಹಿತ್ಯ ವಿಮರ್ಶೆಯಂತೂ ಅಸಂಖ್ಯ ವಿಮರ್ಶಾ ಪ್ರಸ್ಥಾನಗಳಿಗೆ ಅಥವಾ ಸಿದ್ಧಾಂತಗಳ ಹುಟ್ಟಿಗೆ ದಾರಿ ಮಾಡಿದೆ. ಹತ್ತು ಹಲವು ಬಗೆಯ ಜ್ಞಾನಶಿಸ್ತುಗಳ ಬೆಳಕಲ್ಲಿ ಸಾಹಿತ್ಯ ಕೃತಿಗಳ ಅನುಸಂಧಾನ, ವಿಶ್ಲೇಷಣೆ, ವಿಮರ್ಶೆಗಳು ನಡೆಯುತ್ತಿದ್ದು ಇದೊಂದು ಸಂಕೀರ್ಣವಾದ 'ಶೈಕ್ಷಣಿಕ ಶಿಸ್ತಾಗಿ' ರೂಪುಗೊಂಡಿದೆ.

ಮೊದಲಿಗೆ ಕನ್ನಡ ಕಾವ್ಯ, ಸಾಹಿತ್ಯಗಳಾಗಲೀ ಅಥವಾ ಭಾರತೀಯವಾದ ಯಾವುದೇ ಭಾಷಾಸಾಹಿತ್ಯವಾಗಲೀ, ಸಂಸ್ಕೃತದಲ್ಲಿನ ಕಾವ್ಯ ಮೀಮಾಂಸೆಯ ಬೆಳಕಲ್ಲಿ, ಅಲಂಕಾರ, ರಸ, ಧ್ವನಿ, ಔಚಿತ್ಯ, ಗುಣ–ದೋಷ ಇತ್ಯಾದಿಗಳ ಶೋಧದಲ್ಲಿ ತೊಡಗಿ, ಸಾಹಿತ್ಯದ ಮೌಲಿಕತೆಗಿಂತ ಸೌಂದರ್ಯದ ಕಡೆಗೆ ಹೆಚ್ಚು ಒತ್ತು ಕೊಡುತ್ತಿದ್ದು, ರಸಾನುಭವದ ಸಾಧ್ಯತೆಗಳ ಪ್ರಮಾಣದ ನಿರ್ಧಾರವನ್ನು ಮುಖ್ಯ ಆಶಯವಾಗಿಸಿಕೊಳ್ಳುತ್ತಿತ್ತು. ಒಂದು ರೀತಿಯಲ್ಲಿ ಅಂದಿನ ವಿಮರ್ಶೆಯನ್ನು ರಸ ಮೀಮಾಂಸೆ ಅಥವಾ ಸೌಂದರ್ಯ ಮೀಮಾಂಸೆಯೆಂದು ಗುರುತಿಸಬಹುದಾಗಿತ್ತು. ನವೋದಯ ಕಾಲಘಟ್ಟದಲ್ಲಿನ ವಿಮರ್ಶೆ ಹೆಚ್ಚು ಕಡಿಮೆ ಇದೇ ರೀತಿಯದಾಗಿತ್ತು, ಭಾರತೀಯ ವಿಮರ್ಶಕರ, ಕನ್ನಡದ ವಿಮರ್ಶಕರ ವಿಮರ್ಶಾ ಲೇಖನಗಳೇ ಈ ಮಾತಿಗೆ ಸಾಕ್ಷಿ. ಕುವೆಂಪು, ಮಾಸ್ತಿ, ಡಿವಿಜಿ, ಅಥವಾ ಇನ್ನೂ ಬೇರೆ ಯಾರೇ ಆಗಿರಬಹುದು. ಅವರಿಗೆ ಕೃತಿ ಸಹೃದಯನನ್ನು ಎಷ್ಟರ ಮಟ್ಟಿಗೆ ತೂಗಿಸಬಲ್ಲುದು, ಸಂತೋಷ, ಆನಂದಗಳನ್ನು ನೀಡಬಲ್ಲದು – ಎಂಬುದಷ್ಟೇ ಮುಖ್ಯವಾಗಿತ್ತು.

ಆದರೆ ಪಾಶ್ಚಾತ್ಯ ಸಾಹಿತ್ಯ ಪ್ರಭಾವಕ್ಕೆ ಒಳಗಾದಂತೆ, ಪ್ರತ್ಯೇಕವಾಗಿ, ಪಾಶ್ಚಾತ್ಯ ವಿಮರ್ಶಾ ಚಿಂತನೆಗಳ ಪ್ರಭಾವಕ್ಕೂ ಒಳಗಾಗಿದ್ದೇವೆ. ಗಾಬರಿಗೊಳಿಸುವಷ್ಟು ವಿಮರ್ಶಾ ಪ್ರಸ್ಥಾನಗಳು, ನಮ್ಮ ಮುಂದಿದ್ದು, ಕೃತಿಯೊಂದನ್ನು ಓದುವಾಗ, ಈ ಪ್ರಸ್ಥಾನಗಳನ್ನು ಅನ್ವಯಿಸಿಕೊಂಡು ಓದಬೇಕೆ? – ಎನ್ನುವ ಪ್ರಶ್ನೆ ಎದ್ದು ನಿಲ್ಲುತ್ತದೆ. ಆದರೆ ಸಾಹಿತ್ಯ ವಿದ್ಯಾರ್ಥಿಗಳಿಗೆ, ವಿದ್ವಾಂಸರಾದ ವಿಮರ್ಶಕರಿಗೆ, ವಿಮರ್ಶೆಯ ಸ್ವರೂಪ, ಅದಕ್ಕಿರುವ ವಿಸ್ತೃತ ಆಯಾಮಗಳ ಅರಿವಿಗೆ, ಬೌದ್ಧಿಕ ವಿಕಾಸಕ್ಕೆ, ವಿಮರ್ಶೆಯನ್ನು ಒಂದು ಶಿಸ್ತಾಗಿ ಓದುವ ಅಗತ್ಯ ಬಿದ್ದರೆ ಆಶ್ಚರ್ಯವಿಲ್ಲ, ಆದರೆ ಸಾಮಾನ್ಯ ಓದುಗರಿಗೆ, ವಿಮರ್ಶೆಯ ಯಾವುದೇ ರೀತಿಯ ಪರಿಕಲ್ಪನೆ ಇರುವುದಿಲ್ಲ. ಕಾವ್ಯ, ಕತೆ, ಕಾದಂಬರಿ, ನಾಟಕ ಇತ್ಯಾದಿಗಳನ್ನು ಓದಿದಾಗ, ಥಟ್ಟನೆ ಅವನ ಮನದ ಅಥವಾ ಬುದ್ಧಿಯ ಕಣ್ಣಿಗೆ ಕಾಣಿಸುವುದು

ವಸ್ತು, ಪಾತ್ರ ಮತ್ತು ಭಾಷೆ. ಕೆಲವೊಮ್ಮೆ ನಿರೂಪಣೆಯ ಶೈಲಿ. ಇವಿಷ್ಟರಿಂದಲೇ ಅವನಿಗೆ, ಅವನು ನಿರೀಕ್ಷಿಸುವ ಸಂತೋಷ ಸಿಗಬಹುದು ಅಥವಾ ಸಿಗದೆಯೂ ಇರಬಹುದು. ಇದರ ಹೊರತು ಸಾಮಾನ್ಯ ಓದುಗ ಅಥವಾ ಸಹೃದಯ ಅದರ ಒಳನೋಟಗಳ ಬಗ್ಗೆಯಾಗಲೀ, ಭಾಷಾ ಸಂರಚನೆಯ ಬಗ್ಗೆಯಾಗಲೀ, ಸಂವಿಧಾನದ ಬಗ್ಗೆಯಾಗಲೀ, ಸಮಾಜವಾದ, ಮಾರ್ಕ್ಸ್‌ವಾದ, ಸ್ತ್ರೀವಾದ ಎಂದಾಗಲೀ, ಪ್ರತಿಮೆ, ಪ್ರತೀಕಗಳೆಂದಾಗಲೀ ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ. ಅವನಿಗೆ ತಾನು ಓದಿದ ಕೃತಿ ಚೆನ್ನಾಗಿದೆ, ಚೆನ್ನಾಗಿಲ್ಲ – ಎಂಬ ಅಭಿಪ್ರಾಯಗಳಷ್ಟೇ ಮುಖ್ಯ. ತನ್ನನ್ನು ತೀವ್ರವಾಗಿ ಪ್ರಭಾವಿಸಿ, ಮನಸ್ಸಿಗೆ ಹಿತವೆನಿಸಿದ್ದಾದರೆ ಅದು ಚೆನ್ನಾಗಿದೆ. ಅಷ್ಟಕ್ಕೇ ಅವನ ವಿಮರ್ಶೆ ನಿಲ್ಲುತ್ತದೆ.

ಆದರೆ ಶೈಕ್ಷಣಿಕ ನೆಲೆಯಲ್ಲಿ, ಬೌದ್ಧಿಕ ನೆಲೆಯಲ್ಲಿ ವಿಮರ್ಶೆ ಬಹಳಷ್ಟು ಆಳವಾಗಿ ಒಳಹೋಗುತ್ತದೆ. ವಿಮರ್ಶಕರಿಗೆ ತನ್ನ ಗ್ರಹಿಕೆ, ತನಗಷ್ಟೇ ಸೀಮಿತವೆಂದು ಭಾವಿಸದೆ, ತನ್ನ ಬೌದ್ಧಿಕ ಜಿಜ್ಞಾಸೆ. ಅರ್ಥಗ್ರಹಿಕೆ, ಕೃತಿಯ ಮೌಲಿಕತೆ, ಅದರ ಪ್ರಸ್ತುತತೆ – ಇತ್ಯಾದಿಗಳು ಅಗತ್ಯವಾದಲ್ಲಿ ಇತರರನ್ನೂ ತಲುಪಲಿ ಎಂಬ ಉದ್ದೇಶದಿಂದ ಒಂದು ವ್ಯವಸ್ಥಿತವಾದ ರೀತಿಯಲ್ಲಿ ವಿವರಿಸುತ್ತಾ, ವ್ಯಾಖ್ಯಾನಿಸುತ್ತಾ, ತನ್ನ ಅಭಿಪ್ರಾಯಗಳಿಗೆ ಶಾಬ್ದಿಕ ಅಭಿವ್ಯಕ್ತಿ ನೀಡುತ್ತಾನೆ. ಮತ್ತು ಸಾಮಾನ್ಯ ಓದಿನ ಸಂದರ್ಭದಲ್ಲಿ ಓದುಗನ ಮನಸ್ಸಿಗೆ ಹೊಳೆಯದೆ, ಕೆಲವು ಮೌಲಿಕವಾದ ಮತ್ತು ಅನಿವಾರ್ಯವಾದ ಸಂಗತಿಗಳು ತಪ್ಪಿ ಹೋಗಿದ್ದಲ್ಲಿ, ಅವು ಅವನ ಗಮನಕ್ಕೆ ಬರುವಂತೆ ಮಾಡುತ್ತಾನೆ.

ಸೃಜನಶೀಲ ಕ್ರಿಯೆ ಎಷ್ಟು ವ್ಯಕ್ತಿನಿಷ್ಠವೋ, ವಿಮರ್ಶೆಯೂ ಅಷ್ಟೇ ವ್ಯಕ್ತಿನಿಷ್ಠ. ಒಂದು ಕೃತಿ ಒಂದೇ ರೀತಿಯ ಅಭಿಪ್ರಾಯಗಳನ್ನು ಹುಟ್ಟು ಹಾಕುವುದಿಲ್ಲ. ಮಹತ್ವದ ಕೃತಿಗಳೆಂದು ಪರಿಗಣಿತವಾದವುಗಳಿಗೆ ಹುಟ್ಟಿಕೊಂಡ ಅಸಂಖ್ಯ ಸಂಖ್ಯೆಯ ವಿಮರ್ಶೆಗಳೇ ಕೃತಿಯಲ್ಲಿನ ಅಂತಸ್ಸತ್ವ, ಮಹಾನತೆ, ಮೌಲಿಕತೆಗಳಿಗೆ ನಿದರ್ಶನಗಳಾಗಿವೆ. ಅಪಾರ ಪ್ರಮಾಣದ ವಿಮರ್ಶೆಗೆ ದಾರಿ ಮಾಡುವುದು, ಕೃತಿಗಳಲ್ಲಿನ ಅಖಂಡ ಅರ್ಥಶಕ್ತಿ, ಕೃತಿಕಾರನ ಅನನ್ಯ ಪ್ರತಿಭೆಗಳೇ ಕಾರಣವಾಗಿರುತ್ತವೆ. ಶತಶತಮಾನಗಳ ಹಿಂದೆ ಬರೆದ ಷೇಕ್ಸ್‌ಪಿಯರ್‌ನ ನಾಟಕಗಳ ಸಂಖ್ಯೆಗಿಂತ ನೂರುಪಟ್ಟು ಹೆಚ್ಚು ವಿಮರ್ಶೆಗಳು ಬಂದಿವೆಯೆಂದರೆ, ಬಹುಶಃ ಷೇಕ್ಸ್‌ಪಿಯರ್ ಬದುಕಿದ್ದರೆ, ತಾನೇ ಗಾಬರಿಗೊಳ್ಳುತ್ತಿದ್ದ ಎನಿಸುತ್ತದೆ. ಡಚ್ ಕಲಾವಿದನಾದ ವಿನ್ಸೆಂಟ್ ವಾನ್‌ಗೋನ ಚಿತ್ರಗಳ ಕುರಿತು, ಅವನು ಬದುಕಿದ್ದ ಕಾಲದಲ್ಲಿ ಒಂದಾದರೂ ಒಳ್ಳೆಯ ಅಭಿಪ್ರಾಯಕ್ಕೆ ದಾರಿಯಾಗದೆ ಇದ್ದುದು, ಅವನು ಸಾಯುತ್ತಿದ್ದಂತೆಯೇ ಜಗತ್ತಿನಾದ್ಯಂತ ಅನನ್ಯ ವಿಶ್ವ ಚಿತ್ರಕಲಾವಿದ ಎನಿಸಿಕೊಂಡದ್ದೇ ಅಲ್ಲದೆ, ಅವನ ಪೈಂಟಿಂಗ್ಸ್‌ಗಳ ಬಗ್ಗೆ ಬಂದಿರುವ ಅಪಾರ ಸಂಖ್ಯೆಯ ವಿಮರ್ಶಾ

ಬರಹಗಳು, ಯಾರನ್ನಾದರೂ ದಿಗ್ಭ್ರಮೆಗೊಳಿಸುತ್ತದೆ. ಎರಡು ಫ್ರ್ಯಾಂಕಿಗೂ ಮಾರಾಟವಾಗದ ಚಿತ್ರಪಟಗಳು. ರೇಖಾಚಿತ್ರಗಳು ಇಂದು ಮಿಲಿಯ ಮಿಲಿಯ ಡಾಲರುಗಳಿಗೆ ಮಾರಾಟವಾಗುತ್ತಿವೆಯೆಂದರೆ ಬೆಚ್ಚಿ ಬೀಳುವಂತಾಗುತ್ತದೆ. ಹಾಗಾಗಿ ವಿಮರ್ಶೆ, ಕೃತಿಕಾರನ ಅರಿವಿಗೂ ಬಾರದಿರುವ, ಆದರೆ ಅಂತಸ್ಥವಾಗಿರಬಹುದಾದ ಮಹತ್ವದ ಅಂಶಗಳನ್ನೂ, 'ಕ್ಷ' ಕಿರಣ ದೃಷ್ಟಿಯಿಂದ ಸೆರೆ ಹಿಡಿದು ಹೊರಹಾಕುತ್ತದೆ ಎನ್ನುವುದನ್ನು ಒಪ್ಪಲೇ ಬೇಕಾಗುತ್ತದೆ.

ಹೀಗಿರುವಾಗ, ವಿಮರ್ಶೆ ಓದುಗನನ್ನು ಮತ್ತು ಕೃತಿಕಾರನನ್ನು ಹತ್ತಿರ ತರುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಕನ್ನಡದಲ್ಲಿ, ಪ್ರಾಚೀನ ಕಾಲದಿಂದಲೂ ನಡೆದು ಒಳ್ಳೆಯ ಕವಿಗಳೂ ಎಲ್ಲರೂ ಅಪಾರ ಪ್ರಮಾಣದಲ್ಲಿ ಬರೆಯುತ್ತಾ ಇರುವುದರಿಂದ, ಅಸಂಖ್ಯ ಪುಸ್ತಕಗಳ ರಾಶಿ ಬೀಳುತ್ತಿರುವುದರಿಂದ ಓದುಗರು ಆಯ್ಕೆಯ ಸಂದಿಗ್ಧತೆಯಲ್ಲಿ ತೊಡಗುವ ಸಾಧ್ಯತೆಗಳಿರುವುದರಿಂದ, ಇಂತಹ ಸಂದರ್ಭದಲ್ಲಿ ವಿಮರ್ಶೆ ಎನ್ನುವುದು 'ಇವುಗಳನ್ನೆಲ್ಲ ಚರ್ಚೆಮಾಡಿ ಅವುಗಳ ಸಾಧುತ್ವವನ್ನು' ನಿರ್ಧರಿಸುವಲ್ಲಿ, ಅಭಿರುಚಿಯ ಶುದ್ಧತೆಯನ್ನು ಕಾಯ್ದಿರಿಸುವಲ್ಲಿ ನೆರವಿಗೆ ಬರುತ್ತದೆ ಎಂಬುದು ಅವರ ನಿಲುವು.

ಮಾಸ್ತಿಯವರ ವಿಮರ್ಶಾ ಲೇಖನಗಳ ಬಗ್ಗೆ ಬರೆಯುವ ಮುನ್ನ 'ವಿಮರ್ಶೆಯ ಪರಿಕಲ್ಪನೆ, ಅದರ ಕಾರ್ಯ ವಿಮರ್ಶೆ ಮಾಡುವವನಲ್ಲಿರಬೇಕಾದ ಕ್ಷಮತೆ ಇವುಗಳನ್ನು ಕುರಿತು ಪ್ರಸ್ತಾಪಿಸುವುದು ಅನಿವಾರ್ಯವೆನಿಸುತ್ತದೆ. ವಿಮರ್ಶೆ ಹಲವು ಕಾರಣಗಳಿಗಾಗಿ ಅನಿವಾರ್ಯವೆಂಬ ಬಲವಾದ ಭಾವನೆಯನ್ನು ಉಳ್ಳವರು. ವಿಮರ್ಶೆ, ವಿಮರ್ಶಕರ ಬಗ್ಗೆ ಪಾಶ್ಚಾತ್ಯರಲ್ಲಿಯೂ ಒಳ್ಳೆಯ ಅಭಿಪ್ರಾಯವಿಲ್ಲದೆ ಮೂಗು ಮುರಿಯುತ್ತಿದ್ದ ಕಾಲದಲ್ಲಿ, ಮಾಸ್ತಿಯವರು 'ಒಳ್ಳೆಯ ವಿಮರ್ಶೆಯಿಂದ ಒಳ್ಳೆಯ ಸಾಹಿತ್ಯ ಸಾಧ್ಯವೆಂಬ ನಂಬಿಕೆಯುಳ್ಳವರಾಗಿದ್ದ ಅವರು 'ವಿಮರ್ಶೆ ಸಾಹಿತ್ಯದಲ್ಲಿ ಅನಿವಾರ್ಯ, ಅವಶ್ಯಕ ಕಾರ್ಯ, ಸಾಹಿತ್ಯದ ಆತ್ಮಜ್ಞಾನ ವಿಮರ್ಶೆ, ವಿಮರ್ಶೆ ಇಲ್ಲದೆ ಸಾಹಿತ್ಯ ಆಗುವುದೂ ಇಲ್ಲಿ, ಬೆಳೆಯುವುದೂ ಇಲ್ಲಿ'– ಎನ್ನುವ ಮಾತುಗಳೇ ವಿಮರ್ಶೆಗೆ ಅವರು ನೀಡಿದ್ದ ಪ್ರಾಮುಖ್ಯತೆಯನ್ನು ಸಾಬೀತು ಪಡಿಸುತ್ತದೆ. ಸಾಹಿತ್ಯದಲ್ಲಿ ವಿಚಾರವನ್ನು ಸರಿಯಾಗಿ ಗ್ರಹಿಸಲು ದುಷ್ಟ ಗ್ರಂಥಗಳನ್ನು ದಮನಿಸಲು, ಒಳ್ಳೆಯ ಕಾವ್ಯದ ಅಭಿರುಚಿ ಬೆಳೆಸಲು, ರಸಾನುಭವವನ್ನು ಪ್ರಚೋದಿಸಲು, ಕವಿಗೆ ಒಳ್ಳೆಯ ಗ್ರಂಥ ರಚನೆಗೆ ಪ್ರೇರಣೆಯಾಗಲು, ಕಾವ್ಯ ಕೃತಿಗಳ ಪಠನ ಸುಲಭವಾಗುವಂತೆ ಮಾಡಲು ವಿಮರ್ಶೆ ಬೇಕೇ ಬೇಕು ಎಂದು ಒತ್ತಿ ಹೇಳುತ್ತಾರೆ.

ವಿಮರ್ಶೆ ಎನ್ನುವುದು ಕೃತಿ ಕುರಿತ ನಿಷ್ಠುರವಾದ ಟೀಕೆ ಅಲ್ಲ. ನಿಜವಾದ ವಿಮರ್ಶೆ ಮೊದಲಿಗೆ ಕೃತಿಯ ಭಾವ ಗ್ರಹಿಸಿ ನಂತರ ಅದನ್ನು ನಿಕಷಕ್ಕೆ ಒಡ್ಡುತ್ತದೆ.

ಗುಣದೋಷಗಳನ್ನು ಗುರುತಿಸುತ್ತಲೇ ರಸಗ್ರಾಹಿತ್ವ ಮಿತ್ರಗ್ರಾಹಿತ್ವವನ್ನೂ ಒಳಗೊಳ್ಳಬೇಕು. ವಿಮರ್ಶಕನಿಗೆ ಸಂಸ್ಕಾರ ಅತಿಮುಖ್ಯವಾದ ಗುಣ, ಯಾಕೆಂದರೆ ಸಂಸ್ಕಾರವೇ ಅವನ ವಿಮರ್ಶೆಯ ವಿಧಾನವನ್ನು ರೂಪಿಸುತ್ತದೆ ಎಂಬುದು ಅವರ ನಿಲುವು.

ವಿಮರ್ಶಕ, ಕವಿ ಇಬ್ಬರೂ ಒಂದೇ. ಇಬ್ಬರೂ ಬೌದ್ಧಿಕವಾಗಿ ಮತ್ತು ಪ್ರತಿಭೆಯಲ್ಲಿ ಸಮಾನ ಪಾತಳಿಯಲ್ಲಿ ಇರುವರಾದರೂ ವಿಮರ್ಶಕನಿಗೆ ಸಹೃದಯತೆ, ಸೌಜನ್ಯತೆಗಳು, ಮೆದುನುಡಿಗಳು ಅವಶ್ಯಕ. ಕೃತಿ ಕುರಿತ ಅವನ ವಿಚಾರಗಳು, ಕೃತಿಯ ಕಾಲದ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ ಪರಿಸರದ ಅರಿವಿನ ಹಿನ್ನೆಲೆಯಲ್ಲಿ ಮೂಡಿಬರಬೇಕೇ ಹೊರತು ತನ್ನಿಚ್ಛೆಯಂತೆ ಕೃತಿಗಳ ವಿಷಯದಲ್ಲಿ ಕಟುವಾದ ಅಭಿಪ್ರಾಯಗಳಿಗೆ ಎಡೆನೀಡಬಾರದೆಂಬುದು ಸ್ವತಃ ಅನುಭವದೊಂದಿಗೆ, ಎಚ್ಚರ ನೀಡಿದ್ದಾರೆ.

ತಿರುಮಲಾಂಬಾ ಅವರ ಕಾದಂಬರಿಗಳ ವಿಚಾರವಾಗಿ ಬರೆಯುತ್ತಾ, 'ಸುಶೀಲೆ' ಎಂಬ ಕಾದಂಬರಿ ಕುರಿತು ಅವರು "ಇದರಲ್ಲಿ ('ಸುಶೀಲೆ' ಕಾದಂಬರಿಯಲ್ಲಿ) ಅಸಂಭವವಾದ ಸಂಗತಿಗಳೇ ಅಲ್ಲದೆ ಈ ಪುಸ್ತಕದಲ್ಲಿ ಇನ್ನೊಂದು ದೋಷವಿದೆ. ಪುಸ್ತಕಗಳಲ್ಲಿ ನೀತಿ ತಿಳಿಸಲ್ಪಡಬೇಕಾದುದು ಅವಶ್ಯವಾದರೂ ಅವುಗಳನ್ನು ತಿಳಿಸುವುದಕ್ಕೆಂದು ಒಂದೊಂದು ಪಾತ್ರದ ಬಾಯಲ್ಲಿ ಒಂದೊಂದು ವಿಷಯವನ್ನು ಕುರಿತ ಒಂದೊಂದು ಲೆಕ್ಚರನ್ನು ಇಟ್ಟರೆ ಅದು ಕತೆಯಾಗುವುದಿಲ್ಲ" ಎಂದು ಹೇಳುವುದೇ ಅಲ್ಲದೆ ಇನ್ನೊಂದೆಡೆ ಇದೇ ಕಾದಂಬರಿ ಕುರಿತು "ಸ್ತ್ರೀಯರು ವಿದ್ಯಾವತಿಯರಾಗುವುದು ದೇಶದ ಏಳಿಗೆಗೆ ಅತ್ಯಾವಶ್ಯಕವೆಂದು ಎಲ್ಲರೂ ಒಪ್ಪುವುದು. ಈ ವಿಷಯವನ್ನು ಈ ಪುಸ್ತಕಗಳಲ್ಲಿ ಗ್ರಂಥಕರ್ತೆಯವರು ಒತ್ತಿ ಒತ್ತಿ ಹೇಳಿದ್ದಾರೆ. ಆದರೆ ವಿದ್ಯೆ ಎಂದರೆ ಓದು ಬರಹ ಬರುವುದು ಎಂದು ಸಾಮಾನ್ಯವಾಗಿ ಜನರೆಲ್ಲರೂ ತಿಳಿದಿರುವ ಹಾಗೆಯೇ ಇವರೂ ಎಣಿಸುತ್ತಾರೆಂದು ತೋರುತ್ತದೆ. ಓದು ಬರಹ ಬಂದ ಮಾತ್ರಕ್ಕೆ ಸುಶೀಲೆಯ ಹಾಗಾಗಲಿ, ಓದು ಬರಹ ಬಾರದ ಮಾತ್ರಕ್ಕೆ ಗಿರಿಯಮ್ಮನಂತಾಗಲಿ, ಸ್ತ್ರೀಯರು ಆಗುವರೆಂದು ಹೇಳುವುದು ತಪ್ಪು ಎಂದು ತೋರುತ್ತದೆ. ನಾವು ಓದು ಬರಹವನ್ನೇ ಅರಿಯದ ನಮ್ಮ ಕೆಲವು ಸಂಸಾರಗಳ ಯಜಮಾನಿಯರನ್ನು ನೋಡಿದ್ದೇವೆ. ಮನೆಗೆಲಸವನ್ನು ಸರಿಯಾಗಿ ನೋಡಿಕೊಳ್ಳುವುದು, ಸಂಸಾರಕ್ಕೆ ಸೇರಿದ ಎಲ್ಲರ ಸುಖಕ್ಕೂ ಮುಖ್ಯ ಕಾರಣರಾಗಿರುವುದು..... ನೆರೆಹೊರೆಯವರ ಕಷ್ಟಸುಖಗಳಲ್ಲಿ ಸ್ತ್ರೀ ಹೃದಯಕ್ಕೆ ಲಕ್ಷಣವಾದ ಲಾಲಿತ್ಯದಿಂದ ಸಹಾಯಕರೂ ಭಾಗಿಗಳೂ ಆಗಿರುವುದು..... ಇದನ್ನು ಎಷ್ಟೋ ಕಡೆ ನಾವು ನೋಡಿದ್ದೇವೆ, ಪ್ರಾಯಶಃ ಅನೇಕರು ನೋಡಿರುವರು. ಅಂತಹ ಸ್ತ್ರೀಯರು ಓದು ಬರಹ ತಿಳಿಯದವರಾದರೂ ಮಹಾ ವಿದ್ಯಾವತಿಯರೆಂದೂ, ತಮ್ಮ ಆ ವಿದ್ಯದಿಂದ ಅತಿಮಾನ್ಯರೂ ಪೂಜ್ಯರೂ ಆದವರೆಂದು ನಮ್ಮ ಭಾವನೆ" – ಎಂಬ

ಈ ಮಾತುಗಳು ಅವರ ವಿಮರ್ಶೆಯ ನಿರೀಕ್ಷೆ, ನಿಲುವುಗಳನ್ನು ಬಿಂಬಿಸುವುದರ ಜೊತೆಗೆ ಸ್ತ್ರೀಯರ ಬಗೆಗಿನ ಅಂದಿನ ಸಮಾಜದ ಧೋರಣೆಗಳನ್ನೂ, ಸ್ತ್ರೀಯರಿಂದ ನಿರೀಕ್ಷೆಗಳನ್ನೂ ಸ್ಪಷ್ಟವಾಗಿ ಕಟ್ಟಿಕೊಡುತ್ತವೆ. ನಿಷ್ಠುರವಾದ ವಿಮರ್ಶೆ ಬರೆದರಾದರೂ ನಂತರ ಅವರಿಗೇ ತಪ್ಪಿನ ಅರಿವಾಗಿ, ವಿಮರ್ಶೆಯ ಮೊದಲ ಸಂಪುಟದ ಮುನ್ನುಡಿಯಲ್ಲಿ ತಾವು ಬರೆದ ಲೇಖನದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾರೆ: "ಸತೀಹಿತೈಷಿಣೀ ಮತ್ತು ಇನ್ನೂ ಇತರ ಗ್ರಂಥಮಾಲೆಗಳ ಕರ್ತ್ರಿಯವರಾದ ಶ್ರೀಮತಿ ತಿರುಮಲಾಂಬಾ ಅವರು ಅಸಾಧಾರಣವಾದ ದೇಶ ಸೇವೆಯನ್ನೂ ಭಾಷಾ ಸೇವೆಯನ್ನು ಮಾಡಿಯೂ ಮಾಡುತ್ತಲೂ ಇದ್ದಾರೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಗ್ರಂಥಕರ್ತ್ರಿಯವರ ವಿಷಯದಲ್ಲಿ ಆ ಗೌರವ ಇಲ್ಲದಿದ್ದರೆ ನಾನು ವಿಮರ್ಶೆಯನ್ನು ಬರೆಯುತ್ತಿರಲಿಲ್ಲ. ಆದರೆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿಣವಾದುವೆಂದು ಈಚೆಗೆ ನನಗೆ ತೋರಿದೆ. ನಮ್ಮಲ್ಲಿ ಇಂಗ್ಲಿಷನ್ನು ಕಲಿತು ಕನ್ನಡವನ್ನು ನೋಡುವವರು ಹೊಸದರಲ್ಲಿ ಇಂಗ್ಲಿಷಿನ ಕೃತಿಗಳಿಗೆ ಸಮಾನವಾದ ಕೃತಿಗಳು ಕನ್ನಡದಲ್ಲಿ ಬರದೆ ಇದ್ದರೆ ಬಹಳ ಅಸಮಾಧಾನ ಪಡುವೆವು. ಈ ರೀತಿಯ ಗುಣಮಾಪನದ ಆಶಯವೇನೋ ಉಚ್ಚವಾದದ್ದು. ಆದರೆ ಹೀಗೆ ಮಾಪನ ಮಾಡುವಲ್ಲಿ ಯಾವ ಭಾಷೆಯಲ್ಲಾಗಲಿ ಬಹುಜನರು ಬರೆದು ಬರಹದ ಸಂಪ್ರದಾಯಗಳು ಏರ್ಪಟ್ಟ ಮೇಲೆ ಉತ್ತಮ ಕಾವ್ಯ ಬಂದೀತಲ್ಲದೆ ಒಮ್ಮೆಗೇ ಬರಲಾರದು ಎಂಬುದನ್ನು ನಾವು ಮರೆತಂತಾಗುತ್ತದೆ" – ಎನ್ನುವ ತಪ್ಪೊಪ್ಪಿಗೆಯ ಈ ಮಾತುಗಳ ಹಿಂದೆ ಅವರ ವಿಮರ್ಶೆಯ ದೃಷ್ಟಿಕೋನ ಏನೆಂಬುದು ಸ್ಪಷ್ಟವಾಗುತ್ತದೆ. ಯಾವುದೇ ಕೃತಿಯ ವಿಮರ್ಶೆ ಮಾಡಬೇಕಾದ ಸಂದರ್ಭದಲ್ಲಿ ಆ ಕೃತಿಯ ರಚನೆಯ ಕಾಲಘಟ್ಟ, ಸಾಹಿತ್ಯ ಪರಿಸರ, ಕೃತಿಕಾರರ ಸಾಮಾಜಿಕ, ಸಾಂಸ್ಕೃತಿಕ ಪರಿಸರ – ಎಲ್ಲದರ ಬಗೆಗಿನ ಅರಿವು, ಎಚ್ಚರಗಳು ಮುಖ್ಯವಾಗಬೇಕೆಂಬ ಅಭಿಪ್ರಾಯಕ್ಕೆ ಒತ್ತುಕೊಡುತ್ತಾರೆ. ವಿಮರ್ಶಾ ಲೇಖನದ ಮೂಲಕ ಏಕಕಾಲಕ್ಕೆ ಸಾಹಿತ್ಯಿಕ ಪರಿಸರ, ಮಹಿಳೆಯರ ಸಾಮಾಜಿಕ ಸ್ಥಿತಿಗತಿ, ಅವರ ಬಗೆಗಿನ ಸಾಮಾಜಿಕ ಧೋರಣೆಗಳನ್ನು ಮನದಟ್ಟು ಮಾಡಿಕೊಡುತ್ತಾರೆ.

ನಾಲ್ಕು ಸಂಪುಟಗಳಲ್ಲಿ ೧೯೨೬–೩೩ರ ಅವಧಿಯಲ್ಲಿ ಪ್ರಕಟವಾದ ಅವರ ವಿಮರ್ಶಾಲೇಖನಗಳನ್ನು ಓದಿದಾಗ, ಇಂದಿನ ವಿಮರ್ಶಾ ಬರಹಗಳ ಜೊತೆಗೆ ಹೋಲಿಸಿದರೆ ಸಾಕಷ್ಟು ಭಿನ್ನವಾಗಿ ಕಾಣಿಸುತ್ತವೆ. ಮಾಸ್ತಿಯವರಿಗೆ ಯಾವುದೇ ವಿಮರ್ಶಾ ಸಿದ್ಧಾಂತಗಳಿಗೆ ಬದ್ಧವಾಗಿ ಬರೆಯಬೇಕೆಂಬ ಒತ್ತಡವಾಗಲೀ, ಸಿದ್ಧ ಸಿದ್ಧಾಂತಗಳ ಪರಿಚಯವಾಗಲೀ ಇರಲಿಲ್ಲ. ಅವರು ವಿಮರ್ಶೆಯಿಂದ ಬರವಣಿಗೆಯನ್ನು ಪ್ರಾರಂಭಿಸಿದರೂ ಸೃಜನಶೀಲ ಸಾಹಿತ್ಯಕ್ಕೇ ಹೆಚ್ಚಿನ ಕೊಡುಗೆ ಸಲ್ಲಿಸಿದ್ದಾರೆ. ನವೋದಯ ಕಾಲಘಟ್ಟದಲ್ಲಿ ಬರೆಯ ಹೊರಟ ಮಾಸ್ತಿಯವರಿಗೆ ಕಾವ್ಯ, ಕತೆ, ಕಾದಂಬರಿ ಯಾವುದೇ

ಸಾಹಿತ್ಯ ಪ್ರಕಾರಗಳಾಗಲೀ ನಿರೀಕ್ಷಿಸಿದ್ದು ಆತ್ಮ, ಪರಮಾತ್ಮ, ಸತ್ಯ, ಸೌಂದರ್ಯ, ಆದರ್ಶಗಳು, ಮಾನವೀಯ ಮೌಲ್ಯಗಳು, ಮಾನವೀಯತೆ, ಔದಾರ್ಯ, ಪ್ರೀತಿ, ಪ್ರೇಮ, ಸಂಸ್ಕೃತಿ, ಭಾವ ತೀವ್ರತೆ ಇತ್ಯಾದಿ ಅಂಶಗಳನ್ನೆ! ಆದ್ದರಿಂದಲೇ ವಿಮರ್ಶೆಯ ನಿರೀಕ್ಷೆಗಳೂ ಅವೇ ಆಗಿರುವುದರಲ್ಲಿ ಆಶ್ಚರ್ಯವಿಲ್ಲ. ಕಾವ್ಯದಲ್ಲಿ ಮೊದಲ ಹುಡುಕಾಟ ಇದೇ ಆಗಿದೆ. ವಿಮರ್ಶಕನಿಂದ ನಿರೀಕ್ಷಿಸುವುದೂ ಇದನ್ನೇ! ಅದಕ್ಕೇ ಅವರು ವಿಮರ್ಶಕನಿಗೆ ಮೊದಲು ಮಾಡಬೇಕಾದ್ದು ಭಾವದ ವ್ಯಂಜನ ಕುರಿತು ಹೇಳುವುದಕ್ಕಿಂತ ಭಾವವನ್ನು ಕುರಿತೇ ಹೇಳಬೇಕು ಎನ್ನುತ್ತಾರೆ. "ಮೊದಲು ಭಾವ ಗ್ರಹಿಸುವುದು; ಗ್ರಹಿಸಿದ ಮೇಲೆ ಭಾವವನ್ನು ಪರೀಕ್ಷಿಸುವುದು" ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಈ ಹಿನ್ನೆಲೆಯಲ್ಲಿ, ಅವರು ಬರೆದ ಭಾರತೀಯ ಕಾವ್ಯಗಳ, ಪಾಶ್ಚಿಮಾತ್ಯ ಕಾವ್ಯಗಳ ವಿಮರ್ಶಾ ಲೇಖನಗಳನ್ನು ಗಮನಿಸಬಹುದು. ರಸಗ್ರಹಣವೇ ವಿಮರ್ಶೆಯ ಪ್ರಥಮ ಹೆಜ್ಜೆ. ಸಹೃಯದತೆ, ಸಹಾನುಭೂತಿಗಳನ್ನೂ ವಿಮರ್ಶೆಯ ತಾತ್ವಿಕ ನಿಲುವುಗಳ ಪರಿಧಿಗೆ ಸೇರಿಸುತ್ತಾರೆ. ಒಬ್ಬೊಬ್ಬ ಕವಿ, ಕವಿಕೃತಿಯನ್ನು ಅಳೆಯಲು, ವಿಮರ್ಶಿಸಲು ಬೇರೆ ಬೇರೆಯೇ ಆದ ಮಾನದಂಡಗಳು, ನಿಲುವುಗಳು ಬೇಕಾಗುತ್ತವೆ. ಒಂದೇ ದೃಷ್ಟಿಯಿಂದ, ಒಂದೇ ಅಳತೆಗೋಲಿನಿಂದ ಅಳೆಯುವುದು ಸಾಧುವಲ್ಲ ಎಂಬುದು ಅವರ ಅಭಿಪ್ರಾಯ. ಇಂತಹ ಸಂದರ್ಭದಲ್ಲಿ ಅವರು ವಿಮರ್ಶೆ ಮಾಡುವವರಿಗೆ ಒಂದು ಸೂಚನೆ ನೀಡುತ್ತಾರೆ. "ಸಾವಿರ ವರುಷದ ಹಿಂದಣ ಗ್ರಂಥಕ್ಕೂ ಈಗಣ ಗ್ರಂಥಕ್ಕೂ ಒಂದೇ ಅಳತೆಯನ್ನು ತರಬಾರದು. ಒಂದು ಕಾಲದ ಜನರ ಅವಸ್ಥೆಗಾಗಿ ಬರೆದಿರುವ ಗ್ರಂಥವನ್ನು ಇನ್ನೊಂದು ಕಾಲದವರು ತಿಳಿಯಬೇಕಾದರೆ ಆ ಕಾಲದ ಜನರ ವಿಷಯವನ್ನು ಇವರು ಸರಿಯಾಗಿ ಅರಿಯಬೇಕು" (ವಿಮರ್ಶೆ, ಸಂ.೧, ಪು.೧೪) ಎಂದು ಕೃತಿಯನ್ನು ಕಾಲದ ಸಂದರ್ಭದಿಂದ ಹೊರತು ಪಡಿಸಿ ವಿಶ್ಲೇಷಿಸುವುದು ಸರಿಯಲ್ಲ ಎನ್ನುವ ಅಭಿಪ್ರಾಯಕ್ಕೆ ಬರುತ್ತಾರೆ.

ಅವರ ವಿಮರ್ಶಾ ಲೇಖನಗಳ ಹಿಂದೆ ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ ಇತ್ಯಾದಿ ಪರಿಕಲ್ಪನೆಗಳ ಬಗ್ಗೆ ಗಾಢವಾದ ಚಿಂತನೆಗಳೇ ಕೆಲಸಮಾಡಿವೆ. ಉತ್ತಮ ಕಾವ್ಯ, ಸಾಹಿತ್ಯ ಹೇಗಿರಬೇಕೆಂಬ ಕಲ್ಪನೆಯೊಂದಿಗೆ ಅವರು ವಿಮರ್ಶೆಗೆ ಹೊರಡುತ್ತಾರೆ. ಕೃತಿಗಳನ್ನು ವಿಮರ್ಶೆಗೆ ತೆಗೆದುಕೊಂಡಾಗ ಕೃತಿಗಳಷ್ಟೇ ಸೀಮಿತಗೊಳ್ಳದೆ ಕೃತಿ, ಕೃತಿಕಾರ ಪರಿಚಯ, ಸಾಧ್ಯವಾದ ಮಟ್ಟಿಗೆ ಜೀವನ ವಿವರಗಳು, ಕೃತಿಗೆ ಮೊದಲು ಒಂದು ಪೀಠಿಕೆ, ಅದಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ದೇಶಭಾಷೆಯ ಕವಿಗಳು, ಕಾವ್ಯಗಳು. ಮೊದಲಾಗಿ ಪ್ರಸ್ತಾಪಿಸಿ, ಕೃತಿಯನ್ನು ಅರ್ಥೈಸಿಕೊಳ್ಳಲು ಓದುಗರನ್ನು ಮಾನಸಿಕವಾಗಿ ಸಿದ್ಧಗೊಳಿಸುತ್ತಾರೆ. ಉದಾಹರಣೆಗೆ 'ಠಾಕೂರ ಕವಿಯವರ ಗೀತಾಂಜಲಿ' ಲೇಖನದಲ್ಲಿ

ಭಾರತದ ನಾಗರಿಕತೆ, ಕುಶಲ ಕಲೆಗಳು, ಸಾಹಿತ್ಯಗಳ ಸ್ಥಿತಿಗತಿಯ ಬಗ್ಗೆ ಪ್ರಸ್ತಾಪಿಸಿ, ಹೋಮರ್, ವರ್ಜಿಲ್, ಡಾಂಟೆ, ಗಯಟೆ, ಷೇಕ್ಸ್‌ಪಿಯರ್ ಮೊದಲಾದ ಶಿಖರಪ್ರಾಯರಾದ ಕವಿ, ನಾಟಕಕಾರರಿಗೆ ಸರಿಗಟ್ಟುವವರು ಆಯಾದೇಶದಲ್ಲಿ ಮತ್ತೊಬ್ಬರಿಲ್ಲ ಎಂದು ಹೇಳುತ್ತಾ, ಅದೇ ರೀತಿ ಕಾಳಿದಾಸನಿಗೆ ಸರಿತೂಗುವ ಕವಿಗಳು ಕೂಡಾ ನಮ್ಮ ಸೀಮೆಯಲ್ಲಿ ಈಚೆಗೆ ಇಲ್ಲದೆ ಹೋದರು' ಎಂದು ವಿಷಾದ ಸೂಚಿಸಿ, ರವೀಂದ್ರನಾಥ ಠಾಕೂರರ ಗೀತಾಂಜಲಿ' ಯನ್ನು ನೇರವಾಗಿ ವಿಮರ್ಶೆಗೆ ಎತ್ತಿಕೊಳ್ಳದೆ, ಆ ಕೃತಿಗೆ ಸಂದ ನೊಬೆಲ್ ಪುರಸ್ಕಾರ, ಪಾಶ್ಚಾತ್ಯರು ತೋರಿದ ಸಂಭ್ರಮದ ಪ್ರತಿಕ್ರಿಯೆ, 'ಗೀತಾಂಜಲಿ'ಗೆ ಸಿಕ್ಕ ಪ್ರಚಾರ, ಕನ್ನಡಿಗರಿಗೆ ಅದು ಓದಲು ದೊರೆಯದೆ ಹೋದುದರ ಬಗ್ಗೆ ವಿಷಾದ – ಎಲ್ಲವನ್ನೂ ವಿವರಿಸಿ, 'ಗೀತಾಂಜಲಿ ಪದ್ಯಗಳ ವಿಮರ್ಶೆಗೆ ಬದಲಾಗಿ, ಪದ್ಯಗಳ ವಸ್ತು, ಅರ್ಥ ವಿಶ್ಲೇಷಣೆಗೆ ಹೊರಡುತ್ತಾರೆ. ಗೀತಾಂಜಲಿ ಪದ್ಯಗಳನ್ನು ಇಡಿ ಇಡಿಯಾಗಿ ಅನುವಾದಿಸಿ ನಿದರ್ಶನಕ್ಕೆಂದು ನಮ್ಮ ಮುಂದೆ ಇಡುವುದರ ಮೂಲಕ ಆಸ್ವಾದನೆಗೂ ಅವಕಾಶ ಕಲ್ಪಿಸುತ್ತಾರೆ. ವಿಮರ್ಶೆ ಎನ್ನುವುದು ಅವರಿಗೆ ಮುಖ್ಯವಾಗಿ ಓದುಗರಲ್ಲಿ ಅಭಿರುಚಿ, ಆಸಕ್ತಿ ಮೂಡಿಸುವುದಾಗಿದೆ. ಪದ್ಯಗಳ ಜೊತೆಜೊತೆಗೆ ಅದರ ಹಿನ್ನೆಲೆಯ ಸಂದರ್ಭವನ್ನು ವಿವರಿಸುತ್ತಾರೆ. ನಂತರ ಅರ್ಥ ವಿವರಣೆ ಅಥವಾ ವ್ಯಾಖ್ಯಾನಕ್ಕೂ ಮುಂದಾಗುತ್ತಾರೆ. ಈ ವಿಧಾನದಿಂದ ಒಂದೊಂದು ಪದ್ಯಕ್ಕೂ ಸಂಬಂಧವನ್ನು ಏರ್ಪಡಿಸುತ್ತಾ ಸಾಗುತ್ತಾರೆ. ಗೀತಾಂಜಲಿಯ ಪದ್ಯಗಳೆಲ್ಲವೂ ಪರಮಾತ್ಮನನ್ನು ಕುರಿತೇ! ಒಡೆಯ ಸಖ ಎಂಬೆಲ್ಲ ಸಂಬಂಧಗಳ ಹಿನ್ನೆಲೆಯಲ್ಲಿ ಠಾಕೂರರ ಕಾವ್ಯದ ಹೊನಲು ಹರಿದಿದೆ. ಮಾಸ್ತಿಯವರು ಒಂದು ರೀತಿಯಿಂದ ಕಾವ್ಯವನ್ನು ಪರಿಚಯಿಸಿದ್ದಾರೆ; ವಿವರಿಸಿದ್ದಾರೆ. ಲೇಖನದ ಪ್ರಾರಂಭದಲ್ಲಿ, ಒಂದು ಪದ್ಯಕ್ಕೆ ಅವರು ನೀಡುವ ಹಿನ್ನೆಲೆ ಹೀಗಿದೆ:

ಠಾಕೂರ ಕವಿವರರು, ಕವಿಯಾದವನು ಪರಮಾತ್ಮನು ತನ್ನ ಜೀವಕಳೆಯಿಂದ ಪುನಃ ಪುನಃ ಒಂದು ಪಾತ್ರೆ, ಅಥವಾ ಸದಾ ನೂತನವಾದ ಮಧುರಗಾನದಿಂದ ತುಂಬುವ ಕೊಳಲು ಎಂದು ಭಾವಿಸುತ್ತಾರೆ. ಕವಿಯಗಾನವು ಪರಮಾತ್ಮನ ಆಜ್ಞೆಯಿಂದ ಬರತಕ್ಕದು. ಅದರ ಮೂಲ ಆತನು ಪರಮಾತ್ಮನ ಗಾನಕ್ಕೆ ತಕ್ಕ ವಾದ್ಯವಾಗುವುದಕ್ಕಾಗಿ ಕವಿ ತನ್ನ ಜೀವನವನ್ನು ಸರಿಯಾಗಿಟ್ಟುಕೊಳ್ಳಬೇಕು. ಈ ಮೂಲಕ ಅವನಲ್ಲಿ ಗಾನವುಂಟಾಗಿ ಅವನು ದೇವದೇವನ ಪಾದಾರವಿಂದವನ್ನು ಮುಟ್ಟುವನು. ಗಾನದ ಉತ್ಸಾಹದಲ್ಲಿ ಅವನಿಗೆ ದೇವರು ಒಡೆಯನೇ ಅಲ್ಲದೆ ಜೊತೆಗಾರನೂ ಆಗುವನು' ಎಂದು ಹೇಳಿ ಪದ್ಯವನ್ನು ಉದಾಹರಿಸುತ್ತಾರೆ:

'ನೀನು ನನ್ನನ್ನು ಅಮರನಾಗಿ ಮಾಡಿದ್ದೀಯೆ; ಇದು ನಿನ್ನ ಇಷ್ಟ. ಈ ಲಘುವಾದ

ಪಾತ್ರವನ್ನು ಮತ್ತೆ ಮತ್ತೆ ಬರಿಯದನ್ನಾಗಿ ಮಾಡಿ ಮತ್ತೆ ಮತ್ತೆ ಜೀವಕಳೆಯಿಂದ ತುಂಬುತ್ತಿದ್ದೀಯೆ. ಈ ಸಣ್ಣ ಬಿದಿರು ಕೊಳವಿಯನ್ನು ಹಿಡಿದುಕೊಂಡು ಗುಡ್ಡಗಾಡುಗಳಲ್ಲೆಲ್ಲ ತಿರುಗಾಡಿ ಅದರಲ್ಲಿ ನಿನ್ನ ಸರ್ವದಾ ನೂತನವಾದ ಮಧುರಗಾನವನ್ನು ನುಡಿದಿದ್ದೀಯೆ.'

–ಇದೇ ರೀತಿಯಲ್ಲಿ ಹಲವಾರು ಪದ್ಯಗಳನ್ನು ಉದಾಹರಿಸುತ್ತಾ ವ್ಯಾಖ್ಯಾನಿಸುತ್ತಾ, ಓದುಗರಿಗೆ ಕಾವ್ಯದ ಸೊಗಸನ್ನು ಆಸ್ವಾದಿಸುವಂತೆ ಮಾಡಿ ನಂತರ ತಮ್ಮ ಅಭಿಪ್ರಾಯಗಳನ್ನು ನಿರೂಪಿಸುತ್ತಾರೆ. ನಿಜವಾದ ವಿಮರ್ಶೆ ಶುರುವಾಗುವುದು ಇಲ್ಲಿಂದಲೇ.

"ಗೀತಾಂಜಲಿಯ ಮುಖ್ಯ ಭಾವಗಳ ಈ ಸಂಕ್ಷೇಪ ಶ್ರವಣದಿಂದ ಪಾಠಕರಿಗೆ ಆ ಕಾವ್ಯದ ಸ್ವಭಾವವು ಸ್ವಲ್ಪಮಟ್ಟಿಗಾದರೂ ತಿಳಿದಿರಬಹುದು. ಮೊತ್ತದಲ್ಲಿ ಅದು ಕವಿಯ ಆತ್ಮ ಸಂಸ್ಕಾರದ ಅವಸ್ಥಾ ವಿಶೇಷಗಳನ್ನು ಸೂಚಿಸತಕ್ಕ ಗೀತಗಳ ಸಮುಚ್ಚಯ. ಅದು ನಮ್ಮ ದಾಸರ ಪದಗಳ ರೀತಿಯ ಪದ್ಯಗಳನ್ನೇ ಒಳಗೊಂಡಿವೆಯೆಂದು ಸ್ಪಷ್ಟವಾಗಿರಬೇಕು. ಪುರಂದರ ದಾಸರ 'ಉದರ ವೈರಾಗ್ಯವಿದು' ಅಥವಾ 'ಬಿನ್ನಹಕೆ ಬಾಯಿಲ್ಲವಯ್ಯ' ಅಥವಾ ಕನಕದಾಸರ 'ತನು ನಿನ್ನದು ಜೀವನ ನಿನ್ನದು' ಎಂಬ ದೇವರ ನಾಮಗಳ ಮುಖ್ಯ ಲಕ್ಷಣವನ್ನು ಈ ಪದ್ಯಗಳಲ್ಲಿ ಕಾಣಬಹುದು ಎಂದು ಸಮಾನ ಅಂಶಗಳನ್ನು ಗುರುತಿಸುವ ಮಾಸ್ತಿಯವರು, ದಾಸರು ಮತ್ತು ಕವಿಯ ನಡುವಿನ ಅಂತರವನ್ನು ವಿವರಿಸಿರುವ ರೀತಿ ನಿಜಕ್ಕೂ ಮೌಲಿಕವೆನಿಸುತ್ತದೆ. 'ದಾಸರದು ನಿವೃತ್ತಿ ಮಾರ್ಗವಾದರೆ ಕವಿಯದು ಬಹುಮಟ್ಟಿಗೆ ಪ್ರವೃತ್ತಿ ಮಾರ್ಗ, ದಾಸರು ಭಕ್ತರು ಮಾತ್ರ. ಕವಿಯು ಭಕ್ತನೂ ಅಹುದು; ಜೊತೆಗೆ ಸಾಮಾನ್ಯ ಜನರಲ್ಲಿ ಸೇರಿದವನೂ ಅಹುದು.... ಅವನು ಸಾಮಾನ್ಯರ ಜೊತೆಗೆ ನಿಂತು ತಾನು ನಡೆದ ದಾರಿಯಲ್ಲಿ ಅವರನ್ನು ಹಿಡಿದು ಒಯ್ಯುವನು. ದಾಸರು ದುರ್ಗಮವೆಂದು ತೋರುವ ಗಿರಿಶಿಖರವನ್ನೈದಿ ಕೆಳಗಿರುವವರನ್ನು ಕರುಣೆಯಿಂದ ನೋಡುತ್ತಿರುವಂತೆ ಅಥವಾ ಮೇಲಕ್ಕೆ ಬನ್ನಿರೆಂದು ಕರೆಯುತ್ತಿರುವಂತೆ ತೋರುವುದು" – ಹೀಗೆ ತೌಲನಿಕವಾಗಿ ತೂಗಿ ನೋಡುತ್ತಾರೆ. ಪೌರ್ವಾತ್ಯ, ಪಾಶ್ಚಾತ್ಯ ಎನ್ನುವ ಯಾವುದೇ ಮಡಿವಂತಿಕೆಯ ಭಾವವಿಲ್ಲದೆ, ಗ್ರೀಕ್, ರೋಮನ್, ಇಂಗ್ಲಿಷ್ ಸಾಹಿತ್ಯದಲ್ಲಿನ ಮಹಾನ್ ಲೇಖಕರನ್ನು ಕವಿಗಳನ್ನು ವಿಮರ್ಶೆಗೆ ಒಳಗಾಗಿಸುತ್ತಾರೆ. ವಿಷಯ ಕೇಂದ್ರಿತ ಲೇಖನಗಳು ಸಂಖ್ಯೆಯಲ್ಲಿ ತೀರಾ ಕಡಿಮೆ ಅವರ ನಾಲ್ಕು ಸಂಪುಟಗಳಲ್ಲಿ ಕನ್ನಡ, ತಮಿಳು ಕೃತಿಗಳ, ಭಾರತೀಯ ಸಾಹಿತ್ಯ ಕೃತಿಗಳ ಮತ್ತು ಅನ್ಯದೇಶೀಯ ಸಾಹಿತ್ಯ ಕೃತಿಗಳ ವಿಮರ್ಶೆಗಳು ಸೇರಿವೆ. ವೈಷ್ಣವದಾಸರ ಕೀರ್ತನೆಗಳು, ಕನ್ನಡನಾಡಿನ ಲಾವಣಿ ಸಾಂಗತ್ಯಗಳು, ಲಕ್ಷ್ಮೀಶನ ಕಾವ್ಯ, ಮುದ್ದಣ ಕವಿಯ ರಾಮಾಶ್ವಮೇಧ, ನಂಜನಗೂಡು ತಿರುಮಲಾಂಬಾ ಅವರ ಕಾದಂಬರಿಗಳು, ಕನ್ನಡ ಸಾಹಿತ್ಯ ಸಂಬಂಧಿ ವಿಮರ್ಶೆಯಾದರೆ ಕಾಳಿದಾಸನ ಮೇಘ ದೂತ, ರವೀಂದ್ರನಾಥ

ಠಾಕೂರರ ಗೀತಾಂಜಲಿ– ಭಾರತೀಯ ಸಾಹಿತ್ಯ ಸಂಬಂಧಿ ಲೇಖನಗಳಾಗಿವೆ. ಗಯಟೆ ಕವಿಯ ಕಾವ್ಯ ಮೀಮಾಂಸೆ, ಗಯಟೆ ಕವಿಯ ಮಾತು; ನಾಟಕಗಳನ್ನು ಕುರಿತು 'ಲೇಖನಗಳು ಮತ್ತು ಆಗಸ್ಟೀನ್ ಸಾಧುವಿನ ಬಿನ್ನಪ, ಆರೀಲಿಯಸ್ ಚಕ್ರವರ್ತಿಯ ಆಲೋಚನೆ, ಎಪಿಕ್ಟಿಟಸ್ ಗುರುವಿನ ಉಪದೇಶ ಹಾಫೀಸ್ ಕವಿಯನ್ನು ಕುರಿತು' ಮೊದಲಾದ ಅನ್ಯದೇಶೀಯ ಸಾಹಿತ್ಯ ಸಂಬಂಧಿ ಲೇಖನಗಳು, ಜೊತೆಗೆ ಕನ್ನಡದ ನೆರೆಯ ಭಾಷೆಯಾದ ತಮಿಳಿನ ಸಾಹಿತ್ಯ ಸಂಬಂಧವಾದ 'ತಮಿಳು ವೈಷ್ಣವ ಪ್ರಬಂಧಗಳು' ಎಂಬ ಲೇಖನ. ಇವಿಷ್ಟೂ ಅವರ ಲೇಖನಗಳ ಮೊತ್ತ. ಈ ಎಲ್ಲ ಲೇಖನಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಒಂದು ರೀತಿಯ ಸಮಾನವಾದ ವಿಮರ್ಶನ ವಿಧಾನ ಅಥವಾ ಶೈಲಿಯನ್ನು ಕಾಣುತ್ತೇವೆ. ಎಲ್ಲ ವಿಮರ್ಶಕರೂ, ವಿದ್ವಾಂಸರೂ ಗುರುತಿಸಿರುವಂತೆ ಅವರದು ವರ್ಣನಾತ್ಮಕ ಅಥವಾ ವಿವರಣಾತ್ಮಕ, ಕಥನಾತ್ಮಕ ಶೈಲಿ. ನೇರ ಸರಳ ನಿರೂಪಣೆ. ಇನ್ನೂ ಹೇಳಬೇಕೆಂದರೆ ಅವರ ವಿಮರ್ಶೆಗಳು ತೌಲನಿಕ ಮತ್ತು ನಿದರ್ಶನಾತ್ಮಕ. ತಾವು ತಳೆಯುವ ಅಭಿಪ್ರಾಯಗಳಿಗೆ ಸಮರ್ಥನೆ ನೀಡುತ್ತಾರೆ. ಬೇರೆ ಬೇರೆ ಮೂಲಗಳಿಂದ ಉದಾಹರಣೆಗಳನ್ನು ನೀಡುತ್ತಾರೆ. ಅಪಾರ ವಿದ್ವತ್ತು, ಪಾಶ್ಚಾತ್ಯ ಸಾಹಿತ್ಯದ ಆಳವಾದ ಪರಿಚಯ ಇರುವುದರಿಂದ ತಾವು ವಿಮರ್ಶಿಸಲು ಹೊರಟ ವಿಷಯಗಳಲ್ಲಿ, ಕೃತಿಗಳಲ್ಲಿ ತಾವು ಗ್ರಹಿಸಿದ ಅಂಶಗಳಲ್ಲಿ ಸಾಮ್ಯತೆಯನ್ನು ಗುರುತಿಸಲು ಸಾಧ್ಯವಾಗಿದೆ. ಅದಕ್ಕೆಂದೇ ಕನ್ನಡ ಲಾವಣಿಗಳ ಬಗ್ಗೆ ಬರೆಯುವಾಗ ಇಂಗ್ಲಿಷರ 'ಬ್ಯಾಲೆಡ್'ಗಳನ್ನು, ವೈಷ್ಣವದಾಸರ ಕೀರ್ತನೆಗಳ ಸಂದರ್ಭದಲ್ಲಿ, ಉತ್ತರ ಭಾರತದ ವೈಷ್ಣವ ಗೀತೆಗಳನ್ನು, ಕಬೀರನ ದೋಹಾಗಳನ್ನು, ನಾನಕನ ಗೀತೆಗಳನ್ನು, ಆಳ್ವಾರುಗಳ ಪ್ರಬಂಧಗಳನ್ನು ಯೆಹೂದ್ಯರ ಸಾಂ ಎಂಬ ಭಕ್ತಿ ಗೀತೆಗಳನ್ನೂ ನೆನಪಿಸಿಕೊಳ್ಳುವುದೇ ಅಲ್ಲದೆ ಅವುಗಳಲ್ಲಿನ ಸಾಮ್ಯತೆಯ ಬಗ್ಗೆ ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತಾರೆ. ಉದಾಹರಣೆಗೆ, 'ಡೇವಿಡ್ ಮಹಾರಾಜನ ಕೀರ್ತನೆಗಳು' ಬಗ್ಗೆ ಬರೆಯುತ್ತ, ಅವುಗಳಲ್ಲಿನ ಅಂತರಾರ್ಥ, ಸ್ವರೂಪವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದ ಅವರು ಅವುಗಳನ್ನು ಕುರಿತು ಇಲ್ಲಿ ಉದ್ಧರಿಸಿರುವ ಗೀತೆಗಳ ಭಾವ ನಮ್ಮ ಜನರಿಗೆ ಬಹಳ ಹಳೆಯದಾಗಿ ಕಾಣಬೇಕು. ದೇವರು ಮಹಾಮಹಿಮನು ಭಕ್ತರನ್ನು ಸಲಹುವನು; ವಿರೋಧಿಗಳನ್ನು ನಿಗ್ರಹಿಸುವನು. ಅವನು ಸರ್ವಜ್ಞನು, ಸರ್ವವ್ಯಾಪಿ, ಸರ್ವಶಕ್ತನು; ದಯಾಶೀಲನು. ಅವನನ್ನು ನಂಬಿ ಕೆಟ್ಟವರಿಲ್ಲ. ಅವನೆದುರಿಗೆ ತಪ್ಪು ಮಾಡದ ಮನುಷ್ಯರಿಲ್ಲ. ಆದರೆ ಅವನು ಕ್ಷಮಾಶೀಲನು.... ಇದೆಲ್ಲ ನಮ್ಮ ಸೀಮೆಯ ಭಕ್ತಿಪಂಥದ ಮಾತುಗಳೇ. ನ್ಯಾಯವಾಗಿ ನೋಡಿದರೆ ಎಲ್ಲ ಸೀಮೆಯಲ್ಲಿಯೂ ಈ ಮಾತುಗಳನ್ನು ಹೇಳುವ ಪಂಥವೊಂದು ಇದ್ದೇ ಇದೆ" ಎಂದು ಹೇಳುತ್ತಲೇ ಡೇವಿಡ್ ಮಹಾರಾಜನಿಗೆ ಮೊದಲೇ ಈ ಬಗೆಯ ಭಕ್ತಿ ಪಂಥವೊಂದು ಇದ್ದಿರಬೇಕು.... ಜೊತೆಗೆ ನಮ್ಮ ಸೀಮೆಗೂ ಯೆಹೂದ್ಯರ ಸೀಮೆಗೂ ಆ ಕಾಲದಲ್ಲಿ

ಸಂಬಂಧಗಳು ಇದ್ದಿರಬಹುದು– ಎಂಬ ಊಹೆಯನ್ನು ಮುಂದಿಡುವುದರ ಮೂಲಕ ಐತಿಹಾಸಿಕ ಸಂಶೋಧನೆಯ ಸಾಧ್ಯತೆಗಳಿಗೆ ಅವಕಾಶ ಕಲ್ಪಿಸುತ್ತಾರೆ. ಅನ್ಯದೇಶೀಯ ಕವಿಗಳ ಪ್ರತಿಯೊಂದು ಪದ್ಯವನ್ನೂ ಅದರ ಮೂಲ ಅರ್ಥಕ್ಕೆ ಧಕ್ಕೆ ಬಾರದ ಎಚ್ಚರಿಕೆಯೊಂದಿಗೆ ಅನುವಾದ ಮಾಡಿ ತನ್ಮೂಲಕ ಕನ್ನಡ ಜನತೆ ಅವರ ಕಾವ್ಯದ ಭಾವ ಸೌಂದರ್ಯ, ಅರ್ಥ ಸೌಂದರ್ಯಗಳ ಆಸ್ವಾದನೆಗೆ ಅವಕಾಶ ಕಲ್ಪಿಸುತ್ತಾರೆ. ಮೊದಲಿಗೆ ಕವಿಯನ್ನು ಪರಿಚಯಿಸಿ ಕಾವ್ಯದ ಸವಿಯನ್ನು ಉಣಬಿಡಿಸಿ ನಂತರ ಕವಿ ಕಾವ್ಯದ ಬಗ್ಗೆ ವಿವರಣೆ, ವಿಶ್ಲೇಷಣೆ, ಅಭಿಪ್ರಾಯಗಳನ್ನು ಮುಂದಿಡುತ್ತಾರೆ. ಮೂಲ ಕವಿಯ ಕಾವ್ಯದ ಈ ಬಗೆಯ ವಿಮರ್ಶೆಯ ಪ್ರಕ್ರಿಯೆಯ ಜೊತೆಗೆ ನಮ್ಮ ಕಾವ್ಯ ಪರಂಪರೆ, ಕವಿಗಳನ್ನು ತಮ್ಮ ಚಿಂತನೆಯ ಹಿನ್ನೆಲೆಗೆ ಇರಿಸಿಕೊಂಡಿರುತ್ತಾರೆ. ಆದ್ದರಿಂದ ಅವರಿಗೆ ಎಲ್ಲಿಯೋ ಒಂದೆಡೆ ಸಮಾನ ಅಂಶಗಳು ತಟ್ಟನೆ ಹೊಳೆಯುತ್ತವೆ. ಇಂತಹ ಒಂದು ತಾತ್ವಿಕ ನಿಲುವು ಓದುಗರಲ್ಲಿ ಅವರು ಅಪೇಕ್ಷಿಸುವ ಅಭಿರುಚಿ, ಅರಿವುಗಳು ಮೂಡಿಸುವಲ್ಲಿ ಯಶಸ್ವಿಯಾಗುತ್ತದೆ.

ಹಾಫಿಸ್ ಕವಿ ಪರ್ಷಿಯಾ ದೇಶದ ಜಗತ್ ಪ್ರಸಿದ್ಧ ಕವಿ. ಪಾರ್ಸಿ ಭಾಷೆಯಲ್ಲಿ ಇವನ ಕಾವ್ಯಕ್ಕೆ ಮಹತ್ವದ ಸ್ಥಾನ. ಈ ಪರ್ಷಿಯನ್ ಕವಿಯ ಬಗ್ಗೆ ಬರೆಯ ಹೊರಟದ್ದು, ಅನುವಾದದಲ್ಲಿ. ಅವನ ಕಾವ್ಯವನ್ನು ಓದಿದ್ದು, ಅದರಿಂದ ಎಷ್ಟೊಂದು ಮೋಹಿತರಾಗಿದ್ದರೆಂದರೆ, "ಭಾಷಾಂತರಗಳನ್ನು ನೋಡಿದರೆಯೇ ಹಾಫಿಸನ ಕವಿತಾಶಕ್ತಿ ಎಷ್ಟು ಅದ್ಭುತವಾದುದು, ಅವನ ಭಾವನೆ ಎಷ್ಟು ಅಗಾಧವಾದುದು, ಎಂದು ಆಶ್ಚರ್ಯವಾಗುತ್ತದೆ" ಎಂದು ಉದ್ಗರಿಸಿದ್ದೇ ಅಲ್ಲದೆ "ನಮ್ಮ ಜನರಿಗೆ ಈತನ ಪರಿಚಯ ಸ್ವಲ್ಪಮಟ್ಟಿಗೆ ಉಂಟಾಗಲೆಂದು ಇವನ ಕಾವ್ಯದ ಇಂಗ್ಲಿಷ್ ಭಾಷಾಂತರ ಒಂದರಿಂದ ಕೆಲವು ಭಾಗಗಳನ್ನು ತೆಗೆದು ಈ ಉಪನ್ಯಾಸವನ್ನು ಬರೆದಿದೆ" – ಎಂದು ಲೇಖನ ಬರೆಯುವ ಹಿನ್ನೆಲೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ. ತಾವು ಆಸ್ವಾದಿಸುವ ಕಾವ್ಯರಸದ ಸವಿಯನ್ನು ಎಲ್ಲರಿಗೂ ಉಣಬಡಿಸಬೇಕೆಂಬ ತಹತಹಿಕೆ. ಕಾವ್ಯ ಸೌಂದರ್ಯಲೀನ ಮನಸ್ಸು ಅವರದಾಗಿರುವುದರಿಂದ ಟೀಕೆ ಮಾಡುವುದಾಗಲೀ ದೋಷಗಳನ್ನು ಎತ್ತಿ ತೋರಿಸುವುದಾಗಲೀ ಅವರ ಜಾಯಮಾನದಲ್ಲಿಯೇ ಇಲ್ಲವೇನೋ ಎನಿಸುತ್ತದೆ.

ಇನ್ನೊಂದು ಅವರ ವಿಮರ್ಶೆಯ ಮುಖ್ಯ ಜಾಡೆಂದರೆ ಯಾವುದೇ ಅನ್ಯದೇಶೀಯ ಕವಿಯ ಚಿಂತನೆಯ ಸಂದರ್ಭದಲ್ಲಿ ನಮ್ಮ ದೇಶದ ಕವಿಗಳ ವಿಷಯವನ್ನೂ ಯೋಚಿಸುವುದನ್ನು ಅವಶ್ಯಕವೆಂದು ಭಾವಿಸುತ್ತಾರೆ. ಬೇರೆ ಬೇರೆ ದೇಶದ ಉತ್ತಮವರ್ಗದ ಕವಿಗಳ ವಿಷಯವನ್ನು ಸಾಧ್ಯವಾದ ಹಾಗೆ ತಿಳಿದುಕೊಳ್ಳುತ್ತಾ ಬರುವುದೂ ಜೊತೆ ಜೊತೆಗೆ ತೀರಾ ಅವಶ್ಯಕ, ಯಾಕೆಂದರೆ "ವಿಶ್ವ ಸಂಸಾರದಲ್ಲಿ ಒಂದೊಂದು ದೇಶವೂ

ಒಂದೊಂದು ವ್ಯಕ್ತಿಯಂತೆ. ಒಂದೊಂದು ಕಾಲದಲ್ಲಿ ಸಂಸಾರದ ಭರಣಶಕ್ತಿ ಬೇರೆ ಬೇರೆ ದೇಶದಲ್ಲಿ ತೋರಬಹುದು. ಆಗ ಇತರ ದೇಶಗಳು ತಮ್ಮ ಜೀವನವನ್ನು ಆದೇಶದ ಜೀವನದಿಂದ ಪೋಷಿಸಿಕೊಳ್ಳಬೇಕು. ಈ ಕಾರಣದಿಂದ ಒಂದೊಂದು ಜನಾಂಗವೂ ಇತರ ಜನಾಂಗಗಳ ಉತ್ತಮ ಕಾವ್ಯಗಳನ್ನು ಪಠಿಸುವುದು ಅವಶ್ಯಕ" (ವಿ.ಸಂ.೨. ಪು.೧೮೭) ಎನ್ನುವ ಈ ಮಾತುಗಳು ಈ ಲೇಖನದ ಹೊರಗೂ ಉಳಿದು ಅತ್ಯಂತ ಮಹತ್ವದ್ದೆನಿಸಿಕೊಳ್ಳುತ್ತವೆ. ವ್ಯಾಪಕ ಉದ್ದೇಶದ ಈ ಮಾತುಗಳು ಅವರ ಸಾಹಿತ್ಯ ಸಂಬಂಧವಾದ ಉದಾರ ನಿಲುವಿಗೆ ಸಂಕೇತವಾಗಿದೆ. ವಿಶ್ವ ಸಂಸಾರದ ಅವರ ಕಲ್ಪನೆ ಇಂದಿನ ಜಾಗತೀಕರಣಕ್ಕಿಂತ ಭಿನ್ನವಾಗಿಲ್ಲ. ನಮಗೆ ನಮ್ಮ ಭಾಷೆ, ಸಾಹಿತ್ಯಗಳಷ್ಟೇ ಮುಖ್ಯವಾಗಬಾರದು. ಜಗತ್ತಿನ ಬೇರೆಲ್ಲಾ ಭಾಷೆಯ ಕಾವ್ಯಗಳು, ಸಾಹಿತ್ಯಗಳ ಪರಿಚಯ ಆಸ್ವಾದಗಳಿಂದ ನಮ್ಮದು ಮತ್ತಷ್ಟು ಸಂಪನ್ನವಾಗುತ್ತದೆ; ಅಂಥ ಸಾಹಿತ್ಯ, ಅದಕ್ಕಿಂತಲೂ ಮೀರಿದ ಒಳ್ಳೆಯ ಸಾಹಿತ್ಯದ ಸೃಷ್ಟಿಗೆ ಪ್ರೇರಣೆಯಾಗುತ್ತದೆ ಎಂಬುದು ಅವರ ವಿಮರ್ಶಾ ನಿಲುವುಗಳಲ್ಲಿ ಒಂದಾಗಿದೆ.

ಹಾಫಿಸ್ ಕವಿತೆಗಳ ಭಾವ, ಅರ್ಥ, ಸ್ವರೂಪಗಳ ಸಾಮ್ಯತೆಯನ್ನು ಗಜಲ್ ಮತ್ತು ನಮ್ಮಲ್ಲಿ ಪ್ರಚಲಿತವಾದ 'ಜಾವಳಿ' ಪ್ರಕಾರಗಳಲ್ಲಿ ಕಾಣುತ್ತಾರೆ. ಮೇಲು ನೋಟಕ್ಕೆ ಇವು ಹೆಂಡ, ಹೆಣ್ಣು, ಸುಖ, ವಿಲಾಸಗಳನ್ನು ಪ್ರತಿಪಾದಿಸುವಂತೆ, ಚಾರ್ವಾಕವಾದದಂತೆ ಕಾಣಿಸಿದರೂ ಆಂತರ್ಯದಲ್ಲಿನ ಪಾರಮಾರ್ಥಿಕತೆಯನ್ನು ಗುರುತಿಸುತ್ತಾರೆ. ಆದರೆ ಕಾವ್ಯದ ನಿಜಾರ್ಥವನ್ನು ಗ್ರಹಿಸಲಾರದ ಮಂದಿ ಅವನನ್ನು, ಅವನ ಕಾವ್ಯವನ್ನು ಅನೈತಿಕ, ಅಶ್ಲೀಲಗಳನ್ನು ಪ್ರತಿಪಾದಿಸುವುದೆಂದು ಆಕ್ಷೇಪಿಸಿ, ದೂಷಿಸಿದ್ದನ್ನು ಪ್ರಸ್ತಾಪಿಸಿ, ತಮ್ಮ ಮಾತುಗಳಲ್ಲಿ ಅವನನ್ನು ಸಮರ್ಥಿಸುತ್ತಾರೆ. ಪ್ರತಿಯೊಂದು ಕಾವ್ಯದಲ್ಲಿಯೂ ನೀತಿ ಅರಸುವುದು ತಪ್ಪು. ಅದು ಕುತ್ಸಿತ ಮಾರ್ಗ.... ಕಾವ್ಯವನ್ನು ಕಾವ್ಯವಾಗಿ ತಿಳಿಯಬೇಕೇ ಹೊರತು ಮಾತು ಮಾತಿಗೂ ತತ್ವದ ಅರ್ಥವನ್ನು ಹುಡುಕಲು ಯತ್ನ ಮಾಡಿದರೆ ಉತ್ತಮ ಕಾವ್ಯಕ್ಕೆ ಅಪಾರ್ಥವನ್ನು ಮಾಡಿದ ಹಾಗೆ ಆಗುತ್ತದೆ ಎನ್ನುವುದು ಅವರ ಅಭಿಪ್ರಾಯ. ಹಾಗೆಯೇ ಹಾಫೀಸ್ ಕವಿಯ ಸಂದರ್ಭದಲ್ಲಿ ಮಾತನಾಡುತ್ತಲೇ ಕಾವ್ಯವನ್ನು ಹೇಗೆ ಸ್ವೀಕರಿಸಬೇಕು ಎನ್ನುವುದನ್ನು "ಹಾಫೀಸ್ ಕವಿಯ ಕಾವ್ಯದ ನಿಜವಾದ ಅರ್ಥವನ್ನು ತಿಳಿಯುವುದಕ್ಕೆ ಮೊದಲು ನಾವು ರಾಗ ಸಂಸ್ಕಾರ ಹೀಗೆ ಪ್ರಮುಖವೆಂಬುದನ್ನೂ ಅದಕ್ಕೆ ಕಾವ್ಯ ಒಂದು ಮುಖ್ಯ ಸಾಧನವೆಂಬುದನ್ನೂ ಒಪ್ಪಬೇಕು. ಹಾಗೆ ಒಪ್ಪದೆ ಇದ್ದರೆ ಅವನ ಕಾವ್ಯವನ್ನು ತತ್ವಬೋಧೆಗಾಗಿ ಬರೆದ ಉಪನ್ಯಾಸ ಮಾಲೆಯೆಂದು ನೆನೆದು ಅದನ್ನು ಸಮರ್ಥಿಸುವುದಕ್ಕಾಗಿ ಅವನ ಮಾತುಗಳಿಗೆ ವಿಲಕ್ಷಣವಾದ ಸಂಕೇತವನ್ನು ಆರೋಪಿಸುವೆವು ಅಥವಾ ಕಾವ್ಯ ದುಷ್ಟಕಾವ್ಯವೆಂದು ಅದನ್ನು ಅಲ್ಲಗಳೆವೆವು" –

ಎನ್ನುವ ಈ ಮಾತುಗಳು ಕಾವ್ಯವೊಂದನ್ನು ಓದಬೇಕಾದ ರೀತಿ, ಅರ್ಥೈಸುವಲ್ಲಿ ವಹಿಸಬೇಕಾದ ಎಚ್ಚರಿಕೆಯ ಅಗತ್ಯವನ್ನು ಸೂಚಿಸುತ್ತವೆ.

ಮಾಸ್ತಿಯವರ ವಿಮರ್ಶೆಗಳು ಕೃತಿನಿಷ್ಠ ವಿಮರ್ಶೆಯಾಗುವುದರ ಜೊತೆಗೆ ಮೌಲಿಕವಾದ ಹಲವು ಬಗೆಯ ಸಾಹಿತ್ಯ ಚಿಂತನೆಗಳ, ಅಧ್ಯಯನ ಕ್ರಮಗಳ ಮಾರ್ಗದರ್ಶಿಯಂತೆಯೂ ಕಾಣಿಸುತ್ತವೆ.

ಮಾಸ್ತಿಯವರಿಗೆ ನಮ್ಮವರೇ ಆದ ಲಕ್ಷ್ಮೀಶ, ಮುದ್ದಣ, ಹರಿದಾಸರು, ಆಳ್ವಾರರು, ಜನಪದ ಕವಿಗಳು, ಕಾಳಿದಾಸ, ರವೀಂದ್ರನಾಥ ಠಾಕೂರರು ಎಷ್ಟು ಮುಖ್ಯರೋ, ಆರಿಲಿಯಸ್, ಹಾಫೀಸ್, ಆಗಸ್ಟೀನ್, ಎಪಿಕ್ಟೆಟನ್ ಮೊದಲಾದ ಅನ್ಯದೇಶೀಯ ಕವಿಗಳೂ ಅಷ್ಟೇ ಮುಖ್ಯ. ಯಾರ ಕಾವ್ಯವನ್ನೇ ವಿಮರ್ಶೆಗೆ ತೆಗೆದುಕೊಂಡರೂ ಅವರು ಪ್ರವೇಶಿಸುವುದು ಒಬ್ಬ ರಸಯಾತ್ರಿಯಂತೆ; ಸಹೃದಯನಂತೆ. ಸಂಪೂರ್ಣ ತನ್ಮಯತ್ವದೊಂದಿಗೆ ರಸಾನುಸಂಧಾನಕ್ಕೆ ತೊಡಗುತ್ತಾರೆ. ಜಿಜ್ಞಾಸೆ, ಬೆರಗು, ಮೆಚ್ಚುಗೆಗಳೇ ಅವರ ವಿಮರ್ಶೆಯ ಸ್ಥಾಯಿ ನಿಲುವುಗಳಾಗಿವೆ. ದುಷ್ಟಕಾವ್ಯ, ಒಳ್ಳೆಯಕಾವ್ಯ ಎಂಬ ಭೇದ ದೃಷ್ಟಿಯೊಂದಿಗೆ ನೋಡುವ ಸಾಧ್ಯತೆಯೇ ಇಲ್ಲ. ಅವರು ಆರಿಸಿಕೊಳ್ಳುವ ಕೃತಿಗಳೂ ಜಾಗತಿಕವಾಗಿ ಪ್ರಸಿದ್ಧವೂ, ಪ್ರಮುಖವೂ ಮಹೋನ್ನತವೂ ಆಗಿರುವಂಥವುಗಳೇ. ವಿಮರ್ಶೆ ಮಾಡಬೇಕೆಂಬ ಮನಸ್ಸಿಗಿಂತಲೂ ವಿಮರ್ಶೆ ಮಾಡ ಹೊರಟ ಕಾವ್ಯದ ಸೊಬಗು, ಸೌಂದರ್ಯ ಸವಿ ಓದುಗರಿಗೆ ತಲುಪಿಸಬೇಕೆನ್ನುವ ಹುನ್ನಾರವೇ ಪ್ರಮುಖವೆನಿಸುತ್ತದೆ.

ಈ ಸಂದರ್ಭದಲ್ಲಿ ಜಿ.ಎಸ್.ಎಸ್. ಅವರು ಮಾಸ್ತಿಯವರ ರುಚಿ ಸಾಮರ್ಥ್ಯದ ಬಗ್ಗೆ ಹೀಗೆ ಹೇಳುತ್ತಾರೆ. "ಒಂದು ಕೃತಿಯ ಬಗ್ಗೆ ರುಚಿ ಹುಟ್ಟಿಸಬೇಕಾದರೆ, ವಿಮರ್ಶಕನಾದವನು ತನ್ನ ರುಚಿ ಸಾಮರ್ಥ್ಯದ ಬಗ್ಗೆ ನಂಬಿಕೆ ಹುಟ್ಟಿಸಬೇಕು. ಮಾಸ್ತಿಯವರ ಎಲ್ಲ ಲೇಖನಗಳೂ ಅವರ ರುಚಿ ಸಾಮರ್ಥ್ಯದ ಬಗ್ಗೆ ವ್ಯಾಖ್ಯಾನಗಳಂತಿವೆ" ಎಂದು ಅವರ ರುಚಿಸಾಮರ್ಥ್ಯ ಬಗ್ಗೆ ಮೆಚ್ಚಿಗೆಯನ್ನು ಸೂಚಿಸಿದ್ದಾರೆ.

ಮಾಸ್ತಿಯವರಿಗೆ ಗಯಟೆ ಕವಿಯ ಮೇಲೆ ಅತಿಯಾದ ಅಭಿಮಾನ. ಕಾವ್ಯ ಕುರಿತಾದ, ನಾಟಕ ಕುರಿತಾದ ಅವರ ಚಿಂತನೆಗಳಿಗೆ ಆಕರ್ಷಿತರಾದ ಮಾಸ್ತಿಯವರು ಅವರ ಚಿಂತನೆಗಳನ್ನು ಢಾಳಾಗಿ ಉದ್ಧರಿಸುತ್ತಾರೆ. ಗಯಟೆ ಅವರ ಚಿಂತನೆಗಳ ಸಂದರ್ಭವನ್ನೂ ವಿವರಿಸುವುದರ ಮೂಲಕ ಅವರ ಚಿಂತನೆಗಳಿಗೆ ಇನ್ನಷ್ಟು ಸ್ಪಷ್ಟವೂ ವ್ಯಾಪಕವೂ ಆದ ಅರ್ಥ ಲಭಿಸುವಂತೆ ಮಾಡಿದ್ದಾರೆ. ಗಯಟೆಯವರ ಮಾತು ಅಥವಾ ಅಭಿಪ್ರಾಯವನ್ನು ಪ್ರಸ್ತಾಪಿಸಿ, ಆ ಅಭಿಪ್ರಾಯ ಹಾಗೆ ಬರಲು ಕಾರಣವೇನೆಂಬುದನ್ನು

ಮಾಸ್ತಿಯವರು ವಿವರಿಸಿ, ನಮಗೆ ಅಭಿಪ್ರಾಯಗಳನ್ನು ಗ್ರಹಿಸಲು ಸಹಕರಿಸುತ್ತಾರೆ. 'ಕಲೆಯಲ್ಲಿ ಸ್ವಾತಂತ್ರ್ಯ' ಕುರಿತು ಗಯಟೆ "ಯಾವಾಗ ನೋಡಿದರೂ ಜನರು ಸ್ವಾತಂತ್ರ್ಯವನ್ನು ಕುರಿತು ಮಾತನಾಡುತ್ತಾರೆ. ಅವರು ಹೇಳುವ ಮಾತೇನೆಂಬುದೆ ನನಗೆ ತಿಳಿಯದೆ ಇದೆ. ನಾವು ಹುಟ್ಟಿದೊಡನೆ ಪ್ರಪಂಚವು ನಮ್ಮ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಇದು ಕೊನೆಯವರೆಗೂ ನಡೆಯುತ್ತಲೇ ಇರುತ್ತದೆ. ನಮ್ಮ ಶಕ್ತಿ ಉತ್ಸಾಹ ಬುದ್ಧಿ ಇವು ಹೊರತು ನಾವು ನಮ್ಮದೆಂದು ಕರೆಯಬಹುದಾದುದು ಏನಿದೆ? ಮಹಾನುಭಾವರಾದ ಪೂರ್ವಿಕರಿಂದಲೂ ಜೊತೆಯವರಿಂದಲೂ ನಾನು ಪಡೆದಿರುವುದನ್ನೆಲ್ಲ ನಾನು ಹೇಳಿದರೆ ನನ್ನದೆಂದು ಉಳಿಯಬಹುದಾದ್ದು ಅತ್ಯಲ್ಪ...... ಎಲ್ಲ ಕಲೆಯಲ್ಲಿಯೂ ಗುರು ಶಿಷ್ಯ ಪರಂಪರೆ ಇದ್ದೇ ಇರುತ್ತದೆ. ಕಲೆಯಲ್ಲಿ ವಿಶಾರದನಾದ ಯಾವನನ್ನು ಕಂಡಾಗಲಾದರೂ ನೋಡು. ಅವನು ತನ್ನ ಪೂರ್ವಿಕರಿಂದ ಗುಣಗಳನ್ನು ಗ್ರಹಿಸಿರುವನೆಂಬುದು ಕಾಣುವುದು" ಈ ಮಾತುಗಳು ಬರಲು, ಅವರಿಗೆ ಕಲೆಯಲ್ಲಿ ಸ್ವಾತಂತ್ರ್ಯವೆಂಬ ಮಾತು ಒಪ್ಪುತ್ತಿರಲಿಲ್ಲ ಎಂದು ಕಾರಣವನ್ನು ವಿವರಿಸುತ್ತಾರೆ. ಮಹಾ ಮೇಧಾವಿ, ಗಂಭೀರ ಚಿಂತಕ ಎಲ್ಲಕ್ಕಿಂತ ಹೆಚ್ಚಾಗಿ ಪಾಶ್ಚಾತ್ಯ ಸಾಹಿತ್ಯ ಸಾಮ್ರಾಜ್ಯದ ಚಕ್ರವರ್ತಿ ಎಂದು ಗುರುತಿಸಿಕೊಂಡ ಇವರನ್ನು ಭಾರತದ ಕಾಳಿದಾಸ, ಇಂಗ್ಲೆಂಡಿನ ಷೇಕ್ಸ್‌ಪಿಯರ್ ಜೊತೆಗೆ ಸಮೀಕರಿಸಿ ಮೆಚ್ಚುಗೆ ಸೂಸುತ್ತಾರೆ.

ಮುಕ್ತ, ಸುಹೃದ್ ಮನಸ್ಸಿನ ಮಾಸ್ತಿಯವರಿಗೆ ಕಾಳಿದಾಸನ 'ಮೇಘ ಸಂದೇಶ'ದಲ್ಲಿ ಕಾಳಿದಾಸನ ಹೃದಯದ ಸುಂದರ ಭಾವಚಿತ್ರ ಕಾಣಿಸುತ್ತದೆ. ಅವನ ದೇಶಪ್ರೇಮ ಧರ್ಮ ಪ್ರೀತಿ, ದೈವಭಕ್ತಿ, ಉದಾರ ಹೃದಯ, ಸೌಂದರ್ಯ ಪ್ರೀತಿ, ರಸಿಕತೆ, ಪಾಂಡಿತ್ಯ, ಕಲಾಕೌಶಲ್ಯ ಇತ್ಯಾದಿ ಗುಣಮೌಲ್ಯಗಳ ರಾಶಿಯೇ ಇವರನ್ನು ತಲೆದೂಗಿಸುವಂತೆ ಮಾಡಿದೆ.

ಇನ್ನು ಮುದ್ದಣ, ಲಕ್ಷ್ಮೀಶನ ಬಗೆಗಂತೂ ಹೇಳಬೇಕಾದ್ದೇ ಇಲ್ಲ. ಮುದ್ದಣನ ರಾಮಾಶ್ವಮೇಧದ ಸನ್ನಿವೇಶ, ಸಂದರ್ಭಗಳ ವರ್ಣನೆಯ ಸೌಂದರ್ಯವನ್ನು, ವ್ಯಾಖ್ಯಾನಿಸುವ ಪರಿಯಂತೂ ಅದ್ಭುತವೆನಿಸುತ್ತದೆ. ಗುಣಗ್ರಾಹಿತ್ವ ರಸ ಗ್ರಾಹಿತ್ವದ ಮನಃಸ್ಥಿತಿಯಲ್ಲಿ ವಿಮರ್ಶೆ ಬರೆಯ ಹೊರಟಾಗ ಕೆಲವೊಮ್ಮೆ ಅತಿಭಾವುಕತೆಯಲ್ಲಿ ಯಾವ ದೋಷಗಳೂ ದೃಷ್ಟಿಗೆ ಬೀಳುವುದಿಲ್ಲ. ಮನಸ್ಸಿಗೆ ತಟ್ಟುವುದಿಲ್ಲ. ಇವರ ವಿಮರ್ಶೆಯೆಲ್ಲವೂ ರಸವಿಮರ್ಶೆಯೇ ಆಗಿದೆ. ಇದನ್ನು ಕೆಲವರು ಆಕ್ಷೇಪಿಸಿದ್ದೂ ಉಂಟು. ಮಾಸ್ತಿಯವರ ವಿಮರ್ಶೆಯ ಬಗ್ಗೆ, ಅದರಲ್ಲೂ 'ರಾಮಾಶ್ವಮೇಧ' ಕೃತಿ ಸಂದರ್ಭದಲ್ಲಿ ಸಿಪಿಕೆ ಅವರು "ಮುದ್ದಣ ಕವಿಯ ರಾಮಾಶ್ವಮೇಧ' ಪ್ರಬಂಧದಲ್ಲಿ 'ಶ್ರೀನಿವಾಸರ ವಿಮರ್ಶೆ ತೂಕ ತಪ್ಪಿ ಸ್ತೋತ್ರದತ್ತ ವಾಲಿರುವುದು ಆಶ್ಚರ್ಯದ ಸಂಗತಿ.

ವಾಸ್ತವವಾಗಿ ಶ್ರೀರಾಮಶ್ವಮೇಧ' ಕಾವ್ಯದಲ್ಲಿ ಹೊಸತನ ತಕ್ಕಮಟ್ಟಿಗಿದ್ದರೂ ಅದು ಶ್ರೇಷ್ಠ ದರ್ಜೆಯ ಕಾವ್ಯವೇನಲ್ಲ. ಆದರೆ ಶ್ರೀನಿವಾಸರು ಅದೊಂದು ಅದ್ವಿತೀಯ ಮಹಾಕಾವ್ಯವೆಂಬಂತೆ ತೀರ್ಪುಕೊಟ್ಟಿರುವುದು ಅರ್ಥವಾಗದೆ ಸಮಸ್ಯೆಯಾಗಿದೆ" – ಎಂದು ಸ್ವಲ್ಪ ನಿಷ್ಠುರವಾಗಿಯೇ ಟೀಕಿಸುತ್ತಾರೆ. ಡಾ॥ ಎಸ್.ವಿ.ಪರಮೇಶ್ವರ ಭಟ್ಟರೂ ಇದೇ ಅಭಿಪ್ರಾಯವನ್ನು 'ರಾಮಾಶ್ವಮೇಧ' ಕುರಿತ ಲೇಖನದ ಸಂದರ್ಭದಲ್ಲಿ, ವ್ಯಕ್ತಪಡಿಸುತ್ತಾರೆ.

ಕವಿಗಳ ಬಗ್ಗೆ ಒಳ್ಳೆಯ ಮಾತು ಹೇಳುವುದು ತಪ್ಪಲ್ಲವಾದರೂ ಅತಿಯಾದ ವೈಭವೀಕರಣ, ಅತಿರೇಕದ ಮೆಚ್ಚುಗೆಯ ಮಾತುಗಳು ಇಂಥ ಅಭಿಪ್ರಾಯ ಅಥವಾ ಟೀಕೆಗಳಿಗೆ ದಾರಿ ಮಾಡುವುದು ಸ್ವಾಭಾವಿಕವೇ. ಮುದ್ದಣನ ಕಾವ್ಯದ, ಜನರ ಮೆಚ್ಚುಗೆಗೆ ಕಾರಣವನ್ನು ಮಾಸ್ತಿಯವರು ಹೀಗೆ ವಿವರಿಸುತ್ತಾರೆ. "ಇವೆಲ್ಲಕ್ಕಿಂತ ಮುಖ್ಯ ಕಾರಣ ಕತೆಯನ್ನು ಹೇಳುವುದರಲ್ಲಿಯೂ ಪ್ರಕೃತಿ ಸೌಂದರ್ಯವನ್ನು ವರ್ಣಿಸುವುದರಲ್ಲಿಯೂ ಪಾಠಕರ ಹೃದಯದಲ್ಲಿ ವಿವಿಧ ಪರಿಣಾಮಗಳನ್ನು ಉಂಟು ಮಾಡುವುದರಲ್ಲಿಯೂ ಈ ಕವಿಗೆ ಇರುವ ಅಸದೃಶವಾದ ಶಕ್ತಿಯು ಇಲ್ಲಿ ಪೂರ್ಣ ಪರಿಪಾಕ ಹೊಂದಿದೆಯೆನ್ನುವುದು" ಎಂದು ಸಮರ್ಥಿಸುವುದಲ್ಲದೆ ಪ್ರಕೃತಿ ಸೌಂದರ್ಯದ ವರ್ಣನೆಯಲ್ಲಿ, ಪುರಾಣಪಾತ್ರಗಳ ಸ್ವಭಾವ ನಿರೂಪಣೆಯಲ್ಲಿ ಶ್ಲಾಘನೀಯವಾದ ಔಚಿತ್ಯಜ್ಞಾನವನ್ನು ಕೊಂಡಾಡಿ, ಶೈಲಿಯ ಸೊಗಸನ್ನು ರಸ್ಕಿನ್, ಡಿಕೆನ್ಸ್‌ಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮನಾದ್ದು ಎಂಬುದು ಅತಿಶಯೋಕ್ತಿಯ ಮಾತುಗಳಾಗಿವೆ. ಆದರೆ ಈ ಬಗೆಯ ಅತಿರೇಕದ ಉತ್ಸಾಹದ ಮಾತುಗಳು ಎಲ್ಲಾ ಸಂದರ್ಭಗಳಲ್ಲಿಯೂ ಕಾಣಿಸಿಕೊಳ್ಳುವಂಥವೇನಲ್ಲ. ಲಕ್ಷ್ಮೀಶನ ಕತೆಗಾರಿಕೆಯ ಕಲೆಯನ್ನು, ಯುದ್ಧಗಳ ವರ್ಣನಾ ವೈಖರಿಯನ್ನು, ಅವನ ಅದ್ಭುತ ಕವಿತಾಶಕ್ತಿಯನ್ನು ಮುಕ್ತವಾಗಿ ಹೊಗಳಿರುವುದರಲ್ಲಿ ಯಾವುದೇ ಅತಿಶಯೋಕ್ತಿಯಿಲ್ಲ.

ಮಾಸ್ತಿಯವರ ವಿಮರ್ಶೆಯ ನಿಲುವುಗಳಲ್ಲಿ ಅಲ್ಲಲ್ಲಿ ಇಂತಹ ದೋಷಗಳು ಕಾಣಬರುವುದಾದರೂ ಒಟ್ಟಾರೆಯಾಗಿ ಅವರ ವಿಮರ್ಶೆಯನ್ನು ಗಮನಿಸಿದಾಗ, ವಿಮರ್ಶಾ ಪರಂಪರೆಗೆ ಸಂದ ಒಂದು ಮಹತ್ವದ ಕೊಡುಗೆ ಎನ್ನುವುದನ್ನು ಯಾರೂ ಅಲ್ಲಗಳೆಯಲಾರರು.

ಮಾಸ್ತಿಯವರ ಲೇಖನಗಳು ವಿಮರ್ಶಾ ಸಂಪುಟಗಳಲ್ಲಿ ವಿಮರ್ಶೆ ಹೆಸರಿನಲ್ಲಿ ಸೇರ್ಪಡೆಯಾಗಿದ್ದರೂ, ಮಾಸ್ತಿಯವರೇ ಹಲವು ಕಡೆ ತಮ್ಮ ಲೇಖನಗಳಲ್ಲಿ, ಉಪನ್ಯಾಸಗಳೆಂದೇ ಪ್ರಸ್ತಾಪಿಸುತ್ತಾರೆ.

ಮಾಸ್ತಿಯವರ ವಿಮರ್ಶೆಗಳ ಮೌಲಿಕತೆ, ಪ್ರಸ್ತುತತೆಯ ಚರ್ಚೆ ಮುಖ್ಯವಲ್ಲ.

ಕಾಲದಿಂದ ಕಾಲಕ್ಕೆ ವಿಮರ್ಶೆಯ ಸ್ವರೂಪ ವಿಮರ್ಶಾ ಸಿದ್ಧಾಂತಗಳು ಬದಲಾಗುತ್ತಲೇ ಇರುತ್ತದೆ. ಕೃತಿಗಳನ್ನು ಬೇರೆ ಬೇರೆ ಆಯಾಮಗಳಿಂದ ವಿಮರ್ಶಿಸುವ, ಅಧ್ಯಯನ ಮಾಡುವ ಪ್ರವೃತ್ತಿ. ಪ್ರಕ್ರಿಯೆಗಳು ಹೆಚ್ಚಾಗುತ್ತಿವೆ. ಇಂತಹ ಸಂದರ್ಭದಲ್ಲಿ ಮಾಸ್ತಿಯವರ ವಿಮರ್ಶೆಯ ನೆಲೆಗಳು ಅಥವಾ ನಿಲುವುಗಳು ಯಾವ ರೀತಿ ಮಾರ್ಗದರ್ಶನ ನೀಡಬಲ್ಲವು ಎಂಬುದು ಒಂದು ಪ್ರಶ್ನೆಯಾಗಿ ನಿಲ್ಲುತ್ತದೆ. ಮಾಸ್ತಿಯವರದು ಕೃತಿ ಕೇಂದ್ರಿತವಾದ ವಿಮರ್ಶೆಯೇ ಆದರೂ ವಿಮರ್ಶೆಯ ಜೊತೆ ಜೊತೆಗೆ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ಒಳಗೊಳ್ಳುತ್ತಾರೆ. ಕೃತಿಯನ್ನು ಇಡಿಯಾಗಿ ಗ್ರಹಿಸಿ, ವಸ್ತು, ಭಾವ, ಅರ್ಥ, ಸೌಂದರ್ಯ, ರಸನಿರೂಪಣಾ ಕೌಶಲ್ಯದ ಕಡೆ ಹೆಚ್ಚಿನ ಒತ್ತು ನೀಡುತ್ತಾರೆ. ತಾವು ಅನುಭವಿಸಿದ ರಸಾನುಭೂತಿ, ಕಾವ್ಯಾನುಭೂತಿಯನ್ನು ಸಮರ್ಥವಾಗಿ ಓದುಗರಿಗೆ ತಲುಪಿಸಬೇಕೆನ್ನುವ ಪ್ರಯತ್ನಗಳೇ ಅವರ ವಿಮರ್ಶೆಯ ಕ್ರಮವನ್ನು ರೂಪಿಸುತ್ತವೆ. ಎಲ್ಲರೂ ಗ್ರಹಿಸಿದಂತೆ ಅವರದು ವರ್ಣನಾತ್ಮಕ, ವ್ಯಾಖ್ಯಾನಾತ್ಮಕ ತೌಲನಿಕ ವಿಮರ್ಶೆಗಳಾಗಿವೆ. ಇನ್ನೂ ಒಂದು ರೀತಿಯಲ್ಲಿ ಹೇಳುವುದಾದರೆ ನಿದರ್ಶನಾತ್ಮಕ ಅಥವಾ ಪ್ರಾತ್ಯಕ್ಷಿಕೆಯ ಸ್ವರೂಪದ್ದಾಗಿದೆ.

'ವಿಮರ್ಶೆ'ಯ ಸ್ವರೂಪ ಚಿಂತನೆ, ವಿಮರ್ಶೆಯ ನಿರೀಕ್ಷೆಗಳು, ನಿಲುವುಗಳು ಕುರಿತು ತಮಗೆ ತಾವೇ ರೂಪಿಸಿಕೊಂಡ ರೀತಿಯಲ್ಲಿ ಅವರ ವಿಮರ್ಶಾ ಪ್ರಬಂಧಗಳಿವೆಯೆನ್ನುವುದು ವಾಸ್ತವ ಸತ್ಯ. ವಿಮರ್ಶೆಯ ಕಾರ್ಯಕುರಿತ ಲೇಖನವೊಂದೇ ಸಾಕು. ಅವರ ವಿಮರ್ಶಾ ದೃಷ್ಟಿಕೋನವನ್ನು ಸಮರ್ಥಿಸಲು.

ಒಟ್ಟಿನಲ್ಲಿ ಹೇಳುವುದಾದರೆ ಅವರ ವಿಮರ್ಶಾ ಲೇಖನಗಳು ಅವರು ಅಪೇಕ್ಷಿಸುವಂತೆ ಸಾಹಿತ್ಯ, ಕಾವ್ಯಗಳಲ್ಲಿ ಅಭಿರುಚಿ ಮೂಡಿಸುವಲ್ಲಿ. ಸಾಹಿತ್ಯದ ಅನುಭವವನ್ನು ತಿಳುವಳಿಕೆಯನ್ನು ವಿಸ್ತರಿಸುವಲ್ಲಿ, ಉತ್ತಮ ಸಾಹಿತ್ಯ, ಕಾವ್ಯಗಳನ್ನು ಗುರುತಿಸುವಲ್ಲಿ, ವಿಶ್ವ ಸಾಹಿತ್ಯದ ಮೇರು ಲೇಖಕರನ್ನು, ಅವರ ಕಾಲ, ದೇಶ, ಸಮಾಜ, ಸಂಸ್ಕೃತಿಗಳ ಒಂದು ಸ್ಥೂಲ ಪರಿಚಯದ ಮೂಲಕ ನಮ್ಮ ಅರಿವನ್ನು ವಿಸ್ತರಿಸಿಕೊಳ್ಳುವಲ್ಲಿ ಅತ್ಯಂತ ಸಹಕಾರಿಯಾಗಿವೆ.

ವಿಮರ್ಶೆಯ ಭಾಷೆಯಂತೂ ನೇರ, ಸರಳ, ಸ್ಪಷ್ಟವಾಗಿ, ಯಾವುದೇ ಕ್ಲೀಷೆಗಳಿಲ್ಲದ ಕಥನ ನಿರೂಪಣೆಯ ಶೈಲಿಯಲ್ಲಿದ್ದು, ಅನೇಕ ಸಲ ಲೇಖನಗಳ ಆರಂಭ ಅವರ ಕತೆಗಳನ್ನು ನೆನಪಿಗೆ ತರುತ್ತವೆ.

ಮಾಸ್ತಿಯವರೊಬ್ಬ ಮೇರು ಸಾಹಿತಿ. ಇಂತಹ ಸಾಹಿತಿ ವಿಮರ್ಶೆಯ ಪರಿಕಲ್ಪನೆಯೇ ಪ್ರಚಲಿತವಿರದಿದ್ದ ಕಾಲದಲ್ಲಿ ವಿಮರ್ಶಕರಾಗಿ ತಮ್ಮ ವಿಮರ್ಶೆಯ

ಸಿದ್ಧಾಂತಗಳನ್ನು ಸ್ವಚಿಂತನೆಯ ನೆಲೆಯಿಂದ ಪ್ರತಿಪಾದಿಸಿದ್ದೇ, ವಿಮರ್ಶಾ ಕ್ಷೇತ್ರದಲ್ಲಿ ಅವರಿಗೊಂದು ಐತಿಹಾಸಿಕ ಮಹತ್ವದ ಸ್ಥಾನವನ್ನು ಕಲ್ಪಿಸಿಕೊಟ್ಟಿದೆ.

ಅವರ ವಿಮರ್ಶೆಯ ಮಾತುಗಳು ಓದುಗರನ್ನು ದೃಷ್ಟಿಯಲ್ಲಿರಿಸಿಕೊಂಡೇ ಹೊರಡುತ್ತವೆ. ತಾನು ಓದುವ\ಓದುತ್ತಿರುವ ಕಾವ್ಯಗಳನ್ನು ಓದುಗರೂ ಓದಬೇಕೆನ್ನುವ ಹಂಬಲ, ಅಭಿಪ್ರಾಯಗಳನ್ನು ಸುಮಾರು ಲೇಖನಗಳಲ್ಲಿ ಸೂಚಿಸಿದ್ದಾರೆ. ಆದ್ದರಿಂದಲೇ ಅವರ ಲೇಖನಗಳು ಓದುಗರಿಗೆ ಅರ್ಥವಾಗಲೆಂದೇ ವರ್ಣನಾತ್ಮಕವೂ, ವ್ಯಾಖ್ಯಾನಾತ್ಮಕವೂ ಆಗಿ ರೂಪಾಂತರಗೊಳ್ಳುತ್ತವೆ.

ಮಾಸ್ತಿಯವರ ವಿಮರ್ಶೆಗಳು ಅವರವರ ಭಾವಕ್ಕೆ ಗ್ರಹಿಕೆಗೆ ತಕ್ಕಂತೆ ವಿಮರ್ಶೆಗೆ ಒಳಗಾಗಿವೆ. ಒಬ್ಬರಿಗೆ ಮಾಸ್ತಿಯವರ ವಿಮರ್ಶೆ ಸಾಂಸ್ಕೃತಿಕ ರೂಪದ್ದಾಗಿ ಕಂಡರೆ ಮತ್ತೆ ಕೆಲವರಿಗೆ 'ರಸರೂಪಿ'ಯಾಗಿ ಕಾಣಿಸುತ್ತದೆ. ಒಂದಂತೂ ನಿಜ. ಮಾಸ್ತಿಯವರ ವಿಮರ್ಶಾ ಜಗತ್ತು ವಿಸ್ತಾರವಾದ ಸಾಹಿತ್ಯಾಧ್ಯಯನ, ಸಾಂಸ್ಕೃತಿಕ, ಸಾಮಾಜಿಕ ಪ್ರಜ್ಞೆ, ಬದುಕಿನ ಒಳನೋಟಗಳು ಮುಂತಾದವುಗಳನ್ನೆಲ್ಲಾ ಒಳಗೊಳ್ಳುತ್ತದೆ.

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೩. ಉದಯಾದಿತ್ಯಾಲಂಕಾರಂ: ವಿನೂತನ ಸಂಪಾದಿತ ಕೃತಿ

–ಡಾ॥ ದೊಡ್ಡರಂಗೇಗೌಡ*

ಕನ್ನಡ ಈಗ ವಿಶ್ವಮುಖಿ; ಅದು ಎಂದೆಂದೂ ಜ್ಞಾನಮುಖಿ ಭಾಷೆ; ಪ್ರಾಚೀನ ಕಾಲದಿಂದಲೂ ನಮ್ಮ ನಲ್ಮೆಯ ಕನ್ನಡ ಶಾಸ್ತ್ರಮುಖಿ. ಅದಕ್ಕೆ ದೇಸಿ ಬೇರುಗಳಿವೆ. ಸಾಧನೆಯ ಸಾವಿರದ ಬಿಳಲುಗಳಿವೆ. ಇಂದು ಕನ್ನಡ ದೊಡ್ಡ ಆಲದ ಮರದ ಹಾಗೆ ಬಹಳಷ್ಟು ವಿಶಾಲ; ವಿಸ್ತಾರ ಕ್ಷೇತ್ರವನ್ನು ಆವರಿಸಿಕೊಂಡಿದೆ. ಬಲ್ಲವರೇ ಬಲ್ಲರು ಬೆಲ್ಲದ ಸವಿಯ; ಪಂಡಿತರು ನಿಜಕ್ಕೂ ಬಲ್ಲರು ಕನ್ನಡದ ಸತ್ವಶಾಲಿ ಹೃದಯದಾಂತರ್ಯ.

ಕನ್ನಡ ಅಲಂಕಾರ ಗ್ರಂಥಗಳು ಪ್ರಕಾಶಿತವಾಗಿವೆ. ನಮ್ಮ ವಿದ್ವಾಂಸರುಗಳು ಅವುಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲಿದ್ದಾರೆ. ಈಗಾಗಲೇ ಅವು ಪ್ರಕಾಶಿತವಾಗಿವೆ, ನಿಜ. ಆದರೆ ವಿಶೇಷಜ್ಞರಾದ ವಿಬುಧರಿಂದ ಅತಿಶಯವಾದ ರೀತಿಯಲ್ಲಿ ಅವುಗಳ ಪರಿಶೋಧನೆಗೆ ಗುರಿಯಾಗಿಲ್ಲ ! ಇಂಥ ವಿಷಮ ಸನ್ನಿವೇಶದಲ್ಲಿ ನನ್ನ ನಲ್ಮೆಯ ಗುರುಗಳೂ, ಸಹೃದಯ ವಿಮರ್ಶಕರೂ, ಶ್ರೇಷ್ಠ ಪ್ರಾಧ್ಯಾಪಕರೂ ಆದ ಪ್ರೊ॥ ಸಿ. ಮಹಾದೇವಪ್ಪನವರು ನಿರಂತರವಾಗಿ ಸಂಶೋಧನಾ ಕಾರ್ಯದಲ್ಲಿ ತಮ್ಮ ಇಡೀ ಬದುಕನ್ನೇ ತೊಡಗಿಸಿಕೊಂಡಿರುವುದು ಪ್ರಶಂಸನೀಯ.

“ಸಾಹಿತ್ಯ ವಿದ್ಯೋದಯ”ನೆಂದು ಖ್ಯಾತಿ ಗಳಿಸಿದವನು ಕವಿಯಾದ ಉದಯಾದಿತ್ಯ. ಸ್ವತಃ ಕವಿಯೇ ತನ್ನ ಗ್ರಂಥದ ಬಗ್ಗೆ ನಿಖರವಾಗಿ ಹೇಳಿಕೊಂಡಿದ್ದಾನೆ. ಅವನದೇ ಮುಕ್ತ ಹೇಳಿಕೆ ಹೀಗಿದೆ : “ಕಾವ್ಯಾಲಂಕಾರದೋಳ್ ಸಮಸ್ತಾಧಿಕಾರ” ಅವನ ಗ್ರಂಥಾಂತ್ಯದ ಗದ್ಯದಲ್ಲಿ ಈ ಒಕ್ಕಣೆ ಇದೆ.

ವಾಸ್ತವವಾಗಿ, ಕವಿ ‘ಉದಘ’ ಇವನು. ಅಂದರೆ ಉದನೃಪ. ಪೂರ್ಣ ಹೆಸರು:

* ‘ಶ್ರೀ ಸನ್ನಿಧಿ’ ನಂ. ೧೪೦, ೩ನೇ ಮುಖ್ಯರಸ್ತೆ, ಕತ್ತರಿಗುಪ್ಪೆ ಪೂರ್ವ, ಬನಶಂಕರಿ ೩ನೇ ಹಂತ, ಬೆಂಗಳೂರು–೫೬೦ ೦೮೫. ಜಂಗಮವಾಣಿ : ೯೯೦೦೨ ೫೩೪೯೫.

ಉದಯಾದಿತ್ಯ. ಈ ಉದಯಾದಿತ್ಯ ರಾಜನು ಅಲಂಕಾರ ಲಕ್ಷಣಗಳನ್ನು ಸ್ವಾತ್ಮ ಸಂಗತಿಗಳ ಲಕ್ಷ್ಯಗಳಿಂದ ಅಂದಗೊಳ್ಳುವಂತೆ ಮಾಡಿದ್ದಾನೆ.

ಸ್ವತಃ ಕವಿ ಉದಯಾದಿತ್ಯ ಏಕೆ ತನ್ನನ್ನು 'ಸುಕವಿರತ್ನಾಭರಣ' ಎಂದು ಹೇಳಿಕೊಂಡಿದ್ದಾನೆಂದರೆ–ತನ್ನ ಅಲಂಕಾರ ಶಾಸ್ತ್ರವನ್ನು ಸ್ವಚಾರಿತ್ರ ಕೃತಿಯನ್ನಾಗಿ ಮಾಡಿದ್ದಾನೆ. ಅಂದರೆ ಅರ್ಥ ಇಷ್ಟೇ: ಕಾವ್ಯಾಲಂಕಾರ ಸಮಸ್ತಾಧಿಕಾರವನ್ನಾಗಿ ಮಾಡಿದುದರಿಂಲೇ ರಾಜ ಉದಯಾದಿತ್ಯ ಸುಕವಿರತ್ನಾಭರಣ!

ಉದಯಾದಿತ್ಯನ ವ್ಯಾಖ್ಯಾನಗಳು ಹಾಗೂ ಕಾವ್ಯ ರಸಸೂತ್ರಗಳು ಹೀಗಿವೆ: ಇಷ್ಟಾರ್ಥವನ್ನು ಅಳವಡಿಸಿದ ಪದಸಮೂಹವೇ ಕಾವ್ಯದ ಶರೀರ; ಚಂಪೂ ಕೃತಿ ಎಂದರೆ–ವಚನ ಕಾವ್ಯ. (ನಾಗವರ್ಮನು ಇದನ್ನೇ 'ಬಾಜನ ಗಬ್ಬ' ಎಂದಿದ್ದಾನೆ.)

ಓದು ಗಬ್ಬದಲ್ಲಿ ಷಡ್ವಿಧ : ೧. ಕಂದ ೨. ವೃತ್ತ ೩. ಅಕ್ಕರ ೪. ಚೌಪದಿ ೫. ಗೀತಿಕೆ ೬. ತ್ರಿಪದಿ.

ಪಾಂಚಾಲ ರೀತಿ : ಓದಲು ಅತಿ ಸುಲಲಿತ; ಗೌಡ ರೀತಿ–ತೇಜಃಪೂರ್ಣ; ಬಹುಸ್ಫುಟ. ಕರ್ಕಶ ವರ್ಣ ಘಟಿತ!

ಶೃಂಗಾರ, ವೀರ, ಕರುಣ, ಹಾಸ್ಯ, ಭಯಾನಕ, ಭೀಭತ್ಸ, ಅದ್ಭುತ, ರೌದ್ರ ಹಾಗೂ ಶಾಂತ ಹೀಗೆ ಒಂಬತ್ತು ರಸಗಳು ಸಮಸ್ತ ರೂಪಕ ಸಮೂಹದ ನಾಟಕಾದಿಗಳ ಜೀವಂತ ದೃಶ್ಯರೂಪದಿಂದ ನೋಕರಿಗೆ ಲಭ್ಯವಾದದ್ದು ಓದಿ ಆಸ್ವಾದಿಸಬಹುದಾದ್ದು– ಉದಯಾದಿತ್ಯ ಕಾವ್ಯ. "ರಸವದ್ ವಸ್ತುತ್ವವೇ ರಸವದಲಂಕಾರ"–ಎಂದರೆ ಯಾವ ರಸವಾದರೂ ನಿಜ ಭಾವದಲ್ಲಿ ಕಂಗೊಳಿಸುವಂತೆ ಹೇಳುವ ರಸ 'ವಸ್ತು'–ಶೃಂಗಾರಾದಿ ನವರಸಗಳಲ್ಲಿ ಯಾವುದೇ ಆಗಲಿ, ಅದು ಸ್ವಸ್ವರೂಪದಿಂದ ಶೋಭಿಸುವ ಹಾಗೆ ಕೃತಿ ಸಂಗತಿಯನ್ನು ನಿರೂಪಿಸುವ ರಸವೇ 'ವಸ್ತು'!

ಓದು ಪುಸಿದು ಒಂದಂ ಪೇಳ್ವ ಅಂದಂ ಅಪಹ್ನುತಿ! 'ಅಪಹ್ನುತಿ' ಎಂದು ನೇರವಾಗಿ ಅಭಿಪ್ರಾಯ ನೀಡಿದ್ದಾನೆ ಕವಿ ಉದಯಾದಿತ್ಯ. ಮೊದಲು ನಿರೂಪಿಸಿದ ವಸ್ತುಸ್ಥಿತಿ–ಅಥವಾ ಸಂಗತಿಯೊಂದನ್ನು ಸಟೆಯೆಂದು ಮರೆಮಾಚಿಸಿ, ಬೇರೊಂದು ಅಂದದಿಂದ ಬಣ್ಣಿಸುವ ಬಗೆಯೇ ಅಪಹ್ನುತಿ!

ಉದಯಾದಿತ್ಯ–ಮದನ ಸತಿಯಾದ ರತಿಗೆಣೆಯಾದ ರಾಜಲ ದೇವಿಯನ್ನು ಸತಿಯಾಗಿ ಉಳ್ಳವನಾಗಿದ್ದ! ಆಕೆಯನ್ನು ಚಿತ್ರಿಸಿದ್ದಾನೆ–ಶಶಿ ಬಿಂಬಾನನೆ! ಸಕಲ ಕಲಾನಿಧಿ!

ಪದಮೊಂದು, ಅನೇಕರ್ಥಂ ಪುದಿದಿರೆ ತಾಂ ಶ್ಲಿಷ್ಟಂ! ಅದುವೇ ಭಿನ್ನಂ; ಅಭಿನ್ನಂ– ಹೀಗೆ ನೇರ ನೇರವಾಗಿ ಸೂತ್ರವನ್ನೇ ಹೇಳುತ್ತಾನೆ ಉದಯಾದಿತ್ಯ. ಒಂದು ಪದ

ಅನೇಕ ಅರ್ಥಗಳನ್ನುಳ್ಳದ್ದಾದರೆ–ಅದು ಶ್ಲಿಷ್ಟಂ. ಅಂದರೆ ಶ್ಲೇಷಾರ್ಥವನ್ನುಳ್ಳದ್ದು!

ಪ್ರೊ॥ ಸಿ. ಮಹಾದೇವಪ್ಪನವರು ವಿದ್ವಾಂಸರು, ಸಂಶೋಧಕರು; ಕವಿ ಹೃದಯವುಳ್ಳ ವಿಮರ್ಶಕರು; ಅವರ ಅಧ್ಯಯನ ಆಳವಾದದ್ದು ಎಂಬುದಕ್ಕೆ ಅವರು ಪ್ರಕಟಿಸಿರುವ "ಉದಯಾದಿತ್ಯಾಲಂಕಾರಂ" ಗ್ರಂಥ ಸಾಕ್ಷಿ. ಕೃತಿಯಲ್ಲಿ ವಿನೂತನ ಹೊಳಹುಗಳಿವೆ; ನಮ್ಮ ಶ್ರೇಷ್ಠ ಸಂಸ್ಕೃತ ಹಾಗೂ ಕನ್ನಡದ ವಿದ್ವಾಂಸರಾದ ಡಾ॥ ಕೆ. ಕೃಷ್ಣಮೂರ್ತಿ ಅವರು ಹೇಳಿರುವ ಹಾಗೆ– "ಇಲ್ಲಿ ವಿನೂತನ ಸಫೂರ್ತಿಯ ಸೆಳಕುಗಳ ವಿಸ್ತರಣೆ ಇದೆ".

ಹಿಂದೆಂದೂ ನಡೆಯದ ಮಹತ್ತರ ಕಾರ್ಯವೊಂದು ಇಲ್ಲಿ ಘಟಿಸಿದೆ; ಈ ಪಂಡಿತ ಶ್ರೇಷ್ಠರು ಆರಂಭದ ಮತ್ತು ಅಂತ್ಯದ ಪದ್ಯಗಳನ್ನು ಆಳವಾದ ಓದಿಗೆ ಗುರಿಯಾಗಿಸಿದ್ದಾರೆ. ಅವರದು ಸೂಕ್ಷ್ಮಗ್ರಾಹಿ ಪ್ರವೃತ್ತಿ. ಪಾಂಡಿತ್ಯಪೂರ್ಣ ಪರಿವೀಕ್ಷಣೆ ಅವರದು. ಗ್ರಂಥಕಾರನ ಕಾಲ, ದೇಶ, ವ್ಯಕ್ತಿತ್ವ ಹಾಗೂ ಶಾಸ್ತ್ರದ ಹಿರಿಮೆಗಳನ್ನು ಅತ್ಯಂತ ಸೂಕ್ತವಾಗಿ ತಿಳಿಯಪಡಿಸಿದ್ದಾರೆ. ವಿಶ್ಲೇಷಣೆಯಲ್ಲಿ ನಿಪುಣರು ನಮ್ಮ ಗುರುಗಳಾದ ಪ್ರೊ॥ ಸಿ. ಮಹಾದೇವಪ್ಪ ಅವರು. ಈ ವಿದ್ವಾಂಸರ ಪ್ರಕಾರ... "ಉದಯಾದಿತ್ಯನು ವೀರಶೈವ ಕವಿ" ಎಂದು ತಮ್ಮ ಸಂಶೋಧನೆಯಿಂದ ಪ್ರಚುರಪಡಿಸಿದ್ದಾರೆ.

ಕ್ರಿ.ಶ. ೧೮೯೪ ರಲ್ಲಿ "ಕರ್ನಾಟಕ ಕಾವ್ಯ ಮಂಜರಿ" ಲೋಕದ ಬೆಳಕನ್ನು ಕಂಡಿತು. ಅಲ್ಲಿ "ಉದಯಾದಿತ್ಯಾಲಂಕಾರ" ಇರುವುದು ವಿದ್ವಾಂಸರಿಗೆ ಗೊತ್ತಾಯಿತು.

ಕವಿ ಉದಯಾದಿತ್ಯನ ತಂದೆ ಸೋಮನಾಥ; ಅವನ ಪರಿಪೂರ್ಣ ಹೆಸರು: ಶ್ರೀನಿಧಿ ಚೋಳ ಮಹಾದೇವಿನಾಥ. ಈ ಸಂಗತಿಯನ್ನು ಆಧರಿಸಿ ಹೇಳಬಹುದಾದ್ದು: ಈ ಉದಯಾದಿತ್ಯನು ಸೋಮನಾಥಾತ್ಮಜ. ಆಗಿನ ಕಾಲಕ್ಕೆ ಉದಯೋರ್ವೀನಾಥ! ಇವನಿಗೆ ಇದ್ದ ಬಿರುದು: ಕವಿತಾ ನರ್ತಕೀ ನೃತ್ಯರಂಗವಾದಕನ್.

ಕವಿಯ ಒಂದು ಮತ್ತು ಎರಡನೇ ಪದ್ಯಗಳನ್ನು ಓದಿ ಗ್ರಹಿಸಿದರೆ–ಈತ ಅಜೇನಾಡ ಜಗನ್ಮೂರ್ತಿ; ವೇದಾತ್ಮ; ಸಕಲ ಮಂಗಳ ನಿಳಯ–ಉದಯಾದಿತ್ಯ.

ಸೌಂದರ್ಯ ನಿಧಿಯಾದ ಚೋಳಮಹಾದೇವಿನಾಥ ಸೋಮನಾಥನ ಸುತ ಉದಯಧರೀತ್ರಿನಾಥ. ಇವನ ಆಶಯ" ಕನ್ನಡ ಸೊಬಗಿನಿಂದ ಲೇಸೆನಿಸುವಂತೆ–ಅಲಂಕಾರ ಶಾಸ್ತ್ರವನ್ನು ವಿಶಿಷ್ಟತೆಯಿಂದ ರಚಿಸುವುದು.

ಪ್ರಸ್ತುತವಲ್ಲದ ನುಡಿ–ಅದು ಅಪ್ರಸ್ತುತ! ಉದಯಾದಿತ್ಯನ ಪ್ರಕಾರ ಪ್ರಸ್ತುತವಲ್ಲದ ವರ್ಣೋಕ್ತಿಯೇ 'ಅಪ್ರಸ್ತುತ'ವೆಂಬ ಅಲಂಕಾರ!

ಔಚಿತ್ಯಪೂರ್ಣವಾದ ಲೋಕ ಚಾರಿತ್ರ್ಯದ ನಿರ್ಮಲತೆ ಹಾಗೂ ರಮಣೀಯವಾದ ಕಾಂತಗುಣದಿಂದಲೂ....ಪದಗತಿಯ ಸಮತೂಕದ ಭಾಷೆಯಿಂದಲೂ, ಕೋಮಲವೂ, ಮೃದುವೂ ಆದ ಸುಕುಮಾರ ಗುಣದಿಂದಲೂ....ನಿಜಾತ್ಮಾನುಗ್ರಹಭಾವದ ಶಾಂತಿಯಿಂದಲೂ, ಸ್ತುತ್ಯವಾದ ವಿಲಕ್ಷಣ ವಿಲಿಪ್ತತೆಯಿಂದಲೂ, ಸಮಸ್ತ ಸೌಖ್ಯಾನುಭವದಿಂದಲೂ, ತೇಜಃಪ್ರತಾಪಾನ್ವಿತ ರೂಪದಿಂದಲೂ, ವ್ಯಾಪಕವಾಗಿ ಸಿದ್ಧಿಸಿದ ಸಾಹಿತ್ಯ ಕೃತಿಯಿಂದಲೂ ಕವಿಯು (ಉದಯಾದತ್ಯ) ನಿಜಕ್ಕೂ 'ಕಾವ್ಯ ಕಿರೀಟಿ'. ರಾಜನಾದುದರಿಂದ 'ನೃಪಚೂಡಾಮಣಿ' ರಾಜ ಕವಿಶ್ರೇಷ್ಠ. ಕವಿ ರಾಜರಿಗೆಲ್ಲಾ ಕಿರೀಟಪ್ರಾಯ ನಮ್ಮ ನಲ್ಮೆಯ ಕನ್ನಡದ ಕವಿ ಉದಯಾದಿತ್ಯ. ಇಂಥ ಉದಯಾದಿತ್ಯ ವಿರಚಿತ ಕಾವ್ಯರೂಪವಾದ ಅಲಂಕಾರ ಗ್ರಂಥದ ಬಗೆಗೆ ವಿದ್ವತ್ಪೂರ್ಣವಾಗಿ ಗ್ರಂಥ ಪ್ರಸ್ತುತಪಡಿಸಿದ ನಮ್ಮ ಅಕ್ಕರೆಯ ಮೇಸ್ಟ್ರು ಪ್ರೊ॥ ಸಿ. ಮಹಾದೇಪ್ಪ ಅವರು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರು. ಅವರದು ಸೂಕ್ಷ್ಮಗ್ರಾಹಿ ಪರಿವೀಕ್ಷಣೆ. ಅದ್ಭುತವಾದ ಸಾಹಿತ್ಯ ಸಾಧನೆ. ಅವರಿಗೆ ಶಿಷ್ಯನ ಹೃನ್ಮನದ ನಮನ.

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೪. ಶರಣ ಸಂಸ್ಕೃತಿ

–ಡಾ॥ ಸಿ. ಪಿ. ಕೃಷ್ಣಕುಮಾರ್*

ಶರಣ ಸಂಸ್ಕೃತಿ ವಿಷ್ಟವೂ ಶ್ರೇಷ್ಠವೂ ಆದದ್ದು; ಅದರ ಕೆಲವು ಮುಖಗಳ ಸ್ಥೂಲವಾದ ನೋಟ ಇಲ್ಲಿ ಉದ್ದಿಷ್ಟವಾಗಿದೆ. ತಿರುಳಿನ ದೃಷ್ಟಿಯಿಂದ ಅದು ಶರಣ ಸಂಸ್ಕೃತಿ; ಅಭಿವ್ಯಕ್ತಿಯ ದೃಷ್ಟಿಯಿಂದ ವಚನ ಸಂಸ್ಕೃತಿ ಕೂಡ. ಮುಖ್ಯವಾದ ಮಾತೆಂದರ, ವಚನ ಸಾಹಿತ್ಯ ಕಾವ್ಯಪ್ರಕಾರವಾಗುವುದಕ್ಕಿಂತ ಮಿಗಿಲಾಗಿ ಜೀವನಪ್ರಕಾರವಾಗಿದೆ; ಅದು ಜೀವನ ವಿಧಾನವೂ ಹೌದು, ಸಂವಿಧಾನವೂ ಹೌದು!

'ಸಂಸ್ಕೃತಿ ಎಂದರೇನು? ಪ್ರಕೃತಿಯಲ್ಲಿದ್ದು, ಪ್ರಾಣಸ್ಥಿತಿಯನ್ನು ಮೀರಿದ್ದು; ಸಂಸ್ಕಾರ ಮೂಲವಾದುದು. 'ಸಮ್ಯಕ್ ಕೃತಿ' ಎಂಬುದರಿಂದ ನಿಷ್ಪನ್ನವಾದುದು 'ಸಂಸ್ಕೃತಿ' ಶಬ್ದ: 'ಸಮ್ಯಕ್ ಕೃತಿ' ಎಂದರೆ ಚೆನ್ನಾಗಿರುವಂತೆ ಮಾಡುವುದು, ಒಳ್ಳೆಯದನ್ನಾಗಿಸುವುದು, ಶುದ್ಧಿಮಾಡಿ ಉತ್ತಮಪಡಿಸುವುದು ಎಂದರ್ಥ.

'ಸಂಸ್ಕೃತಿ'ಗೆ ಸಮಾನಾರ್ಥಕವಾದ ಆಂಗ್ಲಶಬ್ದ 'ಕಲ್ಚರ್' (Culture); ವ್ಯವಸಾಯ ಎಂಬುದು ಅದರ ಮೂಲಾರ್ಥ. ಎಂದರೆ, ಹೃದಯ ಕೃಷಿ, ಒಂದು ಬಗೆಯ ಆತ್ಮಶಿಕ್ಷಣ, ಆತ್ಮಪರಿಪಾಕ ಸಂಸ್ಕೃತಿಯ ಸಲ್ಲಕ್ಷಣಗಳು[೧]. ಮ್ಯಾಥ್ಯೂ ಆರ್ನಾಲ್ಡ್ ಎಂಬ ವಿಮರ್ಶಕ ಸಂಸ್ಕೃತಿಯನ್ನು ಮಾಧುರ್ಯ ಮತ್ತು ದೀಪ್ತಿ ಎಂದು ಸಮರ್ಪಕವಾಗಿ ಲಕ್ಷಣೀಕರಿಸುತ್ತಾನೆ. ಶರಣ ಸಂಸ್ಕೃತಿ ಇವುಗಳ ಮೂರ್ತರೂಪವಾಗಿದೆ. (ಅದು 'ಮಾಧುರ್ಯ' ಏಕೆಂದರೆ, ಶರಣರದು ಮಧುರಭಾವ; ಅದು 'ದೀಪ್ತಿ' : ಏಕೆಂದರೆ, ಅವರ ಪಾಲಿಗೆ "ಮಾತೆಂಬುದು ಜ್ಯೋತಿರ್ಲಿಂಗ". ಶಿವನ ಪ್ರಕಾಶ'ಕ್ಕೆ ಅವರ ಪುರಸ್ಕಾರ).

೧. ಬಸವಣ್ಣನವರನ್ನು ಕುವೆಂಪು "ಮಾನವ ಹೃದಯ ಕ್ಷೇತ್ರದ ದೇವಕೃಷಿಕ" ಎಂದಿರುವುದು ಸ್ಮರಣೀಯ.

* # ೨೨೬೫/೧೯, ಭಾರತಿ, ೬ನೇ ಕ್ರಾಸ್, ೪ನೇ ಮೇನ್, ವಿನಾಯಕನಗರ, ಮೈಸೂರು–೫೭೦ ೦೧೨
ದೂರವಾಣಿ : (೦೮೨೧) ೨೫೧ ೦೫೧೯.

'ಸಂಸ್ಕೃತಿ'ಯೊಡನೆ 'ನಾಗರಿಕತೆ'ಯನ್ನು ನಾವು ಪರಿಗಣಿಸಬೇಕು ಇದೊಂದು ಒಳ್ಳೆಯ ಲಕ್ಷಣೀಕರಣ : "ನಾವು ಏನನ್ನು ತಯಾರಿಸುತ್ತೇವೊ ಅದು ನಾಗರಿಕತೆ; ನಾವು ಏನಾಗಿದ್ದೇವೊ ಅದು ಸಂಸ್ಕೃತಿ!" ಎಂದರೆ, ಸಂಸ್ಕೃತಿ ಎನ್ನುವುದು ಸ್ವಸ್ವರೂಪ. (ಇಂದು ಸಮಾಜದಲ್ಲಿ ನಾಗರಿಕತೆ ಬೇಕಾದಷ್ಟಿದೆ, ಸಂಸ್ಕೃತಿಗೇ ಕೊರತೆ).

ಎರಡು ಮುಖಗಳನ್ನುಳ್ಳದ್ದು, ಸಂಸ್ಕೃತಿ : ಒಂದು ಮುಖ ಮೌಲ್ಯ ಸಮುದಾಯದ ಅನುಷ್ಠಾನದಲ್ಲಿದೆ; ಮತ್ತೊಂದು, ದೈನಂದಿನ ನಡೆ, ನುಡಿಗಳ ಪರಿಯಲ್ಲಿದೆ. ಬದುಕಿನ ಸಣ್ಣ ಸಣ್ಣ ಸಂಗತಿಗಳಲ್ಲೂ, ಕ್ಷಣ ಕ್ಷಣವೂ ವ್ಯಕ್ತವಾಗತಕ್ಕದ್ದು ಸಂಸ್ಕೃತಿ; ಅಂತಿಮವಾಗಿ ಉದ್ದಿಷ್ಟವಾದುದು ಪರಿಪೂರ್ಣತೆಯ ಸಿದ್ಧಿ. ಅದು ಸಹಜದೊಡನೆ ವ್ಯವಹರಿಸುವ ರೀತಿಯ ಮತ್ತು ನೀತಿ; ಸದಾ ಸೂಸಬೇಕಾದ ಆತ್ಮ ಪರಿಮಳ. "Trifles make perfection and perfection is no trifle !" (ಕ್ಷುಲ್ಲಕ ಸಂಗತಿಗಳು ಪರಿಪೂರ್ಣತೆಯನ್ನು ರೂಪಿಸುತ್ತದೆ. ಆದರೆ ಪರಿಪೂರ್ಣತೆ ಕ್ಷುಲ್ಲಕವಲ್ಲ) ಎಂಬುದೊಂದು ಚಮತ್ಕಾರ ಸ್ಪರ್ಶವನ್ನುಳ್ಳ ಅರ್ಥಪೂರ್ಣ ಸೂಕ್ತಿ.

ಶರಣ ಸಂಸ್ಕೃತಿಯನ್ನು 'ಜಂಗಮ ಸಂಸ್ಕೃತಿ' ಎಂದೂ ಸೂಕ್ತವಾಗಿ ಕರೆಯಬಹುದು. 'ಜಂಗಮ' ಎಂದರೆ ವಿಶಾಲಾರ್ಥದಲ್ಲಿ ಸಮಾಜ. ಆದ್ದರಿಂದ, ಶರಣ ಸಂಸ್ಕೃತಿಯೆಂದರೆ, ಸಾಮಾಜಿಕ ಸಮಷ್ಟಿ ಸಂಸ್ಕೃತಿ; 'ದಾಸೋಽಹಂ' ಸಂಸ್ಕೃತಿ, 'ಅಹಂ' ಪ್ರಧಾನವಾದ ಸ್ವಾರ್ಥ ಸಂಸ್ಕೃತಿಯಲ್ಲ. ಶರಣರು ಲಿಂಗಕ್ಕಿಂತ ಜಂಗಮಕ್ಕೆ ಮಿಗಿಲಾದ ಪ್ರಾಶಸ್ತ್ಯ ಕೊಟ್ಟರೆಂಬುದು ಬಹಳ ಗಮನಾರ್ಹವಾದ ಸಂಗತಿ. ತನ್ನೊಂದು ದಿಕ್ಕಿನಿಂದ ನೋಡಿದರೆ ಶರಣರು ಪರದ ಪರವಿಯಲ್ಲಿ ಇವರನ್ನು ಮರೆಯಲಿಲ್ಲ, ಅಧ್ಯಾತ್ಮ ಸಾಧನೆಯ ಭರದಲ್ಲಿ ಸಹಜೀವಿಗಳನ್ನು ಮರೆಯಲಿಲ್ಲ.

ಶರಣ ಸಂಸ್ಕೃತಿಯ ಅತ್ಯುತ್ತಮ ಪ್ರತಿನಿಧಿಯೂ ತವನಿಧಿಯೂ ಆದ ಬಸವಣ್ಣನವರು ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿ ಆಡುವ ಮಾತು ಇಡೀ ಜಗತ್ತಿನ ವಿಚಾರ ಭಂಡಾರಕ್ಕೊಂದು ಮೌಲಿಕವಾದ ಕೊಡುಗೆ; ಶರಣರ ಕೊಡುಗೆ ಮಾತ್ರವಲ್ಲ, ಕನ್ನಡದ್ದು ಕೂಡ. ಸ್ಥಾವರಕ್ಕಳಿವುಂಟು; ಜಂಗಮಕ್ಕಳಿವಿಲ್ಲ !" ಸ್ಥಾವರ ಎಂದರೆ ಜಡವಾದದ್ದು, ಸ್ಥಗಿತವಾದದ್ದು, 'ಜಂಗಮ' ಎಂದರೆ ಚಲನಶೀಲವೂ ಚೈತನ್ಯಾತ್ಮಕವೂ ಆಗಿದ್ದು, ನಿರಂತರವಾದ ಬೆಳವಣಿಗೆಯನ್ನು ಸೂಚಿಸುವಂಥದು. 'ಸ್ಥಾವರ'ದಲ್ಲಿ ಕೊಳೆತು ನಾರುವ ನೀರಿನ ಕೊಳದ ಪ್ರಸಕ್ತಿಯಿದ್ದರೆ, ಜಂಗಮದಲ್ಲಿ ಹರಿಯುವ ಹೊಳೆಯ ಪ್ರಸಕ್ತಿಯಿದೆ. ಶರಣ ಸಂಸ್ಕೃತಿ ಜೀವನದಿಯೂ ಹೌದು, ರತ್ನಾಕರವೂ ಹೌದು !

ಶರಣ ಧರ್ಮ ನಾಸ್ತಿಕ ಧರ್ಮವಲ್ಲದಿದ್ದರೂ ದೈವ ಕೇಂದ್ರಿತವಾದುದಲ್ಲ, ಮಾನವ ಕೇಂದ್ರಿತವಾದುದು. ಎಂಬುದನ್ನು ಮರೆಯಬಾರದು. (ವೈದಿಕ ಧರ್ಮ ಮುಖ್ಯವಾಗಿ ದೈವ ಕೇಂದ್ರಿತವಾದುದರಿಂದಲೇ ಅದರಲ್ಲಿ ಅನೇಕ ಅನರ್ಥಗಳಿಗೆ ಅವಕಾಶ !) ಅದು ಶುದ್ಧವಾಗಿ ಮಾನವೀಯ ಧರ್ಮ; ಮಾನವ ಧರ್ಮ. ಜೀವಪರತೆ, ಜೀವನಪರತೆ, ಜೀವಕಾರುಣ್ಯ ಅದರ ಜೀವಗುಣಗಳು : "ಧಯವೇ ಧರ್ಮದ ಮೂಲವಯ್ಯ ! ಸಕಲ ಜೀವಾತ್ಮರಿಗೆ, ಜೀವಾವಳಿಗೆ ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ" ಎಲ್ಲರಿಗೆ ಲೇಸನ್ನೆ ಬಯಸುವ ಶರಣಧರ್ಮ ಸರ್ವೋದಯ, ಅಂತ್ಯೋದಯಗಳನ್ನು ಅಂತಿಮ ಧ್ಯೇಯವಾಗಿಟ್ಟುಕೊಂಡದ್ದು. ಸುಲಿಗೆ, ಶೋಷಣೆ, ಹಿಂಸೆಗಳಿಗೆ ಅದರಲ್ಲಿ ಆಸ್ಪದವಿಲ್ಲ; ಸಮಾನತೆ, ಸಮದರ್ಶನ ಅದರ ಭದ್ರ ಬುನಾದಿ.

ಶರಣರು ಎಲ್ಲವನ್ನೂ ಅಧ್ಯಾತ್ಮೀಕರಿಸಿದರು, (ಬಸವಾದಿಗಳಲ್ಲಿ ಎಷ್ಟೇ ಪ್ರಖರ ಸಾಮಾಜಿಕ ಪ್ರಜ್ಞೆಯಿದ್ದರೂ ಮೂಲತಃ ಅವರು ಭಕ್ತರೆಂಬುದನ್ನು ನೆನಪಿಡಬೇಕು); ಆದರೆ ಏನೊಂದನ್ನೂ ಅಮಾನವೀಯಗೊಳಿಸಲಿಲ್ಲ. ಅವರು ಮಾನವೀಯ ದೌರ್ಬಲ್ಯಗಳನ್ನು ಸಹಾನುಭೂತಿಪೂರ್ವಕವಾಗಿ ಒಪ್ಪುತ್ತಾರೆ; ಆದರೆ ಅವುಗಳನ್ನು ಗೆಲ್ಲಬೇಕೆಂದು ಒತ್ತಿ ಹೇಳುತ್ತಾರೆ : "ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ ' ನೀನೂ ಎನ್ನಂತೆ ಒಡಲುಗೊಂಡು ನೋಡಾ...! ಎಂಬ ಜೇಡರ ದಾಸಿಮಯ್ಯನ ಉಕ್ತಿ ಗಮನಾರ್ಹವಾದುದು. "ಒಲಿದೆನೆಂಬುದು ಕಾಯಗುಣ !" ಎಂದು ಬಸವಣ್ಣನವರೂ ಉದ್ಗರಿಸುತ್ತಾರೆ. ಕ್ಷಮೆಯೂ ಸಂಸ್ಕೃತಿಯ ಒಂದು ಕುರುಹು : ತಂದೆ ಮಕ್ಕಳಿಗೆ ಮುನಿವಲ್ಲಿ ತಪ್ಪಿಂಗೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯ !" ಎಂಬ ಬಸವೋಕ್ತಿಯೂ ಸ್ಮರಣೀಯ. "ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು" ಎಂದು ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು, ಮನೋವಿಜ್ಞಾನದ ಹಿನ್ನೆಲೆಯಲ್ಲಿ ಹೇಳುತ್ತಾರೆ, ಬಸವಣ್ಣ. ಇಂದ್ರಿಯಗಳ ಅಸಹಜವಾದ, ಬಲಾತ್ಕಾರಪೂರ್ವಕವಾದ ದಮನಕ್ಕೆ ಅವರು ಕರೆಕೊಡುವುದಿಲ್ಲ.

ಭಗವಂತನ ಬಗೆಗೆ ಆತ್ಮೀಯತೆ, ಸಹಜೀವಿಗಳ ಮತ್ತು ಇಹ ಜೀವಿಗಳ ಬಗೆಗೆ ಆತ್ಮೀಯತೆ, ಪರಕೀಯತೆಯ ನಿರಸನ ಶರಣ ಸಂಸ್ಕೃತಿಯಲ್ಲಿ ಎದ್ದುಕಾಣುತ್ತದೆ : "ಇವನಾರವ ಇವನಾರವ ಇವನಾರವ ಎನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯಾ !" ಎಂಬ ಬಸವಣ್ಣನವರ ಮೊರೆಯನ್ನು ಅಗತ್ಯವಾಗಿ; ಲಕ್ಷಿಸಬೇಕು. ಸಮಾನತೆಯೆಂತೊ ಅಂತೆ ಸೋದರತೆ ಶರಣರ 'ಅಣ್ಣ', 'ಅಕ್ಕ' ಎಂಬ

ಪರಸ್ಪರ ಸಂಬೋಧನೆಯಲ್ಲಿ ನಿದರ್ಶಿತವಾಗಿದೆ. (ಅಕ್ಕಮಹಾದೇವಿ, ಮುಕ್ತಾಯಕ್ಕ, ಬಸವಣ್ಣ, ಚನ್ನಬಸವಣ್ಣ, ಅಜಗಣ್ಣ ಇತ್ಯಾದಿ) ದೇವಮಾನವ ಸಂಬಂಧಗಳಿಗಿಂತ ಮಾನವ-ಮಾನವ ಸಂಬಂಧಗಳು ಶರಣರಿಗೆ ಹೆಚ್ಚು ಮುಖ್ಯವಾಗಿದ್ದವು; ಅವುಗಳಲ್ಲಿ ಸೌಹಾರ್ದ, ಸಾಮರಸ್ಯಗಳು ಸಮಾವೇಶಗೊಂಡಿದ್ದುವು.

ಆಡುವ ಮಾತು ಹೇಗಿರಬೇಕು ಎಂಬುದು ಸಂಸ್ಕೃತಿಯಲ್ಲಿ ಒಂದು ಪ್ರಮುಖ ವಿಷಯವಾಗುತ್ತದೆ. ನುಡಿಯಲ್ಲಿ ವಿನಯ, ಪ್ರೀತಿ ಸೌಜನ್ಯವಿರಬೇಕು. ಅದು ಹೃದಯ ಪರಿಪಕ್ವತೆಯ ದ್ಯೋತಕವಾಗುತ್ತದೆ. ಬಸವಣ್ಣನವರ ಅನೇಕ ವಚನಗಳು ವಾಕ್ ಸಂಸ್ಕೃತಿಯನ್ನು ತುಂಬ ಗಮನಾರ್ಹವಾಗಿ ಪ್ರತಿಪಾದಿಸುತ್ತವೆ :

"ಏನಿ ಬಂದಿರಿ; ಹದುಳವಿದ್ದಿರೆ! ಎಂದರೆ,
ನಿಮ್ಮೈಸಿರಿ ಹಾರಿಹೋಹುದೆ ?
"ಕುಳ್ಳಿರಿ" ಎಂದರೆ ನೆಲ ಕುಳಿ ಹೋಹುದೆ ?....

* * *

ಮೃದು ವಚನವೇ ಸಕಲ ಜಪಂಗಳಯ್ಯ,
ಮೃದುವಚನವೇ ಸಕಲ ತಪಂಗಳಯ್ಯ !
ಸದುವಿನಯವೇ ಸದಾಶಿವನೊಲುಮೆಯಯ್ಯ !
'ಅಯ್ಯಾ' ಎಂದರೆ ಸ್ವರ್ಗ, 'ಎಲವೋ' ಎಂದರೆ ನರಕ !

ಇಲ್ಲಿ ಜಪ ತಪ, ಸ್ವರ್ಗ ನರಕಗಳ ಪುನರ್ಮೌಲ್ಯ ಮಾಪನವಿದೆ; ಹಾಗೆಯೇ 'ವಾಙ್ಮಯ ತಪ' ಬಸವಣ್ಣನವರಿಂದ ಉಕ್ತವಾಗಿದೆ.

ಮಾತಿನಲ್ಲಿ ಮೃದುತ್ವವಿರಬೇಕು, ಮಾಧುರ್ಯವಿರಬೇಕು, ನಿಜ; ಆದರೆ ಅಷ್ಟರಲ್ಲೆ ಎಲ್ಲ ಪರ್ಯವಸಾನಗೊಂಡರೆ ಏನು ಪ್ರಯೋಜನ ? ಶರಣರದು ಮಾನಸ ಕೃಷಿ ಮಾತ್ರವಲ್ಲ ಬಹಿರಂಗ ಕೃತಿ ಕೂಡ ! ಅವರು ಆಲೋಚಿಸಿದ್ದನ್ನು, ಆಡಿದ್ದನ್ನು ಮಾಡಿ ತೋರಿಸಿದರು ಎಂಬುದು ಅವರ ಹಿರಿತನ.

ಕಾರ್ಡಿನಲ್ ನ್ಯೂಮನ್ ಎಂಬಾತ Gentleman (ಸಭ್ಯ, ಸಂಭಾವಿತ, ಸುಸಂಸ್ಕೃತ)ನ ಲಕ್ಷಣವನ್ನು ಹೀಗೆ ತಿಳಿಸುತ್ತಾನೆ. "One who never inflicts pain on others (ಇತರರನ್ನು ನೋಯಿಸದವನು). ಇದಕ್ಕೆ ಸಂವಾದಿಯಾಗಿದೆ, ಸಿದ್ಧರಾಮನ ಈ ಉಕ್ತಿ : "ಮನವ ನೋಯಿಸದವನೆ ಪರಮಪಾವನ ನೋಡಾ !"

ಮಾತಿನಿಂದಾಗಲಿ, ಕೃತಿಯಿಂದಾಗಲಿ ಅನ್ಯರಿಗೆ ನೋವುಂಟು ಮಾಡದಿರುವುದೇ ಸಂಸ್ಕೃತಿಯ ಹೆಗ್ಗುರುತು, ಅಗ್ಗಳಿಕೆ. ಶರಣರು ಅಂಥವರು. (ಕೆಲವೊಮ್ಮೆ ಅವರು ಅಪ್ರಿಯವಾಗಿ ಕಟು ನುಡಿಯುವುದಂಟು : ಮನಸ್ಸನ್ನು ನೋಯಿಸುವುದಕ್ಕಾಗಿಯಲ್ಲ, ಹಿತವೆಸಗುವುದಕ್ಕಾಗಿ).

"ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ", "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಮುಂತಾದ ಹೇಳಿಕೆಗಳನ್ನು ಪುನರ್ ಮೌಲ್ಯಮಾಪನ ದೃಷ್ಟಿಯಿಂದ ಪರಿಭಾವಿಸಬೇಕು. ಅವು ವೈಚಾರಿಕ ಮನೋಧರ್ಮಕ್ಕೂ ಉಜ್ವಲ ಸಾಕ್ಷಿ. ಶರಣರು ಇಹವನ್ನು ತಿರಸ್ಕರಿಸಿದವರಲ್ಲ; ಇಹಪರಗಳನ್ನು ಬೆಸೆದವರು; ಅಮರ್ತ್ಯವನ್ನು ಮರ್ತ್ಯಕ್ಕೆ ವರ್ಗಾಯಿಸಿದವರು. 'ಶಿವಲೋಕ ಭ್ರಮೆ'ಗೆ ಅವರು ಉತ್ತೇಜನವೀಯದೆ, "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ !" ಎಂಬ ವಿವೇಕದ ನಿಲುವನ್ನು ಪ್ರಕಟಿಸಿದವರು. ಇಹದ ಪ್ರೀತಿ, ಜೀವನ ಪ್ರೀತಿ, ಇಹ–ಪರ ಸಮನ್ವಯ ಶರಣರ ವಿಶಿಷ್ಟತೆ.

ಶರಣರು ಇಂದ್ರಿಯ ಲೋಲುಪತೆಗೆ ಹಾಸಿಗೆ ಹಾಸದಿದ್ದರೂ, ವೈರಾಗ್ಯವನ್ನು ವೈಭವೀಕರಿಸಲಿಲ್ಲ. ಅವರ ಪಾಲಿಗೆ ದೇಹ ಹೇಯವಲ್ಲ; ಅದೇ ದೇವ ಮಂದಿರ ಧರ್ಮಬದ್ಧ ಕಾಮವನ್ನು ಅವರು ಪುರಸ್ಕರಿಸಿದರು. ನಿದರ್ಶನಕ್ಕೆ, "ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ !" ಎಂಬ ಜೇಡರ ದಾಸಿಮಯ್ಯನ ಧೋರಣೆ ಮನನಯೋಗ್ಯ. ಸಂಸಾರದಲ್ಲಿದ್ದುಕೊಂಡೂ, ಪ್ರಪಂಚದಲ್ಲಿದ್ದುಕೊಂಡೂ ಪರಮಾರ್ಥವನ್ನು ಸಾಧಿಸಬಹುದು ಎಂಬುದು ಶರಣರ ನಿಲುವು. (ಅಪವಾದಗಳಿರಬಹುದು). ಸಂಸ್ಕೃತಿ–ಸಂಸ್ಕೃತಿಗಳ ಸಮನ್ವಯವಿದೆ, ಅವರಲ್ಲಿ.

ಸ್ತ್ರೀ–ಪುರುಷ ಸಮಾನತೆಯನ್ನು ಎತ್ತಿಹಿಡಿದು, ಸ್ತ್ರೀಯರಿಗೆ ಪರಮಗೌರವ ಸಲ್ಲಿಸಿದ್ದು. ಶರಣರ ಹಿರಿಮೆ. ಈ ದಿಶೆಯಲ್ಲಿ "ಹೆಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ !" ಎಂಬ ಅಲ್ಲಮ ಪ್ರಭುವಿನ ಉಕ್ತಿ ತುಂಬ ಬೆಲೆಯುಳ್ಳದ್ದು; ಅಪೂರ್ವವಾದುದು.

ಶರಣರ ವೈಚಾರಿಕತೆಯಂತೆ ಶರಣೆಯರದೂ ಅಚ್ಚರಿತರುತ್ತದೆ. ಉದಾಹರಣೆಗೆ, ಆಯ್ದಕ್ಕಿ ಲಕ್ಕಮ್ಮನ ಈ ಮಾತು ಅತ್ಯಂತ ಗ್ರಾಹ್ಯವಾದುದು : "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ, ಅಯ್ಯಾ ?" ಆಸೆ ರಾಜಕೀಯ 'ಮೌಲ್ಯ !' ಅತ್ಯಾಶೆಗೆ, ದುರಾಶೆಗೆ ವಿರುದ್ಧವಾದದ್ದು ಶರಣರ ಸಂಸ್ಕೃತಿ. ಶರಣರು 'ನಿರಾಶಾಮಹಾತ್ಮ'ರು !

ಕಾಯಕತತ್ತ್ವಕ್ಕೆ, ಕಾಯಕ ಸಂಸ್ಕೃತಿಗೆ ಶರಣರು ಕೊಟ್ಟ ಮಹತ್ತ್ವ ಅಸಾಮಾನ್ಯವಾದುದು. ಈ ಯುಗಕ್ಕೂ ಅದೊಂದು ಘನವಾದ, ಪ್ರಸ್ತುತವಾದ ಕೊಡುಗೆ. ಶರಣರು ಕಟ್ಟಬಯಸಿದ ನವಸಮಾಜದ ಅಡಿಗಲ್ಲೇ ಕಾಯಕ; ಅವರ ಪಾಲಿಗೆ ಅದು ಲೌಕಿಕ ಮೌಲ್ಯವೂ ಹೌದು, ಆಧ್ಯಾತ್ಮಿಕ ಮೌಲ್ಯವೂ ಹೌದು. ಆದರೆ ಕಾಯಕ "ಸತ್ಯ ಶುದ್ಧ ಕಾಯಕ"ವಾಗಿರಬೇಕು ಎಂದು ಹೇಳುವುದನ್ನೂ ಮರೆಯಲಿಲ್ಲ, ವಚನಕಾರರು "ಲಿಂಗವಾದರೂ ಕಾಯಕದೊಳಗು !" ಎಂಬ ಆಯ್ದಕ್ಕಿ ಮಾರಯ್ಯನ ಮಾತು ತುಂಬ ಹುರುಳುಳ್ಳದ್ದು. ನುಲಿಯ ಚಂದಯ್ಯನಂತೂ ಲಿಂಗದ ಕೈಯಲ್ಲೆ ಕಾಯಕ ಮಾಡಿಸಿದ ಮಹಾನುಭಾವ !

ಇಂದಿನ ಹಲವು ಸಮಸ್ಯೆಗಳಿಗೆ ಮದ್ದಾಗಬಲ್ಲ ಆರ್ಥಿಕ ತತ್ತ್ವ ಕೂಡ ಹೌದು, ಕಾಯಕ. ಅದರ ಇನ್ನೊಂದು ಮುಖವೇ ದಾಸೋಹ; ಅದರಲ್ಲೂ ಜಂಗಮದಾಸೋಹ. ಸಮಾನತೆಗೆ, ಜಾತಿ ವಿನಾಶಕ್ಕೆ ಸಹ ನೆರವಾಗುತ್ತದೆ, ಶರಣರ ಕಾಯಕ ಪರಿಕಲ್ಪನೆ.

ಜಾತಿ ವಿನಾಶಕ್ಕೆ, ಅಸ್ಪೃಶ್ಯತೆಯ ನಿವಾರಣೆಗೆ ಶರಣರು ಶ್ರಮಿಸಿದರು. ಅವರಿಗೆ ಮುಖ್ಯವಾಗಿದ್ದುದು ಹುಟ್ಟಿನಿಂದ ಬಂದ ಜಾತಿಯಲ್ಲ; ವ್ಯಕ್ತಿ ಪಾಲಿಸುವ ನೀತಿ. ಅವರ ದೃಷ್ಟಿಯಲ್ಲಿ ಜಾತಿ ಎರಡೇ : ಭಕ್ತ ಮತ್ತು ಭವಿ. (ಗಂಡು, ಹೆಣ್ಣು ಎಂಬ ಭೇದವನ್ನೂ ಅವರು ಮನ್ನಿಸುವುದಿಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲವಾದ್ದರಿಂದ !) "ಕೊಲುವವನೇ ಮಾದಿಗ, ಹೊಲಸ ತಿಂಬುವವನೇ ಹೊಲೆಯ !" ಎಂಬುದು ಬಸವ ಸೂಕ್ತಿ. "ಮಾದಾರ ಚನ್ನಯ್ಯನ ಮನೆಯ ಮಗ ನಾನು!" ಎನ್ನುವಷ್ಟು ದೂರ ಹೋಗಿ, ಅಸ್ಪೃಶ್ಯರೆನಿಸಿಕೊಂಡವರೊಡನೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ, ಬಸವಣ್ಣ.

ಅವರ ಈ ಸಪ್ತಸೂತ್ರ ಸಂಹಿತೆ ಗಮನಾರ್ಹವಾದುದು :

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ

"ಅನ್ಯರಿಗೆ ಅಸಹ್ಯ ಪಡಬೇಡ" ಎನ್ನುವಲ್ಲಿ ಸಮಾನತಾ ತತ್ತ್ವ, ಸೋದರ ಭಾವನೆ ಚೆನ್ನಾಗಿ ಉಕ್ತವಾಗಿದೆ. "ಇದೇ ಬಹಿರಂಗ ಶುದ್ಧಿ" ಎಂಬ ಮಾತು ಯಾಂತ್ರಿಕವಾದ ಹೊರಗಿನ ಮಡಿವಂತಿಕೆಯನ್ನು ನಿರಾಕರಿಸುತ್ತದೆ. ಕಾಗೆಯೊಂದಗುಳ ಕಂಡರೆ, ಕರೆಯದೇ

ತನ್ನ ಬಳಗವನು?..." ಎಂಬ ವಚನದಲ್ಲಿ ಬಸವಣ್ಣನವರು ಸಹಕಾರ ಸಂಸ್ಕೃತಿಯನ್ನು ಅರುಹಿದ್ದಾರೆ, ಅದು ಸರ್ವೋದಯದ ತಳಹದಿ.

ಸಮಾಜದಲ್ಲಿ, ಜಗತ್ತಿನಲ್ಲಿ ಹೇಗೆ ಬದುಕಬೇಕು ? ಇದೊಂದು ದೊಡ್ಡ ಪ್ರಶ್ನೆ. "ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು..." ಎಂದು ಅನನ್ಯವಾಗಿ ಉತ್ತರಿಸುತ್ತಾನೆ, ಅಲ್ಲಮ. (ಆ ವಚನದಲ್ಲಿ ಲೌಕಿಕ, ಲೋಕೋತ್ತರ ಎರಡೂ ಸ್ತರಗಳ ಸಂದೇಶವಿದೆ)" "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದೊಡೆಂತಯ್ಯ ?" ಎಂಬುದು ಅಕ್ಕನ ಪ್ರಶ್ನರೂಪದ ಸಾಂತ್ವನ, ಭರವಸೆ.

ಮನುಷ್ಯ ಮೃಗೀಯತೆಯಿಂದ ಪಾರಾಗಿ, ದೇವತ್ವದತ್ತ ಸಾಗಬೇಕು. ಬದುಕು ಪ್ರಕೃತಿಯಿಂದ ಸಂಸ್ಕೃತಿಗೆ ಯಾತ್ರೆಯಾಗಬೇಕು; ಸುಕೃತಿಗೆ ಕೂಡ. ಎಂತೂ ಅದು ವಿಕೃತಿಯಾಗಕೂಡದು ! ಈ ದೃಷ್ಟಿಯಿಂದ ಶರಣ ಸಂಸ್ಕೃತಿ ಮನನೀಯ ಮತ್ತು ಉಪಾದೇಯವಾದದ್ದು; ಶ್ರೇಯಸ್ಕರವಾದದ್ದು.

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೫. ಕರ್ನಾಟಕದಲ್ಲಿ ರಾಣಿಯರ ದತ್ತಕಗಳು

–ಸಂಧ್ಯಾ. ವಿ.*

ಗಂಡುಮಕ್ಕಳ ಹಂಬಲ ಜನಮನದ ಸಾಧಾರಣ ಬಯಕೆ ಆಗಿರದೆ 'ಗಂಡು ಸಂತಾನವಿಲ್ಲದೆ ಸದ್ಗತಿಯೇ ಇಲ್ಲ' (ಅಪುತ್ರಸ್ಯ ಗತಿರ್ನಾಸ್ತಿಃ) ಎನ್ನುವ ಮಟ್ಟಿಗೆ ಗಂಡು ಮಕ್ಕಳ ಅಪೇಕ್ಷೆ ನಮ್ಮ ನಾಡಿನ ಜನರಲ್ಲಿ ಬಲವಾಗಿ ಬೇರೂರಿದೆ. ಪುರಾಣದಲ್ಲಿ ದಶರಥ, ಹರಿಶ್ಚಂದ್ರ ಮೊದಲಾದವರೆಲ್ಲಾ ಗಂಡು ಮಕ್ಕಳಿಗಾಗಿ ಯಾಗ ಯಜ್ಞಗಳನ್ನು ಮಾಡಿದ್ದನ್ನು ಕಾಣುತ್ತೇವೆ. ಗಂಡು ಮಕ್ಕಳನ್ನು ಪಡೆಯಲೇಬೇಕೆಂಬ ಹಂಬಲ ಬಹುಪತ್ನಿತ್ವಕ್ಕೂ ಎಡೆಮಾಡಿದೆ. ಕಡೆಗೆ ದತ್ತು ಪಡೆದಾದರೂ ಗಂಡುಮಕ್ಕಳನ್ನು ಸಾಕುವುದು ಪ್ರಾಚೀನಕಾಲದಲ್ಲಿ ಸಾಮಾನ್ಯವಾಗಿತ್ತು.

ಅತ್ರಿ ಋಷಿ ತನ್ನ ಒಬ್ಬ ಮಗನನ್ನು ದತ್ತುವಾಗಿ ಕೊಟ್ಟನೆಂದು ತೈತ್ತಿರೀಯ ಉಪನಿಷತ್ತಿನಲ್ಲಿ ಬಂದಿದೆ. ಶುನಶ್ಶೇಪನನ್ನು (ಕೌಶಿಕ) ಆತನ ತಂದೆ ಅಜೀಗರ್ತ ಯಜ್ಞದಲ್ಲಿ ಬಲಿಕೊಡಬೇಕಾದ ಸಂದರ್ಭದಲ್ಲಿ ವಿಶ್ವಾಮಿತ್ರನು ಅವನನ್ನು ದತ್ತು ತೆಗೆದುಕೊಂಡು ಪಾರುಮಾಡಿದ ವಿಚಾರ ಪುರಾಣದಲ್ಲಿದೆ.

ಜನರ ಧಾರ್ಮಿಕ ಮನೋಭಾವದಲ್ಲಿ, ಸ್ವರ್ಗದಲ್ಲಿನ ಪಿತೃಗಳಿಗೆ ಸದ್ಗತಿ ದೊರಕುವುದು ಗಂಡುಮಕ್ಕಳಿಂದಲೇ ಎಂಬ ನಂಬಿಕೆ ಬಲವಾಗಿದೆ. ಅಲ್ಲದೆ ವಂಶವನ್ನು ಮುಂದುವರೆಸುವುದು ಗಂಡುಮಕ್ಕಳೇ ಆದ್ದರಿಂದ ಗಂಡುಸಂತಾನಕ್ಕಾಗಿ ಹಂಬಲಿಸುತ್ತಾರೆ. ಗಂಡು ಮಕ್ಕಳ ದತ್ತಕಗಳಿಗೆ ಜನಸಾಮಾನ್ಯರಲ್ಲಿ ಇಂಥ ಕಾರಣಗಳಿದ್ದರೆ, ಶ್ರೀಮಂತರಿಗೆ ತಮ್ಮ ಆಸ್ತಿಯು ಅನ್ಯರ ಪಾಲಾಗುವುದನ್ನು ತಪ್ಪಿಸಲು, ಆಸ್ತಿಗೆ ವಾರಸುದಾರನೊಬ್ಬ ಬೇಕೆಂಬ ಕಾರಣವೂ ಇದರೊಂದಿಗಿರುತ್ತದೆ. ಉತ್ತರಾಧಿಕಾರಿ ಇಲ್ಲದಿದ್ದಲ್ಲಿ ಶ್ರೀಮಂತನ

*ಸಂಧ್ಯಾ. ವಿ., # ೧೫೩. ೫ನೆಯ ಅಡ್ಡರಸ್ತೆ, ಮೊದಲನೆಯ ಹಂತ, ಆರ್. ಕೆ. ಬಡಾವಣೆ, ಪದ್ಮನಾಭನಗರ. ಬೆಂಗಳೂರು–೭೦. ದೂರವಾಣಿ: ೯೯೮೬೭೧೬೪೮೯೦

ಆಸ್ತಿಯು ರಾಜನ ಬೊಕ್ಕಸಕ್ಕೆ ಸೇರುತ್ತಿತ್ತು. ಮಹಾಭಾರತದ ಪೀಠಿಕಾ ಪ್ರಕರಣದಲ್ಲಿನ ದುಶ್ಯಂತನ ಪ್ರಸಂಗದಲ್ಲಿ ಈ ಪ್ರಸ್ತಾಪವನ್ನು ಕಾಣಬಹುದು.

ಸಂಹಿತೆಗಳಲ್ಲಿ, ದತ್ತಕವನ್ನು ಪಡೆಯಲು ಸ್ಥಳೀಯ ದೊರೆಯ ನಿಯಮವನ್ನು ಪಾಲಿಸತಕ್ಕದ್ದೆಂಬ ಹೇಳಿಕೆಯೂ ಇದೆ. ಮಧ್ಯಯುಗದಲ್ಲಿ ಭಾರತದ ಹಲವೆಡೆಗಳಲ್ಲಿ ಆಯಾ ಪ್ರದೇಶಗಳ ರಾಜರು ಈ ಕುರಿತಾಗಿ ಕೆಲವು ನಿರ್ಬಂಧಗಳನ್ನು ಮಾಡಿದ ಉದಾಹರಣೆಗಳನ್ನೂ ಕಾಣಬಹುದು. ಆಸ್ತಿಯ ಹಸ್ತಾಂತರ ಇದಕ್ಕೆ ಮುಖ್ಯ ಕಾರಣವಾಗಿತ್ತು. ಪೇಶ್ವೆಯವರ ಕಾಲದಲ್ಲಿ ಸಂಬಂಧಪಟ್ಟ ಪ್ರದೇಶದ ಅಧಿಕಾರಿಗಳಿಗೆ ಮುಂಚಿತವಾಗಿ ತಿಳಿಸಿಯೇ ದತ್ತಕ ತೆಗೆದುಕೊಳ್ಳಬೇಕೆಂದು ನಿಯಮ ವಿಧಿಸಿದ್ದರು. ಇವರಿಂದ ದತ್ತಕ-ಪಶ್ಚಾತ್ ಪಡೆದೇ ಮುಂದುವರಿಯಬೇಕಿತ್ತು. ಆದರೆ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರಲಿಲ್ಲವೆಂಬುದು ತಿಳಿದುಬರುತ್ತದೆ.

ಬ್ರಿಟಿಶರ ಸರ್ಕಾರದಲ್ಲಿ ಅವರದೇ ಆದ ಹೊಸ ನಿಯಮಗಳು ಜಾರಿಗೆ ಬಂದವು. ಇವರ ಕಾಲದಲ್ಲಿ ದತ್ತಕ ವಿಧಿಯಲ್ಲಿ ಹತ್ತಾರು ತೊಡಕುಗಳು ಕಾಣಿಸಿಕೊಂಡವು. ಇವರು ಸಾಮಾನ್ಯ ಜನರಿಗಷ್ಟೇ ಅಲ್ಲದೆ, ದೇಶದಲ್ಲಿನ ಸಂಸ್ಥಾನಗಳ ಒಡೆಯರು, ರಾಜಮನೆತನದವರಿಗೂ ಸಹ ನಿಯಮಗಳನ್ನು ಹೇರಲಾರಂಭಿಸಿದರು. ಸಂಸ್ಥಾನಿಕರು ಪೂರ್ವ ಪರವಾನಿಗೆ ಪಡೆದಿರಬೇಕು ಎಂದು ಬ್ರಿಟಿಶರು ಕಟ್ಟುನಿಟ್ಟಾಗಿ ವರ್ತಿಸುತ್ತಿದ್ದರು. "ಸರ್ಕಾರವು ದತ್ತಕವನ್ನು ಮಾನ್ಯ ಮಾಡಬಹುದು. ಅದರರ್ಥ ಅವನು ತಂತಾನೆ ಹಕ್ಕಿನಿಂದ ಆ ಆಸ್ತಿಗೆ ಒಡೆಯನಾಗಲಾರ. ಆ ಹಕ್ಕುದಾರಿಕೆಯನ್ನು ನಿರ್ದಿಷ್ಟವಾಗಿ ಪಡೆದಿರಬೇಕಾಗುತ್ತದೆ" ಎಂಬ ನಿಯಮಗಳನ್ನು ಸೇರಿಸಿದರು.

ಸಂತಾನ ಫಲವಿಲ್ಲದವರು ದತ್ತು ಪಡೆದುಕೊಂಡು, ತಮ್ಮ ಜೀವನದಲ್ಲುಂಟಾದ ಕೊರತೆಯನ್ನು ನೀಗಿಸಿಕೊಳ್ಳುವ ಪರ್ಯಾಯ ಮಾರ್ಗವನ್ನು ಪ್ರಾಚೀನಕಾಲದಿಂದಲೇ ಅನುಸರಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಆದರೆ ಈ ವಿಧಿಯನ್ನು ಪೂರೈಸಿಕೊಳ್ಳಲು ಕೆಲವೊಂದು ನಿಯಮಗಳನ್ನು ಅನುಸರಿಸುವುದು ಅಗತ್ಯವಾಗಿತ್ತು. ಪ್ರಾಚೀನ ಕಾಲದಲ್ಲಿ ಸಂಹಿತೆಗಳನ್ನೂ ಹಾಗೂ ಈ ಸಂಹಿತೆಗಳನ್ನಾಧರಿಸಿ ರಚಿಸಲಾಗುತ್ತಿದ್ದ ರಾಜ್ಯಾಡಳಿತದ ನಿಯಮಾವಳಿಗಳನ್ನೂ ಪಾಲಿಸುವುದು ಅವಶ್ಯಕವಾಗಿತ್ತು. ಇಂದಿಗೂ ಸಹ ದತ್ತಕ ಪಡೆಯಲು ಸರ್ಕಾರವು ಜಾರಿಗೊಳಿಸುವ ನಿಯಮಾವಳಿಗಳನ್ನು ಪಾಲಿಸಿಯೇ ಪರವಾನಿಗೆ ಪಡೆದುಕೊಳ್ಳಬೇಕು.

ಪ್ರಾಚೀನ ಸಂಹಿತೆಗಳಲ್ಲಿ ದತ್ತಕಪದ್ಧತಿ

ಪ್ರಾಚೀನ ಕಾಲದಲ್ಲಿ ಕೆಲವು ಸ್ಮೃತಿ, ಸಂಹಿತೆಗಳು ದತ್ತಕ ವಿಧಿಯನ್ನು ನಿಯಮಿತಗೊಳಿಸಲು ಜಾರಿಯಲ್ಲಿದ್ದವು. ಅವುಗಳಲ್ಲಿ ಮನುಸ್ಮೃತಿ, ವಾಶಿಷ್ಠ,

ಬೋಧಾಯನ, ಶೌನಕ ಮತ್ತು ಸಾಕಲ್ಯ ಇವು ಹೆಚ್ಚು ಪ್ರಸಿದ್ಧವಾದವು. ಅವುಗಳ ಮೇಲೆ ಪ್ರತ್ಯೇಕವಾಗಿ ದತ್ತಕ ವಿಧಿಯನ್ನು ಕುರಿತೇ ಟೀಕಾಗ್ರಂಥಗಳು ರಚಿತವಾಗಿವೆ. ಅವುಗಳಲ್ಲಿ ನೀಲಕಂಠನ 'ಮಯೂಖ', ದೇವಣ್ಣ ಭಟ್ಟನ 'ದತ್ತಕ ಚಂದ್ರಿಕಾ', ನಂದಪಂಡಿತನ 'ದತ್ತಕ ಮೀಮಾಂಸಾ, ಸಂಸ್ಕಾರ ಕೌಸ್ತುಭ" ಈ ಮೂರನ್ನು ಪರಿಶೀಲಿಸಿ ನಿರ್ಣಯಕ್ಕೆ ಬರುವುದು ರೂಢಿಗತವಾಗಿತ್ತು[೧]. ದತ್ತಕ ವಿಧಿಯು ಮೂವರು ಗಂಡಸರನ್ನು ಒಳಗೊಳ್ಳುತ್ತದೆ. ಮಗನನ್ನು ದತ್ತು ಕೊಡುವ ತಂದೆ, ಅದನ್ನು ಸ್ವೀಕರಿಸುವವ ಮತ್ತು ಸ್ವತಃ ದತ್ತು ಹೋಗುವವ. ಈ ಪ್ರಕಾರವಾಗಿ ಗಂಡಸರಿಗೆ ಮಾತ್ರ ಅಧಿಕಾರ ಇರುವ ಈ ಕಾರ್ಯದಲ್ಲಿ ಅಪರೂಪಕ್ಕೊಮ್ಮೆ ಸ್ತ್ರೀಯರೂ ಭಾಗವಹಿಸಿರುವುದರ ಉದಾಹರಣೆಗಳಿವೆ. ದತ್ತು ಹೋಗುವವ ಕೇವಲ ಗಂಡು ಮಗುವಾಗಿರದೆ, ಹೆಣ್ಣು ಮಗುವನ್ನೂ ದತ್ತು ಸ್ವೀಕರಿಸಿರುವುದಕ್ಕೆ ಪುರಾಣದಲ್ಲಿಯೇ ಉದಾಹರಣೆಗಳಿವೆ. ದಶರಥ ತನ್ನ ಮಗಳು ಶಾಂತಾಳನ್ನು ವ್ಯೋಮಪಾದರಾಜನಿಗೆ ದತ್ತು ಕೊಟ್ಟಿರುತ್ತಾನೆ. (ಆನಂತರ ಋಷಿಶೃಂಗನಿಗೆ ಕೊಟ್ಟು ಮದುವೆ ಮಾಡುತ್ತಾನೆ), ಕುಂತಿಭೋಜನು ಶೂರ ಎಂಬುವನ ಮಗಳು ಕುಂತಿ (ಪೃಥೆ)ಯನ್ನು ದತ್ತು ತೆಗೆದುಕೊಂಡಿರುತ್ತಾನೆ[೨].

ಟೀಕಾಗ್ರಂಥವನ್ನು ರಚಿಸಿರುವ ನಂದಪಂಡಿತನು 'ಪುತ್ರ' ಎಂಬುದು ಪುತ್ರಿಗೂ ಅನ್ವಯಿಸಿ ಹೇಳಿದೆ ಎಂದು ಬರೆದಿದ್ದಾನೆ. ಇದರ ಪ್ರಕಾರ ಸ್ತ್ರೀಯರನ್ನೂ ದತ್ತು ತೆಗೆದುಕೊಳ್ಳಬಹುದು. ಟೀಕಾ ಗ್ರಂಥಗಳ ವಿವರಣೆ ಒಂದರ ಹಾಗೆ ಇನ್ನೊಂದು ಇಲ್ಲ. ಇದರಲ್ಲಿ ಪ್ರಾದೇಶಿಕ ಬದಲಾವಣೆಗಳನ್ನು ಮೈಗೂಡಿಸಿಕೊಂಡಿರುವುದು ಒಂದು ಕಾರಣವಾಗಿದೆ.

ಪತಿಯಾದವನು ದತ್ತು ತೆಗೆದುಕೊಳ್ಳಲು ತೀರ್ಮಾನ ಮಾಡಿದರೆ ಮುಗಿಯಿತು. ಆತನ ಸತಿಯ ಸಮ್ಮತಿಯನ್ನು ಪ್ರತ್ಯೇಕವಾಗಿ ಕೇಳುವ ಅಗತ್ಯವಿರಲಿಲ್ಲ. ಆದರೆ ಸತಿಯಾದವಳು ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳುವಂತಿಲ್ಲ. ಪತಿಯ ಮರಣಾ ನಂತರ ಅವಳಿಗೆ ಯಾವ ಧಾರ್ಮಿಕವಿಧಿಗಳಲ್ಲಿಯೂ ಪಾತ್ರವಿಲ್ಲ. ಪತಿಯ ಮರಣಾನಂತರ ಅಪುತ್ರಕಳು ತನ್ನ ಬಂಧುಗಳನ್ನು ಆಶ್ರಯಿಸತಕ್ಕದ್ದು. 'ನ ಸ್ತ್ರೀ ಸ್ವಾತಂತ್ರಂ ಅರ್ಹತಿ' ಎಂದು ಸಂಹಿತೆಗಳು ನುಡಿದಿವೆ.

ರಾಜಮನೆತನಗಳಲ್ಲಿನ ದತ್ತಕಗಳು

ದತ್ತಕವನ್ನು ಪಡೆದುಕೊಳ್ಳಲು ವರ್ಗಬೇಧವಿಲ್ಲದೆ, ಜನಸಾಮಾನ್ಯನಿಂದ ಅರಸನವರೆಗೂ ಅವರವರ ಅಗತ್ಯ ಹಾಗೂ ಅನುಕೂಲಕ್ಕೆ ತಕ್ಕಂತೆ ರಾಜನೀತಿ, ಧಾರ್ಮಿಕ ವಿಧಿಗಳನ್ನನುಸರಿಸಿ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ.

ರಾಜನ ನಂತರ ಅವನ ಹಿರಿಯಪುತ್ರ ರಾಜ್ಯದ ಉತ್ತರಾಧಿಕಾರಿ ಎಂಬುದು ಜಾರಿಯಲ್ಲಿದ್ದ ನಿಯಮವಾಗಿತ್ತು. ಆತನು ಸಮರ್ಥನಲ್ಲದಿದ್ದಾಗ ಇತರ ಮಕ್ಕಳಲ್ಲಿ ಯಾರನ್ನಾದರೂ ಆಯ್ಕೆಮಾಡುವ ಅಧಿಕಾರ ರಾಜನಿಗಿರುತ್ತಿತ್ತು. ರಾಜ ತನ್ನ ಆಳ್ವಿಕೆಯ ಅವಧಿಯಲ್ಲಿಯೇ ಉತ್ತರಾಧಿಕಾರಿಯನ್ನು ನೇಮಿಸಿ, ಯುವರಾಜ ಪಟ್ಟವನ್ನು ಕಟ್ಟುತ್ತಿದ್ದ ಸಂಗತಿ ಸಾಮಾನ್ಯವಾಗಿರುತ್ತಿತ್ತು. ವಾರಸುದಾರರಿಲ್ಲದ ಸಂದರ್ಭದಲ್ಲಿ ಅಣ್ಣ–ತಮ್ಮಂದಿರಿಗೆ ಅಥವಾ ಅವರ ಮಕ್ಕಳಿಗೆ ಸಿಂಹಾಸನ ಲಭಿಸುತ್ತಿತ್ತು. ಕೆಲವು ಪ್ರಕರಣಗಳಲ್ಲಿ ಮಗಳ ಮಗ ಅಥವಾ ಅಳಿಯ ಉತ್ತರಾಧಿಕಾರಿಯಾಗಿರುವುದನ್ನು ಕಾಣುತ್ತೇವೆ. ಗಂಗವಂಶದ ದೊರೆ ಅವನೀತನ ರಾಣಿ ಪುನ್ನಾಟ ವಂಶದ ಸ್ಕಂಧವರ್ಮನ ಮಗಳು. ಈಕೆಯ ಮಗ ದುರ್ವಿನೀತನು ಪುನ್ನಾಟನಾಡಿನ ಸಿಂಹಾಸನವನ್ನು ದೌಹಿತ್ರನಾಗಿ (ಗಂಡುಮಕ್ಕಳ ಸಂತತಿ ಇಲ್ಲವಾದಲ್ಲಿ ಮಗಳ ಹಿರಿಯ ಮಗನಿಗೆ ಸಲ್ಲುವ ಅಧಿಕಾರ) ಏರಿದನೆಂದು ಕೆಲವು ಶಾಸನಗಳು ಸೂಚಿಸುತ್ತವೆ[೩].

ರಾಜನು ಮರಣಿಸಿದ ಮೇಲೆ ಅವನ ವಿಧವಾ ರಾಣಿ ಅಪ್ರಾಪ್ತ ವಯಸ್ಸಿನ ಮಕ್ಕಳು ಅಧಿಕಾರಕ್ಕೆ ಬರುವವರೆಗೂ ರಾಜ್ಯದ ಚುಕ್ಕಾಣಿ ಹಿಡಿದ ಹಲವಾರು ಉದಾಹರಣೆಗಳನ್ನು ವಿಭಿನ್ನ ರಾಜಮನೆತನಗಳಲ್ಲಿ ಕಾಣುತ್ತೇವೆ. ೧೧ನೆಯ ಶತಮಾನದಲ್ಲಿ ಕಿಸುಕಾಡು ನಾಡನ್ನಾಳಿದ ಕದಂಬ ರಾಣಿ ಅಕ್ಕಾದೇವಿ ಇದಕ್ಕೊಂದು ನಿದರ್ಶನ. ಆದರೆ ಅಧಿಕಾರವನ್ನು ವಹಿಸಿಕೊಂಡ ವಿಧವಾ ರಾಣಿಯು ಅಪುತ್ರಕಳಾಗಿದ್ದಲ್ಲಿ ಉತ್ತರಾಧಿಕಾರಿಯನ್ನು ನೇಮಿಸುವ ಸಂದರ್ಭದಲ್ಲಿ ಸಮಸ್ಯೆಯುಂಟಾಗುತ್ತಿತ್ತು.

ವಿಧವೆಯಾದವಳು ದತ್ತು ತೆಗೆದುಕೊಳ್ಳಬಹುದೆ ಎಂಬುದರ ಬಗೆಗೆ ಕೆಲವು ಜಿಜ್ಞಾಸೆಗಳು ನಡೆದಿವೆ. 'ಧರ್ಮಸಿಂಧು'ವಿನ ಪ್ರಕಾರ ಆಕೆ ದತ್ತಕ ತೆಗೆದುಕೊಳ್ಳಬಹುದು. ಆದರೆ 'ದತ್ತಕ ಮೀಮಾಂಸಾ' ರಚಿಸಿರುವ ನಂದ ಪಂಡಿತನು ಇದನ್ನು ಒಪ್ಪುವುದಿಲ್ಲ. "ಗಂಡನ ಒಪ್ಪಿಗೆ ಇಲ್ಲದಂಥ ಯಾವ ಕೆಲಸವನ್ನೂ ಆಕೆ ಮಾಡಬಾರದು" ಎಂಬುದು ಆತನವಾದ. "ಸಾಯುವ ಮುಂಚೆ ಗಂಡನ ಒಪ್ಪಿಗೆ ಪಡೆದಿದ್ದಲ್ಲಿ, ವಿಧವೆ ದತ್ತಕ ತೆಗೆದುಕೊಳ್ಳಬಹುದೆಂದು" ಮಿತಾಕ್ಷರ ಸಂಹಿತೆಯನ್ನು ರಚಿಸಿರುವ ವಿಜ್ಞಾನೇಶ್ವರನು ಹೇಳಿದ್ದಾನೆ.

ಆದರೆ ಮಧ್ಯಕಾಲೀನ ಯುಗದಲ್ಲಿ ರಾಜಮನೆತನಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುವುದನ್ನು ಕಾಣುತ್ತೇವೆ. ಈ ಕಾಲದ ಅನೇಕ ದಾಖಲೆಗಳಲ್ಲಿ ಮಕ್ಕಳಿಲ್ಲದ ರಾಜಕುಟುಂಬ ದತ್ತಕಪಡೆದ ವಿಷಯ ಪ್ರಸ್ತಾಪವಾಗಿದೆ. ಹಲವು ರಾಜಕೀಯ ಸನ್ನಿವೇಶಗಳಲ್ಲಿ ರಾಜನು ಮರಣಿಸಿದ ನಂತರ ಆತನ ವಿಧವಾರಾಣಿಯು ದತ್ತಕಪಡೆದ ಉದಾಹರಣೆಗಳು ಕಂಡುಬರುತ್ತವೆ. ಪತಿ ಮರಣಿಸಿದ ಮೇಲೆ ಅಧಿಕಾರವನ್ನು

ಕೈಗೊಳ್ಳುವುದೇ ಸಾಹಸವೆನಿಸುವ ಸಂದರ್ಭದಲ್ಲಿ ಪ್ರಾಚೀನ ಸಂಹಿತೆಗಳನ್ನು ಮೀರಿ, ರಾಜಕುಟುಂಬದವರ, ಅಧಿಕಾರಿ ವರ್ಗದವರ, ಗುರುಹಿರಿಯರ ಮನ ಒಲಿಸಿ ದತ್ತಕವನ್ನು ಪಡೆದು, ಉತ್ತರಾಧಿಕಾರಿಯನ್ನಾಗಿ ನೇಮಿಸಿದ ರಾಣಿಯರ ಸಾಹಸ ಮೆಚ್ಚತಕ್ಕದ್ದು. ಈ ಸಾಧನೆಯಲ್ಲಿ ಕರ್ನಾಟಕದ ಅರಸಿಯರ ಏಳು–ಬೀಳಿನ ಸಂಕ್ಷಿಪ್ತ ಚಿತ್ರಣವನ್ನು ಲೇಖನದಲ್ಲಿ ಚಿತ್ರಿಸಲಾಗಿದೆ.

ಪತಿಯು ಜೀವಿಸಿದ್ದಲ್ಲಿ ಆತನ ಸತಿಗೆ ಕೆಲವೊಂದು ಅಧಿಕಾರಗಳನ್ನು ಕೊಡಲಾಗುತ್ತಿತ್ತು. ಬಹಳ ಅಪರೂಪಕ್ಕೆ ಮಗನ ಪರವಾಗಿ, ಪತಿಯ ಸಹೋದರನ ಕೈಕೆಳಗೆ ಕೆಲವು ಪ್ರದೇಶಗಳನ್ನಾಳಿದ ರಾಣಿಯರ ಉದಾಹರಣೆಗಳು ಪ್ರಾಚೀನ ಕರ್ನಾಟಕದಲ್ಲಿ ದೊರಕುತ್ತದೆ. ಆದರೆ ದತ್ತು ಸ್ವೀಕರಿಸಿದ ಉದಾಹರಣೆಗಳು ಪ್ರಾಚೀನ ಕರ್ನಾಟಕದ ಇತಿಹಾಸದಲ್ಲಿ ಕಂಡುಬರುವುದಿಲ್ಲ ಅಥವಾ ದಾಖಲಾಗಿಲ್ಲ. ಹಿಂದಿನಕಾಲದಲ್ಲಿ ಪ್ರಚಲಿತದಲ್ಲಿದ್ದ ರಾಜನೀತಿ ಶಾಸ್ತ್ರಗ್ರಂಥಗಳಲ್ಲಿ ಮಹಿಳೆಗೆ ರಾಜ್ಯಾಧಿಕಾರದ ಪ್ರಸ್ತಾಪ ಕಂಡುಬರುವುದಿಲ್ಲ. ಕೌಟಿಲ್ಯನ ಧರ್ಮಶಾಸ್ತ್ರವನ್ನುಸರಿಸಿ ಬರೆಯಲಾದ ಸೋಮದೇವಸೂರಿಯ ನೀತಿವಾಕ್ಯಾಮೃತದಲ್ಲಿ "ಸುತಸೋದರ್ಯಸಪತ್ನ್ಯ ಪಿತೃವ್ಯೆಕುಲ್ಯ ದೌಹಿತ್ರಾಗಂತುಕೇಷು ಪೂರ್ವಪೂರ್ವಾಭಾವೇ ಹ್ಯುತ್ತರೋತ್ತರಸ್ಯ ಪದವಾಪ್ತಿಃ" "ಮಗ, ಸೋದರ, ಸವತಿ, ಸೋದರ, ಚಿಕ್ಕಪ್ಪ, ತನ್ನವಂಶಕ್ಕೆ ಸೇರಿದವನು, ಮಗಳಮಗ, ಈ ಕ್ರಮದಲ್ಲಿ ಮೊದಮೊದಲಿನವರಿಲ್ಲದಿರುವಲ್ಲಿ ತರುವಾಯದವರಿಗೆ ರಾಜ್ಯ ಪ್ರಾಪ್ತಿಯಾಗುವುದು".

ಕರ್ನಾಟಕದ ಇತಿಹಾಸವನ್ನು ಗಮನಿಸುವುದಾದಲ್ಲಿ, ಮೈಸೂರು ಸಂಸ್ಥಾನವನ್ನು ಸ್ಥಾಪಿಸಿದ ಯದುರಾಯ, ಕೃಷ್ಣರಾಯರು ವಿಧವೆ ರಾಣಿ ದೇವಾಜಮ್ಮಣ್ಣಿಯನ್ನು ಈಕೆಯ ವೈರಿಯಾದ ಕಾರುಗಹಳ್ಳಿಯ ಮಾರನಾಯಕನ ತೊಂದರೆಯಿಂದ ತಪ್ಪಿಸುತ್ತಾನೆ; ಅಲ್ಲದೆ ಈಕೆಯ ಮಗಳನ್ನು ವರಿಸುವುದರ ಮೂಲಕ ಮೈಸೂರು ಸಿಂಹಾಸನವನ್ನೇರುತ್ತಾನೆ[೪] ವಿಜಯನಗರದ ಪ್ರಸಿದ್ಧದೊರೆ ಕೃಷ್ಣದೇವರಾಯನ ಮರಣಾನಂತರ ಅವನ ಮಡದಿಯರಾದ ಚಿನ್ನಾದೇವಿ ಹಾಗೂ ತಿರುಮಲಾದೇವಿಯರು ತಮಗೆ ಗಂಡು ಸಂತತಿ ಇರದ ಕಾರಣ ಅಳಿಯಂದಿರಿಗೆ ಅಧಿಕಾರ ದೊರಕಿಸಿ ಕೊಟ್ಟ ವಿಚಾರ ತಿಳಿದು ಬರುತ್ತದೆ.

ತಿರುಮಲದೇವಿಯ ಮಗಳನ್ನು ರಾಮರಾಯನೂ ಚಿನ್ನಾದೇವಿಯ ಮಗಳನ್ನು ಇವನ ಸೋದರ ತಿರುಮಲರಾಯನೂ ಮದುವೆಯಾಗಿರುತ್ತಾರೆ. ಕೃಷ್ಣದೇವರಾಯನ ಕಾಲಾನಂತರ ಆಸ್ಥಾನದಲ್ಲಿ ಕೋಶಾಧಿಕಾರಿಯಾಗಿದ್ದ ಕಲಾಕಂ ತಿಮ್ಮಯ್ಯನು ರಾಮರಾಯ ಹಾಗೂ ತಿರುಮಲರಾಯರನ್ನು ಸೆರೆಮನೆಯಲ್ಲಿರಿಸುತ್ತಾನೆ. ಇದನ್ನು ತಿಳಿದ

ತಿರುಮಲಾದೇವಿ ಹಾಗೂ ಚಿನ್ನಾದೇವಿಯರು ತಮ್ಮ ಅಳಿಯಂದಿರಿಗೆ ನಗರವನ್ನು ಬಿಟ್ಟುಕೊಡುವಂತೆ ಆಜ್ಞೆ ಹೊರಡಿಸುತ್ತಾರೆ. ರಾಜ್ಯದ ಉತ್ತರಾಧಿಕಾರಿಯನ್ನು ನೇಮಿಸುವಲ್ಲಿ ತಮ್ಮ ಅಧಿಕಾರ ಚಲಾಯಿಸಿದ ಕೆಲವು ವಿಚಾರಗಳು ಹಂಡೆ ಅನಂತಪುರನ ವಾರ್ಷಿಕ ಲೆಕ್ಕ ಪತ್ರಗಳಲ್ಲಿ ಮಾಹಿತಿ ದೊರಕಿವೆ. (ಸೊನ್ನಲಾಪುರದ ಹಂಡೆ ಹನುಮಪ್ಪನಾಯ್ಡು)[೫]

ವಿಧವಾ ರಾಣಿಯರ ದತ್ತಕಗಳು

ಕರ್ನಾಟಕದಲ್ಲಿ ಆಡಳಿತನಡೆಸಿದ ರಾಣಿಯರನ್ನು ಕುರಿತು ಅಧ್ಯಯನ ನಡೆಸಿದಾಗ, ಪ್ರಾಚೀನ ಕಾಲಘಟ್ಟದಲ್ಲಿ, ಪತಿಯ ಆಳ್ವಿಕೆಯೊಂದಿಗೆ ತಮ್ಮದೇ ಆದ ಕೆಲವು ಪ್ರದೇಶಗಳಲ್ಲಿ ಆಡಳಿತ ನಡೆಸಿದ ರಾಣಿಯರು ಕಂಡುಬರುತ್ತಾರೆ. ಉದಾಹರಣೆಗೆ ಮುಮ್ಮಡಿ ಅಮೋಘವರ್ಷನ ಮಗಳು ಹಾಗೂ ಗಂಗದೊರೆ ಇಮ್ಮಡಿ ಬೂತುಗನ ಮಡದಿ ರೇವಕನಿರ್ಮ್ಮಡಿ, ರಾಷ್ಟ್ರಕೂಟ ದೊರೆ ನಾಲ್ವಡಿ ಗೋವಿಂದನ ರಾಣಿ ಭಾಗಿಯವ್ವೆ, ರಾಷ್ಟ್ರಕೂಟ ಧ್ರುವನನ್ನು ವರಿಸಿದ್ದ ವೆಂಗಿಚಾಳುಕ್ಯ ರಾಜಕುಮಾರಿ, ಶೀಲ ಮಹಾದೇವಿ ಹೊಯ್ಸಳ ಬಲ್ಲಾಳನ ರಾಣಿಯರಾದ ಚೋಳಮಹಾದೇವಿ, ಉಮಾದೇವಿ, ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ರಾಣಿಯರು ಮೊದಲಾದವರು. ಆದರೆ ಮಧ್ಯಕಾಲೀನ ರಾಜಕೀಯ ಸಂದರ್ಭದಲ್ಲಿನ ರಾಣಿಯರ ಆಡಳಿತವು ಹೆಚ್ಚಾಗಿ ಕಂಡುಬರುವುದು ಪತಿಯ ಮರಣಾನಂತರದಲ್ಲಿಯೇ. ಇಲ್ಲಿ ಸಂಪೂರ್ಣ ರಾಜಕೀಯ ಜವಾಬ್ದಾರಿ ರಾಣಿಯರದೇ ಆಗಿರುತ್ತಿತ್ತು. ಇಂಥ ಸಂದರ್ಭದಲ್ಲಿ ಅಪುತ್ರಕ ವಿಧವಾ ರಾಣಿಯರು ರಾಜ್ಯದ ಉತ್ತರಾಧಿಕಾರಿಗಳನ್ನು ನೇಮಿಸುವಲ್ಲಿ ಯಾವ ಸಮಸ್ಯೆಗಳನ್ನು ಎದುರಿಸಿದರು, ತಮ್ಮ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಂಡರು ಅಥವಾ ಪರಿಸ್ಥಿತಿಯನ್ನು ಎದುರಿಸುವಲ್ಲಿ ಹೇಗೆ ವಿಫಲರಾದರು ಎಂಬುದನ್ನು ವಿಭಿನ್ನ ಮನೆತನಕ್ಕೆ ಸೇರಿದ ಕೆಲವು ರಾಣಿಯರ ವಿಚಾರಗಳನ್ನು ಈ ಪ್ರಬಂಧದಲ್ಲಿ ಗಮನಿಸಲಾಗಿದೆ. ಈ ಸಂದರ್ಭದಲ್ಲಿನ ರಾಣಿಯರು ಕೈಗೊಂಡ ತೀರ್ಮಾನ ಹಾಗೂ ಅದರ ಫಲದ ಆಧಾರದ ಮೇಲೆ ಈ ಕೆಳಗಿನಂತೆ ಚರ್ಚಿಸಬಹುದು.

I. ದತ್ತು ಸ್ವೀಕಾರಮಾಡಿ ಉತ್ತರಾಧಿಕಾರಿಯನ್ನು ಆರಿಸುವಲ್ಲಿ ಯಶಸ್ವಿಯಾದ ರಾಣಿಯರು

II. ದತ್ತು ಸ್ವೀಕರಿಸುವಲ್ಲಿ ದಳವಾಯಿಗಳ/ ರಾಜಪರಿವಾರದ ಇತರರ ತಂತ್ರಗಳಿಗೆ ಈಡಾದವರು

III. ದತ್ತು ಪುತ್ರರಿಗೆ ಅಧಿಕಾರ ಕೊಡಿಸುವಲ್ಲಿ ಯಶಸ್ವಿಯಾಗದ ರಾಣಿಯರು

IV. ಬ್ರಿಟಿಶರ ದತ್ತಕ ನೀತಿಯನ್ನು ಎದುರಿಸಿ ಹೋರಾಡಿದ ರಾಣಿಯರು

I ದತ್ತಕ ಪಡೆದು ಯಶಸ್ವಿಯಾದ ರಾಣಿಯರು

ದತ್ತು ಸ್ವೀಕಾರಮಾಡಿ ಉತ್ತರಾಧಿಕಾರಿಯನ್ನು ಆರಿಸುವಲ್ಲಿ ಯಶಸ್ವಿಯಾದ ಕೆಲವು ರಾಣಿಯರನ್ನು ಕಾಣುತ್ತೇವೆ. ಅವರಲ್ಲಿ ಕೆಳದಿಯ ಚನ್ನಮ್ಮ ಸಮರ್ಥ ರೀತಿಯಲ್ಲಿ ತನ್ನ ಅಧಿಕಾರವನ್ನು ನಿರ್ವಹಿಸಿದ ರಾಣಿಯೆನಿಸಿದ್ದಾಳೆ. ತನ್ನ ಪತಿ, ಕೆಳದಿಯ ಅರಸು ಸೋಮಶೇಖರನಾಯಕನು ಮೃತನಾದಾಗ ರಾಜ್ಯವು ಅಯೋಗ್ಯರ ಪಾಲಾಗುವುದನ್ನು ತಪ್ಪಿಸಲು ತಾನೇ ಸ್ವತಃ ಆಡಳಿತ ಸೂತ್ರ ವಹಿಸುತ್ತಾಳೆ. ಶಾ.ಶ. ೧೫೯೪ರ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಬಹುಳ ದಶಮಿಯಂದು ಭುವನಗಿರಿ ದುರ್ಗದ ಅರಮನೆಯಲ್ಲಿ ಪಟ್ಟಾಭಿಷಿಕ್ತಳಾಗುತ್ತಾಳೆ[೬]. ಪತಿಯನ್ನು ಕಳೆದುಕೊಂಡವಳೂ ಮೇಲಾಗಿ ಅಪುತ್ರಕಳಾಗಿದ್ದ ಚನ್ನಮ್ಮಳು ಅಮಂಗಲೆ, ವಿಧವೆ ಎಂದು ಕಡೆಗಣಿಸಲ್ಪಡದೆ, ಮಠಾಧೀಶರು ಗುರುಹಿರಿಯರ ಗೌರವಾದರಗಳಿಗೆ ಪಾತ್ರಳಾಗಿ ಅವರ ಅನುಗ್ರಹದಿಂದ ಕೆಳದಿ ಸಂಸ್ಥಾನದ ರಾಣಿಯಾಗಿ ವಿಧಿವತ್ತಾಗಿ ಪಟ್ಟಾಭಿಷಿಕ್ತಳಾದದ್ದು ಇತಿಹಾಸದಲ್ಲಿಯೇ ಒಂದು ಅಪೂರ್ವ ಸಂಗತಿಯಾಗಿ ದಾಖಲೆಯಾಗಿದೆ.

ತಾನು ಪಟ್ಟಕ್ಕೆ ಬಂದ ಮರುವರ್ಷವೇ ೧೬೭೪ರಲ್ಲಿ ತನ್ನ ನಂತರ ರಾಜ್ಯಕ್ಕೆ ವಾರಸುದಾರರಿಲ್ಲದ ಕಾರಣ ದತ್ತು ತೆಗೆದುಕೊಳ್ಳಲು ನಿರ್ಧರಿಸುತ್ತಾಳೆ. ಇದರ ಕುರಿತಾದ ದಂತಕಥೆಯೊಂದರ ಪ್ರಕಾರ ರಾಜ್ಯಾಧಿಕಾರಕ್ಕೆ ಅರ್ಹತೆಯುಳ್ಳ ರಾಜಬಂಧುಗಳ ಮಕ್ಕಳನ್ನು ಅರಮನೆಗೆ ಕರೆಸಿಕೊಂಡು ಅರಮನೆಯ ವಿಶಾಲವಾದ ಕೋಣೆಯೊಂದರಲ್ಲಿ ಮಕ್ಕಳು ಬಯಸುವ ನಾನಾ ಆಟಿಕೆಗಳು, ತಿಂಡಿ ಮೊದಲಾದ ವಸ್ತುಗಳನ್ನಿರಿಸಿ ಬರಮಾಡಿಕೊಂಡ ಮಕ್ಕಳಿಗೆ ತಮಗಿಷ್ಟವಾದುದನ್ನು ತೆಗೆದುಕೊಳ್ಳಲು ಹೇಳಿದಾಗ ಹತ್ತುವರ್ಷದ ಬಾಲಕನೊಬ್ಬ ದೊರೆ ಶಿವಪ್ಪನಾಯಕನ ಚಿತ್ರಪಟ, ಒಂದು ವಚನಗ್ರಂಥ ಮತ್ತೊಂದು ಕತ್ತಿಯನ್ನು ಆರಿಸಿಕೊಂಡು, ತಾನು ಆಯ್ದುಕೊಂಡ ವಸ್ತುಗಳ ವಿಚಾರವಾಗಿ ತಾನು ಶಿವಪ್ಪನಾಯಕರಂತಾಗಬೇಕು, ಹೆಚ್ಚು ವಿದ್ಯೆ ಕಲಿಯಬೇಕು ಹಾಗೂ ಶತ್ರುಗಳನ್ನು ನಿಗ್ರಹಿಸಬೇಕೆಂದು ಈ ಮೂರು ವಸ್ತುಗಳನ್ನಾರಿಸಿಕೊಂಡುದುದಾಗಿ ತಿಳಿಸಿ ರಾಣಿಯ ಮೆಚ್ಚುಗೆಗೆ ಪಾತ್ರನಾದನೆಂಬ ದಂತಕಥೆ ಕೇಳಿಬರುತ್ತದೆ. ಇವನಿಗೆ ಬಸವಪ್ಪನಾಯಕನೆಂದು ನಾಮಕರಣ ಮಾಡಿ ಶಾ.ಶ೧೫೯೫ರ ಪರಿಧಾವಿ ನಾಮ ಸಂವತ್ಸರದ ಶ್ರಾವಣ ಶುದ್ಧ ಹದಿನಾಲ್ಕರಂದು ದತ್ತುಸ್ವೀಕಾರ ಮಾಡುತ್ತಾಳೆ[೭]. ಬಸವಪ್ಪನಾಯಕ ತಾಯಿ ಚನ್ನಮ್ಮನ ಪೋಷಣೆಯಲ್ಲಿ ಬೆಳೆದು ದಕ್ಷ ರಾಜನಷ್ಟೇ ಅಲ್ಲದೆ ಉತ್ತಮ ಸಾಹಿತಿಯೂ ಆಗುತ್ತಾನೆ.

ಕೆಳದಿಯ ಚನ್ನಮ್ಮ ಆಡಳಿತ ವಹಿಸಿಕೊಂಡ ಆರಂಭದಲ್ಲಿಯೇ ತನ್ನೆಲ್ಲ ಶತ್ರುಗಳನ್ನೂ ನಿಗ್ರಹಿಸಿ, ತನ್ನ ದತ್ತುಪುತ್ರನಿಗೆ ನಿರಾಯಾಸವಾಗಿ ಅಧಿಕಾರ ದೊರಕಿಸಿಕೊಟ್ಟಳು. ಆದರೆ ಮೈಸೂರಿನ ರಾಣಿ ಲಕ್ಷ್ಮಮ್ಮಣ್ಣಿ ತನ್ನ ಶತ್ರುಗಳನ್ನು ನಿಗ್ರಹಿಸುವುದೇ ದೊಡ್ಡ ಸಾಹಸವಾಗಿತ್ತು.

ಇವಳು ತಾನು ಸ್ವತಃ ಆಡಳಿತ ನಡೆಸುವುದಿರಲಿ, ಸ್ವತಂತ್ರವಾಗಿ ಜೀವಿಸಲೂ ಸಾಧ್ಯವಾಗದೆ ಗೃಹಬಂಧನದಲ್ಲಿದ್ದಳು. ಇಂಥ ಪರಿಸ್ಥಿತಿಯಲ್ಲಿಯೂ ತನ್ನ ದತ್ತುಪುತ್ರನಿಗೆ ಅಧಿಕಾರ ದೊರಕಿಸುವಲ್ಲಿ ಪಟ್ಟ ಇವಳ ಶ್ರಮ ನಿರರ್ಥಕವಾಗಲಿಲ್ಲ. ಲಕ್ಷ್ಮಮ್ಮಣ್ಣಿಯು 'ಕಮಲಾಚಲ ಮಹಾತ್ಮೆ' ಎಂಬ ಗದ್ಯಗ್ರಂಥವನ್ನು ರಚಿಸಿದ ಬೆಟ್ಟದ ಕೋಟೆ ಕತ್ತಿ ಗೋಪಾಲರಾಜೆ ಅರಸಿನವರ ಮಗಳು. ೧೭೬೦ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರನ್ನು ಲಕ್ಷ್ಮಮ್ಮಣ್ಣಿ ಮದುವೆಯಾದ ಕೇವಲ ಆರುವರ್ಷಗಳಲ್ಲಿಯೇ ಕಳೆದುಕೊಳ್ಳುತ್ತಾಳೆ. ಪತಿಯ ಮೊದಲನೆಯ ಮಡದಿ ದೇವಾಜಮ್ಮಣ್ಣಿಯವರ ಮಕ್ಕಳು ನಂಜರಾಜ, ಬೆಟ್ಟದ ಚಾಮರಾಜರೆಂಬ ಗಂಡುಮಕ್ಕಳನ್ನೂ ಹಾಗೂ ದೇವಾಜಮ್ಮ, ಮತ್ತು ದೀಪಾಜಮ್ಮನವರನ್ನು ಲಕ್ಷ್ಮಮ್ಮಣ್ಣಿ ಸ್ವಂತ ಮಕ್ಕಳಂತೆ ಬೆಳೆಸುತ್ತಾಳೆ. ಆದರೆ ಹೈದರ್ ಹಾಗೂ ಟಿಪ್ಪುವಿನ ಕುತಂತ್ರದ ಫಲವಾಗಿ ಈ ಇಬ್ಬರು ಗಂಡು ಮಕ್ಕಳೂ ಅನುಮಾನಾಸ್ಪದ ರೀತಿಯಲ್ಲಿ ದುರ್ಮರಣಕ್ಕೀಡಾಗುತ್ತಾರೆ. ಆದರೆ ಲಕ್ಷ್ಮಮ್ಮಣ್ಣಿ ಅರಿಕುಠಾರದ ದೇವರಾಜ ಮತ್ತು ಹೊನ್ನಾಜಮ್ಮಣ್ಣಿಯವರ ಮಗ ಚಾಮರಾಜನನ್ನು ದತ್ತುವಾಗಿ ಸ್ವೀಕರಿಸಿ, ಇವನಿಗೆ ಖಾಸಾ ಚಾಮರಾಜಒಡೆಯರ್ಎಂದು ನಾಮಕರಣಮಾಡಿ ಸ್ವತಃ ಹೈದರನ ಸಮ್ಮುಖದಲ್ಲಿಯೇ ೧೭೭೬ ಸೆಪ್ಟೆಂಬರ್ ೨೭ರಂದು ಪಟ್ಟಾಭಿಷೇಕವನ್ನು ಮಾಡುತ್ತಾಳೆ[೮]. ಆದರೆ ಈಕೆಯ ಅಧಿಕಾರವನ್ನು ತಗ್ಗಿಸಲು ಹೈದರ್ಅಲಿಯು ಇವಳನ್ನು ಗೃಹಬಂಧನದಲ್ಲಿ ಇರಿಸುತ್ತಾನೆ. ಛಲಬಿಡದ ರಾಣಿಯು ಗೃಹಬಂಧನದಲ್ಲಿದ್ದುಕೊಂಡೇ ತನ್ನ ಪ್ರಭಾವವನ್ನು ಬೀರಿ ಮರಾಠರನ್ನೂ ಮತ್ತು ಬ್ರಿಟಿಶರನ್ನೂ ಸಂಪರ್ಕಿಸುತ್ತಾಳೆ. ಕಡೆಗೂ ಬ್ರಿಟಿಶರ ಸಹಾಯದಿಂದ ತನ್ನ ದತ್ತು ಪುತ್ರನಿಗೆ ಮೈಸೂರು ಸಂಸ್ಥಾನದ ಪಟ್ಟ ದೊರಕಿಸಿ ಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

ಈ ಇಬ್ಬರು ರಾಣಿಯರಿಗಿಂತಲೂ ಭಿನ್ನಪರಿಸ್ಥಿತಿಯನ್ನು ಎದುರಿಸಿದ ಹರಪ್ಪನಹಳ್ಳಿ ಪಾಳೆಯಗಾರ ಮನೆತನದ ಸೋಮಮ್ಮಾಜಿಯು ತನ್ನ ಪತಿಯ ಮರಣಾನಂತರ ಜೀವನವಿಡೀ ತನ್ನ ಪಾಳೆಯಗಾರಿಕೆಯ ಉತ್ತರಾಧಿಕಾರಿಗಾಗಿ ಶ್ರಮಿಸಿದವಳು. ಹರಪ್ಪನಹಳ್ಳಿಯ ಪಾಳೆಯಗಾರ ಸೋಮಶೇಖರನ ಏಕೈಕ ಮಗ, ಪುಟ್ಟರಸ ಕಿರುಪ್ರಾಯದಲ್ಲಿಯೇ ಮರಣಿಸಲು, ಸೋಮಶೇಖರನೂ ಅದೇ ಕೊರಗಿನಲ್ಲಿ ಅಸುನೀಗುತ್ತಾನೆ. ಆಗ ಸೋಮಶೇಖರನ ಮಡದಿ ಸೋಮಮ್ಮಾಜಿಯು ವೀರಬಸಪ್ಪನೆಂಬುವವನನ್ನು ದತ್ತುತೆಗೆದುಕೊಳ್ಳುತ್ತಾಳೆ. ಆದರೆ ಎರಡು ವರ್ಷಗಳಲ್ಲಿಯೇ ಈತನೂ ಮೃತನಾಗುತ್ತಾನೆ. ತಾನು ದತ್ತು ತೆಗೆದುಕೊಂಡ ಕುಮಾರ ಅಸುನೀಗಿ ಅರಾಜಕತ್ವ ತಲೆದೋರಿದಾಗ, ಸೋಮಮ್ಮಾಜಿ ಗೊಡಚಿನಹಾಳು ಗ್ರಾಮದಿಂದ ಮತ್ತೊಬ್ಬ ಬಾಲಕನನ್ನು ದತ್ತು ತೆಗೆದುಕೊಂಡು ಬಸವಪ್ಪನಾಯಕನೆಂದು ನಾಮಕರಣ ಮಾಡುತ್ತಾಳೆ. ಈ ಬಸವಪ್ಪನಾಯಕ ಬಹಳ ಶೂರನೂ, ದಕ್ಷನಾಯಕನೂ ಆಗಿರುತ್ತಾನೆ. ಆದರೆ

ಈತನಿಗೆ ಮುಂಬುದ್ಧಿ, ದೂರಾಲೋಚನೆಯ ಕೊರತೆಯಿಂದಾಗಿ ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾನೆ. ಇವನು ಹಲವಾರು ಯುದ್ಧಗಳಲ್ಲಿ ಟಿಪ್ಪುವಿಗೆ ಸಹಾಯ ಮಾಡಿರುತ್ತಾನೆ. ಇವನ ಸಾಹಸವನ್ನು ಮನಗಂಡಿದ್ದ ಟಿಪ್ಪು, ಇವನ ರಾಜ್ಯವನ್ನು ಕಬಳಿಸಲು ಸಂಚೊಂದನ್ನು ರೂಪಿಸುತ್ತಾನೆ. 'ಕೊಪ್ಪಳದುರ್ಗ'ವನ್ನು ಜಯಿಸಿದುದಕ್ಕಾಗಿ ಪಾರಿತೋಷಕ ನೀಡುವುದಾಗಿ ಇವನನ್ನು ಕರೆಸಿ, ಇವನ ಮೂವರು ರಾಣಿಯರೊಂದಿಗೆ ಇವನನ್ನು ಶ್ರೀರಂಗಪಟ್ಟಣದ ಸೆರೆಮನೆಗೆ ಹಾಕಿಸುತ್ತಾನೆ.

ರಾಜಮಾತೆ ಸೋಮಮ್ಮಾಜಿಯು ವೀರನದುರ್ಗದ ರಾಮಯ್ಯ ಮೊದಲಾದ ಹಿರಿಯರ ಸಮ್ಮುಖದಲ್ಲಿ ತನ್ನ ದತ್ತುಪುತ್ರ ಬಸಪ್ಪನಾಯಕನ ಪರವಾಗಿ ದತ್ತು ಪುತ್ರನೋರ್ವನನ್ನು ಸ್ವೀಕರಿಸಿ ಅವನಿಗೆ ಎರಡನೆಯ ಸೋಮಶೇಖರ ನಾಯಕನೆಂದು ನಾಮಕರಣ ಮಾಡಿ ಪಟ್ಟಕಟ್ಟುತ್ತಾಳೆ. ಆದರೆ ಪುನಃ ಟಿಪ್ಪುವಿನ ಕಾಟ ತಾಳಲಾರದೆ ಈಕೆ ಹದಿನಾರರ ಹರೆಯದ ತನ್ನ ಮಗನ ದತ್ತು ಪುತ್ರನನ್ನು ಕರೆದುಕೊಂಡು ಪೂನಾದ ಪರಶುರಾಂ ಭಾವೆಯರ ಆಶ್ರಯದಲ್ಲಿ ಇರುತ್ತಾಳೆ. ಟಿಪ್ಪು ಮಡಿದ ವಾರ್ತೆಯನ್ನು ಕೇಳಿ ಪುನಃ ಹರಪ್ಪನಹಳ್ಳಿಗೆ ಬಂದು ಎರಡನೆಯ ಸೋಮಶೇಖರ ನಾಯಕ ಆಡಳಿತಕ್ಕೆ ಸಹಕಾರಿಯಾಗುತ್ತಾಳೆ[೯].

II ಕುತಂತ್ರಿಗಳಿಂದ ಗೊಂದಲಕ್ಕೊಳಗಾದವರು

ಅರಾಜಕತ್ವ ಎದುರಾದಾಗ ಮಂತ್ರಿಗಳು, ದಳವಾಯಿಗಳು ಸಂದರ್ಭವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವುದು ಸಾಧಾರಣವಾಗಿ ಕಂಡುಬರುತ್ತಿದ್ದ ವಿಚಾರ. ಇಂಥ ಪರಿಸ್ಥಿತಿಯನ್ನು ನಿಭಾಯಿಸಲಾರದೆ ರಾಣಿಯರು ಗೊಂದಲಕ್ಕೆ ಸಿಲುಕಿ ನಿರ್ಧಾರವನ್ನು ತೆಗೆದುಕೊಳ್ಳುವುದರಲ್ಲಿ ತೊಂದರೆಗೆ ಸಿಲುಕಿದ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು.

ಕ್ರಿ.ಶ.೧೭೩೨ರಲ್ಲಿ ಮೈಸೂರಿನ ದೊಡ್ಡ ಕೃಷ್ಣರಾಜ ಒಡೆಯರು ಮರಣ ಹೊಂದಿದಾಗ, ವಿಧವೆ ರಾಣಿ ದೇವಾಜಮ್ಮಣ್ಣಿಯು ಪತಿಯ ದೂರದ ಸಂಬಂಧಿ ಅಂಕನಹಳ್ಳಿ ದೇವರಾಜ ಅರಸಿನವರ ಪುತ್ರ ಚಾಮರಾಜನನ್ನು ದತ್ತುಸ್ವೀಕಾರಮಾಡಿ, ಪಟ್ಟಕಟ್ಟುತ್ತಾಳೆ. ಆದರೆ ದಳವಾಯಿ ದೇವರಾಜಯ್ಯ ತನ್ನ ಹಿಡಿತಕ್ಕೆ ಸಿಲುಕದೆ ಸ್ವತಂತ್ರವಾಗಿ ಆಲೋಚಿಸುವ ಚಾಮರಾಜನನ್ನು ಪದಚ್ಯುತಗೊಳಿಸಬೇಕೆಂಬ ಸಂಚು ಹೂಡುತ್ತಾನೆ. ದಕ್ಷ ರಾಜನೆನಿಸಿಕೊಂಡಿದ್ದ ಚಾಮರಾಜನ ಮೇಲೆ ಇಲ್ಲ ಸಲ್ಲದ ದೂರುಗಳನ್ನು ರಾಜಮಾತೆಗೆ ಹೇಳಿ ಅವಳ ವಿಶ್ವಾಸಗಳಿಸಿ ಕಡೆಗೂ ಚಾಮರಾಜನನ್ನು ಸಿಂಹಾಸನದಿಂದಿಳಿಸುವಲ್ಲಿ ಯಶಸ್ವಿಯಾಗುತ್ತಾನೆ. ಆನಂತರ ದಳವಾಯಿ ದೇವರಾಜನ ಅಪೇಕ್ಷೆಯಂತೆಯೇ ಚಿಕ್ಕನಹಳ್ಳಿಯ ಅರಸುಮನೆತನಕ್ಕೆ ಸೇರಿದ ಆರುವರ್ಷದ ಬಾಲಕ ಇಮ್ಮಡಿ ಕೃಷ್ಣರಾಜಒಡೆರ್‌ನನ್ನು ರಾಜಮಾತೆ ದೇವಾಜಮ್ಮಣ್ಣಿಯು ಪುನಃ ದತ್ತು ಸ್ವೀಕಾರ ಮಾಡಿ, ಕ್ರಿ.ಶ.೧೭೩೪ರಲ್ಲಿ ಪಟ್ಟಕಟ್ಟುತ್ತಾಳೆ[೧೦].

ಮೈಸೂರಿನ ರಾಣಿಯಂತೆಯೇ ಚಿತ್ರದುರ್ಗದ ಓಬವ್ವ ನಾಗತಿಯೂ ಉತ್ತರಾಧಿಕಾರಿಯನ್ನು ಬದಲಿಸುವ ಪರಿಸ್ಥಿತಿಗೆ ಸಿಲುಕುತ್ತಾಳೆ. ಆದರೆ ಹಿರಿಯ ಅಧಿಕಾರಿಗಳು, ಬಂಧುಗಳು ಪ್ರಜೆಗಳನ್ನು ಒಪ್ಪಿಸುವ ಜವಾಬ್ದಾರಿಯೂ ರಾಣಿಯರಿಗಿರುತ್ತದೆ. ಚಿತ್ರದುರ್ಗದ ಪಾಳೆಯ ಪಟ್ಟಿನ ಎರಡನೆಯ ಕಸ್ತೂರಿ ರಂಗಪ್ಪನಾಯಕನು ಮಕ್ಕಳಿಲ್ಲದ ಕಾರಣ, ತನ್ನಬಂಧುವಾಗಿದ್ದ ತರುಣ ದೊಡ್ಡಮೆದಕೇರಿ ನಾಯಕನನ್ನು ದತ್ತು ತೆಗೆದುಕೊಂಡಿರುತ್ತಾನೆ. ಕಸ್ತೂರಿ ರಂಗಪ್ಪನ ಅಕಾಲಿಕ ಮರಣಾನಂತರ ಹಿರೇಮೆದಕೇರಿ ನಾಯಕನ ಪತ್ನಿಯೂ ರಾಜಮಾತೆಯೂ ಆದ ಕಸ್ತೂರಿ ರಂಗಪ್ಪನಾಯಕನ ತಾಯಿ ಓಬವ್ವ ನಾಗತಿಗೆ ದೊಡ್ಡಮೆದೇಕೇರಿ ನಾಯಕ ಮುಂದೆ ತನ್ನ ಮಾತಿನಂತೆ ನಡೆಯಲಾರನೆಂದೂ, ಆತನು ದಕ್ಷ ಆಡಳಿತಗಾರನಲ್ಲನೆಂದು ಹೇಳಿದ ಚಾಡಿಯ ಮಾತನ್ನು ಕೇಳಿ, ಅವನ ಉತ್ತರಾಧಿಕಾರವನ್ನು ಉಪಾಯದಿಂದ ತಪ್ಪಿಸುತ್ತಾಳೆ. ಇವಳು ತನ್ನ ಪತಿ ಹಿರೇಮೆದಕೇರಿ ನಾಯಕ ಕನಸಿನಲ್ಲಿ ಬಂದು ತಾನು ಜಾನಕಲ್ಲಿನ ತೊದಲು ಭರಮಪ್ಪನಾಯಕನಿಗೆ ಮಗನಾಗಿ ಹುಟ್ಟಿರುವುದಾಗಿಯೂ ತನಗೇ ಪಟ್ಟಕಟ್ಟಬೇಕೆಂದು ಹೇಳಿದುದಾಗಿ ಕನಸು ಬಿತ್ತೆಂದು ಪ್ರಮುಖರನ್ನು ನಂಬಿಸಿ ೧೨ ವರ್ಷದ ಬಲಕ ಚಿಕ್ಕ ಮೆದಕೇರಿ ನಾಯಕನನ್ನು ಜಾನಕಲ್ಲಿನಿಂದ ಕರೆಸಿಕೊಂಡು ಅವನ ಕೈಗೆ ರಾಜಮುದ್ರೆಯನ್ನೂ, ಕತ್ತಿಯನ್ನೂ ಕೊಟ್ಟು ಅವನನ್ನು 'ಕಾಳಗದ ಅಯ್ಯ' ಎಂದು ಕರೆದು ಅವನಿಗೇ ಪಟ್ಟ ಎಂದು ತಿಳಿಸುತ್ತಾಳೆ. ೧೨ ವರ್ಷದ ಬಾಲಕನಿಗೆ ಪಟ್ಟಾಭಿಷೇಕ ಮಾಡಿಸಿ ರಾಜ್ಯದ ಸರ್ವಾಧಿಕಾರ ವಹಿಸುತ್ತಾಳೆ. ಆದರೆ ಓಬವ್ವನಾಗತಿಯು ಈ ಇಬ್ಬರು ದತ್ತು ಪುತ್ರರಲ್ಲಿಯೂ ಅನ್ಯೋನ್ಯತೆ ಬೆಳೆಸುತ್ತಾಳೆ; ಇವಳ ಕಾಲಾನಂತರವೂ ದೊಡ್ಡ ಮೆದಕೇರಿನಾಯಕ ಹಾಗೂ ಚಿಕ್ಕ ಮೆದಕೇರಿನಾಯಕ ಕೊನೆಯವರೆಗೂ ಅನ್ಯೋನ್ಯವಾಗಿದ್ದು, ರಾಣಿಯು ಮಾಡಿದ ಬದಲಾವಣೆ ಅಚಾತುರ್ಯಕ್ಕೆ ಎಡೆಯಾಗದಂತೆ ನೋಡಿಕೊಳ್ಳುತ್ತಾರೆ[೧೧].

III ಸಫಲವಾಗದ ದತ್ತಕದ ಉದ್ದೇಶಗಳು

ರಾಜಕೀಯವನ್ನು ದುರುಪಯೋಗಪಡಿಸಿಕೊಂಡು ಹಿಂದಿನ ದತ್ತಕವನ್ನು ರದ್ದುಪಡಿಸಿದ ಅಥವಾ ಮೊದಲ ದತ್ತುಪುತ್ರನನ್ನು ಅಧಿಕಾರದಿಂದ ವಂಚಿತನನ್ನಾಗಿ ಮಾಡಿದರೂ ರಾಜ್ಯಾಡಳಿತ ಸುಸೂತ್ರವಾಗುವಂತೆ ನಡೆಸಿಕೊಂಡ ರಾಣಿಯರನ್ನು ಈ ಮೇಲಿನ ಸಂದರ್ಭಗಳಲ್ಲಿ ಕಾಣುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಉತ್ತರಾಧಿಕಾರಿಯನ್ನು ನೇಮಿಸಲೆಂದು ದತ್ತಕ ಪಡೆದರೂ ಸ್ವೀಕರಿಸಿದರೂ ದತ್ತುಪುತ್ರರಿಗೆ ಅಧಿಕಾರ ಕೊಡಿಸುವಲ್ಲಿ ಯಶಸ್ವಿಯಾಗದ ರಾಣಿಯರೂ ಕರ್ನಾಟಕದ ಇತಿಹಾಸದಲ್ಲಿ ಕಂಡುಬರುತ್ತಾರೆ.

ಕೆಳದಿಯ ರಾಜಮನೆತನದಲ್ಲಿ ಆಳ್ವಿಕೆ ನಡೆಸಿದ ಇಬ್ಬರು ರಾಣಿಯರಲ್ಲಿ ಒಬ್ಬಳು ಚನ್ನಮ್ಮಳಾದರೆ ಮತ್ತೊಬ್ಬಳು ಇವಳ ಮೊಮ್ಮಗನ ಸೊಸೆ ಚನ್ನವೀರಮ್ಮ. ಉತ್ತರಾಧಿಕಾರಿಯನ್ನು ನೇಮಿಸುವಲ್ಲಿ ಚನ್ನಮ್ಮ ಯಶಸ್ವಿಯಾದರೆ, ಚನ್ನವೀರಮ್ಮ ಪ್ರತಿಕೂಲ ಪರಿಸ್ಥಿತಿಯಲ್ಲಿ ಹೋರಾಟದಲ್ಲಿಯೇ ಅಸುನೀಗುತ್ತಾಳೆ. ಕ್ರಿ.ಶ.೧೭೩೯ರಿಂದ ಕ್ರಿ.ಶ.೧೭೫೫ರ ವರೆಗೆ ಕೆಳದಿಯನ್ನಾಳಿದ ಇಮ್ಮಡಿ ಬಸವಪ್ಪನಾಯಕನ ರಾಣಿ ಚೆನ್ನವೀರಮ್ಮಾಜಿಯು ಪಾಳ್ಯದ ಶಿವಲಿಂಗಪ್ಪನವರ ಮಗಳು. ಶಿವಲಿಂಗಪ್ಪ ರಾಜ್ಯದ ಸರ್ವಾಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದುದು ಚನ್ನವೀರಮ್ಮಾಜಿ ಕೂಡ ಆಡಳಿತ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಲು ಕಾರಣವಾಗುತ್ತದೆ. ಮಕ್ಕಳಿಲ್ಲದ ಕಾರಣ ಇಮ್ಮಡಿ ಬಸವಪ್ಪನಾಯಕನು ಚನ್ನಬಸವನಾಯಕನನ್ನು ದತ್ತುಪುತ್ರನನ್ನಾಗಿ ಸ್ವೀಕರಿಸಿರುತ್ತಾನೆ. ಕೆಳದಿ ನೃಪವಿಜಯವು ಇಮ್ಮಡಿ ಬಸವಪ್ಪನಾಯಕನ ನಂತರ ಚನ್ನಬಸವನಾಯಕನು ಕ್ರಿ.ಶ.೧೭೫೫ರಿಂದ ಕ್ರಿ.ಶ.೧೭೫೮ರ ವರೆಗೆ ತನ್ನ ದತ್ತು ತಾಯಿ ಚನ್ನವೀರಮ್ಮಾಜಿ ಹಾಕಿಕೊಟ್ಟ ದಾರಿಯಲ್ಲಿ ಸದ್ಧರ್ಮದಿಂದ ರಾಜ್ಯವಾಳಿ, ಕೆಲಕಾಲದ ನಂತರ ೧೭೫೮ರಲ್ಲಿ ಅವಿವಾಹಿತ ದೊರೆಯು ಅಕಾಲ ಮರಣಕ್ಕೀಡಾದನೆಂದು ತಿಳಿಸಿದೆ[೧೨]. ಅರಾಜಕತ್ವ ಎದುರಾದಾಗ ಚನ್ನವೀರಮ್ಮಾಜಿ ಹಿರಿಯರು ಹಾಗೂ ಮಂತ್ರಿಗಳೊಂದಿಗೆ ಸಮಾಲೋಚಿಸಿ ತನ್ನ ಸೋದರಮಾವ ಪಟ್ಟಣಶೆಟ್ಟಿ ಚೆನ್ನವೀರಪ್ಪನ ಕಿರಿಯಮಗನನ್ನು ದತ್ತು ಸ್ವೀಕಾರಮಾಡಿ ಅವನಿಗೆ ಸೋಮಶೇಖರನೆಂದು ನಾಮಕರಣಮಾಡಿ, ಎಳೆಪ್ರಾಯದ ದತ್ತುಕುಮಾರನ ಪರವಾಗಿ ತಾನೇ ಆಳ್ವಿಕೆ ನಡೆಸುತ್ತಾಳೆ.

ಆದರೆ ಇವಳ ಮೊದಲನೆಯ ದತ್ತು ಪುತ್ರ ಚನ್ನಬಸವನಾಯಕನ ಸಾವಿನ ಕುರಿತಾಗಿ ಹಲವಾರು ದಂತಕಥೆಗಳು ಕೇಳಿಬರುತ್ತದೆ. ಚೆನ್ನವೀರಮ್ಮಾಜಿಯ ಕಳ್ಳ ಸಂಬಂಧವನ್ನು ಅರಿತಿದ್ದನೆಂದು ಇವಳೇ ಆತನನ್ನು ಕೊಲೆ ಮಾಡಿಸಿದಳೆಂದು ಕೆಲವು ಮೂಲಗಳು ಹೇಳಿದರೆ, ಕೊಲೆಯ ಸಂಚು ತಿಳಿದು ತಪ್ಪಿಸಿಕೊಂಡ ಇವನು ಹೈದರಾಲಿಯ ಸಹಾಯ ಬಯಸಿ ಅವನ ಬಳಿಗೆ ಹೋದನೆಂದು ಮತ್ತೆ ಕೆಲವು ಮೂಲಗಳು ಹೇಳುತ್ತವೆ. ಹೈದರಾಲಿಯ ಬಳಿಗೆ ಹೋದವನು ಚೆನ್ನಬಸವನಾಯಕನ ಹೆಸರು ಹೇಳಿಕೊಂಡು ಹೋದ ಮತ್ತಾರೋ ಖೊಟ್ಟಿ ನಾಯಕನೆಂದೂ, ಇವನನ್ನು ಹೈದರಾಲಿ ಕಡೆಯವರು ಗೈಬುರಾಜನೆಂದು ಕರೆಯುತ್ತಿದ್ದರೆಂದು ಹೈದರ್‌ನಾಮ ಮೊದಲಾದವುಗಳಲ್ಲಿ ಹೇಳಿದೆ. ಈ ಪ್ರಕಾರವಾಗಿ ಇವನ ಕುರಿತಾದ ಹಲವಾರು ರೀತಿಯ ದಂತಕಥೆಗಳು ಕೇಳಿಬರುತ್ತವೆ. ರಾಣಿಯನ್ನು ಮಣಿಸಲು ಸುಲಭವಾಗಿ ಸಾಧ್ಯವಾಗದ ಶತ್ರು ಪಡೆಯವರು ಇವಳ ಕೀರ್ತಿಗೆ ಮಸಿಬಳಿಯಲು ಹಬ್ಬಿಸಿದ ಸುದ್ದಿಗಳು ಎಂದು ಈ ಮಾತನ್ನು ಇತಿಹಾಸಕಾರರು ತಳ್ಳಿಹಾಕುತ್ತಾರೆ[೧೩]. ಚೆನ್ನಬಸವನಾಯಕನ ಸಮಾದಿಯು ಬಿದನೂರು ಕೊಪ್ಪಳ ಮಠದಲ್ಲಿ ಕಾಣಬಹುದು.

ಚೆನ್ನವೀರಮ್ಮಾಜಿಯನ್ನು ಮಾತುಕತೆಗೆಂದು ಕರೆಸಿಕೊಂಡ ಹೈದರಾಲಿ, ಅವಳನ್ನೂ ಹಾಗೂ ಅವಳ ಎರಡನೆಯ ದತ್ತು ಪುತ್ರನನ್ನು ಬಂಧನದಲ್ಲಿರಿಸುತ್ತಾನೆ. ಕೆಲಕಾಲದ ನಂತರ ಮರಾಠರು ಇವರಿಬ್ಬರನ್ನು ಬಿಡಿಸಿಕೊಂಡು ಹೋಗುತ್ತಾರಾದರೂ, ಖಾಯಿಲೆಯಿಂದ ನರಳುತ್ತಿದ್ದ ಇವರೀರ್ವರಲ್ಲಿ ಚೆನ್ನವೀರಮ್ಮಾಜಿಯು ಮಾರ್ಗಮಧ್ಯದಲ್ಲಿ ಕೊನೆಯುಸಿರೆಳೆಯುತ್ತಾಳೆ ಹಾಗೂ ಇವಳ ಮಗ ಪೂನಾಗೆ ಹೋಗುವ ತನಕ ಜೀವಿಸಿದ್ದು ಅಲ್ಲಿ ಅಸುನೀಗುತ್ತಾನೆ[೧೪].

ಕನಕಗಿರಿಯನ್ನಾಳುತ್ತಿದ್ದ ಗುಜ್ಜಲಲ ವಂಶದ ಕಡೆಯ ನಾಯಕ ರಂಗಪ್ಪನಾಯಕ, ಈತನ ತಮ್ಮಂದಿರಾದ ಕನಕಪ್ಪನಾಯಕ ಮತ್ತು ಜುಮ್ಮಾಳನಾಯಕರು ಸೋಮಸಾಗರ ಮತ್ತು ಗುಂತುಮಸಡುವಿನ ಗ್ರಾಮಗಳನ್ನು ತೆಗೆದುಕೊಂಡು ಪ್ರತ್ಯೇಕರಾಗುತ್ತಾರೆ. ರಂಗಪ್ಪ ನಾಯಕನಿಗೆ ಮೂರುಜನ ರಾಣಿಯರು. ಅವರಿಗೆ ಮೂರು ಜನ ಹೆಣ್ಣುಮಕ್ಕಳು. ಹೀಗಾಗಿ ರಂಗಪ್ಪನಾಯಕನ ತಮ್ಮ ಸೋಮಸಾಗರದ ಕನಕಪ್ಪನಾಯಕನ ಮಗ ವುಡಿಸಿನಾಯಕನನ್ನು ದತ್ತಕ ತೆಗೆದುಕೊಳ್ಳಲಾಗುತ್ತದೆ. ರಂಗಪ್ಪನಾಯಕನು ಕಾಲವಾದಮೇಲೆ, ದತ್ತುಪುತ್ರ ಕಿರಿಯ ಪ್ರಾಯದವನಾಗಿದ್ದ ಕಾರಣ ರಂಗಪ್ಪನಾಯಕನ ಹಿರಿಯ ಮಡದಿ ರಾಣಿ ಗೌರಮ್ಮ ಸಂಸ್ಥಾನದ ಅಧಿಕಾರ ವಹಿಸಿಕೊಳ್ಳುತ್ತಾಳೆ. ಕೆಲಕಾಲದಲ್ಲಿ ಮಗ ಅಕಾಲಮರಣಕ್ಕೀಡಾಗಲು, ಹಿರಿಯರ ಸಲಹೆಯಂತೆ ತನ್ನ ಮೈದುನ ಸೋಮಸಾಗರದನಾಯಕನ ಮಗನನ್ನು ದತ್ತಕ ಪಡೆಯುತ್ತಾಳೆ. ಆದರೆ ಆಡಳಿತದಲ್ಲಿ ಇವಳು ತೋರುತ್ತಿದ್ದ ನಿರ್ಲಕ್ಷ್ಯದಿಂದಾಗಿ ಮುಜುಮದಾರರು, ಸುಬೇದಾರರು ಆಡಳಿತವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಕಡೆಗೆ ಹೈದರಾಬಾದ್‌ನಿಜಾಮನು ಸಂಸ್ಥಾನವನ್ನು ವಶಕ್ಕೆ ತೆಗೆದುಕೊಳ್ಳುತ್ತಾನೆ ಹಾಗೂ ರಾಣಿ ಗೌರಮ್ಮ ಮತ್ತು ಅವಳ ದತ್ತು ಪುತ್ರನಿಗೆ ಮಾಸಾಶನ ನೀಡಲಾಗುತ್ತದೆ. ಆನಂತರ ಈ ಸಂಸ್ಥಾನ ೧೯೪೮ರಲ್ಲಿ ಭಾರತದ ಒಕ್ಕೂಟದೊಂದಿಗೆ ವಿಲೀನಗೊಂಡು, ೧೯೫೬ರಲ್ಲಿ ಇವರ ಜಹಗೀರುಗಳೆಲ್ಲ ರದ್ದಾಗುತ್ತದೆ[೧೫].

ಸಂತೆ ಬೆನ್ನೂರು ಪಾಳೆಯಗಾರರವಂಶದಲ್ಲಿಯೂ ಸಹ ಉತ್ತರಾಧಿಕಾರಿಯ ಕೊರತೆಯಿಂದ ಪಾಳೆಯಪಟ್ಟು ಕೊನೆಗಂಡದ್ದನ್ನು ಕಾಣುತ್ತೇವೆ. ಈ ಮನೆತನದ ಕೊನೆಯ ನಾಯಕ ಸರ್ಜಾ ಹನುಮಪ್ಪ ನಾಯಕನಿಗೆ ಮಕ್ಕಳಿಲ್ಲದ ಪ್ರಯುಕ್ತ ಅವನ ಮರಣಾನಂತರ ಅವನ ಮೂರನೆಯ ಮಡದಿ ಯಶೋದಮ್ಮ ನಾಗತಿಯು ಈ ಪಾಳೆಪಟ್ಟಿನ ಅಧಿಕಾರ ವಹಿಸಿಕೊಳ್ಳುತ್ತಾಳೆ. ಅವಳು ಒಂದು ಗಂಡು ಹಾಗೂ ಒಂದು ಹೆಣ್ಣುಮಗುವನ್ನು ದತ್ತು ತೆಗೆದುಕೊಳ್ಳುತ್ತಾಳಾದರೂ ಉತ್ತರಾಧಿಕಾರಿಗೆ ಪಟ್ಟಕಟ್ಟುವ ಮುನ್ನವೇ ಈಕೆ ಅಕಾಲಮರಣಕ್ಕೆ ತುತ್ತಾದುದರಿಂದ ಪಾಳೆಯಪಟ್ಟು ಅವಸಾನಗೊಳ್ಳುತ್ತದೆ[೧೬].

IV ಬ್ರಿಟಿಶರ ದತ್ತಕ ನೀತಿಯನ್ನು ಎದುರಿಸಿ ಹೋರಾಡಿದ ರಾಣಿಯರು

ದತ್ತಕ ಪಡೆದುಕೊಳ್ಳುವಲ್ಲಿ ವಿಧವೆಯರಿಗೆ ಅಧಿಕಾರವಿಲ್ಲವೆಂದು ಸಂಹಿತೆಗಳು ಹೇಳಿದ್ದರೂ ರಾಜಮನೆತನದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗುರುಹಿರಿಯರ ಸಮ್ಮುಖದಲ್ಲಿಯೇ ದತ್ತಕವನ್ನು ಪಡೆದೂ, ಉತ್ತರಾಧಿಕಾರಿಗಳನ್ನು ನೇಮಿಸಿದ ಹಲವಾರು ಪ್ರಸಂಗಗಳನ್ನು ಕಾಣುತ್ತೇವೆ. ಆದರೆ, ಬ್ರಿಟಿಶರ ಆಡಳಿತದಲ್ಲಿ ಹೊಸರೀತಿಯ ಕಾನೂನುಗಳು ದತ್ತುಮಕ್ಕಳಿಗೆ ಹಕ್ಕಿಲ್ಲವೆನ್ನುವ ನೀತಿ ಜಾರಿಗೆಬಂದು ಕರ್ನಾಟಕದಲ್ಲಿ ಹಲವಾರು ರಾಜಮನೆತನಗಳು ಇವರೊಂದಿಗೆ ಹೋರಾಡುವ ಪರಿಸ್ಥಿತಿಯನ್ನು ತರುತ್ತದೆ. ಬೆಳಗಾವಿಯ ಬಳಿಯ ಕಾಕತಿಯ ದೇಸಾಯಿ ಧೂಳಪ್ಪಗೌರಡ ಮಗಳು ಚೆನ್ನಮ್ಮ ಕಿತ್ತೂರಿನ ಮಲ್ಲಸರ್ಜ ದೇಸಾಯಿಯನ್ನು ವರಿಸಿರುತ್ತಾಳೆ. ಚೆನ್ನಮ್ಮಳ ಮಗ ಹುಟ್ಟಿದ ಕೆಲವು ವರ್ಷಗಳಲ್ಲಿ ಮೃತನಾಗುತ್ತಾನೆ. ಇವಳ ಪತಿ ಮಲ್ಲಸರ್ಜನು ಮರಾಠರೊಂದಿಗಿನ ಯುದ್ಧದಲ್ಲಿ ಬಂದಿಯಾಗಿ ಪೂನಾಗೆ ರವಾನಿಸಲ್ಪಡುತ್ತಾನೆ. ಮೂರುವರ್ಷಗಳ ತರುವಾಯ ಬಿಡುಗಡೆ ಹೊಂದಿ ಮರಳಿ ಬರುವಾಗ ದಾರಿಯಲ್ಲಿ ಮೃತನಾಗುತ್ತಾನೆ. ಈತನ ಹಿರಿಯ ರಾಣಿ ರುದ್ರಮ್ಮನ ಮಗ ಶಿವಲಿಂಗ ರುದ್ರಸರ್ಜನಿಗೆ ಕಿತ್ತೂರು ಸಂಸ್ಥಾನದ ಪಟ್ಟ ಕಟ್ಟಲಾಗುತ್ತದೆ. ಕೆಲಕಾಲ ರಾಜ್ಯವಾಳಿದ ರುದ್ರಸರ್ಜನು ಕ್ರಿ.ಶ.೧೮೨೪ರಲ್ಲಿ ಅಕಾಲಮರಣಕ್ಕೀಡಾಗುತ್ತಾನೆ. ವಾರಸುದಾರರಿಲ್ಲದ ಈತ ಸಾಯುವ ಮುನ್ನ ಮಾಸ್ತಮರಡಿ ಗೌಡರ ಪುತ್ರ ಶಿವಲಿಂಗಪ್ಪನನ್ನು ದತ್ತಕ ತೆಗೆದುಕೊಂಡಿರುತ್ತಾನೆ. ರುದ್ರಸರ್ಜನ ತರುವಾಯ ಈತನ ಮಲತಾಯಿ ಚೆನ್ನಮ್ಮಳು ರುದ್ರಸರ್ಜನ ದತ್ತು ಪುತ್ರ ಶಿವಲಿಂಗಪ್ಪನಿಗೆ ಪಟ್ಟ ಕಟ್ಟಿ ಅವನ ಪರವಾಗಿ ರಾಜ್ಯಭಾರ ನಡೆಸುತ್ತಾಳೆ. ಆದರೆ ಬ್ರಿಟಿಶರು ಈ ದತ್ತಕವನ್ನು ಅಂಗೀಕರಿಸಲಾಗದೆಂದು ತಗಾದೆ ತೆಗೆಯುತ್ತಾರೆ. ಇದೇ ಕಿತ್ತೂರು ಕದನಕ್ಕೆ ನಾಂದಿಯಾಗುತ್ತದೆ. ಮೊದಲನೆಯ ಯುದ್ಧದಲ್ಲಿ ಚೆನ್ನಮ್ಮ ಗೆದ್ದರೂ, ಎರಡನೆಯ ಬಾರಿ ಮೋಸದಿಂದ ಇವಳನ್ನೂ, ಇವಳ ಸೊಸೆ ವೀರಮ್ಮಳನ್ನೂ ಬಂಧಿಸಲಾಗುತ್ತದೆ ಹಾಗೂ ಕಿತ್ತೂರು ಸಂಸ್ಥಾನವನ್ನು ಬ್ರಿಟಿಶ್ ಸರ್ಕಾರದಲ್ಲಿ ಲೀನಗೊಳಿಸಲಾಗುತ್ತದೆ[೧೭]. ಡಾಲ್‌ಹೌಸಿಯ ದತ್ತಕ ನೀತಿಯನ್ನು ಮೂರು ದಶಕಗಳ ಹಿಂದೆಯೇ ಥ್ಯಾಕರೆ ಕಾರ್ಯಾಚರಣೆಗೆ ತರುವ ಪ್ರಯತ್ನವನ್ನು ಕರ್ನಾಟಕದಲ್ಲಿ ನಡೆಸಿದ್ದನ್ನು ಕಾಣುತ್ತೇವೆ.

ಕಿತ್ತೂರನ್ನು ವಶಪಡಿಸಿಕೊಂಡಂತೆ ಬ್ರಿಟಿಶರು ಇನ್ನೂ ಹಲವಾರು ಸಣ್ಣಪುಟ್ಟ ಪಾಳೆಯಗಾರರ ಆಡಳಿತ ಪ್ರದೇಶಗಳನ್ನು ವಶಪಡಿಸಿಕೊಳ್ಳುತ್ತಾರೆ. ಅವುಗಳಲ್ಲಿ ಹರಪ್ಪನಹಳ್ಳಿ ಪಾಳೆಯಪಟ್ಟೂ ಒಂದು. ಈ ಮನೆತನದಲ್ಲಿ ರಾಜಮಾತೆ ಸೋಮಮ್ಮಾಜಿಯು ತನ್ನ ದತ್ತು ಮಗ ಬಸಪ್ಪನಾಯಕನು ಟಿಪ್ಪುವಿನ ಸೆರೆಯಲ್ಲಿ ಬಂಧಿಯಾದಾಗ, ಬಸಪ್ಪನಾಯಕನ ಹೆಸರಿನಲ್ಲಿ ದತ್ತು ಪಡೆದು ಎರಡನೆಯ ಸೋಮಶೇಖರನಾಯಕನೆಂದು ನಾಮಕರಣ

ಮಾಡಿ, ಆತನಿಗೆ ರಾಜ್ಯದ ಪಟ್ಟವನ್ನು ಕಟ್ಟುತ್ತಾಳೆ. ಆದರೆ ಟಿಪ್ಪುವಿನ ಮರಣಾನಂತರ ಬ್ರಿಟಿಶರು ಇವನ ರಾಜ್ಯವನ್ನು ಸುಪರ್ದಿಗೆ ತೆಗೆದುಕೊಂಡು ಇವನಿಗೆ ಮಾಸಾಶನ ನೀಡಲು ಮುಂದಾದಾಗ, ಇವನು ಬ್ರಿಟಿಶರ ವಿರುದ್ಧ ಪ್ರತಿಭಟಿಸಿ ವಿಫಲನಾಗಿ, ಅವರ ಸೆರೆಗೆ ಸಿಲುಕುತ್ತಾನೆ. ಇವನ ಪರವಾಗಿ ಇವನ ಮಡದಿ ನೀಲಮ್ಮಾಜಿ ಇವನು ಅಸುನೀಗುವವರೆಗೂ ಇವನ ಹೆಸರಿನಲ್ಲಿ ಆಡಳಿತ ನಡೆಸುತ್ತಾಳೆ. ಆದರೆ ಇವಳಿಗೆ ದತ್ತು ಸ್ವೀಕರಿಸಿ ಉತ್ತರಾಧಿಕಾರಿಯನ್ನು ನೇಮಿಸುವ ಅಧಿಕಾರ ಸಿಗುವುದಿಲ್ಲ. ಅಲ್ಲದೆ ಇವಳ ಪತಿಯ ಮರಣಾನಂತರ ಸ್ತ್ರೀ ಆಡಳಿತಕ್ಕೆ ಬ್ರಿಟಿಶರು ಒಪ್ಪದೆ ಇವಳ ಆಳ್ವಿಕೆಯ ಪ್ರದೇಶಗಳನ್ನು ಕ್ರಿ.ಶ.೧೮೨೫ರಲ್ಲಿ ತಮ್ಮ ರಾಜ್ಯದಲ್ಲಿ ವಿಲೀನಗೊಳಿಸಿಕೊಳ್ಳುತ್ತಾರೆ[೧೮].

ಬ್ರಿಟಿಶರ ನೀತಿಯು ಹಲವಾರು ಪಾಳೆಯಪಟ್ಟುಗಳು ಕೊನೆಗೊಳ್ಳುವಂತಾಯಿತು. ಆದರೆ ಇದಕ್ಕೆ ಅಪವಾದವೆನ್ನುವಂತೆ ಒಂದೆರಡು ಪ್ರಸಂಗಗಳಲ್ಲಿ ದತ್ತು ಪಡೆದುಕೊಳ್ಳಲು ಹಾಗೂ ಉತ್ತರಾಧಿಕಾರಿಯನ್ನು ನೇಮಿಸಲು ಅನುಮತಿಯಿತ್ತ ಸಂದರ್ಭಗಳನ್ನೂ ಕಾಣಬಹುದು. ಅವುಗಳಲ್ಲಿ ಡಂಬಳದ ದೇಸಾಯಿಣಿಗೆ ಕೊಟ್ಟ ಅನುಮತಿ ವಿಶೇಷವೆನಿಸುತ್ತದೆ. ಕ್ರಿ.ಶ.೧೮೦೦ರಲ್ಲಿ ಮರಾಠಾ ಸೈನ್ಯದೊಡನೆ ಸೇರಿ ಡಂಬಳದ ವೆಂಕಪ್ಪ ದೇಸಾಯಿಯೊಡನೆ ಸಮರ ಸಾರಿದ ಬ್ರಿಟಿಶರು ಡಂಬಳ ಕೋಟೆಯನ್ನು ವಶಪಡಿಸಿಕೊಂಡು, ವೆಂಕಪ್ಪದೇಸಾಯಿಯನ್ನು ಸೆರೆ ಹಿಡಿಯುತ್ತಾರೆ. ಬ್ರಿಟಿಶ್ ಅಧಿಕಾರಿಯಾಗಿದ್ದ ಕರ್ನಲ್ ವೆಲ್ಲೆಸ್ಲಿಯು ವೆಂಕಪ್ಪದೇಸಾಯಿಯನ್ನು ಗಲ್ಲಿಗೇರಿಸಲು ಆದೇಶ ನೀಡುತ್ತಾನೆ. ಕೆಲ ಕಾಲದ ನಂತರ ತಾನು ಮಾಡಿದ್ದು ತಪ್ಪೆಂದು ಪಶ್ಚಾತಾಪಪಟ್ಟ ವೆಲ್ಲೆಸ್ಲಿಯು ತಾನು ಇಂಗ್ಲೆಂಡಿಗೆ ಹಿಂದಿರುಗುವ ಮುನ್ನ ವೆಂಕಪ್ಪನಾಯಕನ ಹೆಂಡತಿಯು ದತ್ತಕ ತೆಗೆದುಕೊಳ್ಳುವುದಕ್ಕೂ, ಆ ಹುಡುಗನು ಡಂಬಳದ ಬಹದ್ದೂರ ದೇಸಾಯಿ ಎಂಬ ಬಿರುದನ್ನೂ, ದೇಸಗತಿಯ ಹಕ್ಕುದಾರಿಕೆಯನ್ನು ಪಡೆಯುವುದಕ್ಕೂ ಸಮ್ಮತಿಸಬೇಕೆಂದು ಅನುಮತಿ ಪತ್ರ ಬರೆದಿಟ್ಟು ಹೋಗುತ್ತಾನೆ. ಈ ಪ್ರಕಾರ ವೆಂಕಪ್ಪನಾಯಕನ ವಿಧವೆ ಮಡದಿ ಮಥುರಾಬಾಯಿಯು ಶಿವಪ್ಪ ಎಂಬುವನನ್ನು ದತ್ತು ತೆಗೆದುಕೊಂಡು ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾಳೆ[೧೯]. ಧಾರವಾಡದ ಆಡಳಿತ ವಹಿಸಿಕೊಂಡ ಥ್ಯಾಕರೆ ಇದಕ್ಕೆ ವಿರೋಧ ವ್ಯಕ್ತ ಪಡಿಸಿದರೂ, ಚಾಪ್ಲಿನ್ನನು, ವೆಲ್ಲಸ್ಲಿಯ ಅನುಮತಿಯನ್ನು ಅನುಮೋದಿಸುತ್ತಾನೆ.

ಮೈಸೂರು ಸಂಸ್ಥಾನವು ರದ್ದುಪಡಿಸಿದ ದತ್ತು ಪುತ್ರನ ಅಧಿಕಾರ

ಡಂಬಳದ ದೇಸಾಯಿಣಿಗೆ ಉತ್ತರಾಧಿಕಾರಿ ನೇಮಿಸಿಕೊಳ್ಳಲು ಅನುಮತಿ ಇತ್ತಂತೆ ಸುಗುಟೂರು ರಾಣಿಗೂ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳುವಲ್ಲಿ ಬ್ರಿಟಿಶರು ಅಡ್ಡಿಪಡಿಸುವುದಿಲ್ಲ. ಆದರೆ ಮೈಸೂರು ಸಂಸ್ಥಾನದಿಂದಲೇ ಈ ಪಾಳೆಯಪಟ್ಟಿನ

ದತ್ತುಪುತ್ರನ ಅಧಿಕಾರ ಹಿಂಪಡೆಯಲಾಗುತ್ತದೆ. ಸುಗುಟೂರು ಪಾಳೆಯಗಾರರ ಮನೆತನದಲ್ಲಿ ಕ್ರಿ.ಶ.೧೭೯೩ರಲ್ಲಿ ಸಂತಾನವಿಲ್ಲದ ಐಮಗೌಡ ಮಡಿದಾಗ, ಕರ್ನಲ್ ಅಲೆಕ್ಸಾಂಡರ್ ರೀಡನು ಐಮಗೌಡನ ಕಿರಿಯ ರಾಣಿಯರಾದ ಚನ್ನಮ್ಮ ಹಾಗೂ ಚಿಕ್ಕಮ್ಮನಿಗೆ ರಾಜನ ಒಡವೆಗಳನ್ನು ಪಾಲುಮಾಡಿ ಕೊಡಿಸಿ, ಹಿರಿಯ ರಾಣಿ ಗೌರಮ್ಮನಿಗೆ ಸಂಸ್ಥಾನದ ಪಟ್ಟಕ್ಕೆ ಬಾಧ್ಯಸ್ಥಳನ್ನಾಗಿ ಮಾಡಿ ಆಕೆಯನ್ನು ಮದ್ರಾಸ್ ಪ್ರೆಸಿಡೆನ್ಸಿಯ ಸ್ಥಳವಾದ ಕೃಷ್ಣಗಿರಿಯಲ್ಲಿ ನೆಲಸುವಂತೆ ಮಾಡುತ್ತಾನೆ. ಇದರ ಪ್ರಕಾರ ಅಲ್ಲಿನ ಆಸುಪಾಸಿನ ಸ್ಥಳಗಳಾದ ಪಾಲ್ಕೋಡು, ಮಾರಂಡನಹಳ್ಳಿ ಮುಂತಾದ ಸ್ಥಳಗಳನ್ನು ಆಕೆಯ ವಶಕ್ಕೆ ನೀಡಲಾಗುತ್ತದೆ. ಅನೇಕ ದಾಖಲೆಗಳಲ್ಲಿ ಆಕೆಯನ್ನು 'ದೊರೆಸಾನಿ' ಎಂದು ಸಂಬೋಧಿಸಿರುವುದನ್ನೂ ಕಾಣಬಹುದು. ಮಕ್ಕಳಿಲ್ಲದ ಈಕೆ ಚಿಕ್ಕರಾಯನೆಂಬುವವನನ್ನು ದತ್ತುವಾಗಿ ಸ್ವೀಕರಿಸಿ, ಆನೇಕಲ್ ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿಸುತ್ತಾಳೆ. ಆದರೆ ಮುಂದೆ ಕ್ರಿ.ಶ.೧೮೦೦ರಲ್ಲಿ ದಿವಾನ್ ಪೂರ್ಣಯ್ಯನ ನೇತೃತ್ವದ ಮೈಸೂರು ಸರ್ಕಾರ, ಇವಳ ದತ್ತು ಮಗನ ಅಧಿಕಾರವನ್ನು ರದ್ದುಪಡಿಸಿ, ಆನೇಕಲ್ಲಿನ ಈ ಭಾಗವನ್ನು ಮೈಸೂರಿನೊಂದಿಗೆ ವಿಲೀನಗೊಳಿಸಿಕೊಂಡು ಇವರಿಗೆ ಪಿಂಚಣಿ ಮಂಜೂರು ಮಾಡುತ್ತದೆ[೨೦].

ಈ ಮೇಲಿನ ಉದಾಹರಣೆಗಳೆಲ್ಲ ಗಂಡುಮಕ್ಕಳ ದತ್ತಕದ ಕುರಿತಾಗಿವೆ. ಆದರೆ ಹೆಣ್ಣುಮಕ್ಕಳನ್ನು ದತ್ತುವಾಗಿ ಪಡೆದಿರುವುದಕ್ಕೂ ಪ್ರಾಚೀನ ರಾಜವಂಶದಲ್ಲಿಯೇ ಉದಾಹರಣೆ ನೋಡುತ್ತೇವೆ. ಹತ್ತನೆಯ ಶತಮಾನದ ಗಂಗದೊರೆ ರಕ್ಕಸಗಂಗನಿಗೆ ಸಂತಾನವಿಲ್ಲದಿದ್ದುದರಿಂದ ತನ್ನ ಸೋದರನ ಮಗಳು ಚಟ್ಟಲದೇವಿಯನ್ನು ದತ್ತು ತೆಗೆದುಕೊಂಡಿರುತ್ತಾನೆ. ಗಂಗರನ್ನು ಪರಾಭವಗೊಳಿಸಿ ಗಂಗಮಂಡಲವನ್ನು ಆಕ್ರಮಿಸಿದ ಚೋಳ ಕುಮಾರನಿಗೆ ರಕ್ಕಸಗಂಗನು ತನ್ನ ಸಾಕುಮಗಳನ್ನು ಕೊಟ್ಟು ವಿವಾಹ ನಡೆಸಿ ಸಂಬಂಧಬೆಳೆಸುತ್ತಾನೆ. ಚೋಳರು ಈ ಸಂಬಂಧದ ಕುರುಹಾಗಿ ತಮ್ಮ ಸಾಮಂತನಾಗಿ ಗಂಗರು ಆಳ್ವಿಕೆ ನಡೆಸಿಕೊಂಡು ಹೋಗಲು ಅನುಮತಿ ನೀಡುತ್ತಾರೆ.

ನಾಯಕನ ಮಡದಿ ನಾಗತಿಯು ದತ್ತುಪುತ್ರನ ಅಧಿಕಾರವನ್ನು ಮಂಜೂರು ಮಾಡಿದ ವಿಶೇಷ ಪ್ರಸಂಗವೊಂದು ದಾಖಲೆಯಾಗಿದೆ. ಹರಪ್ಪನಹಳ್ಳಿ ಪಾಳೆಯಗಾರ ಎರಡನೆಯ ಸೋಮಶೇಖರನ ಪರವಾಗಿ ಆಡಳಿತ ನಡೆಸುತ್ತಿದ್ದ ಅವನ ನಾಗತಿ ನೀಲಮ್ಮನ ಆಳ್ವಿಕೆಯಲ್ಲಿ ಹೊರಡಿಸಿರುವ ಕೆಲವು ನಿರೂಪಗಳು ದೊರೆತಿವೆ. ಇವುಗಳಲ್ಲಿ ಒಂದು ದಾಖಲೆಯಲ್ಲಿ ಇವಳು ಮಂಜೂರು ಮಾಡಿರುವ ಒಂದು ದತ್ತಕದ ವಿಷಯ ಪ್ರಸ್ತಾಪವಾಗಿದೆ. ಮಕ್ಕಳಿಲ್ಲದ ಕೊಟ್ರೆಗೌಡನು ಬಸವನಗೌಡ ಮತ್ತು ಬೆಟ್ಟನ ಗೌಡ ಎಂಬ ಇಬ್ಬರನ್ನು ದತ್ತುಪಡೆದಿರುತ್ತಾನೆ. ಈತನು ಮೃತನಾದಾಗ, ಗೌಡಿಕೆ ಯಾರಿಗೆ

ಹೋಗಬೇಕೆಂಬ ಕಲಹ ಉಂಟಾದಾಗ ನೀಲಮ್ಮನು ಅದನ್ನು ಬಗೆಹರಿಸುತ್ತಾ ಅವರೀರ್ವರಲ್ಲಿ ಬೆಟ್ಟನಗೌಡನಿಗೆ ಗೌಡಿಕೆ ನೀಡುತ್ತಾಳೆ[೨೧].

ಪ್ರಾಚೀನ ಕಾಲದ ಸಂಹಿತೆಗಳಲ್ಲಿ ತಿಳಿಸಿರುವಂತೆ, ದತ್ತು ತೆಗೆದುಕೊಳ್ಳುವಾಗ ವಿಧವಾ ರಾಣಿಯರಿಗೆ ಧಾರ್ಮಿಕ ಸಮಸ್ಯೆ ಎದುರಾದ ಉದಾಹರಣೆಗಳು ಕಂಡುಬಂದಿಲ್ಲ. ಪರಿಸ್ಥಿತಿಯ ಅನುಕೂಲ ಪ್ರತಿಕೂಲಗಳು ಇವರು ಪಡೆದುಕೊಂಡ ದತ್ತು ಪುತ್ರರಿಗೆ ರಾಜ್ಯ ಲಭಿಸುವಲ್ಲಿ ಕಾರಣವಾಗಿದೆ. ಮೈಸೂರಿನ ಲಕ್ಷ್ಮಮ್ಮಣ್ಣಿಯು ಬ್ರಿಟಿಶರ ಸಹಾಯದಿಂದ ತನ್ನ ದತ್ತು ಪುತ್ರನಿಗೆ ರಾಜ್ಯ ದೊರಕುವಂತೆ ಮಾಡಿದರೆ, ಕಿತ್ತೂರು ಸಂಸ್ಥಾನ, ಹರಪ್ಪನ ಹಳ್ಳಿ ಪಾಳೆಯಗಾರರು ಬ್ರಿಟಿಶರ ಕುತಂತ್ರಕ್ಕೆ ಬಲಿಯಾಗಿ ತಮ್ಮ ದತ್ತು ಪುತ್ರರಿಗೆ ರಾಜ್ಯವನ್ನು ಒದಗಿಸುವಲ್ಲಿ ವಿಫಲರಾಗುತ್ತಾರೆ. ಸುಗುಟೂರು ಮನೆತದವರಿಗೆ ಬ್ರಿಟಿಶರು ಅಧಿಕಾರ ನೀಡಿದರೂ ಮೈಸೂರು ಸಂಸ್ಥಾನ ಅದನ್ನು ಮಂಜೂರು ಮಾಡದೆ ಅವರ ಅಧಿಕಾರವನ್ನು ಮೊಟಕುಗೊಳಿಸುತ್ತದೆ. ಡಂಬಳದ ದೇಸಾಯಿ ಮನೆತನಕ್ಕೆ ಬ್ರಿಟಿಶ್ ಅಧಿಕಾರಿಗಳೇ ಸಹಾಯಮಾಡಿ ದತ್ತುಪುತ್ರನಿಗೆ ರಾಜ್ಯಪ್ರಾಪ್ತಿಯಾಗುವಂತೆ ಮಾಡಿದ್ದು ವಿಶೇಷ ಪ್ರಸಂಗವಾಗಿ ತೋರುತ್ತದೆ.

ಮೈಸೂರು, ಚಿತ್ರದುರ್ಗದ ರಾಣಿಯರು ಪರಿಸ್ಥಿತಿಯ ಕೈಗೊಂಬೆಗಳಾಗಿ, ಅರಮನೆಯವರ, ಅಧಿಕಾರಿಗಳ ಕುತಂತ್ರದಿಂದ ಪಟ್ಟ ಕಟ್ಟಿದ್ದ ದತ್ತುಕುಮಾರನನ್ನು ಕೆಳಗಿಳಿಸಿ ಮತ್ತೊಬ್ಬನನ್ನು ದತ್ತುವಾಗಿ ಪಡೆದು ಅವನಿಗೆ ಪಟ್ಟ ಕಟ್ಟಿರುವ ಪ್ರಸಂಗಗಳಿವೆ. ಮೈಸೂರರಸರಲ್ಲಿ ಪ್ರಸಿದ್ಧನಾದ ರಾಜ ಒಡೆಯರಿಗೆ ಪಟ್ಟಕಟ್ಟುವ ಸಂದರ್ಭದಲ್ಲಿಯೂ ಅವನ ತಾಯಿ ಈ ಹಿಂದೆ ಪಟ್ಟಕಟ್ಟಿದ್ದ ಬೆಟ್ಟದ ಚಾಮರಾಜನನ್ನು ದೂರದ ಊರಿಗೆ ಕಳುಹಿಸಿ ಅವನಿಲ್ಲದ ವೇಳೆಯಲ್ಲಿ ರಾಜಒಡೆಯರಿಗೆ ಪಟ್ಟ ಕಟ್ಟಿಸಿದ ವಿಚಾರವೂ ಇಂಥ ವಿಚಿತ್ರ ಪ್ರಸಂಗಗಳಲ್ಲೊಂದಾಗಿದೆ.

ಪತಿಯ ಮರಣಾನಂತರ ಸತಿಗೆ ಯಾವುದೇ ಅಧಿಕಾರವಿಲ್ಲವೆಂಬ ಪ್ರಾಚೀನ ಸ್ಮೃತಿ, ಸಂಹಿತೆಗಳನ್ನು ಮೀರಿಯೂ, ಕರ್ನಾಟಕದ ಅನೇಕ ರಾಣಿಯರು ತಮ್ಮ ಅಧಿಕಾರವನ್ನು ನಡೆಸಿದ್ದಾರೆ, ದತ್ತಕಪಡೆದು ಉತ್ತರಾಧಿಕಾರಿಗಳನ್ನು ನೇಮಿಸಿದ್ದಾರೆ. ಆದರೆ ಬ್ರಿಟಿಶ್ ಸರ್ಕಾರದಲ್ಲಿಯೇ ಇಂಥ ನೀತಿಗಳು ಹೆಚ್ಚು ಬಿಗಿಗೊಳ್ಳತೊಡಗಿದ್ದು ವಿಪರ್ಯಾಸ. ಆದರೆ ಥ್ಯಾಕರೆ ದತ್ತುಮಕ್ಕಳ ಹಕ್ಕಿನ ಕಾನೂನನ್ನು ಕಾರ್ಯಾಚರಣೆಗೆ ತರುವ ಮುನ್ನ ಹುಬ್ಬಳ್ಳಿಯ ಓರ್ವ ಶಾಸ್ತ್ರಿಗಳನ್ನು ದತ್ತಕದ ಕುರಿತಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದನೆಂದು ದಾಖಲೆಯೊಂದು (ಕ್ರಿ.ಶ.೧೮೨೦) ತಿಳಿಸುತ್ತದೆ. ಈ ಕಾಲದಲ್ಲಿ ಸ್ಥಳೀಯ ಪ್ರದೇಶಗಳಿಗೆ ಒಡೆಯರಾಗಿದ್ದ ದೇಸಾಯಿ, ನಾಯಕರ ಮನೆತನಗಳಲ್ಲದೆ, ಊರಿನ ಶ್ರೀಮಂತಮನೆತನಗಳಲ್ಲಿಯೂ ಇಂಥ ದತ್ತಕ ಕುರಿತಾದ

ಸಮಸ್ಯೆಗಳನ್ನು ಬ್ರಿಟಿಶರ ಕಾಲದಲ್ಲಿ ಬಗೆಹರಿಸಿರುವುದನ್ನು ಕುರಿತು ಮಹಾರಾಷ್ಟ್ರ ರಾಜ್ಯ ಪತ್ರಾಗಾರದಲ್ಲಿನ ದಾಖಲೆಗಳನ್ನು ಶ್ರೀನಿವಾಸ ಹಾವನೂರ ಅವರು ಗುರುತಿಸಿದ್ದಾರೆ[೨೨]. ಅವುಗಳಲ್ಲಿ ಒಂದು ಡಂಬಳದ ಬಳಿಯ ರಂಗಾಪುರದಲ್ಲಿನ ಶ್ರೀಮಂತ ಮನೆತನದ ಇಬ್ಬರು ಮಡದಿಯರೂ ಒಪ್ಪಿ ಪಡೆದ ದತ್ತುವನ್ನು, ಕೆಲಸಮಯದ ನಂತರ ಯಾವುದೋ ಕಾರಣದಿಂದ ಹಿರಿಯ ಹೆಂಡದಿ ಒಪ್ಪದೆ ಆ ದತ್ತಕವನ್ನು ರದ್ದುಪಡಿಸಿ ತನ್ನ ಮಗಳ ಮಗನನ್ನು ದತ್ತುವಾಗಿ ಪಡೆಯ ಬೇಕೆಂದು ಪಟ್ಟುಹಿಡಿಯುತ್ತಾಳೆ. ನೆರೆಯ ಊರಿನಲ್ಲಿ ದತ್ತಕ ವಿಧಿಯು ನೆರವೇರುತ್ತದೆ. ಆದರೆ ತಾನು ವಿಧವೆಯಾದ್ದರಿಂದ ಆ ಶಾಸ್ತ್ರದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಆಸ್ತಿಯ ವಾರಸುದಾರನ ಪ್ರಶ್ನೆ ಬಂದಾಗ ಈ ವ್ಯಾಜ್ಯವು ಸರ್ಕಾರದ ಮುಂದೆ ಬಗೆಹರಿಯದ ಸಮಸ್ಯೆಯಾಯಿತು. ಹನ್ನೆರಡು ಜನ ಸದ್ಗೃಹಸ್ಥರ ಪಂಚಾಯಿತಿ ನಡೆಸಿ ಮೊದಲನೆಯ ದತ್ತಕ ಶಾಸ್ತ್ರರೀತ್ಯ ಸಿಂಧುವಾಗಿರುವಾಗ ಮತ್ತೊಂದು ದತ್ತಕ ಹುಡುಗನನ್ನು ತರುವುದಕ್ಕೆ ಶಾಸ್ತ್ರ ಸಮ್ಮತಿಯಿಲ್ಲವೆಂದು ನಿರ್ಧರಿಸಲಾಯಿತು. ಇದೇ ಪ್ರಕಾರದ ಕುರ್ತುಕೋಟಿ ಗೌಡರ ಮನೆತನದ ಮತ್ತೊಂದು ವ್ಯಾಜ್ಯ ಲಂಡನ್ನಿನ ಪ್ರೀವಿಕೌನ್ಸಿಲ್‌ವರೆಗೂ ಹೋಗಿ ಬಂದದ್ದು, ದತ್ತಕದ ಕುರಿತಾದ ವ್ಯಾಜ್ಯದ ತೀವ್ರತೆಯನ್ನು ತಿಳಿಸುತ್ತದೆ.

ಬ್ರಿಟಿಶರ ಕಾಲದ ಕೆಲವು ಕಡತಗಳು, ಬಖೈರು, ಕೈಫಿಯತ್ತು ಮೊದಲಾದವು ಇತ್ತೀಚಿನ ಪ್ರಸಂಗಗಳನ್ನು ಕುರಿತು ತಿಳಿಸುವ ದಾಖಲೆಗಳಾದರೆ, ಪ್ರಾಚೀನ ಕಾಲದ ವಿಚಾರಗಳನ್ನು ತಿಳಿಯಲು ಶಾಸನ, ಕಾವ್ಯಗಳಿಗೆ ಮೊರೆಹೋಗಬೇಕಾದ್ದು ಅನಿವಾರ್ಯ. ಆಯಾಕಾಲದ ಅವಶ್ಯಕತೆ, ಪ್ರಚಲಿತ ವಿದ್ಯಮಾನಗಳ ಕುರಿತಾಗಿ ಅಂದಿನ ಸಾಹಿತ್ಯ ಬಿಂಬಿಸುತ್ತದೆ ಎನ್ನುವುದನ್ನು ಸಾಹಿತ್ಯ ಚರಿತ್ರೆಗಳಲ್ಲಿ ಕಾಣುತ್ತೇವೆ. ಗಂಗದೊರೆ ಮಾಧವನಿಂದ ರಚಿಸಲ್ಪಟ್ಟ ದತ್ತಕ ನಿರ್ಣಯ ಗ್ರಂಥವೊಂದು ಅಂದಿನ ಕಾಲದಲ್ಲಿ ದತ್ತಕವನ್ನು ಕುರಿತಾಗಿ ನಡೆದಿರಬಹುದಾದ ಜಿಜ್ಞಾಸೆ, ಧರ್ಮಸೂಕ್ಷ್ಮತೆಗಳ ಸಮಸ್ಯೆಗಳಿದ್ದುದನ್ನು ಜೊತೆಗೆ ದತ್ತಕ ವಿಧಿಗಳು ನಡೆಯುತ್ತಿದ್ದುದರ ಕುರಿತಾಗಿ ಬೆಳಕು ಚೆಲ್ಲುತ್ತದೆ.

ಹಲವಾರು ರಾಜಮನೆತನಗಳು ಸೂಕ್ತ ಉತ್ತರಾಧಿಕಾರಿಗಳಿಲ್ಲದೆಯೆ ಅವಸಾನಗೊಂಡಿರುವುದನ್ನು ಇತಿಹಾಸದಲ್ಲಿ ಕಾಣುತ್ತೇವೆ. ಈ ಪ್ರಬಂಧದಲ್ಲಿ ಉಲ್ಲೇಖಿತರಾಗಿರುವ ರಾಣಿಯರು ಇಂಥ ಸಂದರ್ಭಗಳಲ್ಲಿ ದಿಟ್ಟತನ ತೋರಿ ತಾವೇ ಅಧಿಕಾರ ಕೈಗೊಂಡು, ಉತ್ತರಾಧಿಕಾರಿಗಳನ್ನು ನೇಮಿಸಿ ತಮ್ಮ ವಂಶ ಮುಂದುವರೆಯುವುದರಲ್ಲಿ, ಸಾಹಸ ಮೆರೆದ ಕೆಲವು ಪ್ರಸಂಗಗಳನ್ನು ನೋಡುತ್ತೇವೆ. ಆದರೆ ಸೂಕ್ತ ಮಾರ್ಗದರ್ಶನ, ಸಹಕಾರಗಳ ಕೊರತೆಯಿಂದಾಗಿ ಕೆಲವರು ಸಫಲತೆಯನ್ನು

ಕಾಣದೆಹೋಗಿದ್ದಾರೆ. ಕೆಳದಿಯ ಚನ್ನಮ್ಮ ಅಧಿಕಾರದ ಚುಕ್ಕಾಣಿ ಹಿಡಿದಾಗ ಹೊರಗಿನ ಶತ್ರುಗಳನ್ನು ನಿಗ್ರಹಿಸುವುದಲ್ಲದೆ ಒಳಗಿನ ಶತ್ರುಗಳನ್ನು ನಿರ್ಮೂಲನಗೊಳಿಸಿದಳು. ತಾನು ಪಟ್ಟಕ್ಕೆ ಬರುವಮುನ್ನ ವಿರೋಧಿಸಿದ ಕಾಸರಗೋಡು ತಿಮ್ಮಣ್ಣನಾಯಕ, ಸುಬ್ಬುನೀಸರ ಮನವೊಲಿಸಿ ಅಭಿಮಾನ ಸಂಪಾದಿಸಿದಳು, ಇವಳನ್ನು ಕೊಲ್ಲಲು ಬಂದ ಚಟನೀಸ ಗಿರಿಯಪ್ಪನನ್ನು ಹೋರಾಟದಲ್ಲಿ ಹತ್ಯೆಗೈದು, ಮರೆಭೋವಿಗೆ ಮರಣದಂಡನೆ ವಿಧಿಸಿ ದೇಶದ ಒಳಶತ್ರುಗಳನ್ನು ನಿಗ್ರಹಿಸಿದಳು. ಹೊರಗಿನ ಶತ್ರುಗಳೊಂದಿಗೆ ಪರಿಸ್ಥಿತಿಗನುಗುಣವಾಗಿ ಹೋರಾಟ, ಒಪ್ಪಂದ, ಕಪ್ಪಕಾಣಿಕೆ, ಸಹಕಾರಗಳನ್ನು ನೀಡುವುದರೊಂದಿಗೆ ವ್ಯವಹರಿಸಿ ರಾಜ್ಯದ ಸುಸ್ಥಿತಿ ಕಾಪಾಡಿದಳು. ಇವಳ ಈ ರಾಜಕೀಯ ತಂತ್ರ, ಕುಶಲ ಬುದ್ಧಿ ಇವಳ ನಂತರದ ಕೆಲವು ವರ್ಷಗಳಲ್ಲಿ ಆಡಳಿತ ನಡೆಸಿದ ಕೆಳದಿ ಚನ್ನವೀರಮ್ಮಾಜಿಗೆ ಇರಲಿಲ್ಲ. ಇವಳು ಆಂತರಿಕ ಶತ್ರುಗಳನ್ನು ಅರಿಯುವಲ್ಲಿ ವಿಫಲಳಾದಳು, ಹೈದರ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳುವಲ್ಲಿ ಚಾಣಕ್ಷತನ ತೋರಲಿಲ್ಲ. ಇವಳ ಮೊದಲ ದತ್ತುಪುತ್ರ ವಿಧಿವಶನಾದದ್ದು ಇವಳ ದುರ್ವಿಧಿಯಾಯ್ತು, ಇವಳನ್ನು ಕುರಿತಂತೆ ಕೆಳದಿ, ಶೃಂಗೇರಿ ಮಠದ ಧರ್ಮಾಧಿಕಾರಿಗಳು ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ, ಇವಳು ಧರ್ಮಬೀರುವೆನಿಸಿದ್ದರೂ, ಅಪವಾದದ ಸುಳಿಗೆ ಸಿಲುಕಿದಳು. ಇವಳ ಸೋಲಿಗೆ ಇವೆಲ್ಲವೂ ಕಾರಣವಾಯಿತು.

ಕಿತ್ತೂರು ಚೆನ್ನಮ್ಮ ಅಧಿಕಾರ ವಹಿಸಿಕೊಳ್ಳುವ ವೇಳೆಗಾಗಲೇ, ರುದ್ರಸರ್ಜನ ಕಾಲದಲ್ಲಿಯೇ ಬ್ರಿಟಿಶರು ಕಿತ್ತೂರಿನ ಆಂತರಿಕ ವ್ಯವಹಾರದಲ್ಲಿ ಅಧಿಕಾರ ಚಲಾಯಿಸುವ ಹಂತಕ್ಕೆ ಬಂದಿದ್ದರು. ಅಲ್ಲದೆ ಚೆನ್ನಮ್ಮಳು ತನ್ನ ಸುತ್ತಲಿನ ನಯವಂಚಕರನ್ನು ಗುರುತಿಸದೇ ಹೋದದ್ದು, ಬ್ರಿಟಿಶರೊಂದಿಗೆ ಗೆಲುವು ಸಾಧಿಸಲು ಸಾಧ್ಯವಾಗದೆ ಹೋಗಲು ಕಾರಣವಾಯಿತು.

ಕರ್ನಾಟಕದ ರಾಜಮನೆತನಗಳಲ್ಲಿ ನಡೆದ ದತ್ತಕಗಳು ಕುತೂಹಲಕಾರಿ ವಿಚಾರಗಳನ್ನೊಳಗೊಂಡಿದೆ. ಇದು ಆಯಾಕಾಲದ ಧಾರ್ಮಿಕ ವಿಧಿ, ರಾಜಕೀಯ ಪರಿಸ್ಥಿತಿ, ರಾಣಿಯರ ಜಾಣ್ಮೆ-ಸಾಹಸ ಮೊದಲಾದವುಗಳನ್ನು ಕುರಿತು ತಿಳಿಸುತ್ತದೆ. ಕರ್ನಾಟಕದ ರಾಜಮನೆತನಗಳಲ್ಲಿ ಕಂಡುಬಂದ ಇಂಥ ಕೆಲವು ಉದಾಹರಣೆಗಳನ್ನು ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಈ ಕುರಿತಂತೆ ಸಮಗ್ರ ಅಧ್ಯಯನ ನಡೆಯುವ ಅವಶ್ಯಕತೆಯಿದ್ದು, ಈ ಪ್ರಬಂಧದಲ್ಲಿ ಒಂದು ಸಣ್ಣ ಪ್ರಯತ್ನ ನಡೆಸಲಾಗಿದೆ.

ಅಡಿಟಿಪ್ಪಣಿ ಹಾಗೂ ಪರಾಮರ್ಶನ ಗ್ರಂಥಗಳು

೧. ಡಾ|ಪಿ.ವಿ.ಕಾಣೆ, ಹಿಸ್ಟರಿ ಆಫ್ ಧರ್ಮಶಾಸ್ತ್ರ, ಸಂಪುಟ.೩, ಭಂಡಾರ್‌ಕರ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯುಟ್ ೧೯೭೩. ಪು.೬೬೯

೨. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ, ಪುರಾಣನಾಮ ಚೂಡಾಮಣಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಪು.೧೦೦

೩. ಗೋವಿಂದ ಪೈ, ಪುನ್ನಾಟದ ಅರಸರು, ಗೋವಿಂದ ಪೈ ಸಂಶೋಧನ ಸಂಪುಟ, ಉಡುಪಿ, ಪು.೭೮೭

೪. ಬಿ.ರಾಮಕೃಷ್ಣರಾವ್, ಶ್ರೀಮನ್ಮಹಾರಾಜರ ವಂಶಾವಳಿ, ಸಂಪುಟ ೧, ಬೆಂಗಳೂರು, ೧೯೧೬.

೫. ಐಯಂಗಾರ್ ಎಸ್.ಕೆ.ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ. ಪು.೧೭೮

೬. ಲಿಂಗಣ್ಣಕವಿ, ಕೆಳದಿನೃಪವಿಜಯ, ಅಷ್ಟಮಾಶ್ವಾಸ ೩೦–೩೧, ಗದ್ಯ

೭. ಲಿಂಗಣ್ಣಕವಿ, ಕೆಳದಿನೃಪವಿಜಯ, ನವಮಾಶ್ವಾಸ ೧, ಗದ್ಯ

೮. ವೈ.ಎಂ.ಕುಮುದಿನಿ, ಕನ್ನಡದ ಸಂಭಾವ್ಯ ರಾಣಿಯರು, ರವಿಪ್ರಕಾಶನ, ಬೆಂಗಳೂರು–೪೦

೯. ಕುಂ.ಬಾ.ಸದಾಶಿವಪ್ಪ, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೦. ಬಿ.ರಾಮಕೃಷ್ಣ, ಶ್ರೀಮನ್ಮಹಾರಾಜರ ವಂಶಾವಳಿ, ಸಂಪುಟ ೧, ಬೆಂಗಳೂರು, ೧೯೧೬.

೧೧. ಬಿ.ರಾಜಶೇಖರಪ್ಪ, ಚಿತ್ರದುರ್ಗ ನಾಯಕರು ರಾಜಕೀಯ ಇತಿಹಾಸ, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯೧

೧೨. ಲಿಂಗಣ್ಣಕವಿ, ಕೆಳದಿನೃಪವಿಜಯ, ಏಕಾದಶಾಶ್ವಾಸ ೩೯–೫೨

೧೩. ವೈ.ಎಂ.ಕುಮುದಿನಿ, ಕನ್ನಡದ ಸಂಭಾವ್ಯ ರಾಣಿಯರು, ರವಿಪ್ರಕಾಶನ, ಬೆಂಗಳೂರು–೪೦. ಪು.೯೨.

೧೪. ನಾಗಭೂಷಣ ಎಸ್.ಎಂ, ಉಜ್ಜಿನಿಯಲ್ಲಿ ಕೆಳದಿ ರಾಣಿ ವೀರಮ್ಮಾಜಿ ಸಮಾಧಿ ಶೋಧನೆ, ಇತಿಹಾಸ ದರ್ಶನ ಸಂ.೯ (೧೯೯೪) ಪು.೧೫೨–೧೫೩

೧೫. ಶರಣಬಸಪ್ಪ ಪಿ.ಕೋಲ್ಕಾರ, ಕನಕಗಿರಿ ಪ್ರದೇಶಗಳ ಸ್ಮಾರಕಗಳು ಮತ್ತು ಮೂರ್ತಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪, ಪು.೫೮; ಅಮರೇಶ ಯತಗಲ್, ಕನಕಗಿರಿ ನಾಯಕ ಅರಸರು, ಕೊಪ್ಪಳ ಇತಿಹಾಸ ಮತ್ತು ಪುರಾತತ್ವ, ಮೈಸೂರು, ೨೦೧೦

೧೬. ಇತಿಹಾಸ ದರ್ಶನ ಸಂಪುಟ ೨೬, ೨೦೧೧. ರಜತೋತ್ಸವ ವರ್ಷ ಸಂಪುಟ.

೧೭. ಚೆನ್ನಕ್ಕ ಪಾವಟೆ, ರಾಣಿ ಕಿತ್ತೂರು ಚೆನ್ನಮ್ಮ, ಚನ್ನಗಂಗಾ ಪ್ರಕಾಶನ, ಧಾರವಾಡ

೧೮. ಕುಂ.ಬಾ.ಸದಾಶಿವಪ್ಪ, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೯. ಡಾ॥ಶ್ರೀನಿವಾಸ ಹಾವನೂರ, ದತ್ತಕ ವಿಧಿ–ಮುಂಬಯಿ ಕರ್ನಾಟಕದ ಕೆಲವು ಘಟನೆಗಳು, ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

೨೦. ಪಿ.ವಿ.ಕೃಷ್ಣಮೂರ್ತಿ, ಸುಗುಟೂರು ಪ್ರಭುಗಳು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೯೧

೨೧. ಕುಂ.ಬಾ.ಸದಾಶಿವಪ್ಪ, ಹರಪನಹಳ್ಳಿ ಪಾಳೆಯಗಾರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೨. ಡಾ॥ ಶ್ರೀನಿವಾಸ ಹಾವನೂರ, ದತ್ತಕ ವಿಧಿ–ಮುಂಬಯಿ ಕರ್ನಾಟಕದ ಕೆಲವು ಘಟನೆಗಳು, ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೬. ಪಂಚಬಾಣನ ಭುಜಬಲಿ ಚರಿತೆಯ ರಚನೆಯ ಕಾಲ, ಹಸ್ತಪ್ರತಿಗಳು ಹಾಗೂ ಇತರ ಅಂಶಗಳು

–ಎಸ್. ಕಾರ್ತಿಕ್*

ಪಂಚಬಾಣನು ಭುಜಬಲಿ ಚರಿತೆ ಎಂಬ ಸಾಂಗತ್ಯ ಕಾವ್ಯವನ್ನು ರಚಿಸಿದ್ದಾನೆ. ಇದು ಭರತ ಬಾಹುಬಲಿ ಇವರ ಚರಿತ್ರೆಯಾಗಿದೆ. ಆದರೆ ಕವಿಯ ಕಾಲದ ಬಗೆಗೆ ಸರಿಯಾದ ವಿಶ್ಲೇಷಣೆ ನಡೆದಿಲ್ಲ. ಇದೂ ಅಲ್ಲದೆ ಈ ಕಾವ್ಯದಲ್ಲಿ ಕೆಲವು ಐತಿಹಾಸಿಕ ಅಂಶಗಳು ಕೂಡ ಕಂಡು ಬರುತ್ತವೆ. ಈ ಕಾವ್ಯವು ಈಚೆಗೆ ೨೦೧೧ ರಲ್ಲಿ ವೈ. ಸಿ. ಭಾನುಮತಿ ಅವರಿಂದ ಸಂಪಾದಿತವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಪ್ರಕಟವಾಗಿದೆ. ಇದರ ಪೀಠಿಕೆಯಲ್ಲಿ ಪಂಚಬಾಣ ಕವಿಯ ಇತಿವೃತ್ತ, ಕಾವ್ಯದ ವೈಶಿಷ್ಟ್ಯ ಇತ್ಯಾದಿ ಅಂಶಗಳನ್ನು ಕುರಿತು ಸಂಪಾದಕರು ವಿಸ್ತಾರವಾಗಿ ವಿವೇಚಿಸಿದ್ದಾರೆ. ಆದರೂ ಕೂಡ ಕವಿಯ ಕಾಲ ಮತ್ತು ಭುಜಬಲಿ ಚರಿತೆಯ ಹಸ್ತಪ್ರತಿಗಳ ಕಾಲಗಳ ಬಗೆಗೆ ಅನೇಕ ಗೊಂದಲಗಳು ಉಳಿದುಕೊಂಡಿವೆ. ಆದ ಕಾರಣ ಪ್ರಕೃತ ಲೇಖನದಲ್ಲಿ ಪಂಚಬಾಣ ಕವಿಯ ಇತಿವೃತ್ತದಿಂದ ಹಿಡಿದು ಕೃತಿರಚನೆಯ ಕಾಲ ಹಾಗೂ ಇತರ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ಪಂಚಬಾಣ ಕವಿಯ ತಂದೆ ಮತ್ತು ವಿದ್ಯಾಗುರು ಸ್ಥಾನಿಕ ಚನ್ನಪ್ಪಯ್ಯ[೧]. ಅಣ್ಣಂದಿರು ಬೊಮ್ಮಪ್ಪ, ದೆಪ್ಪಯ್ಯ. ಈತನ ಮಗನ ವಿವರ ಕೂಡ ತಿಳಿದು ಬಂದಿದ್ದು ಮುಂದೆ ವಿವರಗಳನ್ನು ನೀಡಲಾಗಿದೆ. ಕವಿಯ ಸ್ಥಳ ಶ್ರವಣಬೆಳಗೊಳ. ಈತ ಕಾವ್ಯವನ್ನು ರಚಿಸಿದ ಕಾಲವನ್ನು ಸ್ಪಷ್ಟವಾಗಿ ಹೇಳಲು ಆಧಾರಗಳಿಲ್ಲವಾದರೂ ಒಂದೆರಡು ಸೂಚನೆಗಳು ದೊರಕುತ್ತವೆ. ಅವುಗಳ ವಿವರಗಳಿಂತಿದೆ.

* # ೬೫ [೧ ಮಹಡಿ], ೩ ನೆಯ ಅಡ್ಡರಸ್ತೆ , ಶಿಕ್ಷಕರ ಬಡಾವಣೆ, ೧ ನೆಯ ಹಂತ, ಜೆ.ಪಿ. ನಗರ ಅಂಚೆ , ಬೆಂಗಳೂರು–೫೬೦೦೭೮. ಮೊಬೈಲ್ : ೯೪೪೮೩೨೪೧೨೨.

೧. ಕವಿಯ ಸ್ವಹಸ್ತಾಕ್ಷರ ಪ್ರತಿ ದೊರೆತಿದ್ದು ಅದರ ಪುಷ್ಪಿಕಾ ಗದ್ಯದಲ್ಲಿ "ಆನಂದ ಸಂವತ್ಸರದ ಮಾರ್ಗಶಿರ ಶು ೫ ಬುಧವಾರ ಬೆಳಗುಳದ ಸ್ಥಾನಿಕ ಚೆನ್ನಪ್ಪಯ್ಯನ ಮಗ ಕವಿ ಪಂಚಬಾಣನು ಕವಿತ್ವವ ಹೇಳಿ ತನ್ನ ಸ್ವಹಸ್ತದಲ್ಲಿ ಬರೆದ ಪುಸ್ತಕಕ್ಕೆ ಮಂಗಳ ಮಹಾಶ್ರೀ" ಎಂದಿದೆ.

೨. ಈ ಕಾವ್ಯದ ಅಂತ್ಯದಲ್ಲಿ ಶಾಂತವರ್ಣಿ ನಡೆಸಿದ ಮಹಾಮಸ್ತಕಾಭಿಷೇಕದ ಕಾಲವನ್ನು ಹೇಳಲಾಗಿದ್ದು ಆ ಪದ್ಯವಿಂತಿದೆ.

ವರ ಶಕವರುಷ ಸಾವಿರದೈನೂರಜ್ನಾಲ್ವತ್ತ । ಪರಿಧಾವಿ ಸಂವತ್ಸರದ

ನೆಜಿ ಚೈತ್ರಮಾಸ ಪೌರ್ಣಮಿಯಿಂದುವಾರದಿ । ಅರುಹ ಗೊಮ್ಮಟ ಜಿನೇಶ್ವರನಿಗೆ ॥ ೨೩-೧೦೬ ॥

ಆರ್. ನರಸಿಂಹಾಚಾರ್ಯರು ಕವಿಯ ಸ್ವಹಸ್ತಾಕ್ಷರ ಪ್ರತಿಯನ್ನೇ ಗಮನಿಸಿ ಇದರಲ್ಲಿನ ಆನಂದ ಸಂವತ್ಸರವು ಕ್ರಿ.ಶ. ೧೬೧೪ ರಲ್ಲಿ ಬರುತ್ತದೆ. ಆದ ಕಾರಣ ಇದೇ ಕವಿಯ ಕಾಲ ಎಂದು ಹೇಳಿದ್ದಾರೆ[೨]. ಇದು ಹಸ್ತಪ್ರತಿ ಪ್ರತಿಯಾದ ಕಾಲವೇ ಹೊರತು ಕಾವ್ಯದ ರಚನೆಯ ಕಾಲವಲ್ಲ. ಆದರೆ ನರಸಿಂಹಾಚಾರ್ಯರು ಶಾಂತವರ್ಣಿ ಶ್ರವಣಬೆಳಗೊಳದ ಗೊಮ್ಮಟನಿಗೆ ನಡಸಿದ ಮಹಾಮಸ್ತಕಾಭಿಷೇಕದ ಕಾಲವನ್ನು ಶಕ ೧೫೩೫ ಪರಿಧಾವಿ ಎಂದರೆ ೧೬೧೨ ಎಂದು ಬರೆದಿರುವುದು ಗಮನಾರ್ಹ ಅಂಶ. ಜೊತೆಗೆ ಈ ಸಂಧಿ ಮೂಲ ಗ್ರಂಥಕ್ಕೆ ಸೇರಿದುದಲ್ಲವೆಂಬ ಅನುಮಾನವನ್ನು ಸಹ ವ್ಯಕ್ತಪಡಿಸಿದ್ದಾರೆ[೩]. ಇದನ್ನು ಪೂರ್ಣವಾಗಿ ಸಮರ್ಥಿಸಲು ಆಧಾರಗಳ ಕೊರತೆಯಿದೆ. ಕವಿಯ ಸ್ವಹಸ್ತಾಕ್ಷರ ಪ್ರತಿಯ ಆಧಾರದ ಮೇಲೆಯೇ ಮುದ್ರಿತವಾದ ಪಾಠದಲ್ಲಿ ಶಕ ೧೫೪೦ ಪರಿಧಾವಿ ಸಂವತ್ಸರ ಎಂದಿದೆ. ಆರ್. ನರಸಿಂಹಾಚಾರ್ಯರು ಬೇರೆ ಯಾವುದಾದರೂ ಹಸ್ತಪ್ರತಿಯ ಆಧಾರದಿಂದ ಈ ರೀತಿ ಬರೆದಿರುವರೇ ಎಂಬ ಅಂಶ ತಿಳಿಯದಾಗಿದೆ. ಇಂತಹ ಭಿನ್ನಪಾಠದಿಂದಾಗಿ ತೊಡಕು ಹೆಚ್ಚಾಗಿದೆ. ಇದೇ ಅಂಶಗಳನ್ನೇ ವೈ. ಸಿ. ಭಾನುಮತಿ ಅವರೂ ಬರೆದಿದ್ದಾರೆ; ತೊಡಕುಗಳನ್ನು ಗಮನಿಸಿದ್ದಾರೆ. ಆದರೆ ಇವುಗಳ ಕಾಲಗಣನೆಯ ಬಗೆಗೆ ಹೆಚ್ಚಿನ ವಿಶ್ಲೇಷಣೆ ನಡೆಸಲು ಹೋಗಿಲ್ಲ. ಪ್ರಕೃತ ಲೇಖನದಲ್ಲಿ ಇವುಗಳ ಬಗೆಗೆ ವಿಸ್ತೃತವಾಗಿ ವಿಶ್ಲೇಷಿಸಲಾಗಿದೆ.

೧. ಶಾಂತವರ್ಣಿ ಮಹಾಮಸ್ತಕಾಭಿಷೇಕ ನಡೆಸಿದ ಕಾಲವನ್ನು ಕವಿಯ ಸ್ವಹಸ್ತಾಕ್ಷರ ಹಸ್ತಪ್ರತಿಯಲ್ಲಿ ಶಕ ೧೫೪೦ ಪರಿಧಾವಿ ಸಂವತ್ಸರ ನೆಜಿ ಚೈತ್ರಮಾಸ, ಹುಣ್ಣಿಮೆ, ಇಂದುವಾರ (=ಸೋಮವಾರ) ಎಂದು ಹೇಳಲಾಗಿದೆ. ಶಕ ೧೫೪೦ ರಲ್ಲಿ ಪರಿಧಾವಿ ಸಂವತ್ಸರ ಬರುವುದಿಲ್ಲ. ಕಾಳಯುಕ್ತಿ ಸಂವತ್ಸರ ಇರುತ್ತದೆ. ಆದ ಕಾರಣ ಈ ಪಾಠವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

೨. ಆರ್. ನರಸಿಂಹಾಚಾರ್ಯರು ಕವಿಚರಿತೆಯಲ್ಲಿ ಶಾಂತವರ್ಣಿ ಮಹಾಮಸ್ತಕಾಭಿಷೇಕ ನಡಸಿದ ಕಾಲವನ್ನು ಶಕ ೧೫೩೫ ಪರಿಧಾವಿ ಎಂದು ಮಾತ್ರ ಹೇಳಿದ್ದಾರೆ. ತಿಥಿ, ವಾರ, ಮಾಸ ಇವುಗಳ ವಿವರಗಳನ್ನು ದಾಖಲಿಸಿಲ್ಲ. ಆದರೂ ಶಕ ೧೫೩೫, ಪರಿಧಾವಿ ಸಂವತ್ಸರ, ಚೈತ್ರ ಹುಣ್ಣಿಮೆ, ಸೋಮವಾರ ಎಂದು ಭಾವಿಸಿದರೆ ಇದು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೬-೪-೧೬೧೨, ಸೋಮವಾರಕ್ಕೆ ಸರಿಹೊಂದುತ್ತದೆ. ಆದರೆ ಅಂದು ಹುಣ್ಣಿಮೆ ಇರುವುದಿಲ್ಲ. ಹುಣ್ಣಿಮೆ ಭಾನುವಾರ ಸಂಜೆ ಐದು ಘಂಟೆ, ನಾಲ್ಕು ನಿಮಿಷದ ವರೆಗೆ ಮಾತ್ರ ಇರುತ್ತದೆ. ಕವಿಯ ಸ್ವಹಸ್ತಾಕ್ಷರ ಹಸ್ತಪ್ರತಿಯ ಪಾಠದಲ್ಲಿ ನೆಱೆ ಚೈತ್ರಮಾಸ ಎಂದಿರುವುದು ಗಮನಾರ್ಹ. ಶಕ ೧೫೩೫ ಪರಿಧಾವಿ ಸಂವತ್ಸರವನ್ನು ವರ್ತಮಾನ ವರ್ಷವಾಗಿ ಗ್ರಹಿಸಿ, ನೆಱೆ ಚೈತ್ರಮಾಸ ಎಂಬುದನ್ನು ಹಿಂದಿನ ವರ್ಷದ ಎಂಬ ಅರ್ಥದಲ್ಲಿ ಗ್ರಹಿಸಿದರೆ ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೧೮-೩-೧೬೧೧, ಸೋಮವಾರ, ವಿರೋಧಿಕೃತ್ ಸಂವತ್ಸರ, ಚೈತ್ರಮಾಸದ ಹುಣ್ಣಿಮೆಗೆ ಯಾವುದೇ ಗೊಂದಲಗಳಿಲ್ಲದೆ ಸರಿಹೊಂದುತ್ತದೆ. ಬಹುಶಃ ಇದೇ ಕಾಲವೇ ಸರಿ ಎಂದು ಕಾಣುತ್ತದೆ. ಈ ಎಲ್ಲ ಕಾರಣಗಳಿಂದ ಶಾಂತವರ್ಣಿ ಮಹಾ ಮಸ್ತಕಾಭಿಷೇಕ ನಡೆಸಿದ ಕಾಲ ವಿರೋಧಿಕೃತ್ ಸಂವತ್ಸರ, ಚೈತ್ರಮಾಸದ ಹುಣ್ಣಿಮೆ, ಸೋಮವಾರ (ಕ್ರಿ.ಶ. ೧೮-೩-೧೬೧೧) ಎಂದು ಖಚಿತವಾಗಿ ಹೇಳಬಹುದು [ಇದನ್ನು ಒಪ್ಪಲು ಸಾಧ್ಯವಿಲ್ಲದಿದ್ದರೆ ಕ್ರಿ.ಶ. ೬-೪-೧೬೧೨, ಸೋಮವಾರವನ್ನೇ ಪರಿಗಣಿಸಬಹುದು. ಆದರೆ ಆದಿನ ಹುಣ್ಣಿಮೆ ಇರಲಿಲ್ಲವೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇತರ ಕವಿಗಳ ಮತ್ತು ಶಾಸನಗಳ ಕಾಲವೂ ಸಹ ಇಂತಹುದೇ ತೊಡಕುಗಳಿಂದ ಕೂಡಿದ್ದು ಸೂಚಿತವಾಗಿರುವ ಕಾಲಕ್ಕಿಂತ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ].


೩. ಭುಜಬಲಿ ಚರಿತೆಯ ಕವಿ ಪಂಚಬಾಣನ ಸ್ವಹಸ್ತಾಕ್ಷರ ಪ್ರತಿಯೇ ದೊರಕಿದ್ದು ಇದರಲ್ಲಿ ಕಾವ್ಯವನ್ನು ಪ್ರತಿಮಾಡಿದ ಕಾಲ 'ಆನಂದ ಸಂವತ್ಸರ ಮಾರ್ಗಶಿರ ಶುದ್ಧ ೫ (=ಪಂಚಮಿ)' ಎಂದು ದಾಖಲಾಗಿದೆ. ಆರ್. ನರಸಿಂಹಾಚಾರ್ಯರು ಈ ಆನಂದ ಸಂವತ್ಸರ ಕ್ರಿ.ಶ. ೧೬೧೪ ಆಗಿರಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಸಮರ್ಥನೀಯವೇ ಆಗಿದೆ. ಇದು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೨೪-೧೧-೧೬೧೪, ಬುಧವಾರಕ್ಕೆ ಸರಿಹೊಂದುತ್ತದೆ. ಹಸ್ತಪ್ರತಿಯ ಲಿಪಿಯೂ ಇದಕ್ಕೆ ಪೋಷಕವಾಗಿಯೇ ಇದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಭುಜಬಲಿ ಚರಿತೆಯ ರಚನೆಯ ಕಾಲವನ್ನು ಕ್ರಿ.ಶ. ೧೬೧೧-೧೬೧೪ ರೊಳಗೆ ಎಂದು ಖಚಿತವಾಗಿ ಹೇಳಬಹುದು.

ಪಂಚಬಾಣನ ಮಗನ ಹೆಸರು 'ಶಾಂತಿರಾಜ ಉಪಾಧ್ಯಾಯ'ನೆಂದು ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿರುವ ಸಂ. ೮೩ ಸಂಖ್ಯೆಯ ಶಾಕಟಾಯನ ಪ್ರಕ್ರಿಯಾ ಎಂಬ ಓಲೆಗರಿ ಹಸ್ತಪ್ರತಿಯ ಕೊನೆಯಲ್ಲಿನ ಪುಷ್ಪಿಕಾ ಗದ್ಯದಿಂದ ತಿಳಿಯುಬಹುದು. ಈತ ಮಂಗಾಯಿ ಬಸದಿಯಲ್ಲಿನ ಅನಂತಸ್ವಾಮಿಯ ಅರ್ಚನಾಧಾರಕನೆಂದು ತಿಳಿದುಬರುತ್ತದೆ. ಅದರ ಭಾಗವಿಂತಿದೆ[೪].

ಶಾಲಿವಾಹನ ಶಕವರ್ಷ ೧೭೨೦ ನೆಯ ಸರ್ವದಾರಿ ಸಂವತ್ಸರದ ಭಾದ್ರಪದ ಶುದ್ಧ ೧೪ ಶುಕ್ರವಾರ ಮಂಗಾಯಿ ಬಸದಿ ಅನಂತಸ್ವಾಮಿ ಅರ್ಚನಾಧಾರಕನಾದ ಪಂಚಬಾಣ ಕವಿ ಪುತ್ರನಾದ ಶಾಂತಿರಾಜುಪಾಧ್ಯಾಯನು ಹಿರಿ ಆದಿವರ್ಣಿಗಳ ಬಳಿಯಲ್ಲಿ ಯೀ ಶಾಕಟಾಯ ವ್ಯಾಕರಣವಂನು ಬರದ ಪುಸ್ತಕಕ್ಕೆ ಭದ್ರಂ ಭೂಯಾತ್

ಶಕ ೧೭೨೦ ಸರ್ವಧಾರಿ ಸಂವತ್ಸರ ಭಾದ್ರಪದ ಶುದ್ಧ ೧೪ (=ಚತುರ್ದಶಿ) ಶುಕ್ರವಾರವು ಚಾಂದ್ರಮಾನ ಪಂಚಾಂಗದಂತೆ ಕ್ರಿ.ಶ. ೨೦–೮–೧೭೪೮, ಶುಕ್ರವಾರಕ್ಕೆ ಸರಿಹೊಂದುತ್ತದೆ. ಈ ಪುಷ್ಪಿಕೆಯಿಂದ ಪಂಚಬಾಣನು ಕವಿ ಪಂಚಬಾಣ ಎಂದೇ ಪ್ರಸಿದ್ಧನಾಗಿದ್ದನೆಂಬ ಅಂಶ ಸ್ಪಷ್ಟವಾಗುತ್ತದೆ. ಈ ಎಲ್ಲ ಅಂಶಗಳ ಆಧಾರದಿಂದ ಪಂಚಬಾಣ ಕವಿಯ ವಂಶವೃಕ್ಷವನ್ನು ಕೆಳಗೆ ರೂಪಿಸಿಕೊಡಲಾಗಿದೆ.



ಭುಜಬಲಿ ಚರಿತೆಯ ಗ್ರಂಥಸಂಪಾದನೆಗೆ ಮೂರು ಹಸ್ತಪ್ರತಿಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಈ ಕಾವ್ಯದ ಲಭ್ಯವಿರುವ ಹಸ್ತ ಪ್ರತಿಗಳ ಒಟ್ಟು ಸೂಚಿಯನ್ನು ಮುಂದೆ ನೀಡಲಾಗಿದೆ.

ಕ್ರ. ಸಂ.	ಹ.ಪ್ರ. ಸಂ.	ಗರಿ/ ಹಾಳಿ	ಸಮಗ್ರ/ ಅಸಮಗ್ರ	ಲಿಪಿ	ಓಲೆ/ ಕಾಗದ	ಹ.ಪ್ರ. ಪ್ರತಿ ಕ್ರಿ.ಶ.	ಇತರ ವಿವರಗಳು	ಈಗ ಇರುವ ಸ್ಥಳ
೧.	ಕೆ. ೧೪೮೩	೧–೧೫೨	ಅ	ಕನ್ನಡ	ಓ	೨೪–೧೧–೧೬೧೪	ಇದು ಕವಿಯ ಸ್ವಹಸ್ತಾಕ್ಷರ ಪ್ರತಿ. ಆದರೆ ಬಹಳವಾಗಿ ತ್ರುಟಿತವಾಗಿವೆ. ಅನೇಕ ಪತ್ರಗಳು ಮುರಿದುಹೋಗಿವೆ. ಓದುವಿಕೆ ಕಷ್ಟಸಾಧ್ಯ. ಅನೇಕ ಪತ್ರಗಳು ಕಪ್ಪಾಗಿದ್ದು ಈ ಭಾಗದ ಪಾಠವನ್ನು ಸಮರ್ಪಕವಾಗಿ ಓದಲು ಸಾಧ್ಯವಿಲ. ಈ ಪ್ರತಿಯ ಆರಂಭದ ಪ್ರತ್ರದಲ್ಲಿ ವಿಷಯಸೂಚಿಯಿದೆ.	ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾ ನಿಲಯ (=ಕಅಸಂ)
೨.	ಕೆ ೧೫೨೮	೧–೨೧೪	ಸ	ಕ	ಓ	ಶಕ ೧೬೭೧, ಶುಕ್ಲ,ಭಾದ್ರಪದ ಶು ೧೫ (ಕ್ರಿ.ಶ. ೧೬–೮–೧೭೪೯ ಅಧಿಕ ಭಾದ್ರಪದ ಶುದ್ಧ ಹುಣ್ಣಿಮೆ, ಮಂಗಳವಾರ) ಅಥವಾ (ಕ್ರಿ.ಶ. ೧೫–೯–೧೭೪೯, ನಿಜ ಭಾದ್ರಪದ ಶುದ್ಧ ಹುಣ್ಣಿಮೆ, ಗುರುವಾರ)	ಈ ಪ್ರತಿ ಪ್ರತಿಯಾದ ಸ್ಥಳ ಶ್ರವಣ ಬೆಳಗೊಳ. ಪಾಯಿಸೆಟ್ಟರಮಗ ಮರಿಯಣ್ಣ ಮುದ್ದೇನಹಳ್ಳಿಯ ಚಿಕ್ಕಣ್ಣಸೆಟ್ಟರಿಗೆ ಬರೆದು ಕೊಟ್ಟ ಪ್ರತಿ.	
೩.	ಕೆ ಎ ೨೩೯ (ಭಾಗ–೧)	೧–೩೩೪	ಸ	ಕ	ಕಾ	ಸು ೧೯೨೦	೧–೧೩ನೆಯ ಆಶ್ವಾಸದ ವರೆಗಿದೆ. ಮುಂದಿನ ಆಶ್ವಾಸ ಗಳು ಕೆ ಎ ೨೪೦ರಲ್ಲಿ ಪ್ರತಿ ಮಾಡಲ್ಪಟ್ಟಿವೆ. ೧೨೨–೧೨೬, ೧೫೫–೧೬೦,೨೯೦–೨೯೨ ೨೯೭–೩೦೦,೩೦೬–೩೧೧ ನೆಯ ಹಾಳೆಗಳಲ್ಲಿ ಬರವಣಿಗೆ ಯಿಲ್ಲ. ಈ ಪ್ರತಿ ಕೆ ೧೪೮೩ರ ನಕಲು ಪ್ರತಿಯಾಗಿದೆ.	ಕಅಸಂ
	ಕೆ ಎ ೨೪೦ (ಭಾಗ–೨)	೩೩೫–೬೫೪	ಸ	ಕ	ಕಾ	ಸು ೧೯೨೦	ಈ ಪ್ರತಿ ಕೆ ಎ ೨೩೯ರ ಮುಂದುವರಿದ ಭಾಗವಾಗಿದೆ. ೧೩ನೆಯ ಆಶ್ವಾಸದಿಂದ ಗ್ರಂಥ ವಿದೆ.೪೫೬–೪೮೦ರ ವರೆಗಿನ ಹಾಳೆಗಳಲ್ಲಿ ಬರವಣಿಗೆಯಿಲ್ಲ.	ಕಅಸಂ
೪.	ಎನ್. ೯೫೪	೧೭೦ ಪತ್ರ	ಸ	ಕ	ಓ		ದೇವಕುಮಾರ್ ಜೈನ್ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಆರಾ ಪ್ರತಿಯ ಮೈಕ್ರೋಫಿಲಂ (ಈ ಪ್ರತಿ ಯನ್ನು ಗ್ರಂಥಸಂಪಾದನೆಯಲ್ಲಿ ಬಳಸಿಲ್ಲ).	ಕಅಸಂ

ಪ್ರಕೃತ ಲೇಖನದಲ್ಲಿ ಪಂಚಬಾಣನ ಭುಜಬಲಿ ಚರಿತೆಯ ಸ್ವಹಸ್ತಾಕ್ಷರ ಪ್ರತಿಯ ಕಾಲ ಮತ್ತು ಶಾಂತವರ್ಣಿ ಶ್ರವಣಬೆಳಗೊಳದ ಗೊಮ್ಮಟನಿಗೆ ನಡೆಸಿದ ಮಹಾಮಸ್ತಾಭಿಷೇಕದ ಕಾಲವನ್ನು ಸಾಧ್ಯವಿರುವ ಮಟ್ಟಿಗೂ ಕಿರಿದಾಗಿ ವಿಶ್ಲೇಷಿಸಲಾಗಿದೆ. ಮೊದಲಬಾರಿಗೆ ಪಂಚಬಾಣ ಕವಿಯ ಮಗನ ವಿವರವನ್ನೂ ದಾಖಲಿಸಲಾಗಿದೆ. ಭುಜಬಲಿ ಚರಿತೆಯ ಲಭ್ಯ ಹಸ್ತಪ್ರತಿಗಳ ಸೂಚಿಯನ್ನು ಅಗತ್ಯ ವಿವರಗಳೊಂದಿಗೆ ನೀಡಲಾಗಿದೆ. ನಮ್ಮ ವಿಶ್ಲೇಷಣೆಯಲ್ಲಿ ಲೋಪದೋಷಗಳೂ ಇರಬಹುದು. ಬಲ್ಲವರು ತಿದ್ದಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಈ ಕೃತಿಯಲ್ಲಿ ಅನೇಕ ಐತಿಹಾಸಿಕ ವಿವರಗಳಿವೆ. ಇವುಗಳನ್ನು ಶಾಸನಗಳು ಮತ್ತು ಇತರ ಆಧಾರಗಳ ಬಲದಿಂದ ವಿಮರ್ಶಿಸಿ ಚರಿತ್ರೆಯ ಪುಟಗಳನ್ನು ಪುನಾರಚಿಸಬೇಕಾದ ಅಗತ್ಯವಿದೆ. ಇದೇ ರೀತಿಯಾಗಿ ಈ ಕೃತಿಯ ಅಧ್ಯಯನ ಇತರ ಆಯಾಮಗಳಲ್ಲಿಯೂ ನಡೆಯಲೆಂದು ಹಾರೈಸುತ್ತೇವೆ.

ಟಿಪ್ಪಣಿಗಳು :

೧. ಭುಜಬಲಿ ಚರಿತೆಯ ಕೆಲವು ಸಂಧಿಗಳ ಕಡೆಯಲ್ಲಿ 'ಇದು ಜಿನಪದಭಕ್ತ ಚೆನ್ನಪೇಂದ್ರನ ಸುತ ಚದುರ ಸತ್ಕವಿ ಪಂಚಬಾಣ' ಎಂದಿದೆ. ಪಂಚಬಾಣನ ಸ್ವಹಸ್ತಾಕ್ಷರ ಪ್ರತಿಯ ಆರಂಭದಲ್ಲಿ ವಿದ್ಯಾಗುರು ಬೆಳಗುಳದ ಸ್ಥಾನಿಕ ಚನ್ನಪ್ಪನ ಪಾದಕ್ಕೆ ನಮಸ್ಕಾರ ಎಂದಿದೆ. ಇದರಿಂದಾಗಿ ಪಂಚಬಾಣನು ತನ್ನ ತಂದೆಯ ಬಳಿಯೇ ಶಿಕ್ಷಣ ಪಡೆದಿರಬೇಕು.

೨. ಕರ್ಣಾಟಕ ಕವಿಚರಿತೆ, ಸಂಪುಟ–೨, ಬೆಂಗಳೂರು–೧೯೧೯, ಪುಟ ೩೫೬

೩. ಕರ್ಣಾಟಕ ಕವಿಚರಿತೆ, ಸಂಪುಟ–೨, ಬೆಂಗಳೂರು–೧೯೧೯, ಪುಟ ೩೫೬

೪. ಸಂಸ್ಕೃತ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ–೬, (ಸಂ) ಬಿ.ಎಸ್. ಸಣ್ಣಯ್ಯ, ಶ್ರುತಕೇವಲಿ ಎಜುಕೇಷನ್ ಟ್ರಸ್ಟ್, ಶ್ರವಣಬೆಳಗೊಳ–೨೦೦೫, ಪುಟ ೨೬೭–೨೬೮

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೭. 'ಸಿರಿಸಂಪದ' ಅಭಿನಂದನಾ ಗ್ರಂಥದ ಸಿರಿ

ಪ್ರೊ. ರಮೇಶ ಮ. ಕಲ್ಲನಗೌಡರ*

"ನನ್ನ ಕೈ ಎಂಥಾ ಬಂಜೆ ಇರಬೇಕು? ಒಬ್ಬನೂ ನನ್ನನ್ನು ಮೀರಿಸಬಲ್ಲ ಸಂಶೋಧಕ ರೂಪಗೊಳ್ಳಲಿಲ್ಲ" ಇದು ಡಾ॥ ಎಂ.ಎಂ. ಕಲಬುರ್ಗಿ ಅವರು ಸಂದರ್ಶನವೊಂದರಲ್ಲಿ ವ್ಯಸನದಿಂದ ಹೇಳಿದ ಮಾತು. ಹೌದು, ಆದರೆ ಈ ಮಾತು ಅರ್ಧಸತ್ಯ. ಕಾರಣವೆಂದರೆ ಸಂಶೋಧನೆ, ಸಂಪಾದನೆ ಮತ್ತು ಹಳಗನ್ನಡ ಕಾವ್ಯಗಳ ನಿಖರವಾದ ವಾಖ್ಯಾನದಲ್ಲಿ ಎಂ.ಎಂ. ಕಲಬುರ್ಗಿ ಅವರಿಗೆ ಅವರೇ ಸಾಟಿ. "ಅದು ಹೇಗೆಂದರೆ ಹಿಮಾಲಯದ ಶಿಖರಗಳ ಸಾಲಿನಲ್ಲಿ ಗೌರಿಶಂಕರಕ್ಕಿರುವ ಮಹತ್ವದಂತೆ". ಅವರ ಎತ್ತರಕ್ಕೆ ಏರುವುದೆಂದರೆ ವಿಂಧ್ಯ ಪರ್ವತ ಆಸೆ ಪಟ್ಟಂತೆ. ಆದರೂ ಎಂ.ಎಂ. ಕಲಬುರ್ಗಿ ಅವರ ಸಾಧನೆಯ ಶಿಖರಕ್ಕೆ ಎಲ್ಲದಕ್ಕಿಂತ ಹೆಚ್ಚು ಮೆರಗು ತಂದದ್ದು ಅವರು ನಡೆದ ಹಾದಿಯಲ್ಲಿ ಅವರಷ್ಟೇ ಪ್ರಮಾಣಿಕತೆಯಿಂದ ನಿಸ್ಪೃಹ ಹೃದಯದಿಂದ ಕಾರ್ಯ ಮಾಡುತ್ತಿರುವ ಅವರ ಸ್ನೇಹಿತರು ಹಾಗೂ ಶಿಷ್ಯವೃಂದ. ಇಂಥ ಪ್ರಮುಖರೊಬ್ಬರಲ್ಲಿ ಬಸವರಾಜ ವೀರಭದ್ರಪ್ಪ ಶಿರೂರ ಪ್ರಮುಖರು.

ಬಿ.ವ್ಹಿ. ಶಿರೂರ ಅವರ ವ್ಯಕ್ತಿತ್ವವನ್ನು ಒಂದೇ ಪದ ಹಿಡಿದಿಡಬಲ್ಲದ್ದೆಂದರೆ 'ಗಂಭೀರರು'. ಅವರ ಪಾಠ, ಬರವಣಿಗೆ, ಸಂಶೋಧನೆ ಮೊದಲಾದವುಗಳಲ್ಲಿ ಲೀಲಾಜಾಲವಾಗಿ ಹಾಸುಹೊಕ್ಕಾಗಿರುವುದು ಈ ಗಂಭೀರತೆಯೇ!. ಇಂಥ ಸ್ವಭಾವದ ಇವರಿಗೆ, ಅವರ ಆತ್ಮೀಯರು, ಸ್ನೇಹಿತರು ಹಾಗೂ ಶಿಷ್ಯರೆಲ್ಲರೂ ಒಂದಾಗಿ ಗೌರವಪೂರ್ವಕವಾಗಿ 'ಸಿರಿಸಂಪದ' ಎಂಬ ಅಭಿನಂದನಾ ಗ್ರಂಥವನ್ನು ಸಮರ್ಪಿಸಿ

* **ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗದಗ–೫೮೨೧೦೧**
ಮೊ. ೯೯೦೦೨೨೦೭೨೨

ಕೃತಕೃತ್ಯರಾಗಿದ್ದಾರೆ. ಬಿ.ಎಂ. ಶ್ರೀ ಅವರಿಗೆ ಸಮರ್ಪಿಸಿದ 'ಸಂಭಾವನೆ' ಯಿಂದ ಇಲ್ಲಿಯವರೆಗೂ ೪೫೦ಕ್ಕೂ ಅಧಿಕ ಅಭಿನಂದನಾ ಗ್ರಂಥಗಳು ಕನ್ನಡದಲ್ಲಿ ಪ್ರಕಟವಾಗಿವೆ ಎಂದು ಚರಿತ್ರೆಯಲ್ಲಿ ದಾಖಲಾಗಿದೆ. ಸಾಮಾನ್ಯವಾಗಿ ಎಲ್ಲ ಗ್ರಂಥಗಳು ಸಿದ್ಧಮಾದರಿಯಿಂದೊಡಗೂಡಿ ಏಕತಾನತೆಯ ರೂಪದಲ್ಲಿರುವವು ಎಂದೆನ್ನಿಸಿದರೂ, ಅದುವೇ ಸರಳಸೂತ್ರವಾಗಿ ಜಾರಿಗೆ ಬಂದಿರುವುದು ಅದರ ಜನಪ್ರಿಯತೆಯೂ ಕಾರಣವಿರಬಹುದು. ಈ ಹಿನ್ನಲೆಯಲ್ಲಿ ಬಿ.ವ್ಹಿ. ಶಿರೂರ ಅವರಿಗೆ ಅರ್ಪಿಸಿದ 'ಸಿರಿಸಂಪದ' ಈ ಸಿದ್ಧಸರಳಸೂತ್ರಕ್ಕೆ ಒಳಪಟ್ಟಿದ್ದರೂ, ತನ್ನ ಗರ್ಭದಲ್ಲಿ ಅನೇಕ ವಿಶೇಷತೆಗಳನ್ನು ಕಾಯ್ದುಕೊಂಡು ಬಂದಿದೆ. ಇದಕ್ಕೆ ಕಾರಣ ಸಂಪಾದನೆಯ ಜವಾಬ್ದಾರಿಯನ್ನು ಹೊತ್ತು ಗ್ರಂಥಕ್ಕೆ ಮೆರಗನ್ನು ತಂದ ಈ ನಾಡಿನ ಹೊಸ ತಲೆಮಾರಿನ ಹಸ್ತಪ್ರತಿಶಾಸ್ತ್ರಜ್ಞರು ಹಾಗೂ ಗ್ರಂಥಸಂಪಾದಕರಲ್ಲಿಯೇ ವಿಶಿಷ್ಠವಾದ ತಮ್ಮ ಕಾರ್ಯದಿಂದ ಗುರುತಿಸಿಕೊಂಡ ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಡಾ. ಕೆ. ರವೀಂದ್ರನಾಥ ಅವರ ಶ್ರಮ. 'ಸಿರಿಸಂಪದ' ಹೇಗೆ ವಿಶಿಷ್ಟವಾದ ಗ್ರಂಥವಾಗಿದೆ ಎಂಬುದನ್ನು ಎಂ.ಎಂ. ಕಲಬುರ್ಗಿ ಅವರ ಮಾತಿನಲ್ಲಿ ಹೇಳುವುದಾದರೆ... "ಕನ್ನಡದ ೬೦ಜನ ಗ್ರಂಥಸಂಪಾದಕರನ್ನು ಕೇಂದ್ರವಾಗಿಟ್ಟುಕೊಂಡು, ಅವರ ಚರಿತ್ರೆ, ಶ್ರಮ, ಸಾಧನೆಗಳನ್ನು ನಿರೂಪಿಸುವ ಇದು ೬೧ನೆಯವರೆಂಬಂತೆ ಶಿರೂರ ಅವರ ಜೀವನ, ಸಾಧನೆ, ಗ್ರಂಥಸಂಪಾದನೆಯ ಕೃಷಿಗಳನ್ನೊಳಗೊಂಡು ಕನ್ನಡದಲ್ಲಿ ಸಂದರ್ಭಗ್ರಂಥವಾಗಿ ಬಹುಕಾಲ ಉಳಿಯುವ ಅರ್ಹತೆ ಗಳಿಸಿದೆ."

ಫ.ಗು. ಹಳಕಟ್ಟಿ ಅವರಿಗೆ ಅರ್ಪಿಸಿದ 'ಮಣಿಹ' ದಲ್ಲಿ ಪ್ರಾಚೀನ ಗ್ರಂಥಸಂಪಾದಕರ ಜೀವನ ಮತ್ತು ಸಾಧನೆಯನ್ನು, ಅವರಿಂದ ಕೈಗೂಡಿದ ಗ್ರಂಥಸಂಪಾದನೆಯ ಕಾರ್ಯವನ್ನು ದಾಖಲಿಸುವ ಅತ್ಯಂತ ಮಹತ್ವಪೂರ್ಣ ಗ್ರಂಥವಾದರೆ, ಬಿ.ವ್ಹಿ. ಶಿರೂರ ಅವರಿಗೆ ಅರ್ಪಿಸಿದ 'ಸಿರಿಸಂಪದ'ವು ಪ್ರಾಚೀನ ಮತ್ತು ಅರ್ವಾಚೀನ ಗ್ರಂಥಸಂಪಾದಕರ ಜೀವನ ಮತ್ತು ಸಾಧನೆಯನ್ನು ಮರುದಾಖಲಿಸಿದ ಗ್ರಂಥ. "ಈ ಎರಡೂ ಗ್ರಂಥಗಳು ಗ್ರಂಥಸಂಪಾದಕರನ್ನು ಗುರುತಿಸುವ ದಿಕ್ಸೂಚಿಯ ಎರಡು ಬಿಂದುಗಳಂತೆ." ಇದರಿಂದಾಗಿಯೇ ಈ ಎರಡೂ ಗ್ರಂಥಗಳಿಗೂ ತುಂಬ ಮಹತ್ವದ ಸ್ಥಾನವಿದೆ.

೨೦೦೨ರಲ್ಲಿ ಮುದ್ರಣವಾದ ಈ ಗ್ರಂಥವು ೮೫೧ ಪುಟಗಳಿಂದ ಕೂಡಿದೆ. ಸಂಪಾದಕರು ಗ್ರಂಥವನ್ನು ಮೂರು ಭಾಗಗಳಲ್ಲಿ ವಿಂಗಡಿಸಿ ಅಂತಿಮದಲ್ಲಿ ಅನುಬಂಧವನ್ನು ನೀಡಿದ್ದಾರೆ. ಸಿರಿಸಂಪದ–೧ ಭಾಗದಲ್ಲಿ ಕನ್ನಡ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ವಾಂಸರನ್ನು ಕುರಿತು ೬೦ ಲೇಖನಗಳು, ಸಿರಿಸಂಪದ–೨ ಭಾಗದಲ್ಲಿ ಬಿ.ವ್ಹಿ. ಶಿರೂರ ಅವರ ವ್ಯಕ್ತಿತ್ವವನ್ನು ಕುರಿತು ಈರ್ವರು ಶ್ರೀಗಳ

ಆಶೀರ್ವಚನ ಹಾಗೂ ಅವರನ್ನು ಹತ್ತಿರದಿಂದ ಬಲ್ಲ ಆತ್ಮೀಯ ಒಡನಾಡಿಗಳು ಬರೆದ ಏಳು ಲೇಖನಗಳು ಮತ್ತು ಎಂಟನೆಯದಾಗಿ ಬಿ.ವ್ಹಿ. ಶಿರೂರ ಅವರೆ ತಮ್ಮನ್ನು ತಾವೇ ಸಿಂಹಾವಲೋಕನ ಮಾಡಿಕೊಂಡ 'ಹಿಂದಣಹೆಜ್ಜೆ' ಎಂಬ ಲೇಖನವಿದೆ. ಸಿರಿಸಂಪದ–೩ರಲ್ಲಿ ಬಿ.ವ್ಹಿ. ಶಿರೂರ ಅವರ ಈವರೆಗಿನ ಸಾಹಿತ್ಯವನ್ನು ಕುರಿತು ಹದಿನಾಲ್ಕು ಜನ ವಿದ್ವಾಂಸರು ಬರೆದ ಲೇಖನಗಳಿವೆ. ಅನುಬಂಧದಲ್ಲಿ ಬಿ.ವ್ಹಿ. ಶಿರೂರ ಅವರ ಬದುಕಿನ ಪ್ರಮುಖ ಘಟನೆಗಳ ಮತ್ತು ಸಾಹಿತ್ಯ ಸೂಚಿಯ ಕುರಿತು ಯಶೋಧಾ ಅಂ. ಜವಳಗೇರಿ ಅವರು ಬರೆದ ಲೇಖನವಿದೆ.

ಸಿರಿಸಂಪದ–೧.

ಫ.ಗು. ಹಳಕಟ್ಟಿ ಅವರ ಸಂಸ್ಮರಣ ಗ್ರಂಥವಾದ 'ಮಣಿಹ'ದಲ್ಲಿ ಪ್ರಕಟವಾದ ಈ ಕೆಳಗಿನ ಹತ್ತು ಲೇಖನಗಳು 'ಸಿರಿಸಂಪದ'ದಲ್ಲಿ ಮರುಪ್ರಕಟವಾಗಿವೆ. ಅವುಗಳೆಂದರೆ, ೧. ಬಿ.ಎಲ್. ರೈಸ್ ಮತ್ತು ಎಫ್. ಕಿಟ್ಟೆಲ್–ಹೀ.ಚಿ. ಶಾಂತವೀರಯ್ಯ, ೨. ಆರ್. ನರಸಿಂಹಾಚಾರ್ಯ–ಎನ್. ಅನಂತರಂಗಾಚಾರ್, ೩. ಎಂ.ಎನ್. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್–ಎಂ.ಎ. ಸಿಂಗಮ್ಮ, ೪. ಎ. ವೆಂಕಟರಾವ್ ಮತ್ತು ಎಚ್. ಶೇಷಯ್ಯಂಗಾರ್–ಎನ್.ಎಸ್. ತಾರಾನಾಥ, ೫. ಉತ್ತಂಗಿ ಚೆನ್ನಪ್ಪ–ಕೆ.ಪಿ. ಶಿವಲಿಂಗಯ್ಯ, ೬. ಟಿ.ಎಸ್. ವೆಂಕಣ್ಣಯ್ಯ–ಬಿ. ರಾಮಸ್ವಾಮಿ, ೭. ಎ.ಆರ್. ಕೃಷ್ಣಶಾಸ್ತ್ರಿ–ಕೆ.ಶಾಂತಾ, ೮. ಶಿ.ಶಿ. ಬಸವನಾಳ–ಪಿ.ವಿ. ನಾರಾಯಣ, ೯. ಬಿ. ಶಿವಮೂರ್ತಿಶಾಸ್ತ್ರಿ–ಸಿ.ಯು. ಮಂಜುನಾಥ, ೧೦. ಎಂ. ಮರಿಯಪ್ಪಭಟ್ಟ–ಟಿ.ಆರ್. ಮಹಾದೇವಯ್ಯ ಅವರು ಬರೆದ ಲೇಖನಗಳಿವೆ. ಇವುಗಳೊಂದಿಗೆ ವಿವಿಧ ಗ್ರಂಥ ಸಂಪಾದನಕಾರರಿಗೆ ಸಮರ್ಪಿಸಿದ ಗ್ರಂಥಗಳಿಂದ ಆಯ್ದು ಅವರದೇ ಕುರಿತು ಲೇಖನಗಳಿವೆ– ೧. 'ಬೆಳುವಲ' (ಬೆಟಗೇರಿ ಕೃಷ್ಣಶರ್ಮ ಅಭಿನಂದನ ಗ್ರಂಥ)ದಿಂದ ವಸಂತ ಕುಷ್ಟಗಿ ಅವರು ಬರೆದ 'ಬೆಟಗೇರಿ ಕೃಷ್ಣಶರ್ಮ' ೨. 'ಶ್ರೀಕಂಠತೀರ್ಥ' (ತೀ.ನಂ.ಶ್ರೀ ಅಭಿನಂದನ ಗ್ರಂಥ)ದಿಂದ ಎಂ.ವಿ. ಸೀತಾರಾಮಯ್ಯ ಅವರು ಬರೆದ 'ತೀ.ನಂ. ಶ್ರೀಕಂಠಯ್ಯ' ೩. 'ಸ್ವಸ್ತಿ' (ತ.ಸು. ಶಾಮರಾಯ ಅಭಿನಂದನ ಗ್ರಂಥ)ದಿಂದ ಬಿ.ಎಸ್. ಸಣ್ಣಯ್ಯ ಅವರು ಬರೆದ 'ತ.ಶು. ಶಾಮರಾಯ' ೪. 'ಆಸ್ವಾದ' (ಎಂ.ವಿ. ಸೀತಾರಾಮಯ್ಯ ಅಭಿನಂದನ ಗ್ರಂಥ)ದಿಂದ ಎನ್. ಬಸವರಾಧ್ಯ, ಟಿ.ಎನ್. ನಾಗರತ್ನ ಅವರು ಬರೆದ 'ಎಂ.ವಿ. ಸೀತಾರಾಮಯ್ಯ' ಲೇಖನಗಳನ್ನು ಆಯ್ದು ಸಿರಿಸಂಪದದಲ್ಲಿ ಮರುಜೋಡಿಸಿದ್ದಾರೆ. ಸಿರಿಸಂಪದಕ್ಕಾಗಿಯೇ ಬರೆದ ಲೇಖನಗಳೆಂದರೆ– ೧. ಗೊರೆಬಾಳು ಹನುಮಂತರಾಯ–ಎಂ.ಎನ್. ಪಾಟೀಲ, ೨. ಪಾವಂಜೆ ಗುರುರಾಯ–ಎ.ವಿ. ನಾವಡ, ೩. ಚನ್ನಮಲ್ಲಿಕಾರ್ಜುನರು–ಬಿ.ವ್ಹಿ. ಮಲ್ಲಾಪೂರ, ೪. ಎಂ.ಆರ್.

ಶ್ರೀನಿವಾಸಮೂರ್ತಿ–ವೈ.ಸಿ. ಭಾನುಮತಿ, ೫. ಫ.ಗು. ಹಳಕಟ್ಟಿ–ಎಸ್. ವಿದ್ಯಾಶಂಕರ, ೬. ಶಿವಬಸವಸ್ವಾಮಿಗಳು–ಬಿ. ನಂಜುಂಡಸ್ವಾಮಿ, ೭. ಕೆ.ಜಿ. ಕುಂದಣಗಾರ–ಸದಾನಂದ ಬಿಳ್ಳೂರ, ೮. ಎ. ಶಾಂತಿರಾಜಶಾಸ್ತ್ರೀ–ಶಾಂತಿನಾಥ ದಿಬ್ಬದ, ೯. ಎಸ್.ಸಿ. ನಂದೀಮಠ–ಅಕ್ಕಮಹಾದೇವಿ ಎಸ್. ರೊಟ್ಟಿಮಠ, ೧೦. ವೈ. ನಾಗೇಶಶಾಸ್ತ್ರೀ–ಬಿ.ಎಂ. ಶೈಲಜಾ, ೧೧. ಡಿ.ಎಲ್. ನರಸಿಂಹಾಚಾರ್ಯ–ಎಸ್. ವಿದ್ಯಾಶಂಕರ, ೧೨. ಎನ್. ಅನಂತ ರಂಗಾಚಾರ್ಯ–ಎಸ್.ಎಸ್. ಅಂಗಡಿ, ೧೩. ಸಂ.ಸಿ. ಭೂಸನೂರಮಠ–ನೀಲಗಿರಿ ತಳವಾರ, ೧೪. ದೇ. ಜವರೇಗೌಡ–ಶಶಿಧರ ತೋಡಕರ, ೧೫. ಆರ್.ಸಿ. ಹಿರೇಮಠ–ಎಸ್.ಸಿ. ಪಾಟೀಲ, ೧೬. ಎಂ.ಎಸ್. ಸುಂಕಾಪೂರ–ಬಿ.ಬಿ. ಬಿರಾದಾರ, ೧೭. ಎಲ್. ಬಸವರಾಜು–ಎಸ್.ಎಸ್. ಅಂಗಡಿ, ೧೮. ವೆಂಕಟರಾಜ ಪುಣಿಂಚತ್ತಾಯ–ಮಾಧವ ಪೆರಾಜೆ, ೧೯. ಎಸ್. ಬಸಪ್ಪ–ಮೃತ್ಯುಂಜಯ ರುಮಾಲೆ, ೨೦. ಬಿ.ಎಸ್. ಕುಲಕರ್ಣಿ–ಹನುಮಂತ ಮೇಲಿನಮನಿ, ೨೧. ಎಸ್.ಎನ್. ಕೃಷ್ಣಜೋಯಿಸ್–ಕೆ.ಆರ್. ಶೇಷಗಿರಿ, ೨೨. ಎಚ್. ದೇವಿರಪ್ಪ–ಆರ್. ರಾಚಪ್ಪ, ೨೩. ಜಿ. ವರದರಾಜರಾಯ–ಟಿ.ಎನ್. ನಾಗರತ್ನ, ೨೪. ಎನ್. ಬಸವರಾಧ್ಯ–ವೈ.ಸಿ. ಭಾನುಮತಿ, ೨೫. ಬಿ.ಬಿ. ಹೆಂಡಿ–ಎಸ್.ಆರ್. ಚನ್ನವೀರಪ್ಪ, ೨೬. ಬಿ.ನಂ. ಚಂದ್ರಯ್ಯ–ವೈ.ಸಿ. ಭಾನುಮತಿ, ೩೭. ಗೌ.ಮ. ಉಮಾಪತಿಶಾಸ್ತ್ರೀ–ಬಿ.ಕೆ. ಹಿರೇಮಠ, ೨೮. ಬಿ.ಎಸ್. ಸಣ್ಣಯ್ಯ–ರಾಮೇಗೌಡ, ೨೯. ಕೆ.ಆರ್. ಶೇಷಗಿರಿ–ಅಕ್ಕಮಹಾದೇವಿ, ೩೦. ಎಸ್. ಉಮಾಪತಿ–ಚೆನ್ನಕ್ಕ ಪಾವಟೆ, ೩೧. ಜಿ.ಎ. ಶಿವಲಿಂಗಯ್ಯ–ಬಿ. ನಂಜುಂಡಸ್ವಾಮಿ, ೩೨. ಬಿ.ಬಿ. ಮಹೀಶವಾಡಿ–ಬಿ.ಆರ್. ಹೂಗಾರ, ೩೩. ಟಿ.ವಿ. ವೆಂಕಟಾಚಲಶಾಸ್ತ್ರೀ–ಎಸ್.ಎಸ್. ಅಂಗಡಿ, ೩೪. ಎಂ.ಎಂ. ಕಲಬುರ್ಗಿ–ಬಿ.ವ್ಹಿ. ಶಿರೂರ, ೩೫. ಹಂಪ ನಾಗರಾಜಯ್ಯ–ಕೆ.ರವೀಂದ್ರನಾಥ, ೩೬. ವಿ. ಶಿವಾನಂದ–ವ್ಹಿ.ಜಿ. ಪೂಜಾರ, ೩೭. ಎಂ.ಪಿ. ಮಂಜಪ್ಪಶೆಟ್ಟಿ–ಎನ್.ಕೆ. ರಾಮಶೇಷನ್, ೩೮. ಹ. ಕ. ರಾಜೇಗೌಡ–ರತ್ನಶೀಲಾ ಶಿ. ಗುರಡ್ಡಿ, ೩೯. ಜಿ.ಜಿ. ಮಂಜುನಾಥನ್–ಡಿ.ಟಿ. ಬಸವರಾಜ್, ೪೦. ಎಸ್. ಶಿವಣ್ಣ–ಸಿ. ನಾಗಭೂಷಣ, ೪೧. ಎಸ್. ವಿದ್ಯಾಶಂಕರ–ಡಿ.ವಿ. ಪರಮಶಿವಮೂರ್ತಿ, ೪೨. ಟಿ.ಎನ್. ನಾಗರತ್ನ–ಶಾಲಿನಿ ರಘುನಾಥ, ೪೩. ವೀರಣ್ಣ ರಾಜೂರ–ಎಫ್.ಟಿ. ಹಳ್ಳಿಕೇರಿ, ೪೪. ಬಿ.ಆರ್. ಹಿರೇಮಠ–ಸದಾನಂದ ಪಾಟೀಲ, ೪೫. ವೈ.ಸಿ. ಭಾನಮತಿ–ಮಧು ವೆಂಕರೆಡ್ಡಿ ಹೀಗೆ ಸಿರಿಸಂಪದ–೧ರಲ್ಲಿ ಒಟ್ಟು ಅರವತ್ತು ಲೇಖನಗಳು ಒಟ್ಟಾಗಿವೆ. ಅವುಗಳಲ್ಲಿ ಎರಡು ಲೇಖನಗಳ ಕುರಿತು ಈ ಲೇಖನದಲ್ಲಿ ಪುನರಾವಲೋಕನ ಮಾಡಲಾಗಿದೆ.

ಭಾರತದಲ್ಲಿ ಪಾಶ್ಚಾತ್ಯ ಮಿಷನರಿಗಳು ತಲೆ ಎತ್ತಿದ ನಂತರ ಭಾರತೀಯ ಜ್ಞಾನಕ್ಷೇತ್ರ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳು ಪಾಶ್ಚಾತ್ಯೀಕರಣಗೊಳ್ಳತೊಡಗಿದವು. ಭಾರತೀಯ ಸಾಂಸ್ಕೃತಿಕ ಪರಂಪರೆಗೆ ದೊಡ್ಡ ಕೊಡಲಿ ಏಟುಬಿದ್ದರೂ

ಹೊಸದೃಷ್ಠಿಕೋನದಲ್ಲಿ ಯೋಚಿಸುವ ಹಾಗೂ ಕೇವಲ ವಾಸ್ತವಿಕತೆಗೆ ಮಹತ್ವಕೊಡುವ ವೈಜ್ಞಾನಿಕತೆ ಬೆಳೆದು ಭಾರತೀಯರ ಯೋಚನಾಕ್ರಮವೇ ತಿರುವು–ಮುರುವಾಯಿತು. ಹೀಗಾಗಿ ಭಾರತೀಯ ಆಗಾಧ ಜ್ಞಾನವು ಮನೆಯಲ್ಲಿಯ ದೇವರ ಜಗುಲಿಯಲ್ಲಿಯೋ, ಅಟ್ಟದ ಮೇಲೆಯೋ ಧೂಳು ಹಿಡಿದು ನುಸಿಮುಟ್ಟುವ ಹಂತಕ್ಕೆ ತಲುಪಿರುವುದನ್ನು ಗಮನಿಸಿದ ಹಾಗೂ ಭಾರತೀಯರ ಕಣ್ಣ ಎದುರಲ್ಲಿಯೇ ಜ್ಞಾನಸರಸ್ವತಿಯ ಅಗಾಧ ಗ್ರಂಥಗಳಿದ್ದರೂ ಗಮನಿಸದ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಅವುಗಳನ್ನು ಕುತೂಹಲದಿಂದ ನೋಡಿದವರೆಂದರೆ ಪಾಶ್ಚಾತ್ಯ ಮಿಷನರಿಗಳು. ಅವರಲ್ಲಿ ಹೆರ್ಮನ್ ಮೋಗ್ಲಿಂಗ್–ಜೆ. ಗ್ಯಾರೆಟ್ ಪ್ರಾರಂಭಿಕರು. ಇವರೀರ್ವರನ್ನು ಕುರಿತು 'ಸಿರಿಸಂಪದ'ದಲ್ಲಿ ಎಫ್.ಟಿ. ಹಳ್ಳಿಕೇರಿ ಅವರು ಬರೆದಿರುವ ಲೇಖನವು ವಿಶೇಷವಾಗಿದೆ.[೧] 'ಬಿಬ್ಲಿಯೂಥೆಕಾ ಕರ್ನಾಟಕ' ಎಂಬ ಮಾಲಿಕೆಯನ್ನು ನಿವೃತ್ತ ಆಂಗ್ಲ ನ್ಯಾಯಾಧೀಶನಾದ ಜಾರ್ಜ ಜೆ. ಕಸಮೇಜರ್ ಎಂಬುವನ ಸಹಯೋಗದೊಂದಿಗೆ ಹೆರ್ಮನ್ ಮೋಗ್ಲಿಂಗ್ ಪ್ರಾರಂಭಿಸಿದನು. ಮೋಂಗ್ಲಿಂಗ್ ಮತ್ತು ಕಸಮೇಜರನ ಉದ್ದೇಶ ಪ್ರಾಚೀನ ಶುದ್ಧ ಕನ್ನಡದ ಕೃತಿಗಳನ್ನು ಹೊರತರಬೇಕೆಂಬುದಾಗಿತ್ತು. ಬಿಬ್ಲಿಯೂಥೆಕಾ ಮಾಲೆಯಲ್ಲಿ ಪ್ರಕಟವಾಗಬೇಕಾಗಿರುವ ಎಲ್ಲ ಕೃತಿಗಳನ್ನು 'ಹೊಸತರದಿಂದ ಹಳೆಯದರ ಕಡೆಗೆ' ಎನ್ನುವ ಸೂತ್ರದ ಆಧಾರದ ಮೇಲೆ ಪ್ರಕಟಿಸಲು ಕೈಗೆತ್ತಿಕೊಳ್ಳಬೇಕೆಂಬುದು ಮೋಗ್ಲಿಂಗನ ನಿಲುವಾಗಿತ್ತು. ಇವನು ಕಸಮೇಜರನಿಗೆ ಬರೆದ ಪತ್ರದಲ್ಲೇ ಪ್ರಕಟವಾಗಬೇಕಾದ ಕೃತಿಗಳ ಅನುಕ್ರಮಣಿಕೆಯನ್ನು ಕೊಡುತ್ತಾನೆ" (ಶ್ರೀನಿವಾಸಮೂರ್ತಿ ಎಸ್.ಎಲ್., "ಗ್ರಂಥಸಂಪಾದನೆ ಮತ್ತು ಹೆರ್ಮನ್ ಮೋಗ್ಲಿಂಗ್" ಹಸ್ತಪ್ರತಿ ವ್ಯಾಸಂಗ–೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.)

ಹೆರ್ಮನ್ ಮೋಗ್ಲಿಂಗ್ ಸಂಪಾದಿಸಿದ ಪ್ರಮುಖ ಕೃತಿಗಳನ್ನು ಈ ಲೇಖನದಲ್ಲಿ ದಾಖಲಿಸಿದ್ದಾರೆ. ಅವುಗಳಲ್ಲಿ ಜೈಮಿನಿಭಾರತದ ಕೆಲವು ಸಂಧಿಗಳು, ಕುಮಾರವಾಲ್ಮೀಕಿಯ ತೊರವೆ ರಾಮಾಯಣ, ಭೀಮಕವಿಯ ಬಸವಪುರಾಣ, ದಾಸರಪದಗಳು, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಕನಕದಾಸನ ಹರಿಭಕ್ತಿಸಾರ, ಕನ್ನಡ ಗಾದೆಗಳು, ರಾವಣ ದಿಗ್ವಿಜಯ (ಯಕ್ಷಗಾನ) ಕೃತಿಗಳನ್ನು ಸಂಪಾದನೆ ಮಾಡಿ ಕನ್ನಡದ ಮೊದಲ ಸಂಪಾದಕನೆಂಬ ಹೆಗ್ಗಳಿಕೆಯನ್ನು ಪಡೆದು ಹಲವು ಕೃತಿಗಳನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿ ಇಂದಿನ ಕನ್ನಡ ಸಾಹಿತ್ಯ ಸೌಧಕ್ಕೆ ತಳಪಾಯವನ್ನು ಹಾಕಿದ ಪಾಶ್ಚಾತ್ಯ ವಿದ್ವಾಂಸ. ಈತನ ಸಮಕಾಲೀನನಾಗಿ ಭಾರತಕ್ಕೆ ಬಂದ ಇನ್ನೊಬ್ಬ ಮಿಶನರಿ 'ಜಾನ್ ಗ್ಯಾರೆಟ್'. ಶಿಕ್ಷಣಾಧಿಕಾರಿಯಾಗಿ ಭಾರತಕ್ಕೆ ಬಂದರೂ ನಿಘಂಟು ರಚನೆ, ಗ್ರಂಥಸಂಪಾದನೆ ಮತ್ತು ಪಠ್ಯಪುಸ್ತಕ ರಚನೆಯಲ್ಲಿ ಅಪಾರಕೆಲಸವನ್ನು ಮಾಡಿದನು. ಕೇಶಿರಾಜನ ಶಬ್ದಮಣಿದರ್ಪಣಂ ಹಾಗೂ ಪ್ರಾಕ್ಕಾವ್ಯಮಾಲಿಕೆ (Canarese Poeti-

cal Anthology or Selection) ಎಂಬವುಗಳು ಗ್ಯಾರೆಟ್‌ನಿಂದ ಸಂಪಾದನೆಗೊಂಡಂಥ ಗ್ರಂಥಗಳು.

'ಬಿ.ಎಲ್. ರೈಸ್ ಮತ್ತು ಎಫ್. ಕಿಟ್ಟೆಲ್' ಲೇಖನ ಬರೆದಿರುವ ಹೀ.ಚಿ. ಶಾಂತವೀರಯ್ಯ ಅವರು ಪಾಶ್ಚಾತ್ಯ ವಿದ್ವಾಂಸರನ್ನು ಕುರಿತು ಬರೆದಿರುವರು. 'ಕಂಪ್ಯಾನಿಯನ್ ಆಫ್ ಇಂಡಿಯನ್ ಎಂಪೈರ್' (C.I.E) ಎಂಬ ಪ್ರಶಸ್ತಿಯನ್ನು ಬ್ರಿಟಿಷ್ ಸರ್ಕಾರದಿಂದ ಪಡೆದ 'ರೆವರೆಂಡ್ ಬೆಂಜಮಿನ್ ಲೂಯಿಸ್ ರೈಸ್' ಸಾಮಾನ್ಯ ಮತಪ್ರಚಾರಕನಾಗಿ ಭಾರತಕ್ಕೆ ಬಂದರೂ ಅಸಮಾನ್ಯ ಕೆಲಸವನ್ನು ಶಾಸನ, [೧೩೭೨೨ ಶಾಸನಗಳು] ಗ್ರಂಥಸಂಪಾದನೆ, ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಅನನ್ಯ. ಕವಿರಾಜಮಾರ್ಗ, ಕರ್ನಾಟಕ ಭಾಷಾಭೂಷಣ, ಕರ್ನಾಟಕ ಶಬ್ದಾನುಶಾಸನ, ಪಂಪರಾಮಾಯಣ, ಪಂಪಭಾರತ, ಅಮರಕೋಶ ಗ್ರಂಥಗಳನ್ನು ಸಂಪಾದಿಸಿ ಮೌಲಿಕವಾದ ಪ್ರಸ್ತಾವನೆ ಬರೆದು ಪ್ರಕಟಿಸಿದ ಹಿರಿಮೆ ಬಿ.ಎಲ್. ರೈಸ್ ಅವರದು. 'ಆಧುನಿಕ ಕನ್ನಡದ ಜನಕ'ನೆಂದು ಕನ್ನಡಿಗರ ನೆನಪಿನಲ್ಲಿ ಅಚ್ಚಾದ ಇನ್ನೋರ್ವ ಜರ್ಮನ್ ಮತಪ್ರಚಾರಕ ರೆ. ಫರ್ಡಿನೆಂಡ್ ಕಿಟೆಲ್ ಅವರು. ಕಾವ್ಯಮಾಲೆ, ಬೈಬಲ್ ಲೇಖನಗಳು, ಸಣ್ಣ ಕರ್ನಾಟಕ ಮಾಲೆ, ಕರ್ನಾಟಕ ಕಾವ್ಯಮಂಜರಿ, ಕನ್ನಡ ವ್ಯಾಕರಣ ಗ್ರಂಥಗಳನ್ನು ಪ್ರಕಟಿಸಿದರು. ಇವರು ಸಂಪಾದಿಸಿದ ಅಮೂಲ್ಯ ಗ್ರಂಥಗಳೆಂದರೆ ಕೇಶಿರಾಜನ 'ಶಬ್ದಮಣಿದರ್ಪಣಂ.' ಈ ಕೃತಿಯನ್ನು ಒಂಬತ್ತು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿ ಇಂಗ್ಲೀಷಗೆ ಅನುವಾದಿಸಿದರು. ನಾಗವರ್ಮನ 'ಛಂದೋಂಬುಧಿ' ಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇವರ ಮಹೋನ್ನತ ಗ್ರಂಥವೆಂದರೆ ಈ ಮೊದಲು 'ರೆ. ರೀವ್' ಅವರು ೧೮೩೦ರಲ್ಲಿ ರಚಿಸಿದ್ದ 'ಕನ್ನಡ–ಇಂಗ್ಲೀಷ್ ನಿಘಂಟನ್ನು ಆಧಾರವಾಗಿಟ್ಟುಕೊಂಡು ಭಾರತೀಯ ದೇಶಿಭಾಷೆಯಲ್ಲಿ ೧೭೬೨ ಪುಟಗಳ 'ಕನ್ನಡ–ಇಂಗ್ಲೀಷ್ ನಿಘಂಟ'ನ್ನು ರಚಿಸಿರುವುದು. ಈ ಕಾರ್ಯಕ್ಕೆ ಕೊಡಗು ಸರ್ಕಾರವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿತು. ನಂತರದಲ್ಲಿ ನೂರಾರು ಸಂಶೋಧಕರ ಡಾಕ್ಟರೇಟ್ ಪದವಿಗೆ ಆಕರವಾಗಿದ್ದುದು ಇದರ ಹೆಗ್ಗಳಿಕೆಗೆ ಹಿಡಿದ ಕೈಗನ್ನಡಿ. ಮತಪ್ರಚಾರಕ್ಕಾಗಿ ಭಾರತಕ್ಕೆ ಬಂದ ಈ ಮೊದಲಾದ ಪಾಶ್ಚಾತ್ಯ ವಿದ್ವಾಂಸರೆಲ್ಲರ ಕುರಿತು ವಿಸ್ತೃತವಾದ ಸಂಶೋಧನೆಯನ್ನು ಕೈಗೊಳ್ಳಲು ವಿಪುಲವಾದ ಅವಕಾಶವಿದ್ದು ಈ ಕಾರ್ಯವನ್ನು ಕೈಗೊಂಡರೆ ಅವರಿಗೆ ಕನ್ನಡಿಗರಿಂದ ಸಲ್ಲಬೇಕಾಗಿರುವ ಗೌರವ ಸಂದಂತಾಗುತ್ತದೆ.

ಒಟ್ಟಿನಲ್ಲಿ ಸಿರಿಸಂಪದ–೧ರಲ್ಲಿ ಪ್ರಾಚೀನ ಹಾಗೂ ಅರ್ವಾಚೀನ ಗ್ರಂಥ ಸಂಪಾದಕರ ಗ್ರಂಥಸಂಪಾದನೆಯ ಇಡಿಯಾದ ಕಾರ್ಯವನ್ನು ಬಿಡಿಬಿಡಿಯಾಗಿ ೬೦ ಲೇಖನಗಳಲ್ಲಿ ಸಿಂಹಾವಲೋಕನವನ್ನು ವಿವಿಧ ಲೇಖಕರು ಮಾಡಿರುವರು.

ಸಾಮಾನ್ಯವಾಗಿ ೬೦ ಲೇಖನಗಳು ಆಯಾ ಗ್ರಂಥ ಸಂಪಾದಕರ ಸಮಗ್ರ ಮಾಹಿತಿಯನ್ನು ಕಟ್ಟಿಕೊಡದಿದ್ದರೂ, ಅಧ್ಯಯನಾಸಕ್ತರು ಈ ಲೇಖನಗಳ ಮೂಲಕ ಗ್ರಂಥಸಂಪಾದಕರನ್ನು ಕುರಿತು ಅಧ್ಯಯನ ಮಾಡಲು ತೊಡಗುವದೆಂದರೆ ಅದು ಕಿಡಕಿಯ ಮೂಲಕ ಹೊರಜಗತ್ತನ್ನು ನೋಡಿದಂತೆ. ಅಂದರೆ ಅವರ ಸಮಗ್ರ ಅಧ್ಯಯನದ ಕಾರ್ಯದ ಹೆದ್ದಾರಿಗೆ ಈ ಲೇಖನಗಳು ಪ್ರವೇಶ ಬಾಗಿಲುಗಳಂತೆ.

ಸಿರಿಸಂಪದ–೨

ಬಿ.ವ್ಹಿ. ಶಿರೂರ ಅವರ ವ್ಯಕ್ತಿತ್ವವನ್ನರಿತ ಅವರ ಒಡನಾಡಿಗಳನೇಕರು ಲೇಖನಗಳನ್ನು ಬರೆದಿರುವರು. ಅಧಿಕಾರ ದೊರೆತಾಗ ಆಡಳಿತ ಮಾಡುವುದಕ್ಕಿಂತ ಆಳುವುದೇ ಅಧಿಕವಾಗಿರುವ ಇಂದಿನ ಸಂದರ್ಭದಲ್ಲಿ ಬಿ.ವ್ಹಿ ಶಿರೂರ ಎಲ್ಲವನ್ನೂ, ಎಲ್ಲರನ್ನೂ ಮುನ್ನೆಡಿಸಿಕೊಂಡು ಹೋಗುವ ಅವರ ಗುಣವನ್ನು 'ಸಮರ್ಥ ಆಡಳಿತಗಾರ' ಲೇಖನದಲ್ಲಿ ಬಿ.ಎಫ್. ಚೇಗರಡ್ಡಿ ಹಿಡಿದಿಟ್ಟಿರುವರು. ಎಸ್.ವಿ. ಕಂಠಿ ಅವರು 'ಅಪರೂಪದ ಸ್ನೇಹಿತ' ಎಂಬ ಲೇಖನದಲ್ಲಿ ಭಾವನಾತ್ಮಕವಾಗಿ ಶಿರೂರ ಅವರೊಂದಿಗೆ ತಮ್ಮ ಸಂಬಂಧ ಹೇಗಿತ್ತೆಂದು ತೆರೆದಿಡುತ್ತಾರೆ. ಬಿ.ವ್ಹಿ. ಶಿರೂರ ಅವರ ಇನ್ನೊಬ್ಬ ಆತ್ಮೀಯರು ಮತ್ತು ವೃತ್ತಿಬಾಂಧವರಾದ ಡಾ॥ ವೀರಣ್ಣ ರಾಜೂರ ಅವರು 'ವಿದ್ವತ್‌ಪರಂಪರೆಯ ಗಟ್ಟಿಮುಟ್ಟಾದ ಕೊಂಡಿ' ಎಂಬ ಲೇಖನದಲ್ಲಿ ಬಿ.ವ್ಹಿ. ಶಿರೂರ ಅವರ ಬಹುಮುಖ ವ್ಯಕ್ತಿತ್ವವನ್ನು 'ಡಾ. ಶಿರೂರ ಒಬ್ಬ ಅಪ್ಪಟ ಸ್ನೇಹಜೀವಿ. ಸ್ನೇಹಕ್ಕಾಗಿ ಅವರು ಯಾವ ತ್ಯಾಗಕ್ಕೂ ಸಿದ್ಧ. ಅದನ್ನವರು ಎಂದೂ ಕೆಡಿಸಿಕೊಳ್ಳಲು ಬಯಸುವುದಿಲ್ಲ. ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಯಿಂದ ಕಾಪಾಡಿಕೊಂಡು ಬಂದಿದ್ದಾರೆ' ಎಂಬ ಮಾತಿನಲ್ಲಿ ಅರ್ಥಪೂರ್ಣವಾಗಿ ತೆರೆದಿಟ್ಟಿದ್ದಾರೆ.

ಬಿ. ವ್ಹಿ. ಶಿರೂರ ಅವರು ನರೇಗಲ್ಲಿನ ಎಸ್.ಎ. ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಅವರ ವಿದ್ಯಾರ್ಥಿಯಾದ ಈರಪ್ಪ ಎಂ. ಕಂಬಳಿ ಅವರು ಬರೆದ 'ವಿದ್ಯಾಗುರುಗಳ ಒಡನಾಟದಲ್ಲಿ' ಎಂಬ ಲೇಖನದಲ್ಲಿ ತಮ್ಮ ಗುರುಗಳ ಕುರಿತು ಹೃದಯಸ್ಪರ್ಶಿಯಾಗಿ ಬರೆದಿರುವರು. ಅದನ್ನು ಓದುವುದೇ ಒಂದು ಛಂದ!. ಒಬ್ಬ ಶಿಷ್ಯನಾಗಿ ಗುರುವನ್ನು ಆರಾಧಿಸುವ ಭಾರತೀಯ ಸಂಸ್ಕೃತಿಯ ಮನೋಸ್ಥಿತಿ. ಗುರು ತನ್ನ ಒಡನಾಟಕ್ಕೆ ಬಂದ ಶಿಷ್ಯರನ್ನು ಆವರಿಸಿಕೊಳ್ಳುವ ಪರಿ ಅಚ್ಚ ಭಾರತೀಯದ್ದಾಗಿರುತ್ತದೆ. ಯುವ ಸಂಶೋಧಕರಿಗೆ ಮಾರ್ಗದರ್ಶಕರಾಗಿ ಅವರ ವ್ಯಕ್ತಿತ್ವ ಹೇಗಿತ್ತೆಂಬುದನ್ನು ಅವರ ಶಿಷ್ಯಂದಿರಲ್ಲಿ ಒಬ್ಬರಾದ ಬಿ.ಎಂ. ಹೊಸಮನಿ ಅವರು ಬರೆದ 'ಸಂಶೋಧನ ಮಾರ್ಗದರ್ಶಕ' ಲೇಖನದಲ್ಲಿ ತಾವು ಪೂರೈಸಿದ ಎಂ.ಫಿಲ್ ಹಾಗೂ ಪಿಎಚ್.ಡಿ (ಕರ್ನಾಟಕದ ವೇಷಗಾರರು–ಒಂದು ಅಧ್ಯಯನ) ಸಂಶೋಧನದ ಸಂದರ್ಭದಲ್ಲಿ

ಅವರೊಂದಿಗಿನ ಸಂಪರ್ಕದಲ್ಲಾದ ಅನುಭವಗಳನ್ನು ಒಟ್ಟಾಗಿ ಹೀಗೆ ಹೇಳುತ್ತಾರೆ. ಡಾ. ಶಿರೂರ ಅವರ ಸದಭಿರುಚಿ, ಸಹೃದಯತೆ, ಸಜ್ಜನಿಕೆ, ಸರಳಬದುಕು, ಸಂಶೋಧನ, ವಿದ್ಯಾರ್ಥಿಗಳ ತಪ್ಪುಗಳನ್ನು ತಿದ್ದುವಲ್ಲಿ ಅವರಲ್ಲಿರುವ ತಾಳ್ಮೆ, ಹೊಗಳಿಕೆಗೆ ಬಾಯ್ಬಿಡದ ಮನೋವೃತ್ತಿ, ಮಾರ್ಗದರ್ಶನದಲ್ಲಿ ಅವರಿಗಿರುವ ಆಸಕ್ತಿ ಮತ್ತು ಶ್ರದ್ಧೆ, ಯಾರಿಂದಲೂ ಏನನ್ನು ಅಪೇಕ್ಷಿಸದ ನಿತ್ಯ ತೃಪ್ತ ನಡೆ ಇವು ನನ್ನ ಮನಸ್ಸಿನಲ್ಲಿ ಮೂಡಿದ ಅಳಿಸಲಾಗದ ಪ್ರಭಾವಗಳಾಗಿವೆ. ಇನ್ನೋರ್ವ ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿನಿಯಾದ ಕೆ.ಆರ್. ಸಿದ್ಧಗಂಗಮ್ಮ ಅವರು 'ಕನ್ನಡ ಭಾವಗೀತೆಗಳಲ್ಲಿ ಪ್ರಕೃತಿ: ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಕೈಗೊಂಡ ಸಂಶೋಧನೆಗೆ ಮಾರ್ಗದರ್ಶಕರಾದ ಬಿ.ವ್ಹಿ. ಶಿರೂರ ಅವರ ಕುರಿತು 'ಸಮಯ ಪರಿಪಾಲಕ' ಎಂಬ ಲೇಖನದಲ್ಲಿ 'Involvement ಮತ್ತು Responsibility ಇವುಗಳೊಂದಿಗೆ ಸಮಯ ಪರಿಪಾಲನೆ' ಮಾಡುವ ಆದರ್ಶಗಳನ್ನು ನಾನು ನನ್ನಲ್ಲಿ ರೂಢಿಸಿಕೊಂಡದ್ದು, ಅವರಲ್ಲಿಯೇ ನೋಡಿ ಎಂದು ಬರೆಯುತ್ತಾರೆ. ಸರಸ್ವತಿ ಶಂ. ಭಗವತಿ ವಿದ್ಯಾರ್ಥಿನಿಯಾಗಿ ಮತ್ತು ಅವರ ಮಾರ್ಗದರ್ಶನದಲ್ಲಿ 'ಹಂಪಿ ಶಾಸನಗಳು–ಒಂದು ಅಧ್ಯಯನ' ವಿಷಯದ ಕುರಿತು ಸಂಶೋಧನೆ ಕೈಗೊಂಡ ಇವರು, ಶಿರೂರ ಅವರ 'ವರ್ಗಬೋಧನೆ'ಯನ್ನು ಕುರಿತು ಬರೆಯುವಾಗ "ತಪ್ಪನ್ನು ಮುಚ್ಚಿಡುವುದಕ್ಕಿಂತ ನಿಚ್ಚಳವಾಗಿ ನುಡಿದರೆ ನಿಜವಾದ ತಿಳಿವಳಿಕೆಯುಳ್ಳವರು ಕೋಪಿಸಿಕೊಳ್ಳಬಾರದು' ಎಂಬ ಅವರ ವರ್ಗಕೋಣೆಯಲ್ಲಿಯ ಮಾತನ್ನು ನೆನಪಿಸಿಕೊಳ್ಳುತ್ತಾರೆ. ಸಿರಿಸಂಪದ–೨ರಲ್ಲಿಯ ಕೊನೆಯ ಲೇಖನ ಬಿ.ವ್ಹಿ. ಶಿರೂರ ಅವರು ತಮ್ಮನ್ನು ತಾವೇ ಸಿಂಹಾವಲೋಕನ ಮಾಡಿಕೊಂಡಿರುವ 'ಹಿಂದಣ ಹೆಜ್ಜೆ' ಎಂಬ ಈ ಲೇಖನವು ಹೃದಯಸ್ಪರ್ಶಿಯಾಗಿದೆ. ಈ ಲೇಖನ ಓದಿದಾಗ ಸೃಜನಶೀಲ ಬರವಣಿಗೆಯಲ್ಲಿ ಯಾಕೆ ಅವರು ತೊಡಗಲಿಲ್ಲವೆಂದೆನಿಸುತ್ತದೆ.

ಬಸವಣ್ಣ ಜನಿಸಿದ ದಿನದಂದು ಜನಿಸಿದ ಬಸವರಾಜ ವೀರಭದ್ರಪ್ಪ ಶಿರೂರ ಅವರಿಗೆ ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಬರುವ 'ಎಲೆ ಮಗನೆ ಬಸವ, ಬಸವಣ್ಣ, ಬಸವಿದೇವಾ, ನಿನ್ನಂ ಮಹೀತಳದೊಳು ಮೆಱೆದಪೆವು ನೀಂ... ಮಂಗಳವಾಡಕ್ಕೆ ಪೋಗೆಂಬ' ಕೂಡಲಸಂಗಮನ ನುಡಿಯಂತೆಯೇ ಬಿ.ವ್ಹಿ. ಶಿರೂರ ಅವರು ನರೇಗಲ್ಲದಿಂದ ಸರಸ್ವತಿಯ ನೆಲೆ ಧಾರಾನಗರಿಗೆ ಬಂದಂತೆನಿಸುತ್ತದೆ. ಅನ್ನದಾನೀಶನೇ ಬಿ.ವ್ಹಿ. ಶಿರೂರ ಅವರನ್ನು ಧಾರಾನಗರಿಗೆ ಕಳುಹಿದಂತೆ. "....ಕಂದ ಬೇಡಯ್ಯ ಬೇಡಯ್ಯ ನೇಹದ ನಿಧಿಯೇ, ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯೆ, ನೆನೆಯೇ ಮುಂದಿರ್ದಪೆಂ ಕರೆದಡೋಯೆಂದಪೆಂ,... ನಡೆಯಯ್ಯ ನಡೆ ಮಗನೆ ನಡೆ ಕಂದ ಬಸವಣ್ಣ, ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ." ಬಸವರಾಜ ಶಿರೂರ ಅವರು ಧಾರವಾಡದಲ್ಲಿ ಡಾ. ಎಂ.ಎಂ. ಕಲಬುರ್ಗಿ, ಡಾ. ವೀರಣ್ಣ ರಾಜೂರ, ಡಾ. ಬಿ.ಆರ್.

ಹಿರೇಮಠ, ಡಾ. ಬಿ.ಬಿ. ಬಿರಾದರ ಅವರ ಸಂಗದಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಅವಿರತ ಜ್ಞಾನದಾಸೋಹವನ್ನೆ ಕೈಗೊಂಡ ನೇಹದ ನಿಧಿಯಾಗಿದ್ದರು. ನಾನೂ ಅವರ ವಿದ್ಯಾರ್ಥಿಯಾಗಿ ಅವರ ಬೋಧನೆಯ ಸವಿಯನ್ನುಂಡವನು. ಅಲ್ಲಮಪ್ರಭು ಹೇಳುವಂತೆ "ಹಿಂದಣ ಹೆಜ್ಜೆಯನರಿತಲ್ಲದೆ, ನಿಂದ ಹೆಜ್ಜೆಯನರಿಯಬಾರದು" ಎಂಬಂತೆ ಬಿ.ವ್ಹಿ. ಶಿರೂರ ಅವರು ತಮ್ಮ ಬದುಕನ್ನು ನಿಂದಹೆಜ್ಜೆಯಿಂದ ಹಿಂದಣಹೆಜ್ಜೆಯ ಕಡೆಗೆ ಹಿನ್ನೋಟ ಬೀರಿದ್ದಾರೆ. ತಂದೆಯವರಾದ ವೀರಭದ್ರಪ್ಪನವರು ವಿಧಾನಸಭೆಯ ಶಾಸಕರಾಗಿದ್ದರೂ, ಮನೆಯವರೆಲ್ಲರೂ ಹಮ್ಮುಬಿಮ್ಮಿಲ್ಲದ ಸರಳ–ಆದರ್ಶದ ಬದುಕನ್ನು ನಡೆಸಿದವರು. ವೃತ್ತಿಯನ್ನು ಮಾಡುವ ಸಂದರ್ಭದಲ್ಲಿ, ನರೇಗಲ್ಲಿನ ಶ್ರೀ ಅನ್ನದಾನೀಶ್ವರ ಕಾಲೇಜಿನಲ್ಲಾದ ವಿಪ್ಲವಗಳು, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಬಂದರೂ ಬೆನ್ನುಬಿಡದೆ ಕಾಡಿದ ಅನ್ಯರ ಸ್ವಹಿತಾಶಕ್ತಿಗಳು, ಇವುಗಳ ಮಧ್ಯವೇ ರೂಪಪಡೆದ 'ಸಂಶೋಧನ ವ್ಯಾಸಂಗ' ಕೃತಿ, ಎಂ.ಎಂ. ಕಲಬುರ್ಗಿ ಅವರು ನೀಡಿದ 'ರತ್ನಕರಂಡಕದ ಕಥೆ'ಯ ಗ್ರಂಥ ಸಂಪಾದನೆ, ಅದಕ್ಕೆ ದೊರೆತ ರಾಜ್ಯಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹೀಗೆ ದೇಹದಣಿದರು ಮನತೃಪ್ತಿಗೊಳ್ಳುವಂತೆ ಸಾಧನೆ ಮಾಡಿದ ಪ್ರೊ. ಶಿರೂರ ಅವರು "ನಮಗೆ ಬರಬೇಕಾದುದನ್ನು ಹಕ್ಕಿನಿಂದ ಪಡಿಯೋಣ. ಆದರೆ ಇತರರಿಗೆ ಅಡ್ಡಗಾಲು ಹಾಕದಿರೋಣ" ಎಂಬ ನಿಲುವಿನೊಂದಿಗೆ "ನನ್ನ ಪಾಲಿಗೆ ಇಷ್ಟು ಇತ್ತು, ಇಷ್ಟು ಬಂದಿತು; ಅದಕ್ಕಿಂತ ಹೆಚ್ಚಿಗೆ ಆಸೆ ಮಾಡಬಾರದು" ಎಂಬ ಜೀವನ ಸಿದ್ಧಾಂತದೊಂದಿಗೆ ಬದುಕಿದ ಅವರದು ಸಾರ್ಥಕ್ಯ ಬದುಕು!.

ಸಿರಿಸಂಪದ–೩

ಈ ಭಾಗದಲ್ಲಿ ಬಿ.ವ್ಹಿ. ಶಿರೂರ ಸಾಹಿತ್ಯದ ಕುರಿತು ಪುನರಾವಲೋಕನ ಮಾಡಿದ ಹದಿನಾಲ್ಕು ಲೇಖನಗಳಿವೆ. ೧. ಶ್ರವಣಬೆಳ್ಗೊಳ ಮಹಾಪ್ರಬಂಧ–ಒಂದು ಅಧ್ಯಯನ–ಚನ್ನಬಸವ ಹಿರೇಮಠ, ೨. ಸಂಶೋಧನೆಯ ಸ್ವರೂಪ–ಎಂ.ಶಂಕರ, ೩. ವಚನ ಸಾಹಿತ್ಯ ಸಂಪಾದನೆ–ವಿಜಯಕುಮಾರ ಕಟಗಿಹಳ್ಳಿಮಠ, ೪. ಮೊಲ್ಲೆಬೊಮ್ಮಯ್ಯಗಳ ಕಾವ್ಯ–ಶಿವಾನಂದ ಕೆಳಗಿನಮನಿ, ೫. ರತ್ನಕರಂಡಕದ ಕಥೆಗಳು–ಶಾಂತಾ ಇಮ್ರಾಪೂರ, ೬. ಗೊಮ್ಮಟೇಶ್ವರ ಚರಿತೆಗೆ ಪಾಠಾಂತರಗಳು–ಮಹೇಂದ್ರ, ೭. ಸಂಪಾದಿತ ಕೃತಿಗಳು–ಮೃತ್ಯುಂಜಯ ಹೊರಕೇರಿ, ೮. ಆನಂದಕಂದರ ಅಪ್ರಕಟಿತ ಬಾನೂಲಿ ರೂಪಗಳು–ಗವಿಸಿದ್ದಪ್ಪ ಎಚ್. ಪಾಟೀಲ, ೯. ಪಠ್ಯಗ್ರಂಥಗಳು–ಸುಲೋಚನಾ ಸಂ. ಮಟ್ಟಿ, ೧೦. ಗೌರವ ಗ್ರಂಥಗಳು–ಶಾಂತಾದೇವಿ ಸಣ್ಣೆಲ್ಲಪ್ಪನವರ, ೧೧. ಕಿರುಕೃತಿಗಳು–ವ್ಹಿ.ಎಲ್. ಪಾಟೀಲ, ೧೨. ವೀರಶೈವ ಲೇಖನಗಳು–ರಾಜಶೇಖರ ಈ. ಇಚ್ಚಂಗಿ, ೧೩. ಜೈನ ಲೇಖನಗಳು–ಡಿ.ಜಿ. ಹಾಜವಗೋಳ, ೧೪. ಇತರ ಲೇಖನಗಳು–ಜೆ.ಎಂ. ನಾಗಯ್ಯ

ಬರೆದಿರುವರು. ಅಂತಿಮದಲ್ಲಿ ಬಿ.ವ್ಹಿ. ಶಿರೂರ ಅವರ ಬದುಕಿನ ಪ್ರಮುಖ ಘಟನೆಗಳನ್ನು ಅನುಬಂಧದಲ್ಲಿ ಹಾಗೂ ಸಿರಿಸಂಪದದ ಹಾರಕ್ಕೆ ಮುತ್ತುಗಳನ್ನು ಪೋಣಿಸಿದ ಲೇಖಕರ ವಿಳಾಸವನ್ನು ನೀಡಿರುವರು.

ಒಟ್ಟಿನಲ್ಲಿ ಸಿರಿಸಂಪದದ ವ್ಯಾಪ್ತಿ ವಿಶಾಲವಾದದ್ದು. ಕನ್ನಡ ಸಾಹಿತ್ಯದ ನಿಜದ ಸ್ವರೂಪವನ್ನು ಕನ್ನಡಿಗರಿಗೆ ತೆರೆದು ತೋರಿಸಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಟ್ಟವರು ಗ್ರಂಥಸಂಪಾದನಕಾರರು. ಆದರೆ ಸಾಹಿತ್ಯ ಚರಿತ್ರೆಯನ್ನು ಅಧ್ಯಯನ ಮಾಡುವಾಗ ಈ ಗ್ರಂಥಸಂಪಾದನಕಾರರು ಮರೆಯಲ್ಲಿಯೇ ಉಳಿಯುತ್ತಾರೆ. ಬಿ.ವ್ಹಿ. ಶಿರೂರ ಅವರಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುವ ಸಂದರ್ಭದ ಅಮೃತಘಳಿಗೆಯಲ್ಲಿ ಹಾಗೂ ಶಿರೂರ ಅವರೂ ಒಬ್ಬ ಗ್ರಂಥಸಂಪಾದನಾಕಾರರಾಗಿರುವುದರಿಂದ ತಮ್ಮ ಹಿರಿಯ, ಸಮಕಾಲೀನ ಮತ್ತು ಕಿರಿಯ ಗ್ರಂಥಸಂಪಾದನಾಕಾರರ ಕಾರ್ಯವನ್ನು ದಾಖಲಿಸುವಂತೆ ಮಾಡಿರುವುದು ಅವರ ಹೆಗ್ಗಳಿಕೆ. ಈ ಕಾರ್ಯಕ್ಕೆ ಕೈಗೆ–ಕೈ ಜೋಡಿಸಿ ಸಂಪಾದನ ಕಾರ್ಯವನ್ನು ಪೂರೈಸಿದವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಎಫ್.ಟಿ. ಹಳ್ಳಿಕೇರಿ ಹಾಗೂ ಡಾ. ಕೆ. ರವೀಂದ್ರನಾಥ ಅವರ ಶ್ರಮ ಸಾರ್ಥಕವಾಗಿರುವುದರಿಂದ ಅಭಿನಂದನಾರ್ಹರಾಗಿದ್ದಾರೆ.

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೮. ಹಸ್ತಪ್ರತಿಯಲ್ಲಿ ಸಾಮಾಜಿಕ ಅಧ್ಯಯನದ ಇತಿಹಾಸ

–ರಾಜಶ್ರೀ ಬ. ಪಾಟೀಲ*

ಹಸ್ತಪ್ರತಿಗಳೆಂದರೆ ಸಾಹಿತ್ಯ, ಸಂಸ್ಕೃತಿಯ ಸೃಷ್ಟಿಶೀಲ ಉತ್ಪನ್ನಗಳು ಹಾಗೂ ಸೃಜನಶೀಲ ವಿಸ್ತರಣೆಗಳು. ಕನ್ನಡ ಮನಸ್ಸುಗಳು ತನ್ನ ಲಿಪಿಕಾರ, ಕವಿ, ವಿದ್ವಾಂಸ, ಕೇಳುಗ, ಪೋಷಕರ ಮೂಲಕ ಸೃಜಿಸಿಕೊಂಡ ಸಾಹಿತ್ಯ ಸಂಸ್ಕೃತಿಯ ಮೂರ್ತ ಪ್ರತಿಬಿಂಬಗಳು. ಅದರಲ್ಲಿಯೂ ದೇಸೀ ಸಂಸ್ಕೃತಿಯ ಬೇರುಗಳನ್ನು ಗುರುತಿಸಲು ಹಸ್ತಪ್ರತಿಗಳು ನೆರವಾಗುತ್ತವೆ. ಹಸ್ತಪ್ರತಿಗಳು ಒಂದು ನಾಡಿನ ಸಾಂಸ್ಕೃತಿಕ ಆಸ್ತಿ ಹಸ್ತಪ್ರತಿಗಳ ಅಧ್ಯಯನದಿಂದ, ಸಂಸ್ಕೃತಿ, ಭಾಷೆ, ಪ್ರತಿಕಾರರ ಕೌಟುಂಬಿಕ ವಿದ್ಯಮಾನಗಳು ತಿಳಿದುಬರುತ್ತವೆಯಲ್ಲದೆ, ಒಂದು ಕಾಲಘಟ್ಟದ ಚಾರಿತ್ರಿಕ ಸ್ಥಿತಿಗತಿಗಳನ್ನು ತಿಳಿಯಲೂ ಅವು ನೆರವಾಗುತ್ತವೆ. ರಟ್ಟಿಮತಶಾಸ್ತ್ರ, ಜೋತಿಷ್ಯಶಾಸ್ತ್ರ, ಕೃಷಿ ಶಾಸ್ತ್ರ, ಗಜ ಶಾಸ್ತ್ರ, ತಗರ ಪವಾಡ, ಇನ್ನು ಮುಂತಾದ ಹಸ್ತಪ್ರತಿಗಳ ಪ್ರಾದೇಶಿಕ ಮತ್ತು ಚಾರಿತ್ರಿಕ ಅಮೂಲ್ಯ ಸಾಮಾಜಿಕ ಸಂಗತಿಗಳು ತಿಳಿದುಬರುತ್ತದೆ.

ಯಾವುದೇ ಭಾಷೆ–ಸಾಹಿತ್ಯವನ್ನು ಅದರ ಸಾಹಿತ್ಯಿಕ, ಸಾಮಾಜಿಕ, ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದು ವಿಧವಾದರೆ ಅದರಲ್ಲಿ ಅಭಿವ್ಯಕ್ತಗೊಂಡಿರುವ ಸಾಹಿತ್ಯೇತರ ವಿಷಯಗಳನ್ನು ಕುರಿತು ಅಧ್ಯಯನ ಮಾಡುವುದು ಮತ್ತೊಂದು ಬಗೆಯಾಗುತ್ತದೆ. ಹೀಗಾಗಿ ಹಸ್ತಪ್ರತಿಗಳು ಮನುಷ್ಯನ ಮನಸ್ಸಿನಲ್ಲಿ ಆಲೋಚನೆಗಳನ್ನು ಹುಟ್ಟುಹಾಕಬಲ್ಲ ಅರ್ಥಪೂರ್ಣ ಪಠ್ಯಗಳಾಗಿವೆ. ಅವು ಸಾಹಿತ್ಯ, ಧರ್ಮ, ಕಲೆ, ಆಚರಣೆಗಳ ಒಟ್ಟು ಮೊತ್ತಗಳು ಹೌದು. ಅವುಗಳಿಗೆ ಸಮುದಾಯ, ಪರಿಸರ, ಆರ್ಥಿಕ, ಸಾಮಾಜಿಕ, ರಾಜಕೀಯ ಪ್ರಕ್ರಿಯೆಗಳ ನೆಲೆಯಿದೆ.

* ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–೫೮೩೨೭೬.
ಮೊ : ೯೬೬೩೪೪೮೩೮೫೧.

ಇಂಥ ಹಸ್ತಪ್ರತಿಗಳ ಬಗ್ಗೆ ಇದುವರೆಗೂ ನಡೆದ ಅಧ್ಯಯನಗಳು ಹಸ್ತಪ್ರತಿಗಳನ್ನು ಅದರೊಳಗಡೆ ಅಡಗಿರುವ ಸಾಹಿತ್ಯವನ್ನು ರಾಜಕೀಯ ಪ್ರಭುತ್ವವನ್ನು ಜನರ ನೆಲೆಯಿಂದ ರಾಜಕೀಯ ಆರ್ಥಿಕ ಆಯಾಮಗಳಲ್ಲಿ ವಿವೇಚಿಸದೆ, ಪ್ರಭುತ್ವಗಳು, ಹಸ್ತಪ್ರತಿಗಳನ್ನು ಪೋಷಿಸಿದ ಮೆರೆಸಿದ ವಿಜೃಂಭಣಾತ್ಮಕ ಆಯಾಮಗಳಲ್ಲಿ ವೈಭವೀಕರಿಸಿವೆ. ಶುದ್ಧ ಮತ್ತು ಪಾವಿತ್ರ್ಯದ ಹೆಸರಿನಲ್ಲಿ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ನಿರ್ಮಿಸಿಕೊಂಡ ಹಸ್ತಪ್ರತಿಗಳಂತಹ ಬಹುಪಠ್ಯ ಮತ್ತು ಬಹು ಸಂವೇದನೆಗಳನ್ನು ಅದರ ಸಾಮಾಜಿಕ ವಾಸ್ತವಗಳನ್ನು ಶಾಸ್ತ್ರೀಯಗೊಳಿಸುತ್ತಾ ಬರಲಾಗಿದೆ.

ಸಂಯೋಜನೆಮುಖಿಯಾದ ಕನ್ನಡ ಹಸ್ತಪ್ರತಿಗಳು ಬಹುವಿಧ ಜ್ಞಾನಶಿಸ್ತುಗಳನ್ನು ಗರ್ಭೀಕರಿಸಿಕೊಂಡಂಥವು. ಸಾಹಿತ್ಯವೆಂದು ಪರಿಗಣಿಸುವ ಪ್ರಧಾನ ವಿಷಯಗಳಿಂದ ಹಿಡಿದು ಪಶುವೈದ್ಯ, ಆಯುರ್ವೇದ, ಶಿಲ್ಪಶಾಸ್ತ್ರ ಮಾಟಮಂತ್ರ, ಹಾಡು, ಶಕುನ, ಲೆಕ್ಕಪತ್ರ, ರಸವಿದ್ಯೆ, ವಶೀಕರಣ, ಮಳೆ-ಬೆಳೆ, ಇಂಥ ಹಲವು ಸಂಗತಿಗಳನ್ನು ಒಳಗೊಂಡಂಥವು. ವಿಶೇಷವಾಗಿ ಇವೆಲ್ಲವುಗಳಿಗೂ ಪ್ರಾದೇಶಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಲಿಂಗ, ಜಾತಿ ಇತ್ಯಾದಿ ಆಯಾಮಗಳಿವೆ ಎಂಬುದನ್ನು ಮರೆಯಬಾರದು. ಇಂಥ ಜ್ಞಾನಕ್ಷೇತ್ರವನ್ನು ಒಂದು ಶಾಸ್ತ್ರದ ಮೂಲಕ ಅಥವಾ ಕೃತಿ ಕರ್ತೃನಿಷ್ಠ ನೆಲೆಯ ಪರಿಶೀಲನೆಗಿಂತ ಭಿನ್ನವಾದ ಅನುಸಂಧಾನದಡಿಯಲ್ಲಿ ನೋಡಬೇಕಾಗಿದೆ.

ರಟ್ಟಮತಶಾಸ್ತ್ರ

ಈ ಹಿನ್ನೆಲೆಯಲ್ಲಿ ರಟ್ಟಮತದಂತಹ ಕೃತಿಗಳು ಕರ್ನಾಟಕದ ನೆಲ, ಜಲದ ವ್ಯಾಖ್ಯಾನಗಳಾಗಿ ಕಾಣುತ್ತವೆ. ಮಳೆ, ಬೆಳೆ, ಸೂರ್ಯ, ಚಂದ್ರ, ನಕ್ಷತ್ರ, ರಾಶಿಫಲ, ಶಕುನ, ಜೋತಿಷ್ಯ, ಫಲಪುಷ್ಪ ಗ್ರಹಣಗಳಂತಹ ಪ್ರಾಕೃತಿಕ ಚಲನೆಗಳಿಗೂ ಮತ್ತು ಮಾನವರಿಗೂ ಇರುವ ಸಾಂಸ್ಕೃತಿಕ ಸಂಬಂಧಗಳನ್ನು ಸೂಕ್ಷ್ಮವಾಗಿ ಬಿಡಿಸಿ ತೋರಿಸುತ್ತದೆ. ಸಾಮಾನ್ಯವಾಗಿ ಕುರುಬರ ಮನೆಯಲ್ಲಿಯೇ ಲಭ್ಯವಾಗುವ ಈ ಕೃತಿ ಕೃಷಿ ಬದುಕಿನ ಸೂಕ್ಷ್ಮ ಸಂಬಂಧಗಳನ್ನು ಕಟ್ಟಿ ಕೊಡುತ್ತದೆ. ಕೃಷಿ ಬದುಕಿನಲ್ಲಿ ಕುರುಬರಿಗೆ ಮೊದಲ ಆದ್ಯತೆ. ಯಾವ ಯಾವ ಮಳೆಗೆ ಯಾವ ಯಾವ ಭೂಮಿಗೆ ಯಾವ ಯಾವ ಬೀಜಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಬಿತ್ತಬೇಕು, ಎಂಥ ಎತ್ತುಗಳಿರಬೇಕು, ಉಳಮೆ ಮಾಡುವ ಲಕ್ಷಣಗಳೇನು? ಅವನ ಉಡುಗೆ ತೊಡುಗೆಗಳೇನು? ಎನ್ನುವ ಇತ್ಯಾದಿ ವಿವರಗಳನ್ನು ರಟ್ಟಮತ ಕೃತಿ ಕಟ್ಟಿಕೊಡುತ್ತದೆ. ಪ್ರತಿ ಕೃಷಿ ಚಟುವಟಿಕೆಯ ಸಂದರ್ಭದಲ್ಲಿ ಇದನ್ನು ಪಠಿಸುವ, ಪೂಜಿಸುವ ಸಂದರ್ಭಗಳು ಇದ್ದ ಬಗ್ಗೆ ತಿಳಿದುಬರುತ್ತದೆ.

ಈ ವಿಷಯ ಕುರಿತಾಗಿ ಹಲವಾರು ಹಸ್ತಪ್ರತಿಗಳು ಸಹ ಸಿಕ್ಕಿವೆ. ಅದರಲ್ಲಿ ಮದ್ರಾಸ್ ಓರಿಯಂಟಿಲ್ ಲೈಬ್ರರಿಯಲ್ಲಿರುವ ಮೂರು ಪ್ರತಿಗಳನ್ನು, ಮೈಸೂರಿನ ಲೈಬ್ರರಿಯಲ್ಲಿರುವ ಒಂದು ಪ್ರತಿಯನ್ನು, ಉತ್ತರ ಪ್ರದೇಶದ ಅ.ರಾ. ಜೈನ ಲೈಬ್ರರಿಯಲ್ಲಿರುವ ಒಂದು ಪ್ರತಿಯನ್ನು ಹೀಗೆ ಒಟ್ಟು ಐದು ಹಸ್ತಪ್ರತಿಗಳನ್ನು ಪರಿಶೀಲಿಸಿ ಸಂಗ್ರಹಿಸಿ ಪ್ರಕಟಿಸಿದ ಶೇಷಯ್ಯಂಗಾರರು ಸಂಪಾದಿಸಿದ 'ರಟ್ಟಮತ' ಮೊದಲನೆಯದು, ಬಸವಯ್ಯಶಾಸ್ತ್ರೀಗಳು ಸಂಗ್ರಹಿಸಿದ "೬೦ ವರ್ಷಗಳ ಕುರುಬರ ರಟ್ಟಮತಶಾಸ್ತ್ರ" ಎರಡನೆಯದು. ಇದಕ್ಕೆ ಭಿನ್ನವಾಗಿ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮಬನೂರು ಗ್ರಾಮದಲ್ಲಿ ಕುರುಬರ ಇಟ್ಟಪ್ಪದೇವರ ಗುಡಿಯಲ್ಲಿ ದೊರೆತ ಹಸ್ತಪ್ರತಿಯನ್ನು ಆಧಾರವಾಗಿಟ್ಟುಕೊಂಡು ಸಂಪಾದಿಸಿದ "ಕುರುಬರ ರಟ್ಟಮತಶಾಸ್ತ್ರ" ಮೂರನೆಯದು. ಈ ಮೂರು ಕೃತಿಗಳು ಕರ್ನಾಟಕದ ನೆಲ–ಜಲ, ಜನ–ಮನಗಳ ಪ್ರತಿನಿಧಿಗಳಾಗಿ ನಿಲ್ಲುವಂಥವುಗಳು. ಮಳೆ–ಬೆಳೆ, ಸೂರ್ಯ–ಚಂದ್ರ, ನಕ್ಷತ್ರರಾಶಿ, ಫಲ–ಶಕುನ, ಜೋತಿಷ್ಯ, ಫಲ–ಪುಷ್ಪ, ಗ್ರಹಣಗಳಂತಹ ಇತ್ಯಾದಿ ಪ್ರಾಕೃತಿಕ ಸಸ್ಯಗಳು, ಮನುಷ್ಯ, ಪ್ರಾಣಿ–ಪಕ್ಷಿಗಳ–ಬದುಕಿನ ಕ್ರಮವನ್ನು ಆಗುಹೋಗುಗಳನ್ನು ವ್ಯಾಖ್ಯಾನಿಸುವ ಮತ್ತು ಬದುಕಿನ ಕ್ರಮವನ್ನು ಆ ಸಂಕಷ್ಟಗಳಿಗೆ ಹೊಂದಿಕೊಳ್ಳುವ ನೆಲೆಗಳನ್ನು ಈ ಮೂರು ಕೃತಿಗಳು ತಿಳಿಸಿಕೊಡುತ್ತವೆ. ಅಲ್ಲದೆ ಪ್ರಾಕೃತಿಕಗಳನ್ನು ಇವು ಸೂಕ್ಷ್ಮವಾಗಿ ಬಿಡಿಸಿತೋರಿಸುತ್ತವೆ.

ಜೋತಿಷ್ಯಶಾಸ್ತ್ರ

ನಕ್ಷತ್ರ, ಗ್ರಹ, ಸೂರ್ಯ–ಚಂದ್ರ ಮುಂತಾದ ಆಕಾಶಕಾಯಗಳು ಮಾನವನ ಜೀವನದ ಮೇಲೆ ಬೀರುವ ಪ್ರಭಾವವನ್ನು ಗುರುತಿಸುವ ಶಾಸ್ತ್ರವೇ ಜ್ಯೋತಿಷ್ಯಶಾಸ್ತ್ರ, ಜನನ–ಮರಣ ಮುಂತಾದ ಸಂದರ್ಭಗಳಲ್ಲಿ ಆಕಾಶಕಾಯಗಳ ಚಲನವಲನಗಳನ್ನು ಗಮನಿಸಿ ಮಾನವನ ಭವಿಷ್ಯ ಮತ್ತು ಅವನ ಸಾಮಾನ್ಯ ಸ್ವಭಾವಗಳನ್ನು ಈ ಶಾಸ್ತ್ರ ವಿವರವಾಗಿ ಹೇಳುತ್ತದೆ. ಬಹಳ ವರ್ಷಗಳ ಹಿಂದೆಯೇ ನಕ್ಷತ್ರಗಳ ವಿಜ್ಞಾನವನ್ನು ನೈಸರ್ಗಿಕ ಜ್ಯೋತಿಷ್ಯಶಾಸ್ತ್ರ ಎಂದು ಕರೆಯಲಾಗುತ್ತಿತ್ತಾದರೂ ಅದಕ್ಕೆ ವಿಜ್ಞಾನದ ವಿಷಯದಲ್ಲಿ ಖಗೋಳ ವಿಜ್ಞಾನ ಎಂದು ಕರೆಯುವುದು ರೂಢಿಯಾಗಿತ್ತು. ಆಕಾಶದಲ್ಲಾಗುವ ನಕ್ಷತ್ರಗಳ ಬದಲಾವಣೆ, ಭೂಮಿಯ ಮೇಲಾಗುವ ಋತುಗಳ ಬದಲಾವಣೆ, ನಕ್ಷತ್ರಗಳಿಗೂ ಹಾಗೂ ಭೂಮಿಗೂ ಇರುವ ನಿಕಟವಾದ ಸಂಬಂಧ, ಈ ಎಲ್ಲವನ್ನು ವೀಕ್ಷಿಸುವ ಹಾಗೂ ಅಭ್ಯಸಿಸುವ ವಿಷಯ ವಸ್ತುವೇ ಜೋತಿಷ್ಯಶಾಸ್ತ್ರವಾಗಿ ಪರಿಣಮಿಸಿತೆನ್ನುವುದಾದರೆ ಇದರ ವಸ್ತು ವಿಷಯದ ಅರ್ಧದಷ್ಟು ವಿಷಯ ರಟ್ಟಮತಶಾಸ್ತ್ರಕ್ಕೆ ಅನ್ವಯಿಸುತ್ತದೆ. ಜೋತಿಷ್ಯಶಾಸ್ತ್ರಕ್ಕೂ ಹಾಗೂ ರಟ್ಟಮತಶಾಸ್ತ್ರಕ್ಕೂ ನಿಕಟವಾದ ಸಂಬಂಧವಿದೆ.

ಇಷ್ಟೇ ಅಲ್ಲದೆ ಜ್ಯೋತಿಷ್ಯಶಾಸ್ತ್ರವು ಇದೊಂದು ಆಕಾಶಮುಖಿಯಾದ ಶಾಸ್ತ್ರವಾಗಿದೆ. ವಾಸ್ತುಶಾಸ್ತ್ರ, ಭೂಮುಖಶಾಸ್ತ್ರವಾದರೆ ಜ್ಯೋತಿಶಾಸ್ತ್ರವು ಗಗನಮುಖಿ ಶಾಸ್ತ್ರವಾಗಿದೆ. ಅನಂತತೆಯ ಶಕ್ತಿಯನ್ನು ಅರಿಯುವ ಜ್ಞಾನವಾಗಿದೆ. ಜೋತಿಷ್ಯದ ಪ್ರಮುಖ ಅಂಗಗಳಾದ ಮದುವೆ, ಜಾತಕ, ಸಾಲಾವಳಿ, ನೌಕರಿ, ಶಿಕ್ಷಣ, ಮಳೆ ಬೆಳೆ ಅನೇಕ ರೀತಿಯ ಜೋತಿಷ್ಯಗಳು ಕೇಳುವುದು ಕಂಡುಬರುತ್ತದೆ.

ಕನ್ನಡದಲ್ಲಿ ಕೆಲವು ಹಸ್ತಪ್ರತಿಗಳನ್ನು ಗಮನಸಿದಾಗ ಜ್ಯೋತಿಷ್ಯಶಾಸ್ತ್ರವು ಅದೊಂದು ಇಚ್ಛಾನುಸಾರಿ ಮತ್ತು ಸಡಿಲವಾದ ಜನೋಪಯೋಗಿ ತಿಳಿವಳಿಕೆಯಾಗಿದ್ದುದು ತಿಳಿದುಬರುತ್ತದೆ. ಪ್ರತಿಯೊಬ್ಬರು ತಮಗೆ ಬೇಕಾದ ಮಾಸಗಳಲ್ಲಿ ಜರುಗುವ ಸುಖ–ದುಃಖ ಲಾಭ–ನಷ್ಟ ರೋಗ–ಪೀಡೆ ಮುಂತಾದ ಫಲವನ್ನು ತಿಳಿದುಕೊಳ್ಳವುದು ಹೇಗೆಂದರೆ ಆ ಮಾಸದಲ್ಲಿ ತಮ್ಮ ತಮ್ಮ ಜನ್ಮ ನಕ್ಷತ್ರದಿಂದಾಗಲಿ ನಾಮ ನಕ್ಷತ್ರದಿಂದಾಗಲೀ ಮಾಸದ ಶುಕ್ಲಪಕ್ಷ ಪ್ರತಿಪದ ದಿವಸ ಪ್ರಾತಃಕಾಲಕ್ಕೆ ಯಾವ ನಕ್ಷತ್ರ ಇರುವುದೋ ಆ ನಕ್ಷತ್ರದಿಂದ ಗುಣಿಸುವುದು.

> 'ರೇವತಿ ನಕ್ಷತ್ರದಲ್ಲಿ ಹೆಣ್ಣು ಹುಟ್ಟಿದರೆ ಮತಿವಂತಿ ಅವಳು।
> ಜಾತಿಗೃಹದಲ್ಲಿ ಕೆಟ್ಟಗೃಹ ಸೇರಿದರೆ ಶಿಶುವು ಕೆಟ್ಟಿತು। ಯಿಲ್ಲದಿದ್ದ
> ರೆ ಮಾನ ಆದಾಳು। ಅದಕ್ಕೆ ಕೂನವ ಹೇಳುವೇನು। ಹುಣ್ಣುಕಮ್ಮಿ।
> ರೋಗಧಾರೆ। ಮಂದಮತಿ। ಅನಾರುಂಡ। ಮುಖಹೀನ ಜಾತಿ। ಹೊಲ
> ಗುಮ್ಮೆ ಬಲುಮಿಗಿಲು ಕನಿಷ್ಠದಾರೆ ಆದಾಳು....'॥ (ನಕ್ಷತ್ರ ಚೂಡಾಮಣಿ,
> ಕ್ರ.ಸಂ.೨೦೪, ಸಂ.೩೩೬)

ಜಾತಕ ಜ್ಯೋತಿಷ್ಯ ಹಾಗೂ ಮನೆ ವೈದ್ಯದ ವಿಧಾನಗಳನ್ನು ಹೇಳುವ ಈ ಮೇಲಿನ ಉಲ್ಲೇಖ ಮನುಷ್ಯನ ಹುಟ್ಟನ್ನು ಜ್ಯೋತಿಷ್ಯದ ಮೂಲಕ ನಿರ್ಧರಿಸುವಂತಿದೆ. ಹುಟ್ಟು–ಸಾವು ಸಹಜವಾಗಿದ್ದರೂ ಅವನ್ನು ಕರ್ಮಜಂಜಡಗಳ ಮೂಲಕವೇ ನೋಡುವ ಇಂಥ ಕ್ರಮಗಳು ಹುಟ್ಟಿನಂದಲೇ ಮನುಷ್ಯನನ್ನು ಜ್ಯೋತಿಷ್ಯದ ದಾಸನನ್ನಾಗಿ ಮಾಡುತ್ತವೆ.

ಜ್ಯೋತಿಷ್ಯದ ಕೆಲವೊಂದು ಮೂಲ ಹಸ್ತಪ್ರತಿಗಳನ್ನು ಓದಿದಾಗ ಪೂರ್ವದಲ್ಲಿ ಅದೊಂದು ಶೋಷಣೆಯ ಮಾಧ್ಯಮವಾಗಿ ಬರದೆ ಖಗೋಳದ ಚಲನವಲನಗಳನ್ನು ಅರಿಯುವ ಮತ್ತು ಬಂದಿಸಿಕೊಳ್ಳುವ, ಮನುಷ್ಯನ ಸಮಸ್ಯೆಗಳಿಗೆ ಸ್ಪಂಧಿಸುವ ಅರಿವಾಗಿ ಇದ್ದದ್ದು ಸ್ಪಷ್ಟವಾಗುತ್ತದೆ. ಪಂಚಭೂತಗಳೊಂದಿಗೆ ಹೊಂದಿಸಿಕೊಂಡು ಬದುಕುವ ಜೀವನ ಪರ ನೆಲೆಯಾಗಿ ಜೋತಿಷ್ಯ ಕಾಣುತ್ತದೆ. ಹೀಗಾಗಿ ಬಹುಶಾಸ್ತ್ರೀಯ ಹಾಗೂ

ಬಹುಬಳಕೆಯ ಜ್ಞಾನಪರಂಪರೆಯಾಗಿತ್ತು ಎಂಬುದನ್ನು ಹಸ್ತಪ್ರತಿಗಳ ಸಮಾಜ ಅಧ್ಯಯನ ಇತಿಹಾಸದಲ್ಲಿ ಮನಗಾಣಬಹುದು.

ಮಲ್ಲಣ್ಣನ ಕೋಕಶಾಸ್ತ್ರ (ಕಾಮಶಾಸ್ತ್ರ)

ಪ್ರಾಚೀನ ಕವಿಗಳು ವಿವಿಧ ಜ್ಞಾನಶಾಖೆಗಳನ್ನು ಸೃಷ್ಟಿಸಿಕೊಂಡಿದ್ದರು. ಈ ಜ್ಞಾನಶಾಖೆಗಳಿಗೆ ಅನುಗುಣವಾಗಿ ಅವರು ಬುದ್ಧಿಯ ವಿಕಾಸಕ್ಕೆ, ಆರೋಗ್ಯಪೂರ್ಣ ಸಮಾಜಕ್ಕೆ ಸಾಕಷ್ಟು ಪೋಷಣೆ ಮತ್ತು ಪೂರಕವಾಗಬಲ್ಲಂತಹ ಸೂತ್ರಬದ್ಧವಾದ ಕೃತಿಗಳನ್ನು ನೀಡಿದ್ದಾರೆ. ಕ್ರಿ.ಪೂ.೧೩೦೦ರಲ್ಲಿ ಈಜಿಪ್ಟಿನಲ್ಲಿ ಕಾಗದ ರೂಪದಲ್ಲಿ ದೊರೆತ ಕಾಮಶಾಸ್ತ್ರದ ಹಸ್ತಪ್ರತಿ ಅತ್ಯಂತ ಪ್ರಾಚೀನವಾದ ಬರವಣಿಗೆಯೆಂದು ಹೇಳಲಾಗುತ್ತಿದೆ. ಭಾರತದಲ್ಲಿ ವಾತ್ಸಾಯನನ ಕಾಮಸೂತ್ರ ಕೃತಿಯು ಈ ಪರಂಪರೆಯಲ್ಲಿ ಬಂದ ಮೊದಲ ಕೃತಿ. ಇದು ೧ನೇ ಶತಮಾನದಲ್ಲಿ ರಚನೆಗೊಂಡಿರಬಹುದೆಂದು ಬಹುಜನ ವಿದ್ವಾಂಸರ ಅಭಿಪ್ರಾಯ. ಈ ಕೃತಿಯನ್ನಾಧರಿಸಿ ಭಾರತದ ವಿವಿಧ ಭಾಷಗಳಲ್ಲಿ ಅನೇಕ ಕಾವ್ಯಗಳು ರಚನೆಗೊಂಡಿವೆ. ಅವುಗಳಲ್ಲಿ ಚಂದ್ರರಾಜನ ಮದನತಿಲಕ, ಜನ್ನನ ಮೊಹಾನುಭವ ಮುಕುರ, ಕಲ್ಲರಸನ ಜನವಶ್ಯ, ಕವಿಮಲ್ಲನ ಮನ್ಮಥ ವಿಜಯ, ಕಕ್ಕೋಕನ ರತಿರಹಸ್ಯ ಟೀಕು, ಅಂಗಜಬೋಧೆ, ಮಲ್ಲಣ್ಣ ಕವಿಯ ಕೋಕಶಾಸ್ತ್ರ ಹೀಗೆ ಹತ್ತಾರು ಕೃತಿಗಳನ್ನು ಹೆಸರಿಸಬಹುದು.

ಇದು ೧೦ ಸಂಧಿ ೫೬೮ ಭಾಮಿನ ಷಟ್ಪದಿಗಳನ್ನೊಳಗೊಂಡಿದೆ. ಕೋಕಮುನಿಯು ವ್ಯಾಸದತ್ತನೆಂಬ ಅರಸನನ್ನು ಉದ್ದೇಶವಾಗಿಟ್ಟುಕೊಂಡು ಕೃತಿ ರಚಿಸಿದ್ದಾನೆ. ಸ್ತ್ರೀ ಪುರುಷರ ಪೂರ್ಣ ಆಯುಷ್ಯ ಆರೋಗ್ಯದಿಂದಿರುವ ಇಚ್ಚೆಯುಳ್ಳವರಾಗಿದ್ದರೆ ಅತೀಕಾಮುಕತೆಯನ್ನು ನಿಯಂತ್ರಿಸುವುದು ಕೃತಿ ಎಂದು ಹೇಳಲಾಗಿದೆ. ನಾಲ್ಕು ಜಾತಿಯ ಸ್ತ್ರೀಯರ ಉಲ್ಲೇಖಿಸುತ್ತ ಪದ್ಮನಿ ಉತ್ತಮ, ಚಿತ್ತಿನಿ ಮಧ್ಯಮ, ಶಂಖಿನಿ ಆಧಮ ಹಾಗೂ ಹಸ್ತಿನಿ ಕನಿಷ್ಟ ಎಂದು ಕವಿ ಹೇಳಿದ್ದಾನೆ.

ನೈದಿಲೆಯ ಎಸಳಂತೆ ಕಣ್ಣು, ತೆಳುವಾದ ಪಾದ, ಹೇಮದ ಕಾಂತಿಯಂಥ ಮೈ ಮುಂತಾದ ಕನ್ಯೆಯ ಲಕ್ಷಣಗಳನ್ನು ವಿವರವಾಗಿ ವರ್ಣಿಸಿದ್ದಾನೆ. ಇಂಥ ಹಲವಾರು ಉಪಯುಕ್ತವಾದ ಲೈಂಗಿಕ ವಿಷಯಗಳನ್ನು ಕವಿ ಇಲ್ಲಿ ಉಪದೇಶ ಮಾಡಿದ್ದಾನೆ. ಹೀಗಾಗಿ ಈ ಕೃತಿ ಸಂಸಾರಿಗರಿಗೆ ಒಂದು ಉಪಯುಕ್ತ ಕೈಪಿಡಿಯೆಂದು ಹೇಳಬಹುದು.

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರದಲ್ಲಿ ಕೂಡ ಶಾಸ್ತ್ರದ ಮೂರು ಕಾಗದ ಪ್ರತಿಗಳಿವೆ. ೫೬೩ನೆಯ ಕ್ರಮಾಂಕದ ಕಾಗದ ಪ್ರತಿಯ ಆರಂಭದಲ್ಲಿ ೧೭೭೫ ಶ್ರೀಮುಖ ಸಂವತ್ಸರ ಕಾರ್ತಿಕ ಶು.೯ದಲ್ಲು ಎಂದಿದೆ. ಈ ಮೂರು ಹಸ್ತಪ್ರತಿಗಳ ಸಹಾಯದಿಂದ ಕೋಕಶಾಸ್ತ್ರವನ್ನು ನೋಡಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಈ

ಕೃತಿಯ ಮೂರೂ ಕಾಗದ ಪ್ರತಿಗಳಿವೆ. ಹೆಚ್ಚಾಗಿ ಚಂಪೂ ಮತ್ತು ಷಟ್ಪದಿ ರೂಪದಲ್ಲಿ ಈ ಕೃತಿಗಳು ರಚನೆಗೊಂಡಿವೆ.

ನಮ್ಮ ಶಿಕ್ಷಣ ಕ್ರಮದಲ್ಲಿ ಲೈಂಗಿಕ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿಷಯವನ್ನು ಪಠ್ಯದಲ್ಲಿ ಸೇರಿಸಬೇಕು ಮತ್ತು ಬೋಧಿಸಬೇಕು ಎಂಬ ಚರ್ಚೆ ಇತ್ತೀಚೆಗೆ ಆರಂಭವಾಗಿದೆ. ಇಷ್ಟೇ ಅಲ್ಲದೆ, ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಯಾವುದಾದರೂ ಒಂದು ಕೃತಿಯು ಪ್ರಾಥಮಿಕ ಪ್ರೌಢ ಶಾಲೆಗಳು ಪದವಿ ಕಾಲೇಜುಗಳ ಪಠ್ಯಕ್ರಮದಲ್ಲಿ ಆಯ್ದ ಭಾಗಗಳನ್ನು ಅಳವಡಿಸಬೇಕು; ಮಕ್ಕಳಿಗೆ ಲೈಂಗಿಕ ಶಿಕ್ಷಣದ ಬಗ್ಗೆ ತಿಳಿವಳಿಕೆ ನೀಡಬೇಕು ಎನ್ನುವುದು ಸಾಮಾಜಿಕ ಅಧ್ಯಯನದ ಉದ್ದೇಶವಾಗಿದೆ.

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ–ಜೂನ್, ೨೦೧೪

೯. ಕೊಂಡಗಳಲೆ ಗ್ರಾಮದ ಪ್ರಾಚ್ಯಾವಶೇಷಗಳು

–ಡಾ॥ ಕೆಳದಿ ವೆಂಕಟೇಶ್ ಜೋಯಿಸ್*

ನಮ್ಮ ನಾಡಿನ ಉದಾತ್ತ ಸಾಂಸ್ಕೃತಿಕ ಪರಂಪರೆಯ ಬೆಳವಣಿಗೆಯಲ್ಲಿ ಪ್ರತಿಯೊಂದು ಪ್ರದೇಶದ ಜನರೂ ಒಂದಿಲ್ಲೊಂದು ರೀತಿಯಲ್ಲಿ ತಮ್ಮದೇ ಆದ ವಿಶಿಷ್ಠ ಪಾತ್ರವನ್ನು ವಹಿಸಿದ್ದಾರೆ. ತುಲನಾತ್ಮಕವಾಗಿ ಗಮನಿಸಿದಾಗ ಇತಿಹಾಸದುದ್ದಕ್ಕೂ ಎಲ್ಲಾ ಪ್ರದೇಶಗಳು ಒಂದಿಲ್ಲೊಂದು ರೀತಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಯಿಂದ ಆಯಾ ಕಾಲದಲ್ಲಿ ತನ್ನ ವಿಶಿಷ್ಠ ಕಾಣಿಕೆಯನ್ನು ಸಲ್ಲಿಸುತ್ತ ಬಂದಿರುವುದನ್ನು ಕಾಣಬಹುದು. ಅಂತೆಯೇ ಈ ಕೊಂಡಗಳಲೆ ಗ್ರಾಮದ ಅವಶೇಷಗಳು ಆ ಕಾಲದ ಐತಿಹಾಸಿಕ ಮಹತ್ವವನ್ನು ಸಾರುತ್ತದೆ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಉಳವಿ ಹೋಬಳಿ ಕ್ಯಾಸನೂರು ಸೀಮೆಯಲ್ಲಿರುವ ಕೊಂಡಗಳಲೆ ಇಂದು ಕುಗ್ರಾಮ. ಇದು ಸಾಗರ – ಸೊರಬ– ಉಳುವಿ – ಮಳಲಗದ್ದೆ – ಮಾರ್ಗದಲ್ಲಿ ಸುಮಾರು ೨೦ ಕಿ.ಮೀ. ದೂರದಲ್ಲಿದೆ. ಇಲ್ಲಿ ಐತಿಹಾಸಿಕ ಮಹತ್ವವನ್ನು ಸಾರುವ ಪ್ರಾಚೀನ ಅವಶೇಷಗಳು ಸಾಕಷ್ಟಿವೆ. ಈ ಪ್ರಾಂತದಲ್ಲಿ ವೀರಶೈವರ ಪ್ರಾಬಲ್ಯ ಹೆಚ್ಚಿದ್ದಿರಬೇಕೆನ್ನುವುದಕ್ಕೆ ಈ ಪ್ರದೇಶದಲ್ಲಿ ಸಿಕ್ಕಿರುವ ವೀರಗಲ್ಲುಗಳು ದಾಖಲೆಯಾಗಿ ನಿಲ್ಲುತ್ತವೆ.

ಈ ಊರಿಗೆ ಆಗ್ನೇಯಕ್ಕೆ ಸುಮಾರು ೨ ಕಿ.ಮೀ. ದೂರದಲ್ಲಿ ಸಾಂತರರ ಕಾಲದಲ್ಲಿ ನಿರ್ಮಾಣವಾಗಿರುವ ಸೋಮೇಶ್ವರ ದೇವಾಲಯ, ದಕ್ಷಿಣಾಭಿಮುಖವಾಗಿ ಸುಮಾರು ೮ ಕಿ.ಮೀ ದೂರದಲ್ಲಿ ನಾಡಕಲಸಿ ಮಲ್ಲಿಕಾರ್ಜುನ ದೇವಾಲಯವಿದೆ. ಅಂತೆಯೇ ಉತ್ತರಕ್ಕೆ ಸುಮಾರು ೩ ಕಿ.ಮೀ. ದೂರದಲ್ಲಿ ಕುಪ್ಪೆ ಎಂಬ ಗ್ರಾಮದಲ್ಲಿ

* ಕ್ಯೂರೇಟರ್, ಕೆಳದಿ ವಸ್ತು ಸಂಗ್ರಹಾಲಯ / ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ (ಶಿವಮೊಗ್ಗ) ೫೭೭ ೪೦೧, ದೂರವಾಣಿ : (೦೮೧೮೩) ೬೦೧೪೦.

ಪುರಾಣ ಕಾಲದಿಂದಲೂ ಪ್ರಖ್ಯಾತವಾದ ಸ್ಮಾರಕಗಳಿವೆ. ಬೌದ್ಧ ಧರ್ಮದ ಅವಶೇಷಗಳು ದೊರೆತಿರುವ ಮಾವಲಿ ಇಲ್ಲಿಂದ ಪೂರ್ವಕ್ಕೆ ಸುಮಾರು ೮ ಕಿ.ಮೀ.ದೂರದಲ್ಲಿದೆ.

ಇತಿಹಾಸ ಪೂರ್ವ ಕಾಲ:

ಶಿವಮೊಗ್ಗ ಜಿಲ್ಲೆಯಲ್ಲಿ ನೂತನ ಬೃಹತ್ ಶಿಲಾಯುಗ, ನೂತನ ಶಿಲಾಯುಗ ಹಾಗೂ ಇತಿಹಾಸ ಕಾಲದ ಸಾಂಸ್ಕೃತಿಕ ಆವಶೇಷಗಳು ಗುರುತಿಸಲ್ಪಟಿರುವುದು ನಮಗೆ ತಿಳಿದಿರುವ ವಿಚಾರ. ಇತಿಹಾಸ ಕಾಲವನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ಚುಟುವಂಶದವರು/ಸೇಂದ್ರಕರು/ಶಾತವಾಹನರು ಅಡಳಿತ ನಡೆಸಿರುವ ಕುರುಹುಗಳನ್ನು ಗುರುತಿಸಬಹುದಾಗಿದೆ. ಸೊರಬ ತಾಲ್ಲೂಕಿನ ಮಳಲಿಯಲ್ಲಿ ಬೌದ್ಧ ಧರ್ಮದ ಅವಶೇಷಗಳೂ ದೊರೆತಿದ್ದು ಈ ಪ್ರದೇಶಕ್ಕೆ ಅತೀ ಸಮೀಪದಲ್ಲಿ ಈ ಕೊಂಡಗಳಲೆ, ಕೋಳಿಸಾಲು ಗ್ರಾಮವಿರುವುದನ್ನು ಗಮನಿಸಿದಾಗ ಈ ಪ್ರದೇಶ ಪೂರ್ವದಲ್ಲಿ ಶಾತವಾಹನರ ಆಡಳಿತಕ್ಕೂ ಒಳಪಟ್ಟಿರಬೇಕೆನಿಸುತ್ತದೆ. ಅನಂತರದಲ್ಲಿ ಇವರ ಮಾಂಡಲೀಕರಾಗಿದ್ದ ಚುಟುವಂಶದವರ ಆಡಳಿತಕ್ಕೂ ಈ ಪ್ರದೇಶ ಒಳಪಟ್ಟಿರಬೇಕು. ಕ್ರಿ. ಶ ೨–೪ನೇ ಶತಮಾನದಲ್ಲಿ ಜಿಲ್ಲೆಯ ಒಂದು ಭಾಗವನ್ನು ಬನವಾಸಿಯಿಂದ ಚುಟುವಂಶದವರು, ಅನಂತರ ಸ್ವಲ್ಪ ಸಮಯ ಪಲ್ಲವರು, ಕದಂಬರು, ಅವರ ನಂತರ ಗಂಗರೂ ಈ ಪ್ರದೇಶದಲ್ಲಿ ಆಡಳಿತ ನಡೆಸಿರುವುದಿದೆ. ಇವರುಗಳ ನಂತರ ಬಾದಾಮಿಯ ಚಾಲುಕ್ಯರು, ಮಲಖೇಡದ ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು, ದೋರಸಮುದ್ರದ ಹೊಯ್ಸಳರು, ದೇವಗಿರಿಯ ಸೇವುಣರು, ವಿಜಯನಗರದವರು (೧೩೩೬–೧೫೬೫) ಆಡಳಿತ ನಡೆಸಿರುವುದಿದೆ. ಇವರುಗಳ ಜೊತೆಗೆ ಸೇಂದ್ರಕರು, ಸಂತರರು, ಸೇನಾವರರು, ಸಿಂಧರು, ನೊಲಂಬರು, ಪಾಂಡ್ಯರು, ವೇಣರು, ಸೇತುನಾಡವರ ಆಡಳಿತಕ್ಕೂ ಈ ಪ್ರದೇಶ ಸೇರಿರುವುದಿದೆ.

ಹೊಸನಗರ ತಾಲ್ಲೂಕು ಪೊಟ್ಟ ಪೊಂಬುಚ್ಚಾಪುರ (ಹುಂಚ) ಪ್ರದೇಶದಲ್ಲಿ ಸಾಂತರಸರೆಂಬ ರಾಜವಂಶದವರು ಕಾಣಿಸಿಕೊಳ್ಳುತ್ತಾರೆ. ಇವರ ವಂಶಸ್ಥರ ಬಗ್ಗೆ ನಗರ ೧೦೭೦, ತೀರ್ಥಹಳ್ಳೀ ೧೧೦೩, ಸಾಗರ ೧೧೪೯ರ ಶಾಸನಗಳಲ್ಲಿ ವರ್ಣಿಸಲಾಗಿದೆ. ಇವರ ರಾಜ್ಯವು ಪಶ್ಚಿಮದಲ್ಲಿ ಗೋವರ್ಧನಗಿರಿ (ಸಾಗರ ತಾ) ದಕ್ಷಿಣದಲ್ಲಿ ಚಿಕ್ಕಮಗಳೂರು (ಕಳಸ) ದವರೆಗೂ ವಿಸ್ತರಿಸಿತ್ತು. ಅವರ ನಂತರ ಈ ರಾಜ್ಯವು ಸಾಂತರಿಗೆ ೧೦೦೦ ಎಂದು ಪ್ರಸಿದ್ಧವಾಯಿತು. ವಿಕ್ರಮ ಸಾಂತರಸ ಎಂಬುವನು ಸಾಂತರಿಗೆ ೧೦೦೦ ಎಂದೂ ತನ್ನ ರಾಜ್ಯವನ್ನು ಪ್ರತ್ಯೇಕವಾಗಿ ಹೆಸರಿಸಿದನು. ಸಿಂಧ ವಂಶದ ನಂತರ ಕಾಣಿಸಿಕೊಂಡ ಬೆಳಗುತ್ತಿ ನಾಯಕರು ೧೪ನೇ ಶತಮಾನದಲ್ಲಿಈ ಪ್ರದೇಶ ಆಳಿರುವುದಿದೆ. ವಿಜಯನಗರದರಸರು ಚಲುವ ರಂಗಪ್ಪನೆಂಬ

ದಂಡನಾಯಕನಿಂದ ಇವನನ್ನು ಸೆರೆ ಹಿಡಿದರು. ಅನಂತರದಲ್ಲಿ ಅವನನ್ನೇ ಆಡಳಿತ ನೋಡಿಕೊಳ್ಳಲು ನೇಮಿಸಿದ್ದರು. ೧೬ನೇ ಶತಮಾನದಲ್ಲಿ ಬಿಜಾಪುರದ ಅದಿಲ್ ಷಾಹಿ ರಾಜಮನೆತನದ ದಾಳಿಗೆ ಸಿಕ್ಕಿ ಇವರ ರಾಜ್ಯಾಡಳಿತ ಕೊನೆಗೊಂಡಿತೆನ್ನಬಹುದು. ಆದರೂ ಈ ವಂಶದ ತಿಮ್ಮಪ್ಪ ಮತ್ತು ವೆಂಕಟಪ ೧೭೬೩ರಲ್ಲಿ ಕೆಳದಿ ವಂಶದ ಆಶ್ರಯದಲ್ಲಿದ್ದವರು. ಸೇನವರಸರು ಮತ್ತು ಸಿಂಧರು ಸಹ ಸುಮಾರು ೭೦೦– ೧೦೧೦ರವರೆಗೆ ಅಂದರೆ ಬಾದಾಮಿ ಚಾಲುಕ್ಯ ವಿಕ್ರಮಾದಿತ್ಯನ ಕಾಲದವರೆ ಸೇನವರಸರು ಶಿಕಾರಿಪುರ–ಸೊರಬ ಭಾಗವನ್ನು ಆಳುತ್ತಿದ್ದರು. ಸೇಂದ್ರಕ ಅಂಶದವರೇ ಮುಂದೆ ಸಿಂಧರೆಂದು ಕರೆಯಲ್ಪಟ್ಟರೆಂಬ ಅಭಿಪ್ರಾಯವಿದೆ. ೧೦ನೆಯ ಶತಮಾನದಲ್ಲಿ ರಾಷ್ಟ್ರಕೂಟರ ಮತ್ತು ೧೨–೧೩ ಶತಮಾನದಲ್ಲಿ ಹೊಯ್ಸಳರ ಆಡಳಿತ ಕಾಲದಲ್ಲಿ ಈ ಪ್ರದೇಶಕ್ಕೆ ಪ್ರಮುಖ ಸ್ಥಾನ ಇದ್ದಿರಬಹುದಾಗಿದೆ. ೧೨–೧೩ನೇ ಶತಮಾನದ ಸಣ್ಣ ಅರಸುಮನೆತನಗಳು ಸುಮಾರು ೧೨೪೧–೧೨೮೯ರಲ್ಲಿ ಕುಪಟೂರು ಭಾಗದಲ್ಲಿ ವಾಣಿ ಎಂಬ ಗುಜರಾತ್ ಮೂಲದ ಸಣ್ಣ ಅರಸು ಮನೆತನವಿತ್ತು. ಹೆಚ್ಚೆಯಲ್ಲಿಯೂ (ಸೊರಬ – ತಾ) ಒಂದು ಅರಸುಮನೆತನವಿತ್ತು. ಸುಮಾರು ೧೨೭೦–೧೩೨೦ರ ಸಮಯದಲ್ಲಿ ಸಾಗರ ತಾಲ್ಲೂಕಿನ ನೈರುತ್ಯಕ್ಕೆ ಮೊದಲನೆಯ ದೊರೆ ವೀರಹೆಮ್ಮಡಿ ಇಮ್ಮಡಿ ಬಲ್ಲಹದೇವರಸ ಹೊಯ್ಸಳರಿಗೆ ಮಹಾಮಂಡಳೇಶ್ವರನಾಗಿದ್ದನು. ಕ್ರಿ. ಶ. ೧೩೨೦ ರಲ್ಲಿ ವಿರಕೋಟೆ ಹೊಯ್ಸಳ ದೊರೆಯು ಮುಮ್ಮಡಿ ಬಲ್ಲಾಳನ ಕೈಕೆಳಗಿದ್ದನು.

ಮುಖ್ಯ ಪ್ರಾಂತ್ಯಗಳು:

ತಲಕಾಡಿನ ಗಂಗ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ ಕಲಚೂರಿ ರಾಜವಂಶಗಳ ಚಕ್ರವರ್ತಿಗಳ ಮಂಡಲಾಧಿಕಾರಿಗಳು ಈ ಜಿಲ್ಲೆಯ ಕೆಲವು ಭಾಗಗಳನ್ನು ನೇರವಾಗಿ ಆಳುತ್ತಿದ್ದರು. ಜಿಲ್ಲೆಯ ಪೂರ್ವ ಭಾಗದಲ್ಲಿ ಗಂಗರು ಆಡಳಿತ ನಡೆಸಿದ್ದರು. ಸೊರಬ ತಾಲ್ಲೂಕು ಉದ್ರಿ (ಉದ್ದಾರೆ)ಯಿಂದ ಗಂಗ ವಂಶದವರು ಸುಮಾರು೧೨ನೇ ಶತಮಾನದಲ್ಲಿ ಜಿಡ್ಡುಲಿಗೆ ನಾಡನ್ನು ಆಳುತ್ತಿದ್ದರು. ಇವರು ಕಲ್ಯಾಣಿ ಚಾಲುಕ್ಯರ ನಂತರ ಹೊಯ್ಸಳರ ಮಾಂಡಲಿಕರಾಗಿದ್ದರು. ಶಿಕಾರಿಪುರ ಪ್ರದೇಶವಾದ ನಾಗರಖಂಡ ೭೦ನ್ನು ಸುಮಾರು ೯೧೧ರಲ್ಲಿ ನಾಲ್ಗಾವುಂಡನು ಆಳುತ್ತಿದ್ದನು. ಬನವಾಸಿ ೧೨೦೦೦ ವನ್ನು ರಾಷ್ಟ್ರಕೂಟ ಮಾಂಡಲಿಕ ಕಲಿ ವಿಠಲ ಅರಸರು ಆಳುತ್ತಿದ್ದನು. ಸುಮಾರು ೯೯೨ ರಲ್ಲಿ ಬನವಾಸಿ ಪ್ರಾಂತ್ಯದ ರಾಜಧಾನಿ ಬಳ್ಳಿಗಾವೆ ಆಗಿತ್ತು. ಇದನ್ನು ಬಲಿಪುರವೆಂದೂ ಕರೆಯಲಾಗುತ್ತಿತ್ತು. ಇಲ್ಲಿಂದ ಸುಮಾರು ೧೦೯೯ರಲ್ಲಿ ಕಲ್ಯಾಣಿ ಚಾಲುಕ್ಯ ಚಕ್ರವರ್ತಿಯ ಬನವಾಸಿ ೧೨೦೦೦ ಸಂತರಿಗೆ ೧೦೦೦ ಹೂವೆ ೫೦೦ (ಹೊನಾವರ) ಆಳುತ್ತಿದ್ದನು. ಗಂಗವಾಡಿ ಪ್ರದೇಶ, ಬನವಾಸಿ ಸಂತಲಿಗೆ, ನೊಳಂಬವಾಡಿಗಳನ್ನು ಬಳ್ಳಿಗಾವೆಯಿಂದ

ಚಾಲುಕ್ಯ ಗಂಗವೇರ್ಮಾಡಿ ವಿಕ್ರಮಾದಿತ್ಯನು (೬ನೇ ವಿಕ್ರಮಾದಿಯ) ತಾನು ಚಕ್ರವರ್ತಿ ಆಗುವುದಕ್ಕೆ ಮುಂಚೆ ಅಂದರೆ ೧೦೫೮ರಲ್ಲಿ ಆಳುತ್ತಿದ್ದನು. ೧೧೬೨ರಲ್ಲಿ ಕಳಚೂರಿ ವಂಶದ ಬಿಜ್ಜಳನು ಕೆಲಸಮಯ ಈ ಪ್ರದೇಶ ಆಳಿರುವುದಿದೆ.

ಆರಗ ರಾಜ್ಯ: ವಿಜಯನಗರ ಸ್ಥಾಪನೆಯ ನಂತರ ಬುಕ್ಕನ ನಾಲ್ಕನೇ ಸಹೋದರನಾದ ಮಾರಪ್ಪನು ಆರಗ ರಾಜ್ಯದ ಪ್ರಾಂತಾಧಿಕಾರಿಯಾಗಿದ್ದನು. ಇದನ್ನು ಮಲೆರಾಜ್ಯವೆಂದು ಕರೆಯಲಾಗುತ್ತಿತ್ತು. ಆರಗ ರಾಜಧಾನಿ ೧೩೪೭ರಲ್ಲಿ ಬನವಾಸಿ ೧೨೦೦೦ ಪ್ರಾಂತಕ್ಕೆ ಚಂದ್ರಗುತ್ತಿ ರಾಜಧಾನ ಮಾಡಿಕೊಂಡು ಇವನು ಆಡಳಿತ ನಡೆಸಿದನು. ೧೩೬೨ ಬುಕ್ಕನ ಮಗ ವಿರೂಪಾಕ್ಷನು ೧೮ ವರ್ಷ ಕಾಲ ಆರಗವನ್ನು ಆಳಿದನು. ಆರಗ ೧೮ ಚಂದ್ರಗುತ್ತಿ ೧೮ ಒಟ್ಟು ೩೬ ಕಂಪಣಗಳನ್ನು ೧೩೭೬ರಿಂದ ಹರಿಹರನ ಮಗ ಚಿಕ್ಕರಾಜ ಒಡೆಯರು ಆಡಳಿತ ನಡೆಸಿದರು. ರಾಯಣ್ಣ ಒಡೆಯರು ಕ್ರಿ. ಶ. ೧೪೩೧ರಲ್ಲಿ ಈ ಪ್ರಾಂತ್ಯದ ಅಡಳಿತಾಧಿಕಾರಿಯಗಿದ್ದರು. ಕ್ರಿ. ಶ.೧೪೧೭ರಲ್ಲಿ ಗೋವೆ ಪ್ರಾಂತ್ಯಕ್ಕೆ ಚಂದ್ರಗುತ್ತಿ ಭಾಗ ಸೇರಿಸಲ್ಪಟ್ಟಿತು. ಕ್ರಿ. ಶ. ೧೪೪೦ರವರೆಗೆ ಇದು ಹಾಗೆಯೇ ಇತ್ತು. ಅನಂತರ ಜಿಲ್ಲೆಯ ಸಾಗರ ತಾಲ್ಲೂಕಿನ ಹಳ್ಳಿಬೈಲು ಗ್ರಾಮದಿಂದ ೧೬ನೇ ಶತಮಾನಲ್ಲಿ ಕಾಣಿಸಿಕೊಂಡ ಕೆಳದಿ ಅರಸರು ವಿಜಯನಗರದ ಅರಸರ ಮನ್ನಣೆ ಪಡೆದು ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು, ಯಲಗಳಲೆ, ಮೇದೂರು, ಕಲಸೆ, ಆತವಾಡಿ ಎಂಬ ಎಂಟು ಮಾಗಣೆಗಳೊಂದಿಗೆ ಆಡಳಿತ ಪ್ರಾರಂಭಿಸಿ ಕರ್ನಾಟಕದ ಹದಿಮೂರು ಜಿಲ್ಲೆಯ ಆಡಳಿತ ನಡೆಸಿದರು. ಕ್ರಿ. ಶ ೧೫೦೦ರಿಂದ ೧೭೬೩ರವರೆಗೆ ಇವರ ಆಡಳಿತವಿತ್ತು. ಈ ಪ್ರಾಂತ್ಯ ಇವರ ಆಡಳಿತಕ್ಕೂ ಒಳಪಟ್ಟಿತ್ತು. ಸದಾಶಿವನಾಯಕ, ಶಿವಪ್ಪನಾಯಕ, ಚನ್ನಮ್ಮಾಜಿ, ವೀರಮ್ಮಾಜಿಯೇ ಮೊದಲಾದವರ ಆಡಳಿತಕ್ಕೆ ಈ ಪ್ರದೇಶ ಒಳಗೊಂಡಿತ್ತು. ೧೭೬೩ರಲ್ಲಿ ಹೈದರನ ವಶವಾಗುವವರೆಗೆ ಕೆಳದಿ ಆಡಳಿತದಲ್ಲಿತ್ತು. ಅನಂತರ ಮೈಸೂರು ಒಡೆಯರ ಆಡಳಿತಕ್ಕೆ ಒಳಪಟ್ಟಿತ್ತು. ಕೊನೆಗೆ ಬ್ರಿಟೀಷ್ ಆಡಳಿತಕ್ಕೊಳಗೊಂಡಿತು. ೧೯೮೦ರಲ್ಲಿ ಕೊಂಡಗಳಲೆ ಈಶ್ವರಪ್ಪ ಗೌಡರು ಮತ್ತು ಭೈರೇಕೊಪ್ಪದ ದೊಡ್ಡಮನೆ ಕುಟುಂಬದವರು ಗ್ರಾಮಸ್ಥರ ಸಹಕಾರವನ್ನು ಪಡೆದು ಈ ದೇವಾಲಯವನ್ನೊಮ್ಮೆ ಜೀರ್ಣೋದ್ಧಾರ ಮಾಡಿದ್ದಿದೆ. ಶ್ರೀ ಕಲ್ಲೇಶ್ವರ ದೇವರ ಗುಡಿ ಜೀರ್ಣೋದ್ಧಾರ ಕೈಗೊಳ್ಳಲು ಹೊರಟಾಗ ಕೆಲವು ಅಡ್ಡಿ ಆತಂಕಗಳು ಬಂದದ್ದಿದೆ. ಆ ಸಂದರ್ಭದಲ್ಲಿ ಶ್ರೀ ಕಲ್ಲೇಶ್ವರನಲ್ಲಿ ಸಮಿತಿ ಪ್ರಮುಖರಲ್ಲೊಬ್ಬರಾದ ಶ್ರೀ ಈಶ್ವರಪ್ಪಗೌಡರು ಪ್ರಾರ್ಥಿಸಿಕೊಂಡಾಗ ಅವರಿಗೆ ಶಿಕಾರಿಪುರ ತಾಲ್ಲೂಕು ದಿಂಡದಹಳ್ಳಿ ಮಠಾಧ್ಯಕ್ಷರಾದ ಶಿವೈಕ್ಯ ಶ್ರೀ ಶಿವಾನಂದ ಶಿವಾಚಾರ್ಯರ ಗಮನಕ್ಕೆ ತಂದು ಕಟ್ಟಡದ ಕೆಲಸ ಮುಂದುವರೆಸುವಂತೆ ಪ್ರೇರೇಪಣೆಯಾಯಿತಂತೆ. ಅದರಂತೆ ಶ್ರೀ ಗೌಡರು ನಡೆದುಕೊಂಡ ಮೇರೆಗೆ ದೇವಾಲಯ ಪೂರ್ಣಗೊಂಡಿದ್ದಾಗಿಯೂ ಅನಂತರ ಶ್ರೀ ದೇವರ ಪ್ರತಿಷ್ಠಾಪನಾ

ಕಾರ್ಯಕ್ರಮಕ್ಕೆ ಶ್ರೀ ಶ್ರೀಗಳೇ ಬಂದು ನಡೆಸಿಕೊಟ್ಟುದಾಗಿಯೂ ತಿಳಿದುಬರುತ್ತದೆ, ಅವರ ಅಣತಿಯಂತೆ ಪ್ರತಿ ಶಿವರಾತ್ರಿಯಲ್ಲಿ ವಿಶೇಷ ಪೂಜೆ, ಅನ್ನಸಂತರ್ಪಣಾದಿಗಳು ಇಂದು ನಡೆಸಿಕೊಂಡು ಬರಲಾಗುತ್ತಿದೆ.

ಈ ದೇವಾಲಯಕ್ಕೆ ೨೬.೧೨.೧೯೫೫ರಲ್ಲಿ ಶ್ರೀ ಕಾಶಿ ಜಗದ್ಗುರುಗಳಾದ ೧೦೦೮ನೇ ಚಂದ್ರಶೇಖರ ಶಿವಾಚಾರ್ಯರು, ಶಿಕಾರಿಪುರ ತಾಲ್ಲೂಕು ಶ್ರೀ ಸಾಲೂರು ಹಿರೇಮಠಾಧ್ಯಕ್ಷರಾದ ಶ್ರೀ ಚನ್ನವೀರಸ್ವಾಮಿಗಳು, ಶ್ರೀ ಪಂಚಾಕ್ಷರಿ ಸ್ವಾಮಿಗಳು, ಶ್ರೀ ಗುರುಲಿಂಗ ಶಿವಾಚಾರ್ಯರು, ಸೊರಬ ತಾಲ್ಲೂಕು ಗುಗ್ಗೆಹಳ್ಳಿ ಮಠದ ಶ್ರೀ ಸಂಗಮೇಶ್ವರ ಶಿವಾಚಾರ್ಯ ಸ್ವಾಮಿಗಳು, ತೀರ್ಥಹಳ್ಳಿ ತಾಲ್ಲೂಕಿನ ಭುವನಗಿರಿದುರ್ಗ ಮಠದ ಹಿಂದಿನ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮಿಗಳು, ಸಾಗರ ತಾಲ್ಲೂಕಿನ ವೀರಾಪು ರದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರುಗಳಾದಿಯಾಗಿ ಹಲವಾರು ಮಠಾಧೀಶರು ಆಗಮಿಸಿ, ಶ್ರೀ ಕಲ್ಲೇಶ್ವರ ದೇವರ ದರ್ಶನ ಪಡೆಯುವುದರ ಜೊತೆಗೆ ಭಕ್ತಾದಿಗಳಿಗೆ ಆಶೀರ್ವದಿಸಿರುವ ನಿದರ್ಶನಗಳಿವೆ.

೧೯೮೩ರಲ್ಲಿ ಆ ಕಟ್ಟಡವೂ ಜೀರ್ಣವಾದದ್ದರಿಂದ ಇಂದು ದೇವಾಲಯ ಪುನರ್ ನಿರ್ಮಾಣ ಮಾಡಬೇಕಾಗಿ ಬಂದಾಗ ಶಿಕಾರಿಪುರ ತಾಲ್ಲೂಕಿನ ದಿಂಡದಹಳ್ಳಿ ಮಠದ ಈಗಿನ ಶ್ರೀ ಪಶುಪತಿ ಶಿವಾನಂದ ಶಿವಾಚಾರ್ಯರ ಮಾರ್ಗದರ್ಶನ ಪಡೆದು ಅವರಿಂದಲೇ ೧೪.೦೧.೨೦೧೩ರಂದು ಅಡಿಗಲ್ಲಿಟ್ಟು ಜೀರ್ಣೋದ್ಧಾರ ಕೆಲಸ ಪ್ರಾರಂಭಿಸಲಾಗಿದೆ. ಈಗ ಶ್ರೀ ರಘುಪತಿ ಹೆಗಡೆ, ಶ್ರೀ ಈಶ್ವರಪ್ಪ ಗೌಡರು, ರಾಜುಗೌಡರು, ದೊಡ್ಡಮನೆ ಕೆರಿಯಪ್ಪ, ಭುಜಂಗಪ್ಪ ಈ ಮೊದಲಾದವರು ಗ್ರಾಮಸ್ಥರ ಸಹಕಾರ ಪಡೆದು ದೇವಾಲಯ ಜೀರ್ಣೋದ್ಧಾರಕ್ಕೆ ಕಮಿಟಿಯೊಂದನ್ನು ಮಾಡಿಕೊಂಡು ಮುನ್ನಡೆದಿರುವುದು ಕಂಡು ಬರುತ್ತದೆ.

ಕೊಂಡಗಳಲೆ ಗ್ರಾಮಕ್ಕೆ ಸಂಬಂಧಿಸಿದಂತೆ ದೊರೆತಿರುವ ಮಹಾಸತಿಕಲ್ಲುಗಳಲ್ಲಿ ಈ ಕೆಳಗಿನ ಮಾಹಿತಿ ಲಭ್ಯವಾಗುತ್ತದೆ.

ಕೊಂಡಗಳಲೆ ಟೇಚಿರಾವ್ ಗಾಮದ ಕಾನಿನಲ್ಲಿ ಕಲ್ಲೇಶ್ವರ ದೇವಾಲಯದ ಮುಂದೆ ಬಿದ್ದ ತುಂಡು ಕಲ್ಲಿನಲ್ಲಿ:

(ಸೊರಬ ತಾಲ್ಲೂಕಿನ ಶಾಸನ ಸಂಖ್ಯೆ ೫೫೭ ಎಪಿ.ಕ ೮, ಪುಟ ೨೪೨ರಲ್ಲಿ ಇರುವ ಶಾಸನ: ಪ್ರಮಾಣ: ೩ * ೧.೫.)

ಕಲಿಉಗದವಿರೊಧಿ ಸಂವಚರದಲಿ ಕೊಂಡಗಳಲೆಯಚಿಕ್ಕಗ ಉಡ

ಮಾಡಿಸಿ ..ಗಸ್ತತರಾದ . ಮವಾರಾದಡಿಗರ .

ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪ್ರಿಥ್ವಿ ವಲ್ಲಭ ..
ಶ್ವರಪರಮ ಭಟ್ಟಾರಕಂ ಸತ್ಯಾಶ್ರಯ ಕುಳ ------
ಶ್ರೀಮಜ್ಜಗದೇಕಮಲ್ಲ ದೇವರ ರಾಜ್ಯಮು-----
ನಮಚಂನ್ದ್ರಾರ್ಕ ತಾರಂಬರಂಸಲುತ್ತ -----
ಯಬ್ಬನವಾಸಿಪನ್ನಿರ್ಚ್ಛಾಸಿರಮು-----
ಳನದಿಂದಾಳುತ್ತ ಮಿರೆ ಶ್ರೀ-----
ತನಂಗೆಯ್ಯತಮಿರೆ ಕುಪ್ಪ್ ೧೨-----
ವರ್ಷ ೯೬ ನೆಯ ವಿಕ್ರಮ ಸಂ-----
ವಾರ ಸಂಕ್ರಾನ್ತಿ ವ್ಯತಿಪಾತದಂನ್ದುಂ-----
ಜಯ್ಯತನ್ನ -- ಸಿತರಾಗಿ --
ಮರುಸ ---ಗೆಬಿಟ್ಟ---
ಪ --ಲಿ -- ಮ ---ಪರಿ ---
ವಾರಣಾಸಿಯೊಳೆ ಬ್ರಾಹ್ಮ ------
---- ಗುಮಿದನಳಿ -----
ಚಮಹಾಪಾತಕ -----
ವಸುಂಧರಾ ಷಷ್ಟಿರ್ವ್ವ ---
ನಾಗರಾಸಿಜೀಯ ---
ಬರ್ವ್ವಣ್ಣಂತನ್ನಮ ---
ದಿನ್ದಗಳು ---

೫೫೮ನೇ ಶಾಸನ ಅದೇ ಗ್ರಾಮದ ಕಾನಿನಲ್ಲಿ ಅಗಸೆ ಬಾಗಿಲಬಳಿ ತಿಪ್ಪೆಮೇಲೆ ಯಿರುವ ಮಾಸ್ತಿಕಲ್ಲು : ಪ್ರಮಾಣ ೩ * ೨

ಶುಕ್ಲ ಸಂವತ್ಸರದ ಮಾಘ ಬಹು
ಳ ೬ ಸೋಮವಾರದಲು ಕೊಂ
ಡಗಣಲೆಯ ಬೊಂಮ
ಗೊಂಡದೇವಲೋಕಪ್ರಾ
ಪ್ತವಾದ ಆತನ ಸತಿ
ಬೊಂಮಿಗೊಂಡಿ
ವೀರಸರ್ಗಸ್ತೆಯಾ
ದಳು ಮಂಗಮಹಾ
ಶ್ರೀಶ್ರೀಶ್ರೀ.

ಅದೇ ತಿಟ್ಟಿನ ಮೇಲೆ ನಟ್ಟಿರುವ ವೀರಗಲ್ಲು. ಪ್ರಮಾಣ: ೬ *೨.೬.

ಸ್ವಸ್ತಿ ಶ್ರೀ ಜಯೀಸಕವರುಶ ೧೩೭೧ನೆಯ ವಿಭವ ಸಂವತ್ಸರದ ಮಾರ್ಗಶಿರ ಶುದ್ಧ -- ಲು

ಕೊಂಡಗಣಲೆಯ ತುರುವನು ಹನುಬರು ಹೊಡಕೊಂಡುಹೊ

ಹಲ್ಲಿ ಕೊಂಂಡಗಣಲೆಯ ಗಉಡ ಮಾದಿಗ ಉಡಮಾವಿನವನಮನೆಯ ಸೂರಪ್ಪ

ಗ ಉಡ ತಂದೆ ಮಗ ಯಿಬ್ಬರು ದಳದೊಳಗೆ ಕಾದಿ ಆಳನಿರುದು ಕುದುರೆಯ ಹಿಡಿದ ಅತಿರತ ಮಹಾರತರಮೆರದರು. ಮಾದಿಗೊಂಡನ ಸತಿ ತಾಯಿ ಗೌಡಿ ಯಿಬ್ಬರು ಸರ್ಗ್ಗಸ್ತರಾದರು ಮಂಗಳ ಮಹಾಶ್ರೀಶ್ರೀಶ್ರೀ.

ಆ ಕಾಲದ ಹಲವು ಸ್ಮಾರಕಗಳು ಇಂದು ಈ ಕೊಂಡಗಳಲೆಯಲ್ಲಿದೆ. ಅವುಗಳಲ್ಲಿ ಶ್ರೀ ಈಶ್ವರ ದೇವಸ್ಥಾನ, ಬಸವಣ್ಣ, ನಾಗ ಮೊದಲಾದವು ಪ್ರಮುಖವಾಗಿವೆ. ಈಶ್ವರ ದೇವಸ್ಥಾನವು ಹಿಂದೆ ಜಂಬಿಟ್ಟಿಗೆಯಲ್ಲಿ ಕಟ್ಟಿದ್ದಾಗಿಯೂ ಅದನ್ನು ಗ್ರಾಮಸ್ಥರು ಪುನರ್ ನಿರ್ಮಾಣಕ್ಕಾಗಿ ಬೀಳಿಸಿರುವುದಾಗಿಯೂ ತಿಳಿದುಬರುತ್ತದೆ. ದೇವಾಲಯದ ಮುಂಭಾಗದಲ್ಲಿರುವ ಒಂದು ಭಿನ್ನಗೊಂಡ ಬಸವ, ಗಣಪತಿ ಸುಮಾರು ೧೪-೧೫ನೇ ಶತಮಾನವನ್ನು ಪ್ರತಿನಿಧಿಸುತ್ತದೆ. ಅಂತೆಯೇ ನಾಗ ಸುಮಾರು ೧೭-೧೮ನೇ ಶತಮಾನವನ್ನು ಪ್ರತಿನಿಧಿಸುತ್ತದೆ.

ಕಲ್ಲೇಶ್ವರ ದೇವಸ್ಥಾನ :

ಈ ದೇವಾಲಯದ ಮೇಲು ಹಾಸಿಗೆ ಶಿಲೆಯನ್ನು ಬಳಸಿರುವುದು ಅಲ್ಲಿನ ಅವಶೇಷಗಳಿಂದ ತಿಳಿದು ಬರುತ್ತದೆ. ಈ ದೇವರನ್ನು ಗ್ರಾಮಸ್ಥರು ಕಲ್ಲೇಶ್ವರ ಎಂದೂ, ಉಳಿದಂತೆ ಈಶ್ವರ, ಬಸವಣ್ಣ ದೇವಸ್ಥಾನವೆಂದೂ ಕರೆಯುವುದಿದೆ. ಈ ದೇವರಿಗೆ ವೀರಶೈವರಿಂದ ಪ್ರತಿನಿತ್ಯ ಎರಡು ಹೊತ್ತು ಪೂಜೆ ನಡೆಯುತ್ತದೆ. ಅಲ್ಲದೆ ವಾರ್ಷಿಕವಾಗಿ ಅನ್ನಸಂತರ್ಪಣೆಯನ್ನು ಕಳೆದ ಮೂವತ್ತು ವರ್ಷಗಳಿಂದ ಕೊಂಡಗಳಲೆ, ಬೈರೆಗೊಪ್ಪ, ಪುರದ ಗ್ರಾಮಸ್ಥರು ನಡೆಸಿಕೊಂಡು ಬಂದಿರುತ್ತಾರೆ. ಈ ದೇವಾಲಯಕ್ಕೆ ಅದರದೇ ಆದ ಭೂಮಿ ಇರುವುದು ದಾಖಲೆಗಳಿಂದ ಕಂಡುಬರುವುದಿಲ್ಲ. ಅಲ್ಲದೆ ಇದು ಮುಜರಾಯಿ ಆಡಳಿತಕ್ಕೂ ಒಳಪಟ್ಟ ದೇವಾಲಯವಾಗಿಲ್ಲ.

ಕಪ್ಪು-ಕೆಂಪು ಮಿಶ್ರಿತ ಗ್ರಾನೈಟ್ ಶಿಲೆಯಿಂದ, ಸ್ಥಳೀಯವಾಗಿ ಕರೆಯುವ ಜಂಬಿಟ್ಟಿಗೆಯಿಂದ ಈ ದೇವಸ್ಥಾನ ಕಟ್ಟಲ್ಪಟ್ಟಿದೆ. ಈ ಪ್ರದೇಶದಲ್ಲಿರುವ ಅವಶೇಷಗಳ ಆಧಾರದಿಂದ ಹಿಂದಿನ ದೇವಸ್ಥಾನವು ವಿಜಯನಗರ - ಕೆಳದಿ ಕಾಲಕ್ಕೆ ಸರಿಹೊಂದುತ್ತದೆ. ಜಂಬಿಟ್ಟಿಗೆ ಕಟ್ಟಡವು ಶಾತವಾಹನ ಕಾಲದಲ್ಲಿ ಇದ್ದು ಅದು ಈ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರಬಹುದಾಗಿದೆ. ಸುತ್ತಮುತ್ತಲಿನ ವೀರಗಲ್ಲು, ಮಹಾಸತಿಕಲ್ಲು

ಮತ್ತು ಗ್ರಾಮಠಾಣ (ಹಿಂದೆ ಅಗ್ರಹಾರ ಇತ್ತೆಂದು ಹೇಳುವ ಪ್ರದೇಶ)ದಲ್ಲಿ ದೊರೆತ ಅವಶೇಷಗಳು ಇದನ್ನು ತಿಳಿಸುತ್ತದೆ. ದೇವಸ್ಥಾನವು ಪ್ರದಕ್ಷಣಾಪಥ, ಅಂತರಾಳ, ಗರ್ಭಗೃಹವನ್ನು ಒಳಗೊಂಡಿದ್ದ ಕುರುಹುಗಳಿವೆ. ಅನಂತರದ ದಿನದಲ್ಲಿಯೂ ಒಮ್ಮೆ ಇದು ಜೀರ್ಣೋದ್ಧಾರಗೊಂಡಿರಬೇಕು. ಹಳೆಯ ಪಾಣಿಪೀಠ, ಲಿಂಗ, ಗಣಪತಿ, ದುರ್ಗಿ, ಪಕ್ಕದ ಚೌಡೇಶ್ವರಿ ಗುಡಿಯಲ್ಲಿ ಇಟ್ಟಿರುವ ಸಪ್ತಮಾತೃಕೆ ಇವುಗಳನ್ನು ಗಮನಿಸಿದಾಗ ಈ ದೇವಾಲಯ ಸುಮಾರು ೩-೪ನೇ ಶತಮಾನದಲ್ಲಿ ಇದ್ದಿರಬಹುದೆಂದು ಊಹಿಸಲೂ ಅವಕಾಶವಿದೆ. ಪಾಣಿಪೀಠವು ಸುಮಾರು ೨ ೧/೨ * ೨ ೧/೨ ಅಳತೆಯನ್ನು ಒಳಗೊಂಡಿದೆ. ಲಿಂಗವು ಸುಮಾರು ೩ ಅಡಿ ಇದೆ. ಈ ಮೊದಲಿನ ಗರ್ಭಗೃಹವು ಸುಮಾರು ೭ ಅಡಿ ಚಚೌಕದಲ್ಲಿ ನಿರ್ಮಿತವಾಗಿರುವಂತೆ ಕಂಡುಬರುತ್ತದೆ.

ಅಲ್ಲಿಯ ಅವಶೇಷಗಳನ್ನು ಗಮನಿಸಿದಾಗ ದೇವಾಲಯವು ಸುಮಾರು ೩೨ ಅಡಿ ಉದ್ದ ೨೨ ಅಡಿ ಅಗಲ ಹೊರಾಯವನ್ನು ಗರ್ಭಗೃಹವು ೧೨ ಅಡಿ ಅಗಲ, ೧೫ ಅಡಿ ಉದ್ದವನ್ನು ಹೊಂದಿದ್ದಿರಬಹುದಾಗಿದೆ. ಗರ್ಭಗೃಹದ ಹೊರ ನಂದಿ ಮಂಟಪವು ಸುಮಾರು ೧೪ ಅಡಿ ಅಗಲ ೧೩ ಅಡಿ ಉದ್ದ ಇದ್ದಿರಬೇಕು. ಪ್ರದಕ್ಷಿಣಾ ಪಥದಲ್ಲಿ, ಗರ್ಭಗುಡಿಯ ಹೊರಭಾಗದಲ್ಲಿ ಗಣಪತಿ ಮತ್ತು ಎಡಭಾಗದಲ್ಲಿ ತ್ರಿಶೂಲ, ಪಾಶ, ಡಮರು ಅಂಕುಶ ಹಿಡಿದಿದ್ದ ಕೋಣನನ್ನು ಇರಿಯುತ್ತಿರುವ ಮಹಿಶಮರ್ದಿನಿ ಶಿಲ್ಪ ಇದ್ದಿರಬೇಕು. ಅದರ ಅವಶೇಷಗಳೂ ಇಂದು ಹೊರಭಾಗದಲ್ಲಿದೆ. ಇದು ಸುಮಾರು ೧.೫ ಅಡಿ ಇದೆ. ಗರ್ಭಗುಡಿಯ ಎಡಭಾಗದಲ್ಲಿ ಸುಮಾರು ೪ ಅಡಿ ಉದ್ದದ ಸಪ್ತಮಾತೃಕೆಯರನ್ನು ಸ್ಥಾಪಿಸಿದ್ದಿರಬೇಕು. ಆದರೆ ಅದನ್ನಿಂದು ಚೌಡೇಶ್ವರಿ ಗುಡಿಯಲ್ಲಿಡಲಾಗಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೩ ಅಡಿಯ ಏಳು ಹೆಡೆ ಸರ್ಪ ಸ್ಥಾಪಿತಗೊಂಡಿದೆ. ಪಕ್ಕದಲ್ಲಿ ಭಿನ್ನಗೊಂಡ ಬಸವಣ್ಣ ವಿಗ್ರಹವಿದೆ. ಈ ದೇವಾಲಯದ ಹೊರಗಡೆ ಮುಂಭಾಗದಲ್ಲಿ ಧ್ವಜಸ್ಥಂಭ ಇದ್ದಿರಬಹುದಾದ ಕುರುಹುಗಳಿವೆ. ಅದರ ಪಕ್ಕದಲ್ಲಿ ಶಾಸನ ಇರುವ ಕಲ್ಲೊಂದಿದ್ದು ಇದು ಅಕ್ಷರಗಳನ್ನು ಗಮನಿಸಿದಾಗ ವಿಜಯನಗರ ಕಾಲಕ್ಕೆ ಸರಿಹೊಂದುತ್ತದೆ. ಅಂತೆಯೇ ಮುಂಭಾಗದಲ್ಲಿ ನಿಲ್ಲಿಸಿರುವ ವೀರಗಲ್ಲೊಂದು ಹೊಯ್ಸಳ/ಸಾಂತರರ ಕಾಲವನ್ನು ಪ್ರತಿನಿಧಿಸುತ್ತದೆ. ಅಲ್ಲಿರುವ ಗಡಿ ಕಲ್ಲುಗಳು ಕೆಳದಿ ಕಾಲವನ್ನು ಪ್ರತಿನಿಧಿಸುತ್ತವೆ. ದೇವಾಲಯದ ಬಲ ಭಾಗದಲ್ಲಿ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಎರಡು ಮಹಾಸತಿಕಲ್ಲುಗಳಿದ್ದು ಇವು ಸಾಂತಾರರ ಕಾಲವನ್ನು ಪ್ರತಿನಿಧಿಸುತ್ತವೆ. ಇಲ್ಲಿಂದ ಸುಮಾರು ಹತ್ತು ಹದಿನೈದು ಮಾರು ದೂರದಲ್ಲಿ ಮನೆದಳ, ಬಾವಿಯ ಅವಶೇಷಗಳಿವೆ. ಹಿಂದೆ ಇಲ್ಲಿ ಅಗ್ರಹಾರವಿತ್ತೆಂಬುದು ಇಲ್ಲಿಯವರ ಅಭಿಪ್ರಾಯ. ಆದರೆ ಇಲ್ಲಿ ದೊರೆತಿರುವ ವೀರಗಲ್ಲು, ಮಹಾಸತಿಕಲ್ಲುಗಳಲ್ಲಿ ಕಂಡುಬರುವ ಶಾಸನಾಧಾರಗಳಿಂದ ಈ ಪ್ರದೇಶದಲ್ಲಿ ವೀರಶೈವರ

ಪ್ರಾಬಲ್ಯ ಹೆಚ್ಚಿತ್ತೆಂದು ಕಂಡು ಬರುತ್ತದೆಯಾದ್ದರಿಂದ ಇದು ಅಗ್ರಹಾರ ಎನ್ನುವುದಕ್ಕಿಂತ ಮನೆದಳಗಳಿರಬಹುದೆಂದು ಊಹಿಸಲು ಅವಕಾಶವಿದೆ. ರಸ್ತೆಯ ಪಕ್ಕದಲ್ಲಿ ಬಿದ್ದಿರುವ ಮಹಾಸತಿ ಕಲ್ಲು ಸಹ ಈ ಕಾಲಕ್ಕೆ ಸರಿಹೊಂದುತ್ತದೆ. ಈ ಪ್ರದೇಶದಲ್ಲಿ ಉತ್ಖನನವಾದಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳು ದೊರೆಯಬಹುದಾಗಿದೆ.

ಕೊಂಡಗಳಲೆ ಗ್ರಾಮದ ಪೂರ್ವಕ್ಕೆ ದೇವಾಲಯದಿಂದ ಸುಮಾರು ಒಂದುವರೆ ಫರ್ಲಾಂಗ್ ದೂರದಲ್ಲಿ ಒಂದು ಪುಷ್ಕರಣಿ ಇದೆ. ಇದು ಸುಮಾರು ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರಬಹುದಾಗಿದೆ. ಈ ಸ್ಥಳಕ್ಕೆ ಗ್ರಾಮಸ್ಥರು ಮಠದ ಗದ್ದೆ/ಜಾಗ ಎಂದು ಹೇಳುವುದು ವಾಡಿಕೆ ಇದ್ದು ಇಂದು ಇಲ್ಲಿ ವಾಸವಾಗಿರುವ ಕುಟುಂಬವೊಂದರ ಸ್ಥಳದಲ್ಲಿ ಹಿಂದೆ ಮಠವೊಂದು ಇದ್ದಿರಬಹುದಾಗಿದೆ.

ಕೋಳಿಸಾಲು ಊರೊಳಗಿನ ಈಶ್ವರ ದೇವಸ್ಥಾನ :

ಕೊಂಡಗಳಲೆ ಗ್ರಾಮದ ದಕ್ಷಿಣಕ್ಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಕೋಳಿಸಾಲು ಎಂಬ ಗ್ರಾಮವಿದ್ದು ಅಲ್ಲಿ ಹೊಯ್ಸಳ ಕಾಲದ ಕೊನೆಯ, ವಿಜಯನಗರ ಕಾಲದ ಮೊದಲ ಕಾಲದ ಈಶ್ವರ ದೇವಾಲಯುವಿದೆ. ಜಂಬಿಟ್ಟಿಗೆಯಲ್ಲಿ ನಿರ್ಮಾಣವಾಗಿರುವ ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ.

ದೊರೆತಿರುವ ಶಾಸನಾಧಾರ, ಇತಿಹಾಸ ಆಕರಗಳು, ದೇವಾಲಯದ ಅವಶೇಷಗಳು ಇವುಗಳನ್ನೆಲ್ಲಾ ಗಮನಿಸಿದಾಗ ಕೊಂಡಗಳಲೆ ಗ್ರಾಮವು ಕ್ರಿ. ಶ. ೧೪೪೯ ಕ್ಕೂ ಪೂರ್ವದಿಂದಲು ಐತಿಹಾಸಿಕವಾಗಿ ಪ್ರಮುಖವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಹಿಂದಿನ ಮಾದರಿಯಲ್ಲಿಯೇ ದೇವಾಲಯ ಪುನರ್ ನಿರ್ಮಾಣ ಮಾಡುವ ಅಗತ್ಯವಿದ್ದು ಅದು ಕೈಗೂಡಲಿ ಎಂದು ಆಶಿಸುತ್ತೇನೆ. (ಈ ದೇವಾಲಯದ ಮತ್ತು ಸುತ್ತಮುತ್ತಲಿನ ಇತಿಹಾಸದ ಮೇಲೆ ಬೆಳಕು ಚೆಲ್ಲಲು ಸಹಕರಿಸಿದ ಕೊಂಡಗಳಲೆಯ ಶ್ರೀ ರಘುಪತಿ ಹೆಗಡೆ, ಶ್ರೀ ಈಶ್ವರಪ್ಪ ಗೌಡರು, ಶ್ರೀ ತೇಜಪ್ಪ, ಸಾಗದ್ದೆ ಸಣ್ಣಪ್ಪ ಇವರುಗಳಿಗೂ, ನನ್ನೊಡನಿದ್ದ ಶ್ರೀ ಹೆಗ್ಡಿ ಅಶೋಕ್ ಇವರಿಗೂ ನಾನು ಆಭಾರಿಯಾಗಿದ್ದೇನೆ.)

■

ಕರ್ನಾಟಕ ಲೋಚನ
ಸಂಪುಟ ೨೮, ಸಂಚಿಕೆ ೧
ಜನವರಿ-ಜೂನ್, ೨೦೧೪

೧೦. ಹೊಸಗನ್ನಡ ಸಾಹಿತ್ಯದಲ್ಲಿ ಬಹುಸಂಸ್ಕೃತಿ ನೆಲೆಗಳು

-ಡಾ॥ ಪಿ. ನಾಗರಾಜ*

ಸಾಹಿತ್ಯದ ಜಾಡು ಮೊದಲಿನಿಂದಲೂ ಪಾರಂಪರಿಕವೇ. ಒಂದೆಡೆ ರಾಮಾಯಣ-ಮಹಾಭಾರತ-ಕಥಾಸರಿತ್ಸಾಗರ ಮೊದಲಾದ ಸಾಂಪ್ರದಾಯಿಕ ಮೂಲಗಳಾದರೆ ಮತ್ತೊಂದೆಡೆ ಒಂದು ಕಾಲಕ್ಕೆ ಕರ್ನಾಟಕದ ಬಹುಭಾಗವನ್ನಾವರಿಸಿ ಜನಜೀವನದ ಭಾಗವಾಗಿ ಬೆರೆತುಹೋಗಿದ್ದ ಜೈನಧರ್ಮ, ತದನಂತರದಲ್ಲಿ ವೀರಶೈವರ ವಚನಕ್ರಾಂತಿಯಿಂದಾಗಿ ಸಾಮಾಜಿಕ-ರಾಜಕೀಯ-ಸಾಹಿತ್ಯಿಕ ನೆಲೆಗಳಲ್ಲಿ ಗಂಭೀರವಾದ ಪ್ರಭಾವವನ್ನುಂಟು ಮಾಡಿದ ವೀರಶೈವ ಧರ್ಮದ ಹಾಗೂ ಸಮಕಾಲೀನ ಸಂದರ್ಭಗಳ ಜಟಿಲತೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದ ಶ್ರೀ ವೈಷ್ಣವಧರ್ಮ-ಇವುಗಳು ಕನ್ನಡ ಸಾಹಿತ್ಯಿಕ ಅಭಿವ್ಯಕ್ತಿಯನ್ನು ಪಾರಂಪರಿಕ ಚೌಕಟ್ಟಿನಲ್ಲಿಯೇ ಸಾಗಿಸಿವೆ. ಕನ್ನಡನಾಡು ಅನ್ಯಪ್ರಭಾವಗಳಿಗೆ ನಿರಂತರವಾಗಿ ತನ್ನನ್ನು ತಾನು ತೆರೆದುಕೊಂಡೇ ಸಾಗಿದ್ದರೂ ಸಾಹಿತ್ಯಾಭಿವ್ಯಕ್ತಿ ಮೂಲಭೂತವಾಗಿ ಧಾರ್ಮಿಕವೇ ಆಗಿತ್ತು. ದೇವರು-ಧರ್ಮ-ದೈವಭಕ್ತರನ್ನು ಹೊರತುಪಡಿಸಿ ಸಾಹಿತ್ಯ ಅನ್ಯರನ್ನು ಒಳಗೊಳ್ಳುವ ಮನಸ್ಸು ಮಾಡಲಿಲ್ಲ. 'ಹರಿಶ್ಚಂದ್ರಕಾವ್ಯ'ವನ್ನು ರಚಿಸಿ ಓರ್ವ ರಾಜನನ್ನು ಕಥಾನಾಯಕನನ್ನಾಗಿಸಿದ ತಪ್ಪಿಗೆ ರಾಘವಾಂಕ ಹರಿಹರನಿಂದ ಹೊಡೆತವನ್ನು ತಿಂದು ತನ್ನ ಹಲ್ಲುಗಳನ್ನು ಕಳೆದುಕೊಂಡ ಪ್ರಸಂಗದ ಸತ್ಯಾಸತ್ಯತೆ ಏನೇ ಇದ್ದರೂ ಅದು ಸ್ಪಷ್ಟವಾಗಿ ಸಾಹಿತ್ಯಕ್ಕೆ ವಸ್ತುವಾಗಬಲ್ಲ ವಿಷಯಗಳನ್ನು ಕುರಿತಂತೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಆ ಕಾಲಕ್ಕೆ ಇದ್ದ ಪಾರಂಪರಿಕ ದೃಷ್ಟಿಯ ಬಿಗಿತನವನ್ನು ತೋರಿಸುತ್ತದೆ. ಅಲ್ಲಿಂದೀಚೆಗೆ ಇಸ್ಲಾಂ-ಪೋರ್ಚುಗೀಸ್-ಆಂಗ್ಲ ಮೊದಲಾದ ಸಂಸ್ಕೃತಿಗಳು ಕನ್ನಡನಾಡನ್ನು ಪ್ರಭಾವಿಸಿವೆಯಾದರೂ ಆಧುನಿಕತೆಯ

* ಸಹಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ-೫೯೧೧೫೬. ಮೊಬೈಲ್ : ೯೪೪೯೬೧೧೫೬೯

ಸ್ಪರ್ಶವಾಗುವವರೆಗೂ ಕನ್ನಡ ಸಾಹಿತ್ಯಕ್ಕೆ ಪ್ರಧಾನ ಸಂಸ್ಕೃತಿ ಮತ್ತು ಅದರ ಮಾನ್ಯತೆ ಹೊಂದಿದ್ದ ವಿಷಯಗಳೇ ವಸ್ತುವಾಗಿರುವುದು ಕಾಣುತ್ತದೆ. ರಾಮಾಯಣ, ಮಹಾಭಾರತಗಳನ್ನು ಮತ್ತು ಅವುಗಳಲ್ಲಿನ ಸಂದರ್ಭಗಳನ್ನು, ಜೈನ ಹಾಗೂ ಶೈವಶಲಾಕಾ ಪುರುಷರನ್ನು ವಸ್ತುವಾಗಿರಿಸಿಕೊಂಡು ಸಾಹಿತ್ಯ ಸೃಷ್ಠಿಸುವ ಪ್ರಕ್ರಿಯೆ ಕನ್ನಡದಲ್ಲಿ ೧೯ನೇ ಶತಮಾನದಷ್ಟು ಈಚೆಗೂ ನಡೆದಿದೆ. ಈ ಎಲ್ಲ ಅಭಿವ್ಯಕ್ತಿಗಳ ಮೂಲದಲ್ಲಿ ಧರ್ಮಪ್ರಸರಣ ಮತ್ತು ಧರ್ಮನಿರೂಪಣೆಯ ಉದ್ದೇಶಗಳು ಸಹ ಸಾಹಿತ್ಯಾಭಿವ್ಯಕ್ತಿಯ ಜೊತೆ–ಜೊತೆಗೆ ಸ್ಪಷ್ಟವಾಗಿ ಕಂಡುಬರುತ್ತದೆ.

ಹೀಗೇ ಪಾರಂಪರಿಕವಾದ ಧಾರ್ಮಿಕ ಚೌಕಟ್ಟಿನಲ್ಲಿಯೇ ಮುನ್ನಡೆಯುತ್ತಿದ್ದ ಕನ್ನಡ ಸಾಹಿತ್ಯಕ್ಕೆ ಹೊಸಕಸುವನ್ನು ತುಂಬಿ ಅದರ ದೃಷ್ಟಿಯನ್ನು ವಿಸ್ತರಿಸಿದ್ದು ಆಧುನಿಕತೆ. ಈ ಆಧುನಿಕತೆಯ ಪ್ರಕಟರೂಪವಾಗಿ ನಮ್ಮೆದುರಿಗೆ ಗೋಚರಿಸಿದ್ದು ಕನ್ನಡ ನವೋದಯ ಸಾಹಿತ್ಯ ಘಟ್ಟ. ಹದಿಮೂರನೆಯ ಶತಮಾನದಲ್ಲಿ ಇಟಲಿಯಲ್ಲಿ ಪ್ರಾರಂಭವಾಗಿ ಕ್ರಮೇಣ ಯೂರೋಪಿನಲ್ಲೆಲ್ಲ ಹಬ್ಬಿದ 'ನವೋದಯ'ವೆನ್ನುವ ಚಳವಳಿಯ ಕೇಂದ್ರದಲ್ಲಿ ಇದ್ದದ್ದು 'ಮಾನವತಾಪಂಥ' ಅಥವಾ ಹ್ಯೂಮನಿಸಂ, ಇಹದ ಬದುಕು ಮತ್ತು ಅದರ ವಾಸ್ತವಗಳನ್ನು ನವೋದಯ ಪಂಥ ಪ್ರಧಾನವಾಗಿಸಿತು. ಸಾಹಿತ್ಯಕ್ಕೆ ಒಂದು ರೀತಿಯ 'ಸೆಕ್ಯುಲರ್' ಸ್ಪರ್ಶ ದಕ್ಕಿತು, ಹಾಗಾಗಿ ಈ ಸಾಹಿತ್ಯ ಧರ್ಮ, ದೇವರು, ದೈವಭಕ್ತರು ಮಾತ್ರ ವಸ್ತುವಾಗಿಸಲಿಲ್ಲ, ಬದಲಿಗೆ ರಾಜರು, ವೀರರು, ಸಂತರು, ಸಾಮಾನ್ಯ ಮನುಷ್ಯ ಆತನ ಸುಖ–ದುಃಖ, ಕನಸು–ನಿರಾಸೆ, ಕಲ್ಪನೆ–ದರ್ಶನ ಎಲ್ಲವೂ ಸಾಹಿತ್ಯದ ವಲಯವನ್ನು ಪ್ರವೇಶಿಸಿದವು. ಓರ್ವರೈತ, ಒಂದು ಹುಡುಗಿ, ಅನಾಥ ಮುದುಕಿ, ಪ್ರಣಯಿಗಳು, ಖೈದಿ, ಬಡ ಮುದುಕಿ–ಹೀಗೆ ಎಲ್ಲರೂ ಸಾಹಿತ್ಯದ ಕೇಂದ್ರದಲ್ಲಿ ಪ್ರಕಟವಾಗಲು ಸಾಧ್ಯವಾಯಿತು, ತನ್ಮೂಲಕ ಸಾಹಿತ್ಯಾಭಿವ್ಯಕ್ತಿಯ ಆಳ–ಅಗಲಗಳು ವಿಸ್ತೃತಗೊಂಡವು.

ಕನ್ನಡ ಸಾಹಿತ್ಯದಲ್ಲಿ ಆಧುನಿಕತೆ ಯಾವಾಗ ಕಾಲಿಟ್ಟಿತು ಎನ್ನುವ ಪ್ರಶ್ನೆಯನ್ನು ಕುರಿತಂತೆ ಎಲ್. ಎಸ್. ಶೇಷಗಿರಿರಾವ್ ಬರೆಯುತ್ತ ಮುದ್ದಣನ 'ಶ್ರೀರಾಮಾಶ್ವಮೇಧ' ಕಾವ್ಯವನ್ನು ಪ್ರಸ್ತಾಪಿಸುತ್ತಾರೆ. ಅಲ್ಲಿ ಮುದ್ದಣನು ಮನೋರಮೆಗೆ ಸೀತೆಯು ಕಾಡಿಗೆ ಹೋದ ನಂತರ ರಾಮನು ಅವಳನ್ನು 'ನೆನೆನೆನೆದಳುಂಬಂ ಪಲುಂಬಿದ' ಎಂದು ಹೇಳುತ್ತಾನೆ. ಇದಕ್ಕೆ ಪ್ರತಿಯಾಗಿ ಮನೋರಮೆ "ಏ ತನಗೆ ಪೆರರ್ ಪೆಂಡಿರಿಲ್ಲೆಂದೆಯೆ?" ಎಂದು ಪ್ರಶ್ನಿಸುತ್ತಾಳೆ. ಎಲ್.ಎಸ್.ಎಸ್. ಅವರ ಪ್ರಕಾರ ಮನೋರಮೆ ಈ ಪ್ರಶ್ನೆಯನ್ನು ಮುದ್ದಣ್ಣನಿಗೆ ಹಾಕಿದ ಆ ಕ್ಷಣದಲ್ಲಿಯೇ ಆಧುನಿಕತೆ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತು. ಒಂದು ಸಮುದಾಯವು ಪ್ರಧಾನ ಸಂಸ್ಕೃತಿಯ

ವಿಶಾಲವಾದ ನೆರಳಿನಡಿ ತನ್ನ ಅಸ್ತಿತ್ವಕ್ಕೆ, ಉಳಿವಿಗೆ ಮುಖ್ಯವಾದ ಮೌಲ್ಯಗಳನ್ನು ಮೂರ್ತೀಭವಿಸಿ ಸ್ಥಾಪಿಸುವುದು ಒಂದೆಡೆಯಾದರೆ ಓರ್ವ ಹೆಣ್ಣುಮಗಳು ತನ್ನದೇ ಆದ ರೀತಿಯಲ್ಲಿ ಸ್ಥಾಪಿತ ಆದರ್ಶಗಳನ್ನು ಕಟುವಾಗಿ ವಿಮರ್ಶಿಸುತ್ತಿರುವುದು ಇಲ್ಲಿ ಬಹು ಮುಖ್ಯವಾದ ಅಂಶವಾಗುತ್ತದೆ. ಮುಂದೆ ಹೆಣ್ಣು ಮತ್ತವಳ ಬದುಕಿನ ಸೂಕ್ಷ್ಮತೆಗಳನ್ನು ಸ್ತ್ರೀ–ಪುರುಷ ಸಂಬಂಧಾಂತರಗಳ ಬಹುಮುಖೀಯ ಆಯಾಮಗಳನ್ನು ಅನೇಕ ಕೃತಿಗಳು ಪ್ರಕಟಿಸಿದವು. ಪುರುಷ ಪ್ರಧಾನವಾದ ಮತ್ತು ಸಂಕುಚಿತವಾದ ದೃಷ್ಟಿಗೆ ಪ್ರತಿಯಾಗಿ ಮಹಿಳೆಯರೇ ಈ ನಿಟ್ಟಿನಲ್ಲಿ ಸೃಷ್ಟಿಸಿದ ಸಾಹಿತ್ಯ ಪ್ರಧಾನ ಸಂಸ್ಕೃತಿಯೊಂದಿಗೆ ಸಂಘರ್ಷ ನಡೆಸುತ್ತಲೇ ಹೆಣ್ಣಿನ ಅಸ್ತಿತ್ವದ ಹಲವು ನೆಲೆಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾದದ್ದು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪ್ರಧಾನ ಅಂಶವಾಗುತ್ತದೆ. ಇಂಥದೊಂದು ಪ್ರಕ್ರಿಯೆಯನ್ನು ಅಕ್ಕಮಹಾದೇವಿಯಲ್ಲಿಯೇ ನಾವು ಕಾಣಬಹುದಾಗಿದ್ದು ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೊಡಗಿನ ಗೌರಮ್ಮ, ಶಾಂತಾದೇವಿ ಮಾಳವಾಡ, ತ್ರಿವೇಣಿ ಮುಂತಾದವರಲ್ಲಿ ಇದರ ಮುಂದುವರಿಕೆ ಕಾಣುತ್ತದೆ. ನವೋದಯ ಸಾಹಿತ್ಯ ಸಂದರ್ಭದ ಮಹತ್ವದ ಬೆಳವಣಿಗೆಗಳಾದ ಕಥೆ ಮತ್ತು ಕಾದಂಬರಿ ಪ್ರಕಾರಗಳು ತಮ್ಮದೇ ವಿಶಿಷ್ಟ ರೀತಿಯಲ್ಲಿ ಬದುಕಿನ ಹತ್ತು ಹಲವು ಮುಖಗಳನ್ನು ದರ್ಶಿಸಿದವು. ನವೋದಯ ಕಾಲದ ಕತೆಗಳು ಸಾಮಾನ್ಯವಾಗಿ ಮಧ್ಯಮವರ್ಗದ ಜೀವನವನ್ನು ಚಿತ್ರಿಸಿದವು. ಅಲ್ಲಿ ಕೌಟುಂಬಿಕ ಪರಿಸರವೇ ಪ್ರಧಾನ ಸ್ಥಾನವನ್ನು ಪಡೆದಿವೆ. 'ಸಣ್ಣ ಕಥೆಗಳ ಜನಕ' ಎಂದೇ ಖ್ಯಾತರಾಗಿರುವ ಮಾಸ್ತಿಯವರ ಕಥೆಗಳಲ್ಲಿ ಭಾರತೀಯ ಪರಂಪರೆ, ಭಾರತೀಯ ಆದರ್ಶಗಳಿರುವ ಹಾಗೆಯೇ ಅಂತಃಕರಣ ತುಂಬಿದ ಇತರ ಚಿತ್ರಣಗಳೂ ಇದ್ದವು. ಮಾಸ್ತಿಯವರಂತೆಯೇ ನವೋದಯ ಕಾಲದಲ್ಲಿಯೇ ಕಥೆಗಳನ್ನು ಬರೆದ ಕುವೆಂಪು ಮಲೆನಾಡಿನ ಜೀವನವನ್ನು ತಮ್ಮ ಕಥೆಗಳಲ್ಲಿ ಸೆರೆಹಿಡಿಯುತ್ತಲೇ ವಿಶಿಷ್ಟ ಬಗೆಯ ಚಿತ್ರಗಳನ್ನು ನಮ್ಮ ಮುಂದಿಡುತ್ತಾರೆ; ಸಂಸ್ಕೃತಿಯ ಮತ್ತಷ್ಟು ಮುಖಗಳನ್ನು ಅನಾವರಣಗೊಳಿಸುತ್ತಾರೆ. ಇಲ್ಲಿಯೇ ನೆನೆಯಬೇಕಾದ ಮತ್ತೋರ್ವ ಕಥೆಗಾರರೆಂದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್.

ನವೋದಯ ಕಾಲದಲ್ಲಿ ಜನಮನಗಳನ್ನು ಸೂರೆಗೊಂಡ ಮಹತ್ವದ ಗದ್ಯಪ್ರಕಾರ ಕಾದಂಬರಿ. ಇಪ್ಪತ್ತನೆಯ ಶತಮಾನದ ಎರಡು–ಮೂರನೆಯ ದಶಕಗಳಲ್ಲಿ ವಿಪುಲವಾಗಿ ಕಾದಂಬರಿ ಕೃಷಿ ನಡೆಯಿತಾದರೂ ಪ್ರಗತಿಶೀಲ ಚಳವಳಿಯ ಪೂರ್ವಬಿತ್ತಿಯ ಫಲಗಳಾಗಿ ಸೃಷ್ಟಿಯಾದ ಕಾದಂಬರಿಗಳು ವಿಭಿನ್ನವಾಗಿ ಪ್ರಕಟಗೊಂಡವು. ಅ.ನ.ಕೃ., ತ.ರಾ.ಸು, ನಿರಂಜನ, ಬಸವರಾಜ ಕಟ್ಟೀಮನಿ

ಮೊದಲಾದ ಕಾದಂಬರಿಕಾರರು ಶ್ರಮಿಕ ವರ್ಗ ಮತ್ತು ಕೃಷಿವರ್ಗಗಳ ಬದುಕನ್ನು ಕೇಂದ್ರವಾಗಿರಿಸಿಕೊಂಡು ಕೃತಿಗಳನ್ನು ರಚಿಸಿದರು. ತನ್ಮೂಲಕ ಅಲಕ್ಷಿತ ಸಮುದಾಯಗಳ–ಸಂಸ್ಕೃತಿಗಳ ಬದುಕಿನ ಒಳಸೂಕ್ಷ್ಮಗಳನ್ನು, ಹೋರಾಟಗಳನ್ನು ಬಿಂಬಿಸಿದರು. ಪ್ರಗತಿಶೀಲ ನಿಲುವುಗಳೊಂದಿಗೆ ಬೆಸೆದುಕೊಂಡ ಎಡಪಂಥೀಯ ರಾಜಕೀಯ ಚಿಂತನೆಗಳು ಪ್ರಗತಿಶೀಲರ ದೃಷ್ಟಿಕೋನಕ್ಕೆ ವಿಶಿಷ್ಟತೆಯ ಲೇಪವನ್ನಿತ್ತಿತ್ತು. ಶೋಷಿತರ ಪರವಾದ ಕಾಳಜಿಗಳನ್ನು, ತೀರ್ಮಾನಗಳನ್ನು ಪ್ರಕಟಿಸುತ್ತಲೇ ಹಿತಾಸಕ್ತಿಗಳ ಮುಖಾಮುಖಿಯನ್ನು ಹಾಗೂ ಅವರ ಬದುಕಿನ ಹೋರಾಟಗಳು–ಒಳಸುಳಿಗಳನ್ನು ಈ ಕಾದಂಬರಿಗಳು ಸೆರೆಹಿಡಿದಿದ್ದವು. ನಿರಂಜನ ಮತ್ತು ಬಸವರಾಜ ಕಟ್ಟೀಮನಿ ಈ ದಿಸೆಯಲ್ಲಿ ಮಹತ್ವದ ಕೃತಿಕಾರರು. ಅದರಲ್ಲಿಯೂ ಪ್ರಗತಿಶೀಲ ಸಂದರ್ಭದ ಅತ್ಯುತ್ತಮ ಕಾದಂಬರಿಕಾರರಾಗಿ ಕಟ್ಟೀಮನಿ ಅವರು ಹೊರಹೊಮ್ಮಿದ್ದಾರೆ. ಹಿಂದೂ ಧರ್ಮದ ಬಗೆಗಿನ ಖಚಿತವಾದ ಸಕಾರಾತ್ಮಕ ನಿಲುವು ಹಾಗೂ ಸಮತಾವಾದ ಮತ್ತು ಸಮಾಜವಾದಗಳ ಬಗೆಗಿನ ವಿಮರ್ಶಾ ಧೋರಣೆಗಳು ಕಟ್ಟೀಮನಿ ಅವರ ಕಾದಂಬರಿಗಳಿಗೆ ಸಮತೋಲನ ಮತ್ತು ತಾಳಿಕೆಯ ಗುಣಗಳನ್ನು ತಂದಿತ್ತಿವೆ. ಅವರ 'ಗಿರಿಜಾ ಕಂಡ ಸಿನಿಮಾ' ಕಥೆಯೂ ಸಹ ಈ ನಿಟ್ಟಿನಲ್ಲಿ ಒಂದು ಪ್ರಮುಖ ಕೃತಿಯಾಗುತ್ತದೆ.

ಮೇಲು ಸಂಸ್ಕೃತಿಯ ಪ್ರತಿಗಾಮಿ ಧೋರಣೆಗಳಿಗೆ ಸೆಡ್ಡುಹೊಡೆಯುತ್ತ ದಲಿತ ಮತ್ತು ಬಂಡಾಯ ಸಂಸ್ಕೃತಿಗಳು ತಮ್ಮನ್ನು ತಾವು ಅನಾವರಣಗೊಳಿಸಿದ್ದು, ಸ್ಥಾಪಿಸಿಕೊಳ್ಳಲು ಹೋರಾಡಿದ್ದು ಕನ್ನಡ ಸಾಹಿತ್ಯಿಕ–ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ೭೦ ಮತ್ತು ೮೦ರ ದಶಕದಲ್ಲಿ ನಡೆದ ಮಹತ್ವದ ಸಾಂಸ್ಕೃತಿಕ ಚಳುವಳಿಯಾಗಿ ಪ್ರಕಟವಾಯಿತು. ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಯಾರು ದಮನಕ್ಕೆ ಒಳಗಾಗಿರುತ್ತಾರೋ ಅವರೇ ದಲಿತರು. ದಲಿತರು ಕೇವಲ ಶೋಷಿತರಷ್ಟೇ ಅಲ್ಲ; ಶೋಷಣೆಯ ಜೊತೆಗೇ ಅಮಾನವೀಯವಾದ ಹಿಂಸೆ ಕ್ರೌರ್ಯಗಳಿಗೆ ಒಳಗಾದವರು. ಅವರಿಗೆ ವ್ಯಕ್ತಿತ್ವವನ್ನೇ ನಿರಾಕರಿಸುವ ಮಟ್ಟಿಗೆ ಕ್ರೌರ್ಯದ ಸ್ಥಿತಿಯಿತ್ತು. ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳುವಳಿಯಿಂದ ಪ್ರೇರಿತರಾಗಿ ದಲಿತ ಪ್ರಜ್ಞೆಯನ್ನು ಸಾಕಾರಗೊಳಿಸುವ ಬರವಣಿಗೆಯನ್ನು ದಲಿತ ಬರಹಗಾರರು ಮೂಡಿಸಿದರು. ಜಮೀನ್ದಾರಿಕೆ, ಬಂಡವಾಳಶಾಹಿ, ನೌಕರಶಾಹಿ ಮತ್ತು ಸವರ್ಣೀಯರ ದೌರ್ಜನ್ಯಕ್ಕೆ ಸಿಲುಕಿ ನಲುಗಿದ ದಲಿತರ ಬದುಕಿನ ಹಲವು ಮುಖಗಳು ಸಾಹಿತ್ಯ ಕೃತಿಗಳಲ್ಲಿ ಬೆಳಕು ಕಂಡವು. ಅಷ್ಟೇ ಅಲ್ಲದೆ ಈ ರೀತಿಯ ಅಭಿವ್ಯಕ್ತಿಗಳ ಮೂಲಕ ದಲಿತರನ್ನು ಸಂಘಟಿಸುವ,

ಉಗ್ರಸ್ವರೂಪದ ಚಳುವಳಿಗಳನ್ನು ಕೈಗೊಳ್ಳುವ ಕಾರ್ಯವೂ ನಡೆಯಿತು. ೧೯೭೩ ರಲ್ಲಿ ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು 'ಬೂಸಾ' ಎಂದು ಕರೆದು, ೧೯೭೩ರ ಆಗಸ್ಟ್‌ನಲ್ಲಿ ಮೈಸೂರಿನಲ್ಲಿ ನಡೆದ 'ಜಾತಿ ವಿನಾಶ ಸಮ್ಮೇಳನ' ೧೯೭೪ರಲ್ಲಿ ಬರಹಗಾರರ ಮತ್ತು ಕಲಾವಿದರ ಒಕ್ಕಟದಲ್ಲಿ ಕುವೆಂಪು ಮಾಡಿದ ಉದ್ಘಾಟನಾ ಭಾಷಣದಿಂದಾಗಿ ಜಾಗೃತವಾದ ಶೂದ್ರಪ್ರಜ್ಞೆ, ೧೯೭೪ ರಲ್ಲಿ 'ದಲಿತ ಸಂಘರ್ಷ ಸಮಿತಿ'ಯ ಜನನ ಇವೇ ಮುಂತಾದ ಪ್ರಮುಖ ಘಟನೆಗಳು ಪ್ರಧಾನ ಸಂಸ್ಕೃತಿಗೆ ಪ್ರತಿಯಾಗಿ ಅಲಕ್ಷಿತ ಸಂಸ್ಕೃತಿಗಳು ತಮ್ಮನ್ನು ತಾವು ಸ್ಥಾಪಿಸಿಕೊಳ್ಳುವ ಪ್ರಯತ್ನಗಳೇ. ಈ ಎಲ್ಲ ಚಟುವಟಿಕೆಗಳ ಕೇಂದ್ರದಲ್ಲಿ ಕನ್ನಡ ದಲಿತ ಸಾಹಿತಿಗಳು ಮತ್ತು ದಲಿತರ ನೋವು-ಕಷ್ಟಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದ ಬಂಧುಬಳಗವೇ ಇತ್ತು ಮತ್ತು ಈ ಸಂದರ್ಭದಲ್ಲಿ ಸೃಷ್ಟಿಯಾದ ಸಾಹಿತ್ಯ ದಲಿತ ಸಂವೇದನೆಗಳನ್ನು ಪ್ರಖರವಾಗಿ ಬಿಂಬಿಸಿತು. ನೊಂದವರನ್ನು ಕಾವ್ಯದ ವಸ್ತುವಾಗಿಸಿದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು', ಕವನ ಸಂಕಲನ ದಲಿತ-ಬಂಡಾಯ ಕಾವ್ಯದ ಲಕ್ಷಣಗಳನ್ನು ಹೊತ್ತು ಸ್ಫೋಟಿಸಿತು. 'ಕಪ್ಪು ಕಾಡಿನ ಹಾಡು', 'ಸಾವಿರಾರು ನದಿಗಳು' ಕೃತಿಗಳು ಇದೇ ಕಾವನ್ನು ಮುಂದುವರೆಸಿದವು. ಡಾ॥ ವಿ. ಮುನಿವೆಂಕಟಪ್ಪ, ಡಾ॥ ಮ. ನ. ಜವರಯ್ಯ, ಮಳ್ಳೂರು ನಾಗರಾಜ್, ಸತ್ಯಾನಂದ ಪಾತ್ರೋಟ, ಡಾ॥ ಎಲ್. ಹನುಮಂತಯ್ಯ, ಡಾ॥ ಅರವಿಂದ ಮಾಲಗತ್ತಿ, ಕೆ. ಬಿ. ಸಿದ್ಧಯ್ಯ, ಜಂಬಣ್ಣ ಅಮರಚಿಂತ ಮುಂತಾದ ದಲಿತ ಕವಿಗಳು ತಮ್ಮ ಕೃತಿಗಳು ದಲಿತ ಪ್ರಜ್ಞೆಯ ವಿಭಿನ್ನ ಆಯಾಮಗಳನ್ನು ಅಭಿವ್ಯಕ್ತಿಸುವ ಮೂಲಕ ಸಾಂಸ್ಕೃತಿ ಸ್ಥಿತ್ಯಂತರಗಳ, ಚಲನಶೀಲತೆಯ ಅರಿವನ್ನು ಮೂಡಿಸಿದರು.

ದಲಿತ ಚಳವಳಿಯಂತೆಯೇ ಕ್ನಡ ನಾಡಿನ ಸಾಂಸ್ಕೃತಿಕ ವಲಯವನ್ನು ತೀವ್ರವಾಗಿ ಪ್ರಭಾವಿಸಿದ ಮತ್ತೊಂದು ಚಳವಳಿಯೆಂದರೆ ಬಂಡಾಯ ಸಾಹಿತ್ಯ ಚಳವಳಿ. ಬಂಡಾಯ ಕೇವಲ ಇಂದು, ನಿನ್ನೆಯದಲ್ಲ. ಪಂಪ ಕರ್ಣನ ಬಾಯಿಂದ ಹೇಳಿಸುವ "ಕುಲಂ ಕುಲಮಲ್ತು, ಗುಣಂಕುಲಂ, ಛಲಂ ಕುಲಂ, ಅಭಿಮಾನವೊಂದೆ ಕುಲಂ" ಎನ್ನುವ ಮಾತಿನಲ್ಲಿಯೇ ಜಾತಿವ್ಯವಸ್ಥೆಯನ್ನು ವಿರೋಧಿಸುವ ಬಂಡಾಯ ಗುಣವಿದೆ. ಹನ್ನೆರಡನೆಯ ಶತಮಾನದಲ್ಲಿ ಘಟಿಸಿದ ಶರಣಕ್ರಾಂತಿ ಮತ್ತು ವಚನಬೆಳವಣಿಗೆಯ ಮೂಲಭೂಮಿಕೆಯೂ ಬಂಡಾಯ ಮನೋಧರ್ಮವೇ ಆಗಿದೆ. ವರ್ಗಪ್ರತಿಷ್ಠೆ, ವರ್ಣಪ್ರತಿಷ್ಠೆ, ಪಾಂಡಿತ್ಯ ಪ್ರತಿಷ್ಠೆಗಳನ್ನು ಕಿತ್ತೊಗೆಯುತ್ತ ಜನಪರವಾದ, ದುಡಿಯುವ ಮತ್ತು ದಲಿತ ವರ್ಗದ ಪರವಾದ ಕಾಳಜಿಗಳನ್ನು ಹರಿಹರನಲ್ಲಿ ಕಾಣಬಹುದಾಗಿದೆ. "ಅರಸುರಾಕ್ಷಸ ಮಂತ್ರಿಯೆಂಬುವ ಮೊರೆವಹುಲಿ,

ಪರಿವಾರಹದ್ದಿನ ನೆರವಿ ಬಡವರ ಬಿನ್ನಪವನ್ನಿನ್ನಾರು ಕೇಳುವರು" ಎಂದು ಕುಮಾರವ್ಯಾಸ ವ್ಯಾಖ್ಯಾನಿಸುತ್ತಲೇ ರಾಜಪ್ರಭುತ್ವದ ವಿರುದ್ಧ ಪ್ರತಿಭಟಿಸುತ್ತಲೂ ಇದ್ದಾನೆ. ಅಂತೆಯೇ ಹರಿದಾಸರೂ ತತ್ವಪದಕಾರರೂ ಮಾನವೀಯ ಮೌಲ್ಯಗಳ ಸ್ಥಾಪನೆಯತ್ತ ಶ್ರಮಿಸುತ್ತಾ ಮಡಿವಂತಿಕೆಯನ್ನು ಕಟುವಾಗಿ ಟೀಕಿಸಿದ್ದಾರೆ. ಕನಕದಾಸರ 'ಕುಲಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯೇನಾದರು ಬಲ್ಲಿರಾ' ಎನ್ನುವ ನುಡಿಗಳನ್ನು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿ ನಿಲ್ಲುತ್ತವೆ. ಹೀಗೆ ಹಳಗನ್ನಡ–ನಡುಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೆಳೆದು ಬಂದು ಬಂಡಾಯದ ಧ್ವನಿ ಆಧುನಿಕ ನವೋದಯ ಸಂದರ್ಭದ ಪ್ರಗತಿಶೀಲ ಘಟ್ಟದಲ್ಲಿ ಪ್ರಕಟಗೊಂಡು ತನ್ನ ಜನಪರ ಕಾಳಜಿ, ಅನ್ಯಾಯದ ವಿರುದ್ಧದ ಪ್ರತಿಭಟನೆಯನ್ನು ದಾಖಲಿಸಿದೆ. ಆದರೆ ಅಧಿಕೃತವಾದ ಬಂಡಾಯ ಚಳವಳಿಗೆ ನಾಂದಿ ಹಾಡಿದ್ದು ೧೯೭೯ರ ಮಾರ್ಚ್ ೧೦ ಮತ್ತು ೧೧ ರಂದು ನಡೆದ ರಾಜಮಟ್ಟದ ಪ್ರಥಮ ಬಂಡಾಯ ಸಾಹಿತ್ಯ ಸಮ್ಮೇಳನ, ತುರ್ತುಪರಿಸ್ಥಿತಿಯ ನಂತರ ಸ್ಪಷ್ಟವಾಗಿ ಕಾಣತೊಡಗಿದ ಬಂಡಾಯ ಸಾಹಿತ್ಯ ಚಳವಳಿಯ ಬೀಜಗಳು ಹಲವಾರು ಜನಪರ ಚಿಂತನೆಗಳು ಮತ್ತು ಸಂಘಟನೆಗಳ ಮೂಲಕ ಕಸುವನ್ನು ಪಡೆದುಕೊಂಡು ದೊಡ್ಡ ದನಿಯಾಗಿ ಮಾರ್ಪಟ್ಟಿತು.

ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಅದರ ವಿಸ್ತರಣೆಗೆ ಪಣತೊಟ್ಟ ಬಂಡಾಯ ಚಳವಳಿ ಶೋಷಣೆಯನ್ನು ಸಮರ್ಥಿಸುವ ಯಜಮಾನ ಸಂಸ್ಕೃತಿಯ ವಿರುದ್ಧ ನೇರವಾದ ಹೋರಾಟಕ್ಕಿಳಿಯಿತು, 'ಖಡ್ಗವಾಗಲಿ ಕಾವ್ಯ' ಎನ್ನುವ ಘೋಷವಾಕ್ಯ ಈ ಚಳವಳಿಯ ಮೂಲಮಂತ್ರವಾದದ್ದಷ್ಟೇ ಅಲ್ಲ, ಅದರ ಧ್ಯೇಯವನ್ನೂ ಸ್ಪಷ್ಟಪಡಿಸಿತ್ತು. ಬಂಡಾಯ ಸಂವೇದನೆಯ ಭಾಗವಾದ ದಲಿತ ಸಂವೇದನೆ, ಮುಸ್ಲಿಂ ಸಂವೇದನೆ, ಮಹಿಳಾ ಸಂವೇದನೆ ಮತ್ತು ಗ್ರಾಮೀಣ ಸಂವೇದನೆ ಪ್ರಧಾನ ಸಂಸ್ಕೃತಿಯ ಸಂವೇದನೆಗಳಿಗಿಂತಲೂ ಭಿನ್ನವಾದ ಮತ್ತು ಸಮಸ್ತ ಬದುಕಿನ ಸೂಕ್ಷ್ಮ ಆಯಾಮಗಳನ್ನು ಪ್ರಕಟಿಸುವ ಮಹತ್ವದ ಕಾರ್ಯವನ್ನು ಮಾಡಿತು. ದೇವನೂರ ಮಹಾದೇವ, ಡಾ॥ ಬರಗೂರು ರಾಮಚಂದ್ರಪ್ಪ, ಕುಂ. ವೀರಭದ್ರಪ್ಪ, ಬೆಸಗರಹಳ್ಳಿ ರಾಮಣ್ಣ, ಡಾ॥ ಕಾಳೇಗೌಡ ನಾಗವಾರ, ಡಾ॥ ಡಿ. ಆರ್. ನಾಗರಾಜ, ಡಾ॥ ಚೆನ್ನಣ್ಣ ವಾಲೀಕಾರ, ಬೋಳುವಾರು ಮಹಮ್ಮದ್ ಕುಂಞ, ಬಿ. ಟಿ. ಲಲಿತ ನಾಯಕ್, ಫಕೀರ್ ಮಹಮ್ಮದ್ ಕಟ್ಪಾಡಿ, ಸಾರಾ ಅಬೂಬಕ್ಕರ್, ಬಾನು ಮುಶ್ತಾಕ, ಡಾ॥ ಕರೀಗೌಡ ಬೀಚನಹಳ್ಳಿ ಮುಂತಾದವರ ಕೃತಿಗಳಲ್ಲಿ ಕಂಡುಬರುವ ಜನಪರ ನಿಲುವುಗಳು ಪ್ರಧಾನ ಸಂಸ್ಕೃತಿಗೆ ಒಡ್ಡಿದ ಸವಾಲುಗಳಾಗಿ ಬಹುಸಂಸ್ಕೃತಿಯ ಹಲವು ರೂಪಗಳನ್ನು ಸಾಕಾರಗೊಳಿಸಿತು. ಇಸ್ಲಾಂ ಮತ್ತು ಮಹಿಳಾ ಸಂವೇದನೆಗಳ

ಪ್ರಕಾರಕ್ಕೆ ಇಂಬು ಕೊಟ್ಟಿದ್ದು ಬಂಡಾಯ ಸಾಹಿತ್ಯ ಚಳವಳಿಯ ಪ್ರಧಾನ ಅಂಶಗಳಲ್ಲಿ, ಸಾಧನೆಗಳಲ್ಲಿ ಸೇರುವ ಅಂಶಗಳಾಗಿವೆ.

ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕಿ ಶ್ರೇಣೀಕರಣ ಸಮಾಜವನ್ನೇ ನಿರ್ನಾಮ ಮಾಡುವ ಸಂಕಲ್ಪವನ್ನು ಹೊತ್ತು ಹೊರಟ ದಲಿತ–ಬಂಡಾಯ ಆರಂಭ ಘಟ್ಟದಲ್ಲಿ ವಿಮರ್ಶಕರಿಂದ ಎದುರಾದ ಕಲಾತ್ಮಕ ಮತ್ತು ಶ್ರೇಷ್ಠರಚನೆಯ ಪ್ರಶ್ನೆಗೆ ದಲಿತ ಬಂಡಾಯಗಳು ಮುಂದುಮಾಡಿ ಅವಕಾಶ ಬೇಕೆಂಬ ಮಾತಾಡುತ್ತಿದ್ದುವು. ಇಂತಹವರ ಮಾತಿಗೆ ದಲಿತ ಬಂಡಾಯ ಕಾವ್ಯ ಚಳವಳಿ ತಮ್ಮ ಕೇಂದ್ರ ಆಶಯುವನ್ನಾಗಿ ವರ್ಗರಹಿತ ಸಮಾಜದ ನಿರ್ನಾಮದ ಸಂಕಲ್ಪವನ್ನು ಹೊಂದಿದ್ದವೆಂದು ಹೇಳಬಹುದು ಹೀಗೆ ಸಾಹಿತ್ಯದ ಘಟ್ಟಗಳನ್ನು ಮರುಓದು ಮರುವ್ಯಾಖ್ಯಾನಕ್ಕೆ ಒಳಪಡಿಸುವ ತುರ್ತು ಸಾಹಿತ್ಯದ ವಿದ್ಯಾರ್ಥಿಗಳ ಮುಂದಿದೆ.

1. ಮೂರು ಬಿಟ್ಟವರು

ಇವರು ಮೂರು ಬಿಟ್ಟವರು
ಇಹರು ಎಲ್ಲೆಡೆಯಲಿರುವವರು
ರಾಜಕೀಯದಲ್ಲಿ, ಸರ್ಕಾರಿ ಕಛೇರಿಗಳಲ್ಲಿ
ಆಶ್ರಮ – ಮಠಗಳಲ್ಲಿ
ಉದ್ದಿಮೆ ಶಿಕ್ಷಣ ಕ್ಷೇತ್ರಗಳಲ್ಲಿ
ಕೇಳುವರಿಲ್ಲ ಇವರನು ಯಾರೂ.

ಬೇಕಾದ್ದ ಮಾಡುವರು ಇವರು
ಹೆಣ್ಣು, ಹೊನ್ನು, ಮಣ್ಣುಗಳ ಹಿಂದೆ ಹೊರಟ ಇವರು
ಸಮಾಜ ಸೇವೆಯ ಸೋಗು ಹಾಕಿ
ಧ್ಯೇಯೋದ್ದೇಶಗಳ ಮೂಲೆಗೆ ನೂಕಿ
ಬೆಳೆಸುವರು ತಮ್ಮ ಜಾಲ
ಜನರ ಕಣ್ಣಿಗೆ ಮಣ್ಣೆರುಚುವುದು
ಇವರಿಗೆ ಲೀಲಾಜಾಲ.

ಇವರ ಹಿಡಿಯುವರಾರು
ತಡೆಯುವರಾರು
ನೀತಿ–ನಿಯಮಗಳ ಕಿತ್ತು ಬಿಸುಡುವರು
ತಮ್ಮ ಮೂಗಿನ ನೇರಕೆ
ಹೊಸ ನೀತಿಯನೆ ತರುವರು
ಇವರಿಗಿಲ್ಲ ಯಾವ ನಾಚಿಕೆ
ಇಲ್ಲ ಇವರಿಗೆ ಹೇಸಿಕೆ

ಹಿಡಿದರೆ ಇವರ ಬಾಲ
ನಿಮ್ಮೆಲ್ಲ ಕೆಲಸಗಳಿಗೆ ಕ್ಷಣ ಕಾಲ
ಎದುರು ಹಾಕಿಕೊಂಡರಿವರ
ಸಿಗದು ನಿಮಗೆ ಯಾವುದೇ ವರ

ಪಾಪದಿ ಗಳಿಸಿದ ಕೋಟಿ–ಕೋಟಿಗಳಿಂದ
ಕೊಡುವರು ದಾನ, ಲಕ್ಷ–ಲಕ್ಷಗಳಲಿ
ಆಗುವುದವರ ಸನ್ಮಾನ, ಅನುಯಾಯಿಗಳಿಂದ
ಪಾಪದ ದುಡ್ಡಿನಿಂದ ಪುಣ್ಯಗಳಿಸುವುದರಲ್ಲಿ
ಇವರಿಗಿಲ್ಲ ಯಾರೂ, ಸರಿ ಸಾಟಿ
ಮೂರೂ ಬಿಟ್ಟವರ ಸಮೂಹ
ಇಂದಿನ ಭಾರತದ ಪುಣ್ಯ ಕೋಟಿ.

2. ಆದರ್ಶ ಮಾನವ

ಅರಿಷಡ್ವರ್ಗಗಳ ತ್ಯಜಿಸಿದವನೇ
ಆದರ್ಶಮಾನವನೆಂದು
ಸಾರಿ ಹೇಳಿವೆ ವೇದಗಳು
ಎಲ್ಲಿ ಹುಡುಕಲಿಂದು
ಈ ಆದರ್ಶ ಮಾನವರನು.

ಪಾಠ ಹೇಳುವ ಗುರುಗಳಿಲ್ಲದಿರೆ
ಕಲಿತದ್ದ ಪಾಲಿಸುವರಿಲ್ಲದಿರೆ
ಜನುಮ ಕೊಟ್ಟವರು ಮೇಲ್ಪಂಕ್ತಿಯಲ್ಲದಿರೆ
ಬರುವರೆಲ್ಲಿಂದ, ಆದರ್ಶ ಮಾನವರು
ಈ ಪೀಳಿಗೆಯಲಿ !

ಹುಟ್ಟಿನಿಂದ ಸಾಯುವ ತನಕ
ಜೀವನದೆಲ್ಲ ಬೇಕು–ಬೇಡಗಳಿಗೆ
ಹೊಡೆದಾಟ, ಬಡಿದಾಟ
ಬೇಲಿ ಎದ್ದು ಹೊಲ ಮೆಯ್ದಾಗ
ಮಂತ್ರಿ ಪ್ರಜೆಗಳ ಸುಲಿದಾಗ
ಅಣ್ಣ–ತಮ್ಮಂದಿರಲಿ
ಬಂಧು–ಮಿತ್ರರಲಿ
ವಿಶ್ವಾಸ ಕುಸಿದಾಗ
ಬರಲಿಹುದೆ ಮನಸಿನಲಿ
ಆಸೆಗಳ ತೊರೆವ ಚಿಂತೆ ?

3. ದೃಷ್ಟಿ

ಇಲ್ಲದಿರೆ ದೃಷ್ಟಿ
ನೋಡುವೆ ಹೇಗೆ ಸೃಷ್ಟಿ
ಭಗವಂತ ನೀಡಿರುವ
ದೃಷ್ಟಿದ್ವಯಗಳಲಿ
ಹೊರ ದೃಷ್ಟಿ ಇಲ್ಲದಿದ್ದರೂ
ಬಹು ಮುಖ್ಯ ಒಳ ದೃಷ್ಟಿ
ಒಳ ದೃಷ್ಟಿಯಿಂದ ನೋಡು ಎಲ್ಲವ
ಜೀವನದ ಏರು–ಪೇರುಗಳ
ನಿನ್ನಾತ್ಮ ಸಾಕ್ಷಾತ್ಕಾರವ
ಇದಕೆ ಬೇಡ ಹೊರ ದೃಷ್ಟಿ.

ಧ್ಯಾನಕ್ಕೆ ಕುಳಿತಾಗ
ಕಣ್ಣು ಮುಚ್ಚಲ್ಲವೆ ಕೂಡುವುದು ?
ಭಗವಂತನ ಬೇಡುವಾಗ
ಕಣ್ಣು ತೆರೆಯಬೇಕೇತಕೆ ?
ನಿನ್ನ ಒಳಗಣ್ಣುಗಳ ತೆರೆ
ಅನುಭವಿಸು, ಸೃಷ್ಟಿ ಸೌಂದರ್ಯವ.

4. ಏಳರ ಮಹಿಮೆ

ಸೂರ್ಯ ರಶ್ಮಿಯಲಿ ಏಳು ಬಣ್ಣಗಳು
ವಾರದಿ ಏಳು ದಿನಗಳು
ವಿವಾಹದ ದಿನದಂದು ಸಪ್ತಪದಿ
ಇದೇನಿದು ಏಳರ ಮಹಿಮೆ
ತಿಳಿಯ ಬಲ್ಲೆವೆ ನಾವು
ಜನುಮ ಏಳೆತ್ತಿದರೂ ?

ಜೀವನದ ಏಳು–ಬೀಳುಗಳ ನಡುವೆ
ಪಂಚೇಂದ್ರಿಯ ಪಂಚ ಭೂತಗಳು
ಸುಳಿಗಳಲೊದ್ದಾಡುತಿರೆ
ಸೃಷ್ಟಿ ನಿಯಮದ ಒಗಟುಗಳ
ಬಿಡಿಸಲಾಗದಿರೆ
ನಿನ್ನಲಿರುವು ಆತ್ಮವು
ನಿನಗೇ ಕಾಣದಿರೆ
ಯಾರೇನ ಮಾಡಬಲ್ಲರು
ನಿನ್ನ ಹಣೆಬರಹ ನಿನಗೆಂದು
ಸುಮ್ಮನಿರುವುದ ಬಿಟ್ಟು

5. ಭಯ

ಒಳ ಕಚ್ಚೆ ಇರುವ ಸೀರೆ
ಮೈತುಂಬ ಸೆರಗು
ದಿನ ನಿತ್ಯ ತುಳಸಿ ಪೂಜೆ
ಅಡುಗೆ ಮನೆಯೇ ತನ್ನ ಪ್ರಪಂಚ
ಗಂಡ–ಮಕ್ಕಳ ಪಾಲನೆಯೇ ತನ್ನ ಕರ್ತವ್ಯ
ಎಂದು ನಂಬಿದ್ದ ಹೆಣ್ಣುಗಳ
ನೋಡಿದ್ದವರಿಗೆ

ದೇಹದ ಎಲ್ಲ ಉಬ್ಬು–ತಗ್ಗುಗಳ
ಎತ್ತಿ ತೋರಿಸುವ ಉಡುಗೆ ತೊಟ್ಟು
ಸ್ಕೂಟರ್–ಕಾರಿನಲಿ ಓಡಾಡುತ
ಬೆಳಗಿನಿಂದ–ಸಂಜೆಯವರೆಗೆ ಅಲೆದಾಡಿ
ರಾತ್ರಿ ಅವೇಳೆಯಲಿ ಬಂದು
ಪೀಡ್ಜ ಬರ್ಗರ್ ತಿಂದು
ಎದುರುತ್ತರ ಕೊಡುತ
ಸೆಟೆದು ನಿಲ್ಲುವ
ಹೆಣ್ಣುಗಳ ಕಂಡರೆ
ಭಯವಾಗುವುದು
ಸಹಜವಲ್ಲವೆ ?

6. ಮುಷ್ಕರ

ಮುಷ್ಕರ ....
ಭಾರತದ ಮಹತ್ವದ
ಅವಿಷ್ಕಾರ.

ಕುಳಿತರೆ–ನಿಂತರೆ
ಮುಷ್ಕರ.

ವೇತನ ಹೆಚ್ಚದಿರೆ
ಪೆಟ್ರೋಲ್ ಬೆಲೆ ಹೆಚ್ಚಿದರೆ,
ಪ್ರಧಾನ ಮಂತ್ರಿಗಳ ಭಾಷಣದ ಮೇಲೆ
ಸಿನಿಮಾ ತಾರೆಯ ಹೇಳಿಕೆಯ ಮೇಲೆ
ಎಲ್ಲದಕೂ ಮುಷ್ಕರ.

ಜನಜೀವನವ ಸ್ಥಗಿತಗೊಳಿಸಿ
ದಿನಗೂಲಿಗಳ ಉಪವಾಸ ಕೆಡವಿ
ಬಸ್ಸು ಕಾರುಗಳಿಗೆ ಬೆಂಕಿ ಹಚ್ಚಿ
ಕೋಟ್ಯಾಂತರ ರೂಪಾಯಿಗಳ
ವ್ಯವಹಾರ ಕೆಡಸಿ
ಮುಷ್ಕರ ಶೇಕಡ ನೂರರಷ್ಟು
ಜಯವೆಂದು ಹೆಮ್ಮೆ ಪಡವವರು
ನಮ್ಮ ಇಂದಿನ ನಾಯಕರು

ಸಾಧಿಸಿದ್ದೇನೆಂದು ಕೇಳಿ ಅವರನು
ಇರದು ಯಾವ ಉತ್ತರ
ಹೋಗದಿರಿ ಅವರ ಹತ್ತಿರ
ಅವರ ದಾರಿಗೆಳವರು ನಿಮ್ಮನು.

7. ಸಂಬಂಧಗಳು

ಸಂಬಂಧಗಳು
ನಿರೂಪಿಸುವುವು
ನಮ್ಮ ಬಾಳನು.

ಒಡ ಹುಟ್ಟಿದವರೊಂದಿಗೆ
ನೆಂಟರಿಷ್ಟರೊಂದಿಗೆ
ಗೆಳೆಯರೊಂದಿಗೆ
ಸಹೋದ್ಯೋಗಿಗಳೊಂದಿಗೆ
ನೆರ–ಹೊರೆಯವರೊಂದಿಗೆ
ಸಂಬಂಧವ ಕಾಪಾಡುವುದು
ಕಷ್ಟಸಾಧ್ಯವವುದು.

ಮನಸ್ಸಿಗೆ ಬಂದದ್ದ
ಹೇಳಿದರೆ, ಮಾಡಿದರೆ
ಇತರರಿಗೆ ನೋವಾಗಬಹುದೆ
ಎಂಬ ಚಿಂತೆಯಿಲ್ಲದಿರೆ
ಬದುಕಬಹುದು ನಿಶ್ಚಿಂತೆಯಿಂದ.

ಇತರರಿಗೊಳಿತು ಮಾಡಲು
ನಿನಗೇ ಕೇಡು ಬಗೆದುದೆ,
ನಿನ್ನ ಸ್ವಾರ್ಥಕೆ
ಇತರರಿಗೆ ಕೇಡು ಬಯಸದೆ
ನಡೆಯಲಿ ನಿನ್ನ ಜೀವನ
ಸಮಾಜದೊಳಿತನಲಿ
ನಿನ್ನೊಳಿತನು
ಮೇಳೈಸುವುದೇ
ಜೀವನವೆಂಬೊಟ್ಟಿನ
ಹೂರಣ.

8. ಕ್ರಿಕೆಟ್

ಕ್ರಿಕೆಟ್ ಆಟದ ವಿವರ ಗೊತ್ತೆ ನಿಮಗೆ ?
ಇಬ್ಬರು ದಾಂಡಿಗರ ಮೇಲೆ
ಒಬ್ಬ ಬೌಲರ್
ಜತೆಗೆ ಹತ್ತು ಜನ
ಕ್ಷೇತ್ರ ಪಾಲಕರು
ಆಟವ ನಿಯಂತ್ರಿಸಲು
ಇಬ್ಬರು ಅಂಪೈರ್‌ಗಳು

ಆಟವ ನೋಡಲು ಸಾವಿರಾರು ಪ್ರೇಕ್ಷಕರು
ದೂರದರ್ಶನದಿ ನೋಡಲು ಲಕ್ಷ–ಲಕ್ಷ ವೀಕ್ಷಕರು

ಒಂದು ದಿನದ ಆಟವಲ್ಲದೆ
ಐದು ದಿನಗಳ ಆಟವೂ ಇದೆ
ಐದು ದಿನಗಳಾಟವಾದ ಮೇಲೂ
ಸೋಲು–ಗೆಲುವಿನ ಫಲಿತಾಂಶವಿಲ್ಲದೆ
ಡ್ರಾ ಆಗುವುದೂ ಉಂಟು

ಕ್ರಿಕೆಟಗರಿಗೆ
ಸಂಬಳವಲ್ಲದೆ
ಬೇರೆ ವರಮಾನ ಇದೆ
ಬಹಳಷ್ಟು
ಯಾವುದೋ ಬ್ಲೇಡಿಗೋ, ಕಾರಿಗೋ
ಇನ್ನಾವುದುಕೋ
ಜಾಹೀರಾತು ಕೊಟ್ಟು
ಸಂಪಾದಿಸುವರು
ಕೋಟಿ–ಕೋಟಿಯಷ್ಟು

ಸೋತಾಗ, ನಾವು ಸರಿಯಾಗಿ ಆಡಲಿಲ್ಲ
ಎಂದು ಹೇಳಿಕೆ ನೀಡುವ ನಾಯಕನಿಗೆ
ಇಲ್ಲ ಯಾವ ಹೆದರಿಕೆ–ನಾಚಿಕೆ.

ಕ್ರಿಕೆಟ್ ಸೀಸನ್ ಬಂತು ಎಂದರೆ
ಹುಡುಗ–ಹುಡುಗಿಯರಿಗೆ
ಮುದುಕ–ಮುದಕಿಯರಿಗೆ
ಇದೇ ಹುಚ್ಚು
ಓದುವ–ಕೆಲಸವ ಬಿಟ್ಟು
ನೋಡುವರಿದನು
ಘಂಟೆಗಟ್ಟಲೆ
ನಿದ್ದೆಯ ಕೆಟ್ಟು
ನಮ್ಮ ತಂಡ ಸೋತಾಗ ಸಪ್ಪೆ ಮೋರೆಯಿಟ್ಟು
ಕಾಯುವರು ಮುಂದಿನ ಮ್ಯಾಚಿಗೆ, ಆಸೆಯಿಟ್ಟು

9. ಅನಾಥರು

ಅನಾಥರಾದೆವು ನಾವಿಂದು
ಇದ್ದಿಬ್ಬರ ಮಕ್ಕಳ
ಅಮೆರಿಕೆಗೆ ಕೊಟ್ಟು
ಭಾರತೀಯತೆಯ ಕಳೆದುಕೊಂಡರು
ಅಮೆರಿಕ ಪೌರತ್ವ ಪಡೆದುಕೊಂಡರು.

ನಾವಿಬ್ಬರಿಲ್ಲಿ
ಅವರಿಬ್ಬರಲ್ಲಿ
ಕಣ್ಣೆರಡೂ, ಅಲ್ಲಿರಲು
ನಾವೇನ ಕಂಡೀವಿಲ್ಲಿ ?

ಹೊಸ ಧರ್ಮ–ಕರ್ಮಗಳಿಲ್ಲಿ
ಆಧುನಿಕತೆಯ ಮರೀಚಿಕೆಯಲ್ಲಿ
ಇವೆರಡರ ನಡುವೆ ಸಿಲುಕಿ ಇಬ್ಬಂಗಿಯಾಗಿ
ಅನಾಥರಾದೆವು ನಾವಿಂದು
ಬರಲಾರದೇನೊ ಜೀವನೋತ್ಸಾಹ
ಇನ್ನೆಂದೂ
ಎಂದೆನುತಿಸಿದೆ
ನಮಗಿಂದು

10. ಬಾಳಿನ ಬುತ್ತಿ

ನಿನ್ನೊಡನೆಯೇ ಬಂದಿಹುದು
ನಿನ್ನ ಬಾಳಿನ ಬುತ್ತಿ
ನೀ ಹುಟ್ಟಿದಂದಿನಿಂದಲೇ
ಅವನು ನಿನಗೆ ನೀಡಿರುವ ಬುತ್ತಿ
ನಿನ್ನ ಬಾಳ ಪಯಣದುದ್ದಕೂ
ಉಣಲು ಉಂಡು ಸವಿಯಲು

ದಿನಕೊಂದು ರುಚಿ, ದಿನಕೊಂದು ಸವಿ
ಸಿಡಿ– ಕಹಿಗಳ ಮಿಶ್ರಣ
ಯಾರೂ ತಿಳಿಯದ ಹೂರಣ
ಬೇರಾರೂ ಉಣಲಾರರದನ
ನೀ ತಿಂದ ಬುತ್ತಿಯ ಅನುಭವವ
ಹಂಚಿಕೊ ಇತರರೊಂದಿಗೆ
ಬುತ್ತಿ ಮಾತ್ರ ನಿನಗೇ ಮೀಸಲು

ಮುಗಿಯುವುದೆಂದಿಗೆ ಈ ಬುತ್ತಿ
ಏನಡಗಿದೆ ಇದರ ಒಳಪದರಗಳಲಿ
ಸಿಹಿ ಹೆಚ್ಚೋ–ಕಹಿ ಹೆಚ್ಚೋ
ಈ ಎಲ್ಲ ಪ್ರಶ್ನೆಗಳಿಗೆ ಉತ್ತರ
ಉಂಟು ಅವನ ಹತ್ತಿರ

ಸಂತಸವೆಂಬ ಪರ್ವತದಿಂದ
ದುಃಖವೆಂಬ ಕಮರಿಯೊಳಗೆ
ಸುಳಿವಿಲ್ಲದೆ ಕೊಂಡೊಯ್ಯುವ
ಸೋಜಿಗದ ಬುತ್ತಿ !